4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು): 2007–11ರ ಅವಧಿಗೆ ಕರ್ನಾಟಕ ಮಧ್ಯಮಾವಧಿ ವಿತ್ತೀಯ ಯೋಜನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

12–00 ಪಿ.ಎಂ.

5. ವಿತ್ತೀಯ ಕಾರ್ಯಕಲಾಪಗಳು

2007–2008ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ.

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ): ಮಾನ್ಯ ಅಧ್ಯಕ್ಷರೆ, ಈಗಾಗಲೇ ಇಲಾಖೆಗಳ demands ಮೇಲೆ ಬಹಳಷ್ಟು ಮುಖಂಡರು ಮಾತನಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ತಾವು 28 ಇಲಾಖೆಗಳ ಬೇಡಿಕೆಗಳನ್ನು ಒಟ್ಟಿಗೇ ಇಟ್ಟು ಅವುಗಳ ಬಗ್ಗೆ ಒಟ್ಟಾರೆಯಾಗಿ ಚರ್ಚೆ ಮಾಡಿ ಎಂದು ಅವಕಾಶ ಮಾಡಿಕೊಟ್ಟಿದ್ದೀರಿ. ಈ ಪದ್ಧತಿಯಿಂದ ಇಲಾಖೆಗಳ ಮೇಲೆ ಪರಿಣಾಮಕಾರಿಯಾಗಿ ಚರ್ಚೆ ಮಾಡುವುದಕ್ಕೆ, ಇಲಾಖೆಗಳಲ್ಲಿ ನಡೆಯುತ್ತಿರತಕ್ಕಂಥ ದೋಷಗಳನ್ನು ಹೇಳಲಿಕ್ಕೆ, ಆ ಇಲಾಖೆಗೆ ಮಂಜೂರು ಮಾಡಿರುವ ಹಣ ಸಮರ್ಪಕವಾಗಿ ಸದ್ಬಳಕೆಯಾಗುತ್ತಿದೆಯೋ, ಇಲ್ಲವೋ? ದುರುಪಯೋಗವಾಗಿದೆಯೇ? ಇಲ್ಲವೇ? ಭ್ರಷ್ಟಾಚಾರ ನಡೆಯುತ್ತಿದೆಯೋ ಇಲ್ಲವೋ? ಇವುಗಳ ಬಗ್ಗೆ ವಿವರವಾಗಿ ಎಲ್ಲ ಇಲಾಖೆಗಳ ಮೇಲೆ ಹೇಳುವುದಕ್ಕಾಗುತ್ತಿಲ್ಲ. ಒಂದೊಂದು ಇಲಾಖೆಯ ಮೇಲೆ ಕನಿಷ್ಠ ಒಂದೊಂದು ಗಂಟೆಯ ಕಾಲವಾದರೂ ಮಾತನಾಡಬೇಕಾಗುತ್ತದೆ. ನಾನು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡುವುದೇನೆಂದರೆ, ಹಿಂದೆ ಈ ಪದ್ಧತಿಗಳಿದ್ದವು. ಇತ್ತೀಚಿನ ದಿನಗಳಲ್ಲಿ ಗಿಲೆಟಿನ್‌ನಲ್ಲಿ ಹಾಕಿ ಪಾಸ್ ಮಾಡಿಕೊಳ್ಳುವುದು ಆಗಿದೆ. ಕಳೆದ ವರ್ಷ ಪೂರ್ತಿ ಎಲ್ಲವೂ ಗಿಲೆಟಿನ್ ಮೂಲಕ ಪಾಸ್ ಆಯಿತು. ಈ ವರ್ಷ 28 ಇಲಾಖೆಗಳ ಬೇಡಿಕೆಗಳನ್ನೂ ಒಂದೇ ಸಲ ಇಟ್ಟಿದ್ದೀರಿ. ತಮಗೆ ಒಂದು ಮನವಿ ಏನೆಂದರೆ, ಇನ್ನು ಮುಂದೆಯಾದರೂ ಕೂಡ ಇಲ್ಲಿ ಮೇಜರ್ ಇಲಾಖೆಗಳು ಯಾವುವಿವೆ, ಹೆಚ್ಚು ಹಣ ಖರ್ಚು ಮಾಡುವ, high priority Department ಎಂದರೆ Education, ನೀರಾವರಿ, ಪವರ್, infrastructre, Health, Agriculture, Water Supply, Rural Development, Social Welfare, Forest ಕೂಡ ಬಹಳ ಪ್ರಾಮುಖ್ಯವಾದ ಇಲಾಖೆಗಳು, mining ಇವೆಲ್ಲ ಬಂದಿವೆ. ಏಕೆಂದರೆ, ಬೇಕಾದಷ್ಟು ಅಲ್ಲಿ ಅವ್ಯವಹಾರಗಳು ನಡೆಯಲು ಪ್ರಾರಂಭವಾಗಿವೆಯಲ್ಲ,

ಇತ್ತೀಚೆಗೆ ಅವೆಲ್ಲ ಬಹಳ ಪ್ರಾಮುಖ್ಯತೆ ಪಡೆದುಕೊಳ್ಳುತ್ತಿವೆ. ಕನಿಷ್ಟ ಇಂಥ ಇಲಾಖೆಗಳ ಮೇಲಾದರೂ ಕೂಡ ಪ್ರತ್ಯೇಕ ಪ್ರತ್ಯೇಕವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದು ಬಹಳ ಒಳ್ಳೆಯದು. ಇಲ್ಲದೇ ಹೋದರೆ ಯಾವ ಮಂತ್ರಿಗಳಿಗೂ ಇಲ್ಲಿ assembly ಯಲ್ಲಿ ಕುಳಿತುಕೊಂಡು ಅವರು ಅವರ ಇಲಾಖೆಯ ಬಗ್ಗೆ ಗಮನಹರಿಸುವುದಿಲ್ಲ. ಹಾಗಾಗಿ, ಬಹಳ ಜನ ಮಂತ್ರಿಗಳು ಸದನಕ್ಕೆ ಬರುವುದಿಲ್ಲ. 28 ಇಲಾಖೆಗಳ ಬೇಡಿಕೆಗಳು ಚರ್ಚೆಗೆ ಬಂದಾಗ ಕನಿಷ್ಟ ಪಕ್ಷ 70–75% ಮಂತ್ರಿಗಳಾದರೂ ಸದನದಲ್ಲಿರಬೇಕಲ್ಲವೇ? Major ಇಲಾಖೆಯವರು ಇರಬೇಕಲ್ಲವೇ? ನಾನು ಇಲ್ಲದಿರುವವರ ಬಗ್ಗೆ ಹೇಳುತ್ತಿದ್ದೇನೆ ಅಚಾರ್ಯರವರೇ?

ಡಾ॥ ವಿ.ಎಸ್.ಆಚಾರ್ಯ.– ನೀವು ಹೇಳಿದವರು ಎಲ್ಲ ಇದ್ದಾರೆ. RDPR, Irrigation Minister ಇದ್ದಾರೆ.

ಶ್ರೀ ಸಿದ್ದರಾಮಯ್ಯ: Primary and Higher Education Minister ಇಲ್ಲ, PWD Minister ಇಲ್ಲ. Power, Home, Forest, Food and Civil Supplies Ministers ಇಲ್ಲ. ಅವರೆಲ್ಲ ಎಲ್ಲಿದ್ದಾರೆ? ಅವೆಲ್ಲ ನಿಮ್ಮ ಪ್ರಕಾರ important ಇಲಾಖೆಗಳಲ್ಲವೇ? RDPR Minister ಒಬ್ಬರಿದ್ದಾರಷ್ಟೇ. ಕುಡಿಯುವ ನೀರಿನ ಇಲಾಖೆಯ Minister ಇಲ್ಲ. Please don't defend. ಏಕೆ ಡಿಫೆಂಡ್ ಮಾಡಿಕೊಳ್ಳುತ್ತೀರಿ? ಇಲ್ಲವೆಂದಮೇಲೆ ಡಿಫೆಂಡ್ ಮಾಡಕೊಳ್ಳುವುದು ಬೇಡ. ಅವರು ಇಲ್ಲಿದ್ದಾರೆಯೇ? ಡಾ: ಆಚಾರ್ಯರವರೇ ಅವರನ್ನು ಡಿಫೆಂಡ್ ಮಾಡಿಕೊಳ್ಳಬೇಡಿ. ನೀವು ಸಾಮಾನ್ಯವಾಗಿ ಡಿಫೆಂಡ್ ಮಾಡಿಕೊಳ್ಳುವುದಿಲ್ಲ. ಇವತ್ತೇಕೆ ಮಾಡಕೊಳ್ಳುತ್ತಿದ್ದೀರೋ ಗೊತ್ತಿಲ್ಲ. ನಿನ್ನೆ ನಾನು, ದೇಶಪಾಂಡೆಯವರು ಪ್ರಸ್ತಾಪ ಮಾಡಿದೆವು. ಈ ರೀತಿ ನಾವು ಪ್ರತ್ಯೇಕವಾಗಿ ಚರ್ಚೆ ಮಾಡದೇ ಹೋದರೆ, ಅದು ಪರಿಣಾಮಕಾರಿ ಚರ್ಚೆಯಾಗುವುದಿಲ್ಲ. ಅಧಿಕಾರಿಗಳಿಗೂ ಕೂಡ ಸದನದ ಬಗ್ಗೆ ಗೌರವವಾಗಲಿ, ಭಯವಾಗಲಿ, ಜವಾಬ್ದಾರಿಗಳಾಗಲಿ ಇರುವುದಿಲ್ಲ. ಇದನ್ನು ಬಹಳ ಸ್ಪಷ್ಟವಾಗಿ ನಿಮ್ಮ ಮೂಲಕ ಸರ್ಕಾರಕ್ಕೆ ತಿಳಿಸಲಿಕ್ಕೆ ಬಯಸುತ್ತೇನೆ. ಇನ್ನು ಮುಂದೆ ತಾವು ಈ ಪದ್ಧತಿಯನ್ನು ತರುವುದನ್ನು ಮಾಡಬೇಕು. ಇಂಥ ಪದ್ಧತಿಯನ್ನು ಬಿಡಬೇಕೆಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳತ್ತೇನೆ.

ಅಧ್ಯಕ್ಷರು: ಇದಕ್ಕೆ ಎರಡೂ ಕಡೆಯಿಂದ ಸಹಕಾರ ಬೇಕಾಗುತ್ತದೆ. ಎಲ್ಲರಿಗೂ ಗೊತ್ತಿರುವ ಹಾಗೆ, ಮೂರನೇ ಒಂದು ಭಾಗ ಸಮಯ ವೇಸ್ಟಾಗುತ್ತದೆ. ಯಾವುದೋ ಚರ್ಚೆಗಳು, ಏನೇನೋ ಆಗುತ್ತದೆ. ಜೊತೆಗೆ, ಇನ್ನೂ ಹೆಚ್ಚು ಜನ ಸರ್ಕಾರದವರೂ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಇವರೂ ಒಪ್ಪಬೇಕಾಗುತ್ತದೆ. ನೀವೂ ಎಲ್ಲ

ರೀತಿಯಲ್ಲೂ ಸಹಕಾರ ಕೊಡಬೇಕಾಗುತ್ತದೆ. ಆಗ ಮಾತ್ರ ಇದು ಸಾಧ್ಯ. ಅಲ್ಲದೇ ಹೋದರೆ, ಎಷ್ಟು ಸಮಯ ವೇಸ್ಟಾಗಿದೆ ಎಂಬುದು ನಿಮಗೇ ಗೊತ್ತಿದೆಯಲ್ಲ.

ಶ್ರೀ ಸಿದ್ದರಾಮಯ್ಯ: ಆಯಿತು. ನಮ್ಮಿಂದ ಎಷ್ಟು ಸಹಕಾರ ಬೇಕೋ, demands ಮೇಲೆ ಚರ್ಚೆ ಮಾಡಲಿಕ್ಕೆ ನಾವು ಸಂಪೂರ್ಣ ಸಹಕಾರ ಕೊಡುತ್ತೇವೆ. ಆಗಬಹುದಲ್ಲವೇ? ನಾವು ನಿಮಗೆ ಭರವಸೆ ಕೊಡುತ್ತೇನೆ. ಬೇಕಾದರೆ ಬಿಎಸಿಯಲ್ಲಿ ಬಂದು ನಿಮಗೆ ಭರವಸೆ ಕೊಡುತ್ತೇವೆ. ಆದರೆ, ನೀವು ಇಲ್ಲಿ ಆ ಪದ್ಧತಿಯನ್ನು ತರುವ ಪ್ರಯತ್ನವನ್ನು ಮಾಡಬೇಕೆಂದು ನಾನು ನಿಮ್ಮಲ್ಲಿ ಅತ್ಯಂತ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಮುಂದೆ ಅದನ್ನು ಮಾಡಬೇಕು. ನಾನು ಜನರಲ್ ಬಜೆಟ್ ಮೇಲೆ ಡಿಸ್‌ಕಷನ್ ಮಾಡುವಾಗಲೂ ಹೇಳಿದ್ದೆ. ಇವತ್ತೂ ಕೂಡ ಅದನ್ನೇ ಮತ್ತೆ ಪುನರುಚ್ಚಾರ ಮಾಡಲು ಬಯಸುತ್ತಿದ್ದೇನೆ. ಈ ಸರ್ಕಾರಕ್ಕೆ ಮತ್ತೆ ಮಾನ್ಯ ಹಣಕಾಸಿನ ಮಂತ್ರಿಗಳಿಗೆ, ಬಜೆಟ್ ಎಂದರೆ ಅದಕ್ಕೊಂದು ದೂರದೃಷ್ಟಿ, ಒಂದು vision ಇರಬೇಕಾಗುತ್ತದೆ. ಈ ರಾಜ್ಯದ ಆದಾಯ ಅಭಿವೃದ್ಧಿ ಮಾಡುವ ಬಗ್ಗೆ, ಅದನ್ನು ಸಮಾನವಾಗಿ ಹಂಚಿಕೆ ಮಾಡುವ ಬಗ್ಗೆ, ಹಂಚಿಕೆ ಮಾಡಿದಂಥ ಹಣ ಸಮರ್ಪಕವಾಗಿ ಬಳಕೆಯಾಗುವ ಬಗ್ಗೆ, ನಾವು ಮಾಡಿದ ಕಾರ್ಯಕ್ರಮಗಳು ಸರಿಯಾದ ರೀತಿಯಲ್ಲಿ ಜಾರಿಯಾಗುವುದರ ಬಗ್ಗೆ, ಒಂದು ಸ್ಪಷ್ಟವಾದ vision ಇರಬೇಕಾಗುತ್ತದೆ. ಆ vision ಗೆ ಪೂರಕವಾಗಿ ನಮ್ಮ ಕಾರ್ಯಕ್ರಮಗಳನ್ನು ರೂಪಿಸುವುದು, ಆ ಕಾರ್ಯಕ್ರಮಗಳಿಗೆ ಬೇಕಾದ ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡುವ ಬದ್ಧತೆ ಸರ್ಕಾರಕ್ಕಿರಬೇಕಾಗುತ್ತದೆ. ಇವತ್ತು ಮಾನ್ಯ ಯಡಿಯೂರಪ್ಪನವರು ಕರ್ನಾಟಕ ರಾಜ್ಯದ ಹಣಕಾಸಿನ ಮಂತ್ರಿಯಾಗುವ ಸಂದರ್ಭದಲ್ಲಿ ರಾಜ್ಯದ ಹಣಕಾಸು ಪರಿಸ್ಥಿತಿ ಸುಧಾರಣೆಯಾದ ಮೇಲೆ, ಸುಸ್ಥಿತಿಗೆ ಬಂದ ಮೇಲೆ, ಅವರು ಹಣಕಾಸಿನ ಮಂತ್ರಿಯಾದರು.

ಅಧ್ಯಕ್ಷರು: ಅದು ಅವರ ಅದೃಷ್ಟ.

ಶ್ರೀ ಸಿದ್ದರಾಮಯ್ಯ: ಅವರ ಅದೃಷ್ಟ, ಈ ರಾಜ್ಯದ ದುರಾದೃಷ್ಟ, ನಮಗೆ ಅದೃಷ್ಟ, ದುರಾದೃಷ್ಟದಲ್ಲಿಯೂ ನಂಬಿಕೆ ಇಲ್ಲ. ನಾನು ನಿಮ್ಮ ಪಾರ್ಟಿಗೆ ಬಂದ ದುರಾದೃಷ್ಟದ ಬಗ್ಗೆ ಹೇಳಬೇಕಾಗುತ್ತದೆ. ವಿರೋಧ ಪಕ್ಷದ ಸ್ಥಾನದಲ್ಲಿ ಯಡಿಯೂರಪ್ಪನವರು ಇದ್ದಾಗ ಎಷ್ಟು ಸ್ವಾಭಿಮಾನಿಗಳಾಗಿದ್ದರು ಗೊತ್ತೆ ರಾಮಚಂದ್ರೇಗೌಡರೆ? ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗ ಏನು ಸ್ವಾಭಿಮಾನವಿತ್ತು? ಮುಖವೆಲ್ಲ ಕೆಂಪಗೆ ಮಾಡಿಕೊಂಡು

ಕುಳಿತುಕೊಳ್ಳುತ್ತಿದ್ದರು. ಈಗ ಆ ಸ್ವಾಭಿಮಾನ ಯಡಿಯೂರಪ್ಪನವರೆ ಎಲ್ಲಿ ಹೊರಟುಹೋಯಿತು? ಉಸಿರೇ ಬಿಡುವುದಿಲ್ಲವಲ್ಲ.

ಶ್ರೀ ಬಿ.ಸಿ. ಪಾಟೀಲ್: ಸಿದ್ದರಾಮಣ್ಣನವರೆ, ತಾವೂ ನಮ್ಮ ಜೊತೆಯಲ್ಲಿದ್ದಾಗ ಎಷ್ಟು powerful ಆಗಿದ್ದಿರಿ. ಧ್ವನಿ ಎಷ್ಟು ಗಡಸಾಗಿತ್ತು. ಈಗ weak ಆಗಿದ್ದೀರಿ.

ಶ್ರೀ ಸಿದ್ದರಾಮಯ್ಯ: ಜೆಡಿ(ಎಸ್)ಗೆ ನೀವು ಹೊಸದಾಗಿ ಬಂದಿದ್ದೀರಿ. ನೀವು ಕುಳಿತುಕೊಳ್ಳಿ, ನಿಮಗೆ ಗೊತ್ತಾಗುವುದಿಲ್ಲ.

ಶ್ರೀ ಬಿ.ಸಿ. ಪಾಟೀಲ್: ಇರಬಹುದು. ಹೊಸದಾಗಿ ಬಂದರೆ ಏನೂ ಆಗುವುದಿಲ್ಲ.

ಶ್ರೀ ಸಿದ್ದರಾಮಯ್ಯ: ಬಿ.ಸಿ. ಪಾಟೀಲರೆ, ನೀವು ಹೊಸದಾಗಿ ಬಂದಿದ್ದೀರಿ. ಕುಳಿತುಕೊಳ್ಳಿ. ನಿಮಗೆ ಸ್ವಲ್ಪ ಅನುಭವವಾಗಿದೆ, ಇನ್ನೂ ಅನುಭವವಾಗುತ್ತದೆ, ಕುಳಿತುಕೊಳ್ಳಿ.

ಶ್ರೀ ಬಿ.ಸಿ. ಪಾಟೀಲ್: ನಿಮಗೆ ರಾಜಕೀಯದಲ್ಲಿ ಜಾಸ್ತಿ ಅನುಭವವಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಿಮಗೆಲ್ಲ ಮುಂದೆ ಮಾರಿಹಬ್ಬ ಇದೆ ಕುಳಿತುಕೊಳ್ಳಿ. ನೀವು ನಮ್ಮ ಸ್ನೇಹಿತರೇ, ನಿಮಗೆ ಇನ್ನೂ ಸ್ವಲ್ಪ ಅನುಭವವಾಗುತ್ತದೆ ಇರಿ. ನಾನು ನಿಮ್ಮ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದೇನೆಯೇ? ರಾಮಚಂದ್ರೇಗೌಡರೆ, ಏಕೆ ಹೀಗೆ ಆಗಿಹೋದರು? ನಿಮ್ಮ ಎದುರುಗಡೆ ಇರುವ ತಟ್ಟೆಯಲ್ಲಿ ಹೆಗ್ಗಣ ಬಿದ್ದಿದ್ದರೂ ನಮ್ಮ ಹತ್ತಿರ ಏನಾಗಿದೆ? ನಮ್ಮ ಹತ್ತಿರ ನೊಣವೂ ಬಿದ್ದಿಲ್ಲವೆಂದು ಹೇಳಿದರೆ ನಾವೇನೂ ಮಾಡುವುದಕ್ಕಾಗುತ್ತದೆ? ಯಡಿಯೂರಪ್ಪನವರೇ, ಶಾಂತಿ ಇರಬೇಕು. ಮೊದಲಿನಷ್ಟು ಕೋಪವಿರಬಾರದು. ತಾಳ್ಮೆ ಎಲ್ಲ ಇರಬೇಕು. ಆದರೆ, ಆತ್ಮಗೌರವ ಮತ್ತು ಸ್ವಾಭಿಮಾನವನ್ನು ಮಾತ್ರ ನೀವು ಮೊದಲಿನಿಂದ ಹೇಗೆ ಇಟ್ಟುಕೊಂಡು ಬಂದಿದ್ದೀರಿ, ಪಾಲಿಸಿಕೊಂಡು ಬಂದಿದ್ದೀರಿ, ಮೈಗೂಡಿಸಿಕೊಂಡು ಬಂದಿದ್ದೀರಿ ಅದನ್ನು ಮಾತ್ರ ದಯವಿಟ್ಟು ಅಧಿಕಾರಕ್ಕೋಸ್ಕರ ಬಿಡುವುದಕ್ಕೆ ಹೋಗಬೇಡಿ. ಅದು ಕೇವಲ ನಿಮ್ಮ ವ್ಯಕ್ತಿತ್ವಕ್ಕಷೇ ಅಲ್ಲ, ನಿಮ್ಮ ಪಕ್ಷಕ್ಕಷ್ಟೇ ಅಲ್ಲ, ಮುಂದಿನ ಬೇರೆ ಜನರಿಗೆ ಕೂಡ ತಪ್ಪು ದಾರಿಯನ್ನು ತಪ್ಪು ಆದರ್ಶವನ್ನು ತಪ್ಪು ಅಭಿಪ್ರಾಯವನ್ನು ಕೊಟ್ಟ ಹಾಗಾಗುತ್ತದೆ.

ಬಹುಶ: ಅದರಲ್ಲಿ ಬದಲಾವಣೆಯಾಗುತ್ತಾರೆ ಎನ್ನುವುದು ನನ್ನ ಭಾವನೆ. ನಾನು ಇದಕ್ಕಿಂತ ಹೆಚ್ಚಾಗಿ ಹೇಳುವುದಿಲ್ಲ. ಅನುಮಾನವೇನಿಲ್ಲ. ಪಾಪ, ಅವರು ಆ ಮಾತುಕತೆಯಾಗಿದೆಯಲ್ಲ, ಆ ರೀತಿ ಆಗಲಿ ಎಂದಷ್ಟೇ ನನಗೆ ಆಸೆ ಇರುವುದು. ಬೇರೇನಿಲ್ಲ. ನಮ್ಮದೇನಿಲ್ಲ. ಅದಾಗಬೇಕು. ಆದರೆ, ನನ್ನ ಅನುಭವದ ಪ್ರಕಾರ ಅವರಿಗೆ ಆಗುವುದಿಲ್ಲ ಅಷ್ಟೇ. ನನಗೆ ಆಶೀರ್ವಾದ ಮಾಡುವಷ್ಟು ಶಕ್ತಿ ಇಲ್ಲ. ಅವರಿಗೆ ಶುಭಾಶಯ ಕೋರುವ ಶಕ್ತಿ ನನಗಿದೆ. ಯಡಿಯೂರಪ್ಪನವರು ನನಗಿಂತ ದೊಡ್ಡವರು. ನಾನು ಆಶೀರ್ವಾದ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಅವರಿಗೆ ಶುಭವಾಗಲಿ ಎಂದು ಹೇಳುತ್ತೇನೆಯೇ ಹೊರತು ಬೇರೇನಿಲ್ಲ. ಆದರೆ, ಇವತ್ತು ಅತ್ಯಂತ ಮೌನಕ್ಕೆ ನಾನು ಶರಣಾಗಿದ್ದೇನೆ, ನಾನು ಮಾತೇ ಆಡುವುದಿಲ್ಲ, ಯಾರು ಏನಾದರೂ ಅಂದುಕೊಳ್ಳಲಿ, ನಾನು ಅಸಮರ್ಥನೆಂದು ಹೇಳಲಿ, ನನಗೆ ಶಕ್ತಿಯೇ ಇಲ್ಲವೆಂದು ಹೇಳಲಿ, ಅದಕ್ಷನೆಂದು ಹೇಳಲಿ ಎಂದು ಸುಮ್ಮನಿರುವುದಿದೆಯಲ್ಲ, ಅದಕ್ಕೂ ಸುಮ್ಮನಿರಬೇಕೇ? ಹೇಳಿ ನೋಡೋಣ? ಹೇಳಿ ಯಡಿಯೂರಪ್ಪನವರೇ, ಅದಕ್ಕೂ ಸುಮ್ಮನಿರಬೇಕೇ? ಅಧಿಕಾರ ಯಾವಾಗಲೂ ಶಾಶ್ವತವೇ? ಪ್ರಜಾಪ್ರಭುತ್ವದಲ್ಲಿ ಅಧಿಕಾರ ಬರುತ್ತದೆ, ಹೋಗುತ್ತದೆ. ಈ ದೇಶದಲ್ಲಿ ಎಂಥೆಂಥವರು ಅಧಿಕಾರಕ್ಕೆ ಬಂದಿದ್ದಾರೆ, ಹೋಗಿದ್ದಾರೆ. ಪ್ರಧಾನ ಮಂತ್ರಿಗಳಾಗಿದ್ದವರು, ದೇಶದ ಉನ್ನತ ಸ್ಥಾನಗಳಿಗೆ ಹೋಗಿದ್ದವರು ಬಂದಿದ್ದಾರೆ ಹೋಗಿದ್ದಾರೆ. ಆದ್ದರಿಂದ, ಪ್ರಜಾಪ್ರಭುತ್ವದಲ್ಲಿ ಅಧಿಕಾರ ಯಾವತ್ತೂ ಶಾಶ್ವತವಲ್ಲ. ಆದರೆ, ಕುರ್ಚಿ ಬರುತ್ತದೆನ್ನುವ ಕಾರಣಕ್ಕೋಸ್ಕರ ಆತ್ಮಗೌರವ ಕಳೆದುಕೊಂಡು, ಸ್ವಾಭಿಮಾನ ಕಳೆದುಕೊಂಡು ರಾಜಕಾರಣ ಮಾಡಬೇಕಾದಂಥ ಅಗತ್ಯ ಇಲ್ಲ. ಇದನ್ನು ನಾನು ಅವರಿಗೆ ಒಬ್ಬ ಹಿತೈಷಿಯಾಗಿ ಹೇಳಲಿಕ್ಕೆ ಬಯಸುತ್ತಿದ್ದೇನೆ. ನಾನೂ ಒಬ್ಬ ಸ್ವಾಭಿಮಾನಿಯಾಗಿ...

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಸಿದ್ದರಾಮಯ್ಯನವರೆ, ನಿಮಗಾದ ಅನುಭವವನ್ನು ಅವರಿಗೆ ಹೇಳುತ್ತಿದ್ದೀರಾ?

ಶ್ರೀ ಸಿದ್ದರಾಮಯ್ಯ: ಅನುಭವದ ಹಿನ್ನೆಲೆಯಲ್ಲಿ ಹೇಳುತ್ತಿದ್ದೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ನಾನು ವಂಚಿತನಾದೆ, ನೀವೂ ವಂಚಿತರಾಗಬೇಡಿ ಎಂದು ಹೇಳುತ್ತಿದ್ದೀರಾ?

ಶ್ರೀ ಸಿದ್ದರಾಮಯ್ಯ: ನನಗಾದ ಅನುಭವದ ಹಿನ್ನೆಲೆಯಲ್ಲಿ ಹೇಳುತ್ತಿದ್ದೇನೆಂದರೆ

ಅದೇ ಅರ್ಥವಲ್ಲವೇ?

ಶ್ರೀ ಕೆ. ವೆಂಕಟೇಶ್: ನಾನು ಸ್ವಾಭಿಮಾನ ಕಳೆದುಕೊಳ್ಳಲಿಲ್ಲ, ನಾನು ಸ್ವಾಭಿಮಾನ ಉಳಿಸಿಕೊಂಡೆ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ನೋಡೋಣ ನಾನು ವಂಚಿತನಾಗುತ್ತೇನೋ ಇಲ್ಲವೋ ಎಂದು ಅವರು ಮೌನವಾಗಿದ್ದಾರಷ್ಟೆ.

ಶ್ರೀ ಸಿದ್ದರಾಮಯ್ಯ.– ಮಾನ್ಯ ಯಡಿಯೂರಪ್ಪನವರು ಬಹಳ ಉತ್ತಮವಾದ ಪರಿಸ್ಥಿತಿ ಇರುವ ಸಂದರ್ಭದಲ್ಲಿ ಬಂದರು. ಬಹಳ ದೀರ್ಘ ಕಾಲ ವಿರೋಧ ಪಕ್ಷದಲ್ಲಿ ಕೆಲಸ ಮಾಡಿದ್ದರು. ಅನುಭವವಿತ್ತು. ಆ ಅನುಭವದ ಹಿನ್ನೆಲೆಯಲ್ಲಿ ಇವತ್ತೇನು ರಾಜ್ಯದಲ್ಲಿ ಸಂಪನ್ಮೂಲ ಕ್ರೋಢೀಕರಣವಾಗುವ ಪರಿಸ್ಥಿತಿಗೆ ತಂದಿಟ್ಟಿದ್ದೆವು. ಇವತ್ತು ಕರ್ನಾಟಕದಲ್ಲಿ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಬೇಕಾದರೆ 1997–98 ರಿಂದೀಚೆಗೆ ಮಾನ್ಯ ಆಚಾರ್ಯರವರೇ ರಾಜ್ಯದ ಆರ್ಥಿಕ ಪರಿಸ್ಥಿತಿ ಬಹಳ ಕೆಟ್ಟುಹೋಗಿತ್ತು. Revenue deficit 2000 ಕೋಟಿ ರೂ.ಗಳಿಗಿಂತ ಜಾಸ್ತಿ ಆಗಿತ್ತು. ನಾನು ಹಳೆಯದನ್ನೇ ಹೇಳುತ್ತಿದ್ದೇನೆ. ಅದಕ್ಕೆಲ್ಲ ಕಾರಣ ಹೇಳುವುದಕ್ಕೆ ಹೋದರೆ ಸಮಯವಾಗುತ್ತದೆ. ಅದನ್ನು ಸುಧಾರಣೆ ಮಾಡಿದವರು ಯಾರೆಂದು ಹೇಳುತ್ತೇನೆ. ಏಕೆ ಆಯಿತೆಂದು ಕಾರಣಗಳನ್ನು ಹೇಳಬೇಕೇ ? ಬೇಕೆಂದರೆ ಹೇಳುತ್ತೇನೆ. ಈಗ ಬೇಡ. ಅವೆಲ್ಲವನ್ನು ಆವತ್ತಿನ ಬಜೆಟ್ ಚರ್ಚೆಯಲ್ಲಿ ಹೇಳಿದ್ದೇನೆ. ಮತ್ತೆ repeat ಮಾಡಬೇಕಾದ ಅಗತ್ಯವಿಲ್ಲ. ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿ ಮತ್ತು ಹಣಕಾಸಿನ ಮಂತ್ರಿಗಳಾಗಿದ್ದಾಗ ಆರ್ಥಿಕ ಸುಧಾರಣಾ ಕಾರ್ಯಕ್ರಮಗಳು ರಾಜ್ಯದಲ್ಲಿ ಪ್ರಾರಂಭವಾದವು. 1997–98ರಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಕೆಟ್ಟು ಹೋದ ಮೇಲೆ 2001–02ನೇ ಇಸವಿಯಿಂದ ಪ್ರಾರಂಭವಾದ ಆರ್ಥಿಕ ಸುಧಾರಣೆ 2004–05ಕ್ಕೆ ರಾಜ್ಯದ ಆರ್ಥಿಕ ಪರಿಸ್ಥಿತಿ ಸುಸ್ಥಿತಿಗೆ ಬಂತು. ಅದು ಆಗಬೇಕಾದರೆ ಎಸ್.ಎಂ. ಕೃಷ್ಣರವರು ರಾಜ್ಯದ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳಾಗಿ ಅನೇಕ ಸುಧಾರಣೆಗಳನ್ನು ಮಾಡಲಿಕ್ಕೋಸ್ಕರವಾಗಿ ಕೇಂದ್ರ ಸರ್ಕಾರದ ಜೊತೆ ಒಡಂಬಡಿಕೆ ಮಾಡಿಕೊಂಡು ಕೆಲವು ಕಾಯಿದೆಗಳನ್ನು ರಚಿಸಿ ಅನೇಕ ಸುಧಾರಣಾ ಕಾರ್ಯಕ್ರಮಗಳನ್ನು ಜಾರಿ ಮಾಡಿದ ಮೇಲೆ 2004–05ರಲ್ಲಿ ರಾಜ್ಯದಲ್ಲಿ revenue ಕೊರತೆಯನ್ನು ನೀಗಿಸುವ ಪರಿಸ್ಥಿತಿಗೆ ಬಂದೆವು.

(ಈ ಹಂತದಲ್ಲಿ ಶ್ರೀ ಕೆ.ಎನ್. ರಾಜಣ್ಣರವರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

2000 ಕೋಟಿ ರೂ.ಗಳಿಗಿಂತ ಹೆಚ್ಚು revenue ಕೊರತೆಯಿದ್ದಂಥ ಪರಿಸ್ಥಿತಿಯಿಂದ revenue ಕೊರತೆಯನ್ನು ನೀಗಿಸಬೇಕಾದರೆ ಸಾಲ ತೆಗೆದುಕೊಂಡು ಬಂದು revenue ಕೊರತೆಯನ್ನು ನೀಗಿಸಬೇಕಾಗಿತ್ತು, ಸಂಬಳ ಕೊಡಬೇಕಾದ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿತ್ತು. ಅಂಥ ಕೆಟ್ಟ ಪರಿಸ್ಥಿತಿ ಇತ್ತು. 1999 ರಲ್ಲಿ ನಾವೇನು ಅನೇಕ ಸಂಸ್ಥೆಗಳ ಮೂಲಕ ರಾಜ್ಯಗಳಲ್ಲಿ ಸಾಲ ಮಾಡುತ್ತೇವೆ, ಕೃಷ್ಣ ಜಲಭಾಗ್ಯ ನಿಗಮ ಇರಬಹುದು, ಕಾವೇರಿ ನೀರಾವರಿ ನಿಗಮ ಇರಬಹುದು, ಅಥವಾ ಕರ್ನಾಟಕ ನೀರಾವರಿ ನಿಗಮ ಇರಬಹುದು, ಬೇರೆ ಬೇರೆ Boards, Corporations ಇರಬಹುದು, ಇವೆಲ್ಲವೂ ಕೂಡ off budget ಸಾಲ ಎತ್ತುವುದಕ್ಕೆ ಸರ್ಕಾರ ಖಾತರಿ ಕೊಡುತ್ತದೆ. ಆ ಖಾತರಿಯನ್ನು ನಿಯಂತ್ರಣ ಮಾಡಲಿಕ್ಕೆ ಖಾತರಿಯನ್ನು ಮಿತಿಗೊಳಿಸಲಿಕ್ಕೆ ಒಂದು ಕಾನೂನನ್ನು ರಚಿಸಿದೆವು. ಕರ್ನಾಟಕ ಖಾತರಿ ಮಿತಿ ಖಾಯಿದೆಯನ್ನು 1999 ರಲ್ಲಿ ಈ ಸದನದಲ್ಲೆಯೇ ಪಾಸ್ ಆಯಿತು. ಅದಾದ ಮೇಲೆ 2002ರಲ್ಲಿ ಎಸ್.ಎಂ.ಕೃಷ್ಣರವರ ಕಾಲದಲ್ಲಿ Fiscal Responsibility Act ಎಂದು pass ಆಯಿತು. ಆ Act ನಲ್ಲಿ ರಾಜ್ಯದಲ್ಲಿ ಆರ್ಥಿಕ ಶಿಸ್ತು ತರಬೇಕಾದರೆ Fiscal correction and Fiscal consolidation ಇದನ್ನು ಮಾಡಬೇಕಾದರೆ ಏನೆಲ್ಲಾ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾವು ಕಾಯಿದೆ ರಚಿಸಿ ಆ ಕಾಯಿದೆಯಡಿಯಲ್ಲಿ 2003ರಲ್ಲಿ ನಿಯಮಗಳನ್ನು ರಚಿಸಿಕೊಂಡು ಅದರ ಚೌಕಟ್ಟಿನೊಳಗಡೆ ಇವತ್ತು ಕೆಲಸ ಮಾಡುವ ಒಪ್ಪಂದವನ್ನು ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾಡಿಕೊಂಡಿದ್ದೇವೆ. ನಮ್ಮ ಒಪ್ಪಂದದ ಪ್ರಕಾರ 2005ರ ಮಾರ್ಚ್ ಒಳಗಡೆ ನಾವು revenue deficit ಅನ್ನು ತೊಡೆದು ಹಾಕಿ revenue surplus ತರಬೇಕಾಯಿತು. Revenue deficit 1997-98 ರಿಂದ 2003ರವರೆಗೂ ಕೂಡ 3% ಗಿಂತ ಜಾಸ್ತಿ ಇತ್ತು. ಆದರೆ, ನಾವು ನಮ್ಮ ಒಡಂಬಡಿಕೆಯಲ್ಲಿ ಒಪ್ಪಿಕೊಂಡು 2005–06ರ ಒಳಗಡೆ 3% ಗಿಂತ ಒಳಗಡೆ ತರುತ್ತೇವೆಂದು ಹೇಳಿದ್ದೆವು. ಇದಕ್ಕೋಸ್ಕರ ಕೇಂದ್ರ ಸರ್ಕಾರ 11ನೇ ಹಣಕಾಸಿನ ಆಯೋಗ ಸುಧಾರಣಾ ನಿಧಿಯನ್ನು ಮಾಡಿತ್ತು. ಯಾರ್ಯಾರು ಸುಧಾರಣೆ ಮಾಡುತ್ತಾರೆ ಅವರಿಗೆಲ್ಲ ಆ ನಿಧಿಯಲ್ಲಿ incentive ಕೊಡುವುದು ಇದನ್ನೆಲ್ಲ ಮಾಡುವುದು ಕೂಡ ಇತ್ತು. ನಾನು 2004–05ರಲ್ಲಿ ಹಣಕಾಸು ಮಂತ್ರಿ ಆದ ಮೇಲೆ 2005–06ರಲ್ಲಿ ನಾವು ಯಾವ್ಯಾವ ಗುರಿಗಳನ್ನು reach ಆಗಬೇಕಾಗಿತ್ತು ಅದನ್ನು ಒಂದು ವರ್ಷಕ್ಕಿಂತ ಮುಂಚಿತವಾಗಿ ನಾವು reach

ಆದೆವು. 2005–06ರ ಮಾರ್ಚ್ 31 ರೊಳಗಡೆ ರೀಚ್ ಆಗಬೇಕಾಗಿದ್ದನ್ನು 2004–2005 ಮಾರ್ಚ್ ಒಳಗಡೆ ನಾವು ಅದನ್ನು ತಲುಪಿದೆವು. ಬಹುಶಃ ದೇಶದಲ್ಲಿ ಕರ್ನಾಟಕ ಮೊದಲನೇ ರಾಜ್ಯ. ಒಂದು ವರ್ಷ ಮುಂಚಿತವಾಗಿ ಆ ಮಾನದಂಡಗಳೇನಿತ್ತು, ಆ ಮಾನದಂಡಗಳನ್ನು, ಗುರಿಗಳನ್ನು ನಾವು ತಲುಪುವುದರಲ್ಲಿ ನಮ್ಮದು ಮೊದಲನೇ ರಾಜ್ಯ. ಅದಕ್ಕಾಗಿ ನಮಗೆ fiscal incentive ಸಿಕ್ಕಿತು. ರೆವಿನ್ಯೂ ಕೊರತೆಯಿಂದ revenue surplus ಗೆ ತಲುಪಿ 1638 ಕೋಟಿ ರೂಪಾಯಿ 2004–2005ರಲ್ಲಿ revenue surplus ಆಯಿತು, ಉಳಿತಾಯವಾಯಿತು. 2005–2006ರಲ್ಲಿ ರೆವಿನ್ಯೂ ಉಳಿತಾಯ ಸುಮಾರು 2000 ಕೋಟಿಗಿಂತಲೂ ಹೆಚ್ಚಾಯಿತು. 2006–2007 ರಲ್ಲಿ 2800 ಕೋಟಿಗಿಂತಲೂ ಹೆಚ್ಚಾಗಿದೆ. ಹಾಗೆಯೇ fiscal deficits 2004–2005ರಲ್ಲಿ 3% ನಿಂದ ಒಳಗಿದ್ದರೂ 5% ಗಿಂತಲೂ ಹೆಚ್ಚಾಗಿದ್ದಂಥ ಒಂದು ಕಾಲವಿತ್ತು. 4 ರಿಂದ 5% ಗಿಂತಲೂ ಹೆಚ್ಚಾಗಿದ್ದಂಥ ಕಾಲವಿತ್ತು. ಸಾಲದ ಹೊರೆ ಬಹಳ ಭಾರ ಆಗಿ debt services, debt burden ಬಹಳ ಹೆಚ್ಚಾಗಿದ್ದಂಥ ಕಾಲ ಇತ್ತು. ಆದರಿಂದ ಹೊರಗಡೆ 2004–2005ರಲ್ಲಿ ಬರಲಿಕ್ಕೆ ಪ್ರಮಾಣಿಕ ಪ್ರಯತ್ನವಾಯಿತು. ಹೀಗಾಗಿ 2004–2005ರಲ್ಲಿ fiscal deficits has come down to 2.83. ಇದು ಒಂದು ವರ್ಷಕ್ಕಿಂತ ಮುಂಚಿತವಾಗಿ ಸಾಧನೆಯಾಯಿತು. ಇದರ ಪರಿಣಾಮವಾಗಿ ಕರ್ನಾಟಕಕ್ಕೆ fiscal incentive ಆಗಿ 268 ಕೋಟಿ ರೂಪಾಯಿಗಳು, ನಂತರ ಈ debt consolidations ಮಾಡುವುದು. ಏಕೆಂದರೆ, ಕೇಂದ್ರ ಸರ್ಕಾರ ಒಂದು ಸ್ಕೀಂಅನ್ನು ಅನೌನ್ಸ್ ಮಾಡಿದರು. Debt Swapping Scheme ಎಂದು ಕೇಂದ್ರ ಸರ್ಕಾರ ಮಾಡಿತು. ಇದರಲ್ಲಿ 2004–2005ನೇ ಸಾಲಿನಲ್ಲಿ 5623 ಕೋಟಿ ರೂಪಾಯಿಗಳು Debt Swapping ಆಯಿತು. ಇದರಿಂದಾಗಿ ರಾಜ್ಯ ಸರ್ಕಾರಕ್ಕೆ 2000 ಕೋಟಿ ರೂಪಾಯಿಗಳು ಉಳಿತಾಯವಾಯಿತು. ಇದು ಕರ್ನಾಟಕದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಸುಧಾರಣಾ ಕಾರ್ಯಕ್ರಮದಲ್ಲಿ ಇದು ದೊಡ್ಡ ಮೈಲಿಗಲ್ಲು. 2005–06ರಲ್ಲಿ ಕೂಡ ಇದು ಮುಂದುವರಿಯಿತು. ಈ debt consolidations, debt swapping ಕರ್ನಾಟಕದಲ್ಲಿ ಮಾಡಿದ್ದಕ್ಕೆ ಹೈಯರ್ ರೇಟ್ ಇರುವ ಸಾಲಗಳನ್ನು ತೀರಿಸಿ, ಕಡಿಮೆ ಸಾಲ ಇರುವಂಥಾದ್ದು. ಏಕೆಂದರೆ, ನಾವೆಲ್ಲ ಹೈಯರ್ ರೇಟ್ ಇಂಟರೆಸ್ಟ್ ಇರತಕ್ಕಂಥಾದ್ದು ಮಾಡಿಕೊಂಡಿದ್ದೆವು. ಕೆಲವು ಕಡೆ debt wive off ಮಾಡಿದರು. ಹಳೆಯ ಸಾಲಗಳನ್ನೆಲ್ಲ waive ಮಾಡಿದರು. ಆಮೇಲೆ ಅವುಗಳನ್ನು

ಕಂತುಗಳನ್ನಾಗಿ ಮಾಡಿಕೊಟ್ಟಿದ್ದಾರೆ. 20 ಕಂತುಗಳನ್ನಾಗಿ start ಮಾಡಿ ಬಡ್ಡಿ ರೇಟ್ ಎಲ್ಲಾ ಏಳೂವರೆ ಪರ್ಸೆಂಟ್‌ಗೆ ಮಾಡಿ, ಇವು ಎಲ್ಲಾ ಮಾಡಿದ ಮೇಲೆ ಸರ್ಕಾರಕ್ಕೆ ಹಣಕಾಸಿನ ಸಾಲದ ಭಾರ ಏನಿತ್ತು, ಆ ಋಣಭಾರ ಏನಿತ್ತು, ಅದು ಕಡಿಮೆಯಾಗತಕ್ಕಂಥ ಕೆಲಸ 2004-05 ರಲ್ಲಿ ಎಸ್.ಎಂ. ಕೃಷ್ಣರವರು ಪ್ರಾರಂಭ ಮಾಡಿದಂಥ ಸುಧಾರಣೆ ಮತ್ತು ನಾನು ಎಂದು ಹೇಳಿಕೊಳ್ಳುವುದಕ್ಕೆ ಆಗುವುದಿಲ್ಲ. ನಾನು ಎಂದು ಹೇಳಿಕೊಳ್ಳುವುದಕ್ಕೆ ಹೋಗುವುದಿಲ್ಲ. ನಾನು ಆ ದಿವಸ ಧರ್ಮಸಿಂಗ್ ರವರ ಸರ್ಕಾರದಲ್ಲಿ ಹಣಕಾಸಿನ ಮಂತ್ರಿಯಾಗಿರುವಾಗ ಈ ಸಾಧನೆಗಳನ್ನು ಮಾಡುವುದಕ್ಕೆ ಸಾಧ್ಯವಾಯಿತು. ಇವತ್ತು ಏನಾದರೂ ಟ್ರಜರಿ ತುಂಬುತ್ತಿದ್ದರೆ ಅದಕ್ಕೆ ಈ ಸರ್ಕಾರವಾಗಲಿ ಯಡಿಯೂರಪ್ಪನವರಾಗಲಿ ಕಾರಣರಲ್ಲ. ಇದರ ಕ್ರೆಡಿಟ್ ಎಸ್.ಎಂ. ಕೃಷ್ಣರವರಿಗೆ ಮತ್ತು ಧರ್ಮಸಿಂಗ್‌ರವರ ಸರ್ಕಾರದಲ್ಲಿ ನಾನು ಹಣಕಾಸಿನ ಮಂತ್ರಿಗಳಾಗತಕ್ಕಂಥ ಅವಕಾಶ ಸಿಕ್ಕಿತ್ತು. ಆ ಕ್ರೆಡಿಟ್ ನಮಗೆ ಬರಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಈ ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಈ ಒಂದು ಸುಧಾರಣೆಯನ್ನು ತಂದು ಕರ್ನಾಟಕ ರಾಜ್ಯವನ್ನು ಸುಸ್ಥಿತಿಗೆ ತಂದಿದ್ದೇವಲ್ಲ ಇದು ಹೀಗೆ ಮುಂದುವರಿಯಬೇಕು. ಮತ್ತೆ ತೆಗೆದುಕೊಳ್ಳಬಾರದು U turn ತೆಗೆದುಕೊಳ್ಳಬಾರದೆನ್ನುವ ಕಾರಣಕ್ಕೋಸ್ಕರವೇ ನಾವು ಈ fiscal responsibility act ನ್ನು ಪಾಸ್ ಮಾಡಿದ್ದು. ಇದರ ಚೌಕಟ್ಟಿನೊಳಗಡೆ ಹಣಕಾಸಿನ ಮಂತ್ರಿಗಳು ಕೆಲಸ ಮಾಡಬೇಕು, ಈ ರಾಜ್ಯದ ಸಂಪನ್ಮೂಲ ಹೆಚ್ಚು ಕ್ರೋಢೀಕರಣ ಮಾಡಬೇಕು. ಸಾಲದ ಭಾರ ಕಡಿಮೆ ಮಾಡಬೇಕು. Revenue deficits ಯಾವಾಗಲೂ 3% ಒಳಗಡೆಯಿರುವಂತೆ ನೋಡಿಕೊಳ್ಳಬೇಕು. ರೆವಿನ್ಯೂ ಕೊರತೆ ಮತ್ತೆ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕು. Revenue surplus ನ್ನು capital ಫಾರ್‌ಮೇಷನ್ ಗೆ ಹಣ ಖರ್ಚು ಮಾಡತಕ್ಕಂಥ ಕೆಲಸ ಮಾಡಬೇಕು. ಆಸ್ತಿ ಉತ್ಪಾದನೆ ಮಾಡಕತಕ್ಕಂಥ, higher priority sector ಗಳಿಗೆ ಖರ್ಚು ಮಾಡತಕ್ಕಂಥ ಕೆಲಸವನ್ನು ಮಾಡಬೇಕು. ಈ ದಾರಿಯಲ್ಲಿ ಹೋಗಬೇಕಾದ ಅಗತ್ಯವಿದೆ. ಏಕೆಂದರೆ ಈ ರಾಜ್ಯದ ಆರ್ಥಿಕ ಬೆಳವಣಿಗೆ ಆಗಬೇಕಾದರೆ, ಈ ರಾಜ್ಯದಲ್ಲಿರುವ ಬಡತನವನ್ನು ನಾವು ಹೋಗಲಾಡಿಸಬೇಕಾದರೆ, ಎಲ್ಲಾ ಜನರ ಜೀವನ ಮಟ್ಟವನ್ನು ಅಭಿವೃದ್ಧಿಪಡಿಸಬೇಕಾದರೆ, ನಾವು ಯಾವತ್ತಾದರೂ ಈ ದಾರಿಯಲ್ಲಿ ಎಡವಿದರೆ ಮತ್ತೆ ಕರ್ನಾಟಕಕ್ಕೆ ಗಂಡಾಂತರ ಬರುತ್ತದೆ, ಅಪಾಯ ಬರುತ್ತದೆ, ಎನ್ನತಕ್ಕಂಥ ಮಾತನ್ನು ನಾನು ಮಾನ್ಯ ಯಡಿಯೂರಪ್ಪನವರಿಗೆ ತಿಳಿಸಲಿಕ್ಕೆ ಬಯಸುತ್ತೇನೆ. ಏಕೆಂದರೆ, ಅವರು

ಹೊರಟಿರುವ ದಾರಿ ಏನು ಇದೆ, ಆ ದಾರಿ ಮತ್ತೆ ನಮ್ಮೆಲ್ಲರಿಗೂ ಕೂಡ ಆತಂಕವನ್ನುಂಟು ಮಾಡತಕ್ಕಂಥ ಪರಿಸ್ಥಿತಿ ಇವತ್ತು ನಿರ್ಮಾಣವಾಗುತ್ತಿದೆ. ಇದು ಆಗದ ಹಾಗೆ ನೋಡಿಕೊಳ್ಳುವ ಜವಾಬ್ದಾರಿ ಈ ಸರ್ಕಾರದ ಮೇಲೆ ಇದೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ಕರ್ನಾಟಕ ಹೊಣೆಗಾರಿಕೆ ಅಧಿನಿಯಮದ ಪ್ರಕಾರ ಇದು ನಿನ್ನೆ ಪಾಸ್ ಆಗಿದ್ದು ಅಲ್ಲ 2002ನೇ ಸಾಲಿನಲ್ಲಿ ಪಾಸ್ ಆಗಿರುವುದು. ಸೆಕ್ಷನ್ 3 ಪ್ರಕಾರ ಪ್ರತಿ ವರ್ಷ ಬಜೆಟ್ ಮಂಡಿಸುವಾಗ ಈ medium turn fiscal plan ಇದನ್ನು ಬಜೆಟ್ ಜೊತೆಯಲ್ಲಿಯೇ ಈ ಸದನದಲ್ಲಿ ಇಡಬೇಕಾಗಿತ್ತು. Government has failed miserably. ಫೈನಾನ್ಸ್ ಡಿಪಾರ್ಟ್‌ಮೆಂಟ್ ಏನು ಮಾಡುತ್ತಿದೆ? ಪಾಪ ಯಡಿಯೂರಪ್ಪನವರಿಗೆ ಅದನ್ನು ನೋಡಿಕೊಳ್ಳುವುದಕ್ಕೆ ಪುರುಸೊತ್ತು ಸಿಕ್ಕಲಿಲ್ಲ. ಏಕೆಂದರೆ, ಅವರು ಹೆಚ್ಚಾಗಿ, ಪ್ರಚಾರ ಮಾಡಿಕೊಳ್ಳುವುದು, ವಿಕಾಸ ಯಾತ್ರೆ ಮಾಡುವುದು, ಇದರಲ್ಲಿ ಕಾಲ ಕಳೆದುಬಿಟ್ಟರು, ಹೀಗಾಗಿ ಅವರಿಗೆ ಟೈಂ ಸಿಕ್ಕುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅವರು ಕೇಳಿದಂಥ Principal Secretary ಯನ್ನೇ ಅವರಿಗೆ ಕೊಟ್ಟಿಲ್ಲವೆಂದರೆ ತಯಾರೆಲ್ಲಿ ಆಗಬೇಕು?

ಶ್ರೀ ಸಿದ್ದರಾಮಯ್ಯ: ಪಾಪ ಯಡಿಯೂರಪ್ಪನವರಿಗೆ ಏನಾಗಿದೆ ಎಂದರೆ, ನಾವು ಅವರಿಗೆ ಏನು ಹೇಳಬೇಕೋ ಗೊತ್ತಾಗಲಿಲ್ಲ. ಅರು ತಿಂಗಳು, ಎಂಟು ತಿಂಗಳು, ಒಬ್ಬ Principal Secretary ಯನ್ನು ಕೊಡಲಿಲ್ಲ. ನೀವು ಕೇಳಿದರೂ ಹಾಕಿಕೊಡಲಿಲ್ಲ. ನಿಮಗೆ ಎಂಥ ದುಸ್ಥಿತಿ ಬಂದಿದೆ ನೋಡಿ.

ಡಾ: ಹೆಚ್.ಸಿ. ಮಹಾದೇವಪ್ಪ: Principal Secretary ಇಲ್ಲದೇ ಬಜೆಟ್ ಮಂಡಿಸಿದರು.

ಶ್ರೀ ಸಿದ್ದರಾಮಯ್ಯ: Principal Secretary ಇಲ್ಲದೇ ಬಜೆಟ್ ಮಂಡಿಸಿದರು. Principal Secretary ಈಗ ಬಂದಿದ್ದಾರೆ. ಆರೇಳು ತಿಂಗಳುಗಳಿಂದ Principal Secretary ಇಲ್ಲ.

ಶ್ರೀ ಕೆ. ಶ್ರೀನಿವಾಸ ಗೌಡ: ಅವರು Principal Secretary ಇವರಿಗೆ ಬೇಕಾದವರು ಬೇಕೆಂದು ಕೇಳಿದರು. ಮುಖ್ಯಮಂತ್ರಿಗಳಿಗೆ ಇವರಿಗೆ ಬೇಕಾಗಿರುವವರನ್ನು ಅಲ್ಲಿಗೆ ಹಾಕಲಿಕ್ಕೆ ಇಷ್ಟವಿರಲಿಲ್ಲ. ಹೀಗಾಗಿ ಹತ್ತು ತಿಂಗಳು Principal Secretary ಇಲ್ಲದಿರುವ ಹಾಗೆ ಆಯಿತು ಎಂದು ಎಲ್ಲರೂ ಸಾರ್ವಜನಿಕವಾಗಿ ಮಾತನಾಡಿಕೊಳ್ಳುತ್ತಾರೆ.

ಇದು ನನ್ನದೇನೂ ಅಲ್ಲ.

ಡಾ: ಹೆಚ್.ಸಿ. ಮಹಾದೇವಪ್ಪ: ಹಾಗಾದರೆ ಆಗಿನಿಂದಲೂ ಎಲ್ಲರಲ್ಲೂ ಹೊಂದಾಣಿಕೆ ಇರಲಿಲ್ಲವೆಂದಾಯಿತು.

12–30 PM

ಶ್ರೀ ಸಿದ್ದರಾಮಯ್ಯ: ಮಾನ್ಯ ಛೇರ್ಮನ್‌ರವರೆ, ನಮ್ಮದು ಮೈತ್ರಿ ಧರ್ಮವೆಂದು ಮತ್ತು ನಮಗೆ ಲಕ್ಷ್ಮಣರೇಖೆ ಇದೆ ಎಂದು ಇವರು ಪದೇ ಪದೇ ಹೇಳಿಕೊಳ್ಳುತ್ತಿದ್ದಾರೆ. ಆದರೆ, ಮಾನ್ಯ ಯಡಿಯೂರಪ್ಪನವರ ಒಂದು ಮಾತಾದರೂ ನಡೆದಿದೆಯೇ ಎಂದು ಕೇಳಿ? ಪ್ರಧಾನ ಕಾರ್ಯದರ್ಶಿಯವರನ್ನು ನೇಮಕ ಮಾಡಿದಾಗ ಒಂದು ಮಾತನ್ನು ನಿಮಗೆ ಕೇಳಿದ್ದಾರಾ? ಪಾಪ ಏನು ಕೇಳಿಲ್ಲ, ಆದರೂ ಕೂಡ ಇವರು ಸುಮ್ಮನೇ ಮೈತ್ರಿ ಧರ್ಮ ಎಂದು ಹೇಳಿಕೊಂಡು ಬರುತ್ತಿದ್ದಾರೆ. ಇವರ ಮಾತೇ ನಡೆಯುವುದಿಲ್ಲ. ಇವರು ಉಪ ಮುಖ್ಯ ಮಂತ್ರಿಯಾಗಿದ್ದು, ಮತ್ತೆ 79 ಜನ ಶಾಸಕರು ಹೊಂದಿರತಕ್ಕಂಥ ಪಾಲುದಾರ ಪಕ್ಷವಾಗಿರತಕ್ಕಂಥ ಇವರ ಮಾತಿಗೆ ಕವಡೆಕಾಸು ಕಿಮ್ಮತ್ತು ಅಲ್ಲಿ ಇಲ್ಲ. ನಾವುಗಳು ಸ್ವಾಭಿಮಾನಿ ನಮಗೆ ಆತ್ಮಗೌರವ ಇದೆ ಎಂದು ಪದೇ ಪದೇ ಮಾನ್ಯ ರಾಮಚಂದ್ರೇಗೌಡರು ಹೇಳಿಕೊಳ್ಳುತ್ತಿದ್ದರು. ನಾನು ಏಕೆ ಹೇಳಿದೆಯೆಂದು ತಮಗೆ ಈಗ ಅರ್ಥ ಆಯಿತಾ? ಅತ್ಯಂತ ಪ್ರಾಮುಖ್ಯವಾದಂಥ ಒಂದು ಇಲಾಖೆಗೆ 7 ತಿಂಗಳು ಪ್ರಧಾನ ಕಾರ್ಯದರ್ಶಿ ಇಲ್ಲ. ಆರ್ಥಿಕ ಇಲಾಖೆಗೆ ಪ್ರಧಾನ ಕಾರ್ಯದರ್ಶಿ ಬೇಡವೆಂದು ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆಯೇ? ಇವರ ಮಾತು ಅಲ್ಲಿ ನಡೆಯಲಿಲ್ಲವಷ್ಟೆ. ಅವರು ಇಲ್ಲದೇ ಇದ್ದ ಕಾರಣಕ್ಕಾಗಿಯೇ ಈ ಎಲ್ಲಾ ಅನಾಹುತಗಳು ನಡೆಯುತ್ತಿರುವುದು. ಇವರೇಕೆ ಮಧ್ಯಮಾವಧಿ ವಿತ್ತೀಯ ಯೋಜನೆಯನ್ನು ಇಲ್ಲಿ ಮಂಡಿಸಲಿಲ್ಲ? Is this not mandatory on the part of the Government under section-3 of the Fiscal Responsibility Act. Section-3 ಯಲ್ಲಿರತಕ್ಕಂಥದನ್ನು ನಿಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. "The State Government shall in each financial year lay before both the Houses of the Legislature medium term fiscal plan along with the annual budget." ನಾವು ನೆನ್ನೆ ದಿವಸ ಗಲಾಟೆ ಮಾಡಿದ ಮೇಲೆ ಅದನ್ನು ಇವತ್ತು ಕೊಟ್ಟಿದ್ದಾರೆ. ಬಜೆಟ್ ಮಂಡಿಸುವ ದಿನ ಕೊಟ್ಟಿಲ್ಲವೆಂದು ಮಾನ್ಯ ಯಡಿಯೂರಪ್ಪ ನವರಿಗೆ ಹೇಳಿದ್ದೇವೆ. ಡಿಮ್ಯಾಂಡ್

ಸಮಯದಲ್ಲಿ ಕೊಡುತ್ತೇವೆಂದು ಹೇಳಿದರು. ಆದರೆ, ಈಗ ಡಿಮ್ಯಾಂಡ್ ಮೇಲೆ ಚರ್ಚೆ ಮುಗಿಯುವ ವೇಳೆಗೆ ಕೊಟ್ಟಿದ್ದಾರೆ. fiscal frame work, fiscal indicators, fiscal objects ನಾವು ಮೊದಲೇ ಓದಬೇಕಾಗಿತ್ತು ಆದರೆ, ಈಗ ಕೊಟ್ಟಿದ್ದಾರೆ. ಇವುಗಳನ್ನು ಹೇಗೆ ಮಾಡಿದ್ದಾರೆಂದು ಮತ್ತು ಕಳೆದ ವರ್ಷ ಏನಾಯಿತ್ತೆಂದು ಹಾಗೂ ಈ ವರ್ಷ ಮತ್ತು ಮುಂದಿನ ವರ್ಷ ಇವರ ಗುರಿಗಳು ಏನೆಂಬುದರ ಬಗ್ಗೆ ಇಲ್ಲಿ ಇಡಬೇಕಾಗುತ್ತದೆ. ಇವರು ಒಟ್ಟು ನಾಲ್ಕು ವರ್ಷಗಳ ಗುರಿಗಳನ್ನು ಇಲ್ಲಿಡಬೇಕಾಗುತ್ತದೆ ಅಂದರೆ, 2007 ರಿಂದ 2011ರವರೆಗೆ ಪ್ರತಿವರ್ಷ ಏನೇನು ಆಗುತ್ತದೆಂದು ಇಲ್ಲಿ ಇಡಬೇಕಾಗುತ್ತದೆ. ಏಕೆಂದರೆ, ನಾವು ಎಲ್ಲಿಯೂ ಕೂಡ ಎಚ್ಚರ ಮತ್ತು ದಾರಿ ತಪ್ಪಬಾರದು ಮತ್ತೆ ರಾಜ್ಯದ ಹಣಕಾಸಿನ ಪರಿಸ್ಥಿತಿ ಕೆಟ್ಟು ಹೋಗಬಾರದೆಂದು ಮತ್ತು ನಾವು ರಿಸೋರ್ಸಸ್ ಮೊಬಲೈಜ್ ಮಾಡುವುದರಲ್ಲಿ ಎಡವಬಾರದು, ಫೈಲ್ ಆಗಬಾರದೆಂಬ ದೃಷ್ಟಿಯಿಂದ ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ. ಹಾಗೆಯೇ ನಮ್ಮ ಡೆಟ್ ಸರ್ವಿಸ್ ಮತ್ತೆ ಭಾರ ಆಗಬಾರದೆಂದು ಮತ್ತು ನಮ್ಮ ಎಕ್ಸ್‌ಪೆಂಡಿಚರ್ ಮ್ಯಾನೇಜ್‌ಮೆಂಟ್ ಸರಿಯಾಗಿರಬೇಕೆಂಬ ಈ ಎಲ್ಲಾ ಕಾರಣಗಳಿಗೋಸ್ಕರ ಈ ಒಂದು ಆಕ್ಟ್‌ನ್ನು ನಾವು ಮಾಡಿಕೊಂಡಿದ್ದೇವೆ. ನಾವೇ ಇಲ್ಲಿ ಪಾಸ್ ಮಾಡಿರತಕ್ಕಂಥ ಆಕ್ಟ್ ಇದಾಗಿದೆ. ಇದು ಮ್ಯಾಂಡೇಟರಿ ಇದ್ದರೂ ಕೂಡ is it not a clear violation of section-3 of the Fiscal Responsibility Act? ಇದನ್ನು ನಾವು ಹೇಳಿದರೆ ನಾಳೆ, ನಾಡಿದು ಮಾಡುತ್ತೇವೆಂದು ಮಾನ್ಯ ಯಡಿಯೂರಪ್ಪನವರು ಬಹಳ ಹಗುರವಾಗಿ ಹೇಳಿದರು. ಈಗ ಕೊಟ್ಟಿದ್ದೀರಿ, ನಿಜ ಹೇಳಬೇಕೆಂದರೆ, ನೀವು ಕೊಟ್ಟಿರಬಹುದೆಂದು ತಿಳಿದುಕೊಂಡು ನಾವು ಸುಮ್ಮನಾಗಿದ್ದೆವು. ಇದರ ಮೇಲೆ ಮಾತನಾಡುವುದಕ್ಕೆ ಪ್ರಿಪೇರ್ ಆಗುವುದಕ್ಕೆ ನೋಡಿದಾಗ ಇದು ಕೊಟ್ಟಿಲ್ಲವೆಂದು ತಿಳಿಯಿತು. ಒಂದು ವೇಳೆ ಇದು ಮೊದಲೇ ಗೊತ್ತಿದ್ದರೆ, ಡಿಮ್ಯಾಂಡ್ ಮಂಡಿಸುವ ಮೊದಲನೇ ದಿನವೇ ಇದು illegal, unconstitutional ಆಗಿರುವುದರಿಂದ ಡಿಮ್ಯಾಂಡ್ ಬಗ್ಗೆ ಚರ್ಚೆ ಮಾಡುವುದಕ್ಕೆ ಸಾಧ್ಯವೇ ಇಲ್ಲವೆಂದು ಹೇಳಿ ಡಿಮ್ಯಾಂಡ್ ಮೇಲೆ ಚರ್ಚೆ ಮಾಡುವುದನ್ನು ನಿಲ್ಲಿಸಬಹುದಾಗಿತ್ತು. ಆದರೆ, ಡಿಮ್ಯಾಂಡ್ ಮೇಲೆ ಚರ್ಚೆ ಈಗಾಗಲೇ ಅರ್ಧ ಮುಗಿದು ಬಹಳಷ್ಟು ದೂರಕ್ಕೆ ಬಂದಿದ್ದೇವೆ. ಬಹಳಷ್ಟು ಜನ ಇದರ ಬಗ್ಗೆ ಮಾತನಾಡಿದ್ದಾರೆ. ಮತ್ತೆ ನಮ್ಮ ವಿರೋಧಪಕ್ಷದ ನಾಯಕರೂ ಕೂಡ ಮಾತನಾಡಿದ್ದರು. ನಮ್ಮದು ಕೂಡ ಸ್ವಲ್ಪ ತಪ್ಪು ಇದೆ ಒಪ್ಪಿಕೊಳ್ಳುತ್ತೇವೆ. ನಮ್ಮ ತಪ್ಪನ್ನೇ ತಪ್ಪು ಎಂದು ಹೇಳುವುದಕ್ಕೆ

ಬರುವುದಿಲ್ಲ. ಇದು ಸರ್ಕಾರದ ಮೇಲೆ ಜವಾಬ್ದಾರಿ ಇರತಕ್ಕಂಥದು. ಇಡೀ ಸದನಕ್ಕೆ ಗೌರವ ತರತಕ್ಕಂಥ ವಿಚಾರ ಇದು ಏಕೆಂದರೆ, ಸದನ ಪಾಸ್ ಮಾಡಿರತಕ್ಕಂಥ ಕಾಯಿದೆ ಇದು. ನಮ್ಮ reforms ಪ್ರಾರಂಭವಾದ ಮೇಲೆ Fiscal Policy Analysis Cell ಎಂದು ಇರಬೇಕಲ್ಲವೇ? Fiscal Policy Analysis Cell is constituted and it is functioning in the Finance Department. ಈ ಒಂದು ಸೆಲ್‌ನ ಕಾರ್ಯಕ್ರಮ ಏನು? ಹಣಕಾಸಿನ ಇಲಾಖೆಯವರು ಇವರ ಮಾತನ್ನು ಕೇಳುತ್ತಿಲ್ಲವೇ? ನಮಗೆ ಅನುಮಾನ ಏನೆಂದರೆ, ಈ ಸರ್ಕಾರದಲ್ಲಿ ಅಧಿಕಾರಿಗಳು ಯಾರ ಮಾತನ್ನು ಕೇಳುತ್ತಿದ್ದಾರೆ? ನನ್ನ ಮಾತನ್ನು ಕೇಳುವುದಿಲ್ಲವೆಂದು ಅನೇಕ ಸಾರಿ ಮಾನ್ಯ ಯಡಿಯೂರಪ್ಪನವರೇ ಹೇಳಿಕೊಂಡಿದ್ದಾರೆ. ಈ ವಿಷಯವನ್ನು ನಾವೇನು ಹೇಳಿಲ್ಲ. ಹಾಗಾದರೆ, ಯಾರ ಮಾತನ್ನು ಕೇಳುತ್ತಾರೆ? ಆದರೆ, ಒಂದಂತೂ ಖಚಿತ, ಅದೇನೆಂದರೆ PWD minister ಆಗಿರುವ ಮಾನ್ಯ ರೇವಣ್ಣನವರ ಮಾತನ್ನು ಮಾತ್ರ ಕೇಳುತ್ತಾರೆ. ಅವರ ಮಾತನ್ನು ಏಕೆ ಕೇಳುತ್ತಾರೆಂಬುದು ತಮಗೂ ಕೂಡ ಅನುಭವ ಇರಬೇಕು. ಏಕೆಂದರೆ, ಎಲ್ಲಾ ಡೈರೆಕ್ಷನ್‌ಗಳು ಪದ್ಮನಾಭನಗರದಿಂದ ಬರುತ್ತವೆ. ಆದ್ದರಿಂದ ಈ ರೀತಿಯಾಗಿ ಇಲ್ಲಿ ನಡೆಯುತ್ತಿವೆ. ಈ ಮಾತನ್ನು ನಾನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. What the finance department is doing? ನಾವು ಇದ್ದಾಗ ಅವರು ಮಾತನ್ನು ಕೇಳುತ್ತಿದ್ದರು. ನಾವೇನು ಅವರಿಗೆ ಸಸ್ಪೆಂಡ್ ಅಥವಾ ಹೊಡೆಯುವುದಕ್ಕೆ ಅಥವಾ ಬೈಯುವುದಕ್ಕೆ ಹೋಗಿದ್ದೇವೆಯೇ? ನಾವು ಇದ್ದಾಗ ಏಕೆ ಕೇಳುತ್ತಿದ್ದರು? ಈಗ ಮಾನ್ಯ ಯಡಿಯೂರಪ್ಪನವರು ಹಣಕಾಸಿನ ಮಂತ್ರಿಯಾಗಿದ್ದಾಗ ಏಕೆ ಕೇಳುತ್ತಿಲ್ಲ? ನಮ್ಮ ಮಾತನ್ನು ಅಧಿಕಾರಿಗಳು ಕೇಳುವುದಿಲ್ಲವೆಂದು ಇವರೇ ಹೇಳಿಕೊಂಡಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮ ಮಾತನ್ನು ಕೇಳುವುದಿಲ್ಲವೆಂದು ಅಧಿಕಾರಿಗಳು ಏಕೆ ಹೇಳುತ್ತಾರೆ? ನಮ್ಮ ಮಾತುಗಳನ್ನು ಕೇಳುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಇದು ನಿಜವಾಗಿಯೂ ಕೂಡ ನಾಚಿಕೆಗೇಡು. ಕುದುರೆ ಓಡಿಸತಕ್ಕಂಥ ಸವಾರ ಸರಿಯಾಗಿದ್ದರೆ ನಾವು ಹೇಳುವ ಕಡೆಗೆ ಕುದುರೆ ಓಡೇ ಓಡುತ್ತದೆ. ನಮ್ಮ ಮಾತನ್ನು ಕೇಳುವುದಿಲ್ಲವೆಂದು ಹೇಳುತ್ತಿದ್ದರಲ್ಲ ನೀವು ಇದುವರೆಗೆ ಯಾವ ಹಿರಿಯ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಒಬ್ಬ ಅಧಿಕಾರಿಯನ್ನಾದರೂ ಮನೆಗೆ ಕಳುಹಿಸಿದ್ದೀರಾ, ಮತ್ತೆ ಇವರನ್ನು ಕಂಡರೆ ಭಯ ಏಕೆ

ಬರುತ್ತದೆ? ಇವತ್ತಿನ ದಿವಸ ನಾವು ಯಾವ ಕಡೆ ಹೋಗುತ್ತಿದ್ದೇವೆ? ಈ ರೀತಿ ನಡೆದರೆ ಪ್ರಜಾಪ್ರಭುತ್ವ ಉಳಿಯುತ್ತದೆಯೇ?

We are answerable to people. The Government is responsible to the people; answerable to the people. ನಮ್ಮ ಮಾತನ್ನು ಅಧಿಕಾರಿಗಳು ಕೇಳುವುದಿಲ್ಲವೆಂದು ಅಸಹಾಯಕರಾಗಿ ಕುಳಿತರೆ do you deserve to run the Government ? ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಮಧ್ಯಮಾವಧಿ ವಿತ್ತೀಯ ಯೋಜನೆಯನ್ನು ಕೇಳುತ್ತಾರೆಯೋ ಅಥವಾ ನೋಡುತ್ತಾರೆಯೋ ಇಲ್ಲವೋ ನೋಡೋಣ, ಆಮೇಲೆ ಮಂಡಿಸಿದರೆ ಆಯಿತು ಅಥವಾ ಬಿಟ್ಟರಾಯಿತೆಂಬ ಧೋರಣೆ ನಿಜವಾಗಿಯೂ ಕೂಡ ಬಹಳ ಅಪಾಯಕಾರಿಯಾದಂಥ ಬೆಳವಣಿಗೆ ಎಂದು ಮಾನ್ಯ ರಾಮಚಂದ್ರೇಗೌಡರಿಗೆ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಮುಂದೆ ಈ ರೀತಿಯಾಗದಂತೆ ನೋಡಿಕೊಳ್ಳಬೇಕೆಂದು ಮಾನ್ಯ ಯಡಿಯೂರಪ್ಪನವರಿಗೆ ಹೇಳುವುದಕ್ಕೆ ಬಯಸುತ್ತೇನೆ. 18 ತಿಂಗಳಿಂದ ನೀವು ಹಣಕಾಸಿನ ಮಂತ್ರಿಯಾಗಿ ಕೆಲಸ ನಿರ್ವಹಿಸಿಕೊಂಡು ಬರುತ್ತಿದ್ದೀರಿ. ಕಳೆದ ವರ್ಷ ಪೂರ್ಣವಾಗಿ financial year ನಲ್ಲಿದ್ದೀರಿ. Section-6 of the Fiscal Responsibility Act ಏನು ಹೇಳುತ್ತದೆ ? What does it say ? The Minister incharge of the finance shall have a mid-term review.

ಶ್ರೀ ಬಿ.ಎಸ್. ಯಡಿಯೂರಪ್ಪ.- ಮಾಡಿಲ್ಲವೆಂದು ಯಾರು ಹೇಳಿದ್ದಾರೆ ?

ಶ್ರೀ ಸಿದ್ದರಾಮಯ್ಯ.- ಹಾಗಾದರೆ, ಅದರ ವರದಿ ಕೊಡಿ. ರಿಪೋರ್ಟ್ ಸಬ್-ಮಿಟ್ ಮಾಡಬೇಕೆಂದು ಇದರಲ್ಲಿದೆ. ಅದನ್ನು ಕೂಡ ಇಲ್ಲಿ ಓದುವುದಕ್ಕೆ ಇಷ್ಟಪಡುತ್ತೇನೆ.

Section 6 : ``Measures to enforce compliance :- (1) The Annual budget, and policies announced at the time of the budget, shall be consistent with objectives and targets specified in the Medium Term Fiscal Plan for the coming and future years.

(2) The Minister in charge of the Department of Finance, shall review, every half year, the trends in receipts and expenditure in relation

to the budget, remedial measures to be taken to achieve the budget targets and place before both the Houses of Legislature......"

ಎಲ್ಲಿದೆ, ನಿಮ್ಮದು ಇಷ್ಟೊತ್ತಿಗಾಗಲೇ ಇರಬೇಕಾಗಿತ್ತಲ್ಲಾ, ಎರಡು review ಆಗಿರಬೇಕಲ್ಲಾ, 6–6 ತಿಂಗಳಿಗೊಂದು ಸಲ review ಮಾಡಬೇಕಲ್ಲಾ ? Where are those review reports ? They should have been placed on the floor of this House for the information of the hon'ble members. ಎಲ್ಲಿದೆ ? Where is it? ಎರಡು ಇಲ್ಲ. ಮಾಡಿದ್ದರಲ್ಲವೇ ಹೇಳುವುದು, ಕೊಡುವುದು, ಇವರು ಮಾಡಿಯೇ ಇಲ್ಲ. ಏಕೆ 'shall' ಎಂದು ಕಾನೂನು ಎಂದು ಮಾಡುವುದು? If you don't have respect for this law, if you don't have respect to this House, ಏಕೆ ಮಾಡಬೇಕು? ಕಳೆದ ವರ್ಷ ಮಾರ್ಚ್ ತಿಂಗಳು ಆದ ತಕ್ಷಣ ಒಂದು review report ನ್ನು ಮಂಡಿಸಬೇಕಾಗಿತ್ತು. ಈ ವರ್ಷ ಇನ್ನೂ 6 ತಿಂಗಳೂ ಆಗಿಲ್ಲ. ಜುಲೈ, ಆಗಸ್ಟ್ ತಿಂಗಳಿಗೆ 6 ತಿಂಗಳಾಗುತ್ತದೆ. ಆ ಒಂದು review report ನ್ನು ಮಂಡಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು).– ಮಾನ್ಯ ಛೇರ್ಮನ್‌ರೆ, ಈ ಮನೆಯಲ್ಲಿರುವ ಹಿರಿಯ ಸದಸ್ಯರು ಯಾರೂ ತಪ್ಪು ತಿಳಿದುಕೊಳ್ಳದಿದ್ದರೆ, ಹೋದ ಆಯವ್ಯಯದ ಬಗ್ಗೆ ಚರ್ಚೆ ಮಾಡಿ ಪ್ರತಿಪಕ್ಷದಲ್ಲಿರುವವರು ನಮ್ಮ ಕೊರತೆಯನ್ನು ಮಾರ್ಗದರ್ಶನ ಮಾಡಬೇಕಾಗಿತ್ತು ಆ ಬಗ್ಗೆ ಕೆಲಸ ಕಾರ್ಯಗಳು ಆಗಲಿಲ್ಲ. ಅದರ ಅರ್ಥ ನಾವು ನಮ್ಮ ಜವಾಬ್ದಾರಿಯಿಂದ ಹಿಂದೆ ಬೀಳಬೇಕೆಂದು ಏನೂ ಇಲ್ಲ. ಇವತ್ತು ನೀವು ಪ್ರಮುಖವಾದ ವಿಷಯದ ಬಗ್ಗೆ ಪ್ರಸ್ತಾಪವನ್ನು ಮಾಡಿದಿರಿ. ಕರ್ನಾಟಕ ಮಧ್ಯಮಾವಧಿ ವಿತ್ತೀಯ ಯೋಜನೆ 2007ನ್ನು ನಾವು ಮಾಡಬೇಕಾಗಿತ್ತು, ಅದರ ಬಗ್ಗೆ ನಮ್ಮಿಂದ ಕೊರತೆಯಾಗಿದೆ because of so many reasons ಎಂದು ಹೇಳಿದೆವು. ನಿಜವಾಗಲೂ ನಮ್ಮ ನಿರೀಕ್ಷೆ ಏನು ಇತ್ತು ಎಂದರೆ, ಈಗಲೂ ನಾನು ನಿಮ್ಮಿಂದ ನಿರೀಕ್ಷೆ ಮಾಡುವುದು ಏನೆಂದರೆ, ಯಡಿಯೂರಪ್ಪನವರೆ ಇದು ಆಗಬೇಕಾಗಿತ್ತು ಎಂದು ಹೇಳಿದರೆ, ಈ ಪುಸ್ತಕ ವಾರದ ಮುಂಚೆಯೇ ಬರುತ್ತಿತ್ತು. ರೆಡಿ ಇದ್ದಂಥದ್ದು, ನಿಮ್ಮಷ್ಟು ಅನುಭವ ನನಗೆ ಇಲ್ಲ, ನಾನು ಒಪ್ಪಿಕೊಂಡು ಬಿಡುತ್ತೇನೆ. ನಾನು ನಿಮ್ಮಿಂದ ಏನು ನಿರೀಕ್ಷೆ ಮಾಡುತ್ತೇನೆಂದರೆ, ಈ ಕಳೆದ ಮೂರು ವರ್ಷದಲ್ಲಿ ಯಡಿಯೂರಪ್ಪ ಹಣಕಾಸು ಸಚಿವನಾದ ಮೇಲೆ ನಾನೊಬ್ಬ ಸಾಮಾನ್ಯ ರೈತನ ಮಗ,

ನಾನೇನು ಆರ್ಥಿಕ ತಜ್ಞನಲ್ಲ. ಯಡಿಯೂರಪ್ಪನವರೆ ಇಲ್ಲಿ ನಿಮ್ಮ ಕಾಲದಲ್ಲಿ ಕೊರತೆಯಾಗಿದೆ, ಇಲ್ಲಿ ಎಡವಿದ್ದೀರಿ ಎನ್ನುವುದನ್ನು ತಾವು enlighten ಮಾಡುತ್ತೀರೆಂದು ನಾನು ಇನ್ನೂ ಕಾಯುತ್ತಿದ್ದೇನೆ. ನೀವು ಇನ್ನೂ ಭಾಷಣವನ್ನು ಮುಗಿಸಿಲ್ಲ, ನಾನು ಇನ್ನು ಎರಡು ಗಂಟೆ ಕೇಳುತ್ತೇನೆ. ನನಗೆ ನಿಮ್ಮಿಂದ ಏನು ಮಾರ್ಗದರ್ಶನ ಬೇಕೆಂದರೆ, ಇಷ್ಟು ವರ್ಷ ನೀವು ಹಣಕಾಸಿನ ಸಚಿವರಾಗಿ ಕಳೆದ 16-18 ತಿಂಗಳಲ್ಲಿ ನಾವು ಎಲ್ಲಿ ಎಡವಿದ್ದೇವೆ, ಎಲ್ಲಿ ಕೊರತೆಯಾಗಿದೆ ಎಂಬುದನ್ನು ತಿಳಿಸಿ, ನೀವು ಕನ್ನಡದ ಪೇಜ್ 6ನ್ನು ನೋಡಿ, 2003-04, 2004-05, 2005-06, 2006-07ರಲ್ಲಿ ಹಣ ಖರ್ಚು ಮಾಡಿದ್ದೇವೆ. ಒಂದೇ ಒಂದು ಆಶ್ಚರ್ಯಕರ ಸಂಗತಿ ಎಂದರೆ, 2004-05ರಲ್ಲಿ ಏನು ವೆಚ್ಚವಾಯಿತು. 2005-06ರಲ್ಲಿ 735 ಕೋಟಿ ರೂ.ಗಳ ವೆಚ್ಚ ಕಡಿಮೆಯಾಯಿತು. 2005-06, 2006-07ಕ್ಕೆ ನೀವು compare ಮಾಡಿದರೆ, 9353 ಕೋಟಿ ರೂ.ಗಳಷ್ಟು ಹೆಚ್ಚು ವೆಚ್ಚವನ್ನು ಮಾಡಿದ್ದೇವೆ. This is a record in the Karnataka history. ಏಕೆಂದರೆ ಮಾಧ್ಯಮದಲ್ಲಿ ಬರುತ್ತದೆ. ನಮ್ಮ ಕೊರತೆಯನ್ನು ನೀವು ಖಂಡಿತವಾಗಿ ಹೇಳಬೇಕು. ನಾನು ಅಂಕಿ-ಅಂಶವನ್ನು ನಿಮಗೆ ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ.- Do you agree or not ? Is it not violation of Law ?

ಶ್ರೀ ಬಿ.ಎಸ್.ಯಡಿಯೂರಪ್ಪ.- Yesterday I have admitted. ನಾನು ಇದನ್ನು ನಿನ್ನೆ ಒಪ್ಪಿಕೊಂಡು ಬಿಟ್ಟೆ. ಇದು ಆಗಬೇಕಾಗಿತ್ತು. ಕೊರತೆಯಾಗಿದೆ ಎಂದು. ಕೊರತೆಯಾಗಿದ್ದರೆ ಒಪ್ಪಿಕೊಳ್ಳಬೇಕು ಅದೇ ಈ ಮನೆಯ ವಿಶೇಷ.

ಶ್ರೀ ಸಿದ್ದರಾಮಯ್ಯ.- ನೀವು ಇದೇ ತಪ್ಪುಗಳನ್ನು ಮಾಡಬಾರದು.

ಶ್ರೀ ಬಿ.ಎಸ್.ಯಡಿಯೂರಪ್ಪ.- ಇನ್ನು ಮುಂದೆ ಇಂತಹ ತಪ್ಪುಗಳನ್ನು ಮಾಡಬಾರದು, ನೀವು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಾ ? 6 ತಿಂಗಳಿಗೊಂದು ಸಲ review ಮಾಡಬೇಕು. ಇಲ್ಲಿ table ಮಾಡಬೇಕೆಂದು ನೀವು ಹೇಳಿದ್ದೀರಾ ? 6 ತಿಂಗಳ ನಂತರ ನೀವು ಕೇಳಿ, ಏಕೆಂದರೆ, ಇದನ್ನೇ ನಾನು ಹಣಕಾಸು ಇಲಾಖೆಯವರನ್ನು ಕೇಳುವುದಕ್ಕೆ ಹೋರಟಿದ್ದೇನೆ. 6 ತಿಂಗಳಿಗೊಂದು ಸಲ ಹಿಂದೆ review ಆಗುತ್ತಿತ್ತಾ ? Table ಮಾಡಿದ್ದಾರಾ ಎಂದಾದರೂ ಎಂದು ಅದರ ಬಗ್ಗೆ ನಾನು ಮಾಹಿತಿಯನ್ನು ಕೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.– ಒಂದು ನಿಮಿಷ ಯಡಿಯೂರಪ್ಪನವರೆ, ನಾವು ಒಪ್ಪಿಕೊಳ್ಳೋಣ, ಅದರ responsibility ಯಾರದು ? ಕಾನೂನಿನಲ್ಲಿ ಇದೆ, ಇದು ನಿಮ್ಮ ಕರ್ತವ್ಯ. 6 ತಿಂಗಳಿಗೊಮ್ಮೆ ನೀವು report ನ್ನು review ಮಾಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ.– ನಾವು ಕೊರತೆಯಾಗಿದೆ ಎಂದು ಒಪ್ಪಿಕೊಂಡು ಬಿಟ್ಟಿರುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.– ಅದು ಆಯಿತು ಸರ್, ಒಂದು ಕೊರತೆ ಏನೆಂದರೆ, Medium Term Fiscal Plan ಅನ್ನು ಬಜೆಟ್ ಜೊತೆಯಲ್ಲಿ ಕೊಡಬೇಕು ಅದು ಒಂದು ಕೊರತೆ. ಆದರೆ 6 ತಿಂಗಳಿಗೊಂದು ಸಲ review ಮಾಡಬೇಕು ಇದು ಎರಡನೇ ಫಾಲ್ಟ್, ಅದಕ್ಕಾಗಿ ನೀವು ಏಕೆ ಹೇಳಲಿಲ್ಲವೆಂದು ಅನ್ನುವುದಲ್ಲಾ, ನಿಮ್ಮ ಕರ್ತವ್ಯ ಏನು ಇದೆ ನೀವು ಮಾಡಿ, ನಮ್ಮ ಕರ್ತವ್ಯದಲ್ಲಿ ಚ್ಯುತಿ ಇದ್ದರೆ ಜನ ನೋಡುತ್ತಾರೆ. ಅವರು Section-6 ನ್ನು ಓದಿ ಹೇಳಿದರು. Every six months ಗೆ ಅದನ್ನು review ಮಾಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ.– ನಾವು ನಿಮ್ಮನ್ನೇ follow up ಮಾಡುತ್ತಿದ್ದೇವೆ, ನೀವು ಬುದ್ಧಿವಂತರು ಎಂದು, ನಾವು ಏನು ಮಾಡುವುದಕ್ಕಾಗುತ್ತದೆ ?

ಶ್ರೀ ಮಲ್ಲಿಕಾರ್ಜುನ ಖರ್ಗೆ.– ಇದು ಯಾರ ಕಾಲದಲ್ಲಿ ಎಂದರೆ, ಇದು 2006 ರಿಂದ ಪ್ರಾರಂಭವಾಗಿರುವುದು. ಅಧರ ಹಿಂದೆ ಇರಲಿಲ್ಲ. 2002ರಲ್ಲಿ ಈ Act ಬಂದ ಮೇಲೆ ಹೊಸ ಪ್ರಕ್ರಿಯೆ ಪ್ರಾರಂಭವಾಗಿದೆ, ಅದಕ್ಕಾಗಿ ನೀವು ಹೇಳಿಕೊಳ್ಳಿ, ಇದನ್ನು ಮಾಡುವುದಕ್ಕಾಗಲಿಲ್ಲ, for various reasons. ಈಗ ಮಾಡಿದ್ದೇವೆಂದು ಹೇಳಿಕೊಳ್ಳಿ, ಆದರೆ ಆ ತಪ್ಪನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೋಗಬೇಡಿ.

ಶ್ರೀ ಸಿದ್ದರಾಮಯ್ಯ.– ಮಾನ್ಯ ಯಡಿಯೂರಪ್ಪನವರೆ, ನಾನು ಟೀಕೆ ಮಾಡುವುದಕ್ಕೋಸ್ಕರವಾಗಿ ಇದನ್ನು ಹೇಳುತ್ತಿಲ್ಲ. ನಿಮ್ಮ ಇಲಾಖೆಗೆ ಎಚ್ಚರಿಕೆ ಬರಲಿ ಎನ್ನುವ ಕಾರಣಕ್ಕೋಸ್ಕರವಾಗಿ ಇದನ್ನು ಹೇಳುತ್ತಿದ್ದೇನೆ. ಜವಾಬ್ದಾರಿ ಬರಲಿ ಎನ್ನುವ ಕಾರಣಕ್ಕೋಸ್ಕರವಾಗಿ ಹೇಳುತ್ತಿದ್ದೇನೆ. ನಿಮಗೆ ಹೇಳಿ ಮಾಡಿಸಿದ್ದಾರಾ ? ನಿಮಗೆ ಕಳೆದ Mid Term review ಮಾಡಿಸಿದ್ದಾರಾ ಹೇಳಿ ನೋಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ.– ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ.- ಮಾಡಿಲ್ಲ. ಮಾಡಿದ್ದರೆ ಎರಡು ಸದನದ ಮುಂದೆ report ನ್ನು ಮಂಡಿಸಬೇಕು. ಮಂಡಿಸಿಲ್ಲವೆಂದರೆ, ಕಾನೂನಿನಲ್ಲಿ ಇದೆ ಮಂಡಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ.- ನೀವು ಮಂಡಿಸಿದ್ದೀರಾ ?

ಶ್ರೀ ಸಿದ್ದರಾಮಯ್ಯ.- ನಾನು ಇದಾದ ಮೇಲೆ ಹಣಕಾಸಿನ ಮಂತ್ರಿಯಾಗಿ ಇದ್ದದ್ದು ಒಂದು ವರ್ಷ ಎರಡು ತಿಂಗಳು ಅಷ್ಟೆ. ನಾನು ಬಹಳ ವರ್ಷ ಇರಲಿಲ್ಲ. 2004-05, ಅದು ಒಂದೇ ವರ್ಷ, 2005-06ನೇ ಜುಲೈಗೆ ನಾನು ಹೊರಟು ಹೋದೆ. 6 ತಿಂಗಳೊಳಗಡೆ review ಮಾಡುವುದರಲ್ಲಿ ನಾನು ಹೊರಟುಹೋದೆ. ನಂತರ ಸಿಂಧ್ಯಾರವರು ಇದ್ದರು, ಅದನ್ನು ಅವರು ಮಾಡಬೇಕಾಗಿತ್ತು, ಆದರೆ ಕೊನೆಯಲ್ಲಿ ನೀವು ಬಂದಿರಿ ಆ 2005-06ರಲ್ಲಿ ನೀವಾದರೂ ಮಾಡಬೇಕಾಗಿತ್ತು. 2006-07ರಲ್ಲಿ ಪೂರ್ತಿ ನೀವೇ ಇದ್ದೀರಿ. ಎರಡು ವರ್ಷ ನೀವೇ ಮಾಡಬೇಕಾಗಿತ್ತು. Assuming for the argument sake, ಅವರು ಮಾಡಲಿಲ್ಲವೆಂದು ಇಟ್ಟುಕೊಳ್ಳೋಣ, Do you mean to say that you should not do that ?

ಶ್ರೀ ಬಿ.ಎಸ್. ಯಡಿಯೂರಪ್ಪ.- ಖಂಡಿತವಾಗಿ ಅದನ್ನು follow up ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅದರಲ್ಲಿ ಎರಡು ಮಾತು ಏನಿಲ್ಲ. ಈ ಮನೆ ದೊಡ್ಡದು, ಕಾನೂನಿನ ಚೌಕಟ್ಟಿನಲ್ಲಿ ನೀವು ಹೇಳಿದಂತೆ ನೀವು ಮಾಡಲಿಲ್ಲ ಅದಕ್ಕಾಗಿ ನಾನು ಮಾಡಲಿಲ್ಲವೆಂದು ಹೇಳಲಿಲ್ಲ, ನೀವು ಮಾಡಿದ್ದರೆ.....

ಶ್ರೀ ಸಿದ್ದರಾಮಯ್ಯ.- ನೀವು ತೆಗೆಸಿ ನೋಡಿ. ನಾನು ಆ ವರ್ಷ ಇದ್ದಾಗ Medium Term Fiscal Plan ಅನ್ನು ಎರಡು ಸದನದ ಮುಂದೆ ನಾನು ಇಟ್ಟಿದ್ದೇನೆ. ಇಟ್ಟಿದ್ದೇನೋ ಇಲ್ಲವೋ ಮಾನ್ಯ ಆಚಾರ್ಯರವರೆ? ಏಕೆಂದರೆ ನಾವೇ ಪಾಸ್ ಮಾಡಿರುವುದು ಇದನ್ನು ಅಲ್ಲವೇ? ಆಕ್ಟ್ ತಂದಿರುವುದು ನಾವೇ ಬೇರೆ ರಾಜ್ಯದ್ದು ಅಲ್ಲ. ಅದು ಇನ್ನಾವುದೇ ರಾಷ್ಟ್ರದ್ದು ಅಲ್ಲ. ಈ ಸದನದಲ್ಲಿಯೇ ನಾವು ಪಾಸ್ ಮಾಡಿರುವುದು. 6 ತಿಂಗಳಿಗೊಂದು ಸಲ review ಮಾಡಬೇಕು. ಇದು 2005 ರಿಂದ ಬಂದಿರುವುದು Medium Term Fiscal Plan ಶುರು ಆದದ್ದೇ 2005-2009, 2006-2010 ಈಗ 2007-2010 ರಲ್ಲಿ ನಾನು ಇರಲಿಲ್ಲ. The Government shall, the Minister shall ಎಂದು ಇರುವಾಗ ಅದನ್ನು mandatory ಎಂದು ಎನ್ನುವಾಗ ಅದು ತಪ್ಪಾಗಿದೆ. ಅಷ್ಟೇ ಅಲ್ಲ. ಕಾನೂನಿನ ಉಲ್ಲಂಘನೆಯಾಗಿದೆ. It is a clear

violation of Section-3, Section-6 of the Fiscal Responsibility Act. ಈ ವರ್ಷವಾದರೂ ಕೂಡ ಸೆಪ್ಟಂಬರ್ ಆದ ಮೇಲೆ ಮಂಡಿಸಬೇಕು. ಎರಡು ಸದನಗಳ ಮುಂದೆ review ಮಾಡಿದಂಥ ಆ report ನ್ನು ಮಂಡಿಸಬೇಕು. ಈ ವರ್ಷ ತಪ್ಪಿಸಿಕೊಂಡರೆ, ಏನು ಹೇಳಬೇಕು. ಎರಡು ಸಾರಿ ಆಯಿತು. ಮೂರನೇ ಸಾರಿ ಆಯಿತು. ನಾಲ್ಕನೇ ಸಾರಿ ಕೂಡ ಅದೇ ಪ್ರಮಾದ ಆಗಬಾರದು. ಆದ್ದರಿಂದ ನಾನು ಈ ಆಕ್ಟ್ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನೀವು ವಿರೋಧ ಪಕ್ಷದವರು ಮಾಡಲಿಲ್ಲವೆಂದು ಅನ್ನುವುದಕ್ಕೆ ಹೋಗಬೇಡಿ. ನೀವು ನಮಗೆ ಬೆಳಕು ಚೆಲ್ಲಲಿಲ್ಲ, ನಮಗೆ ಜ್ಞಾಪಕ ಮಾಡಲಿಲ್ಲ, ನಮ್ಮ ಇಲಾಖೆಗೆ ಕಿವಿ ಹಿಂಡಲಿಲ್ಲ, ನಮ್ಮ ಇಲಾಖೆಯವರಿಗೆ ಬೈಯಲಿಲ್ಲ ಎಂದರೆ ನಾವು ಬೈಯುವುದಿಲ್ಲ, ಸುಮ್ಮನೆ ಕುಳಿತು ಬಿಡುತ್ತೇವೆ. ಹಾಗಾದರೆ ನೀವು ಸುಮ್ಮನೆ ಕುಳಿತು ಬಿಡುತ್ತೀರಾ? Who has to respect the law? Who has to adhere to the law? Who has to respect the Constitution? The Government. Accountability ಯಾರು, responsibility ಯಾರಿಗೆ ಇದೆ? You are responsible, you are answerable. ಆದ್ದರಿಂದ ಇದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ, ನಿಮ್ಮ ಇಲಾಖೆ ಬೇಜವಾಬ್ದಾರಿಯಿಂದ ನಡೆದುಕೊಂಡಿರುತ್ತದೆ. What is that Analysis Cell doing? ಅವರ ಕೆಲಸ ಏನು? ಅವರು ಏನು ಮಾಡುತ್ತಿದ್ದಾರೆ? ಏನು ನಿದ್ದೆ ಮಾಡುತ್ತಿದ್ದಾರಾ? ಅದಕ್ಕಾಗಿ ದೊಡ್ಡ ಸಿಬ್ಬಂದಿಯನ್ನು ಏತಕ್ಕಾಗಿ ಇಟ್ಟುಕೊಳ್ಳಬೇಕು? ಏನು ಇಷ್ಟೊಂದು Information Technology develop ಆಗಬಿಟ್ಟಿದೆ. ಏನೆಲ್ಲಾ ಮಾಡುವುದಕ್ಕಾಗುತ್ತದೆ, ಇಷ್ಟೇಲ್ಲಾ ಇರುವಾಗ Technology ಇಷ್ಟೊಂದು improve ಆಗಿರುವಾಗ ಇದನ್ನು ಮಾಡುವುದಕ್ಕೆ ತೊಂದರೆಯೇ? Information Technology ಇಷ್ಟೊಂದು ದೊಡ್ಡದಾಗಿ ಬೆಳೆದು ಅವೆಲ್ಲವನ್ನು ಉಪಯೋಗಿಸಿಕೊಂಡು ನಾವೆಲ್ಲಾ ಎಲ್ಲಾ ಇಲಾಖೆಯನ್ನು computerized ಮಾಡಿದ್ದು ಇದು ಏಕೆ ಆಗಿಲ್ಲ? ನನಗೆ ಗೊತ್ತಿರುವ ಮಟ್ಟಿಗೆ ಇದರ ಬಗ್ಗೆ review ಮಾಡಿ report ಕೊಡಬೇಕಾಗಿತ್ತು ಇದು ಇಲ್ಲ. ನನಗೆ ಗೊತ್ತಿರುವ Information ಪ್ರಕಾರ ಮಾನ್ಯ ಯಡಿಯೂರಪ್ಪನವರು resources mobilization ಮಾಡಬೇಕಲ್ಲಾ, ಇವತ್ತು resources mobilization ಇದೆಯಲ್ಲಾ, ಇವರು ಈ ಸಾರಿ ಬಜೆಟ್‌ನಲ್ಲಿ ಸಲ ಮನ್ನಾ ಮಾಡಿದ್ದೇವೆಂದು ಹೇಳಿದ್ದಾರೆ. ಅದಕ್ಕಾಗಿ 2300 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ. ನಾನು ಆ figure ನ್ನು dispute ಮಾಡುವುದಕ್ಕೆ

ಹೋಗುವುದಿಲ್ಲ. ನಿಮಗೆ co-operative field ನಲ್ಲಿ ನನಗಿಂತ ಬಹಳ ಜಾಸ್ತಿ ಅನುಭವ ಇದೆ. ಆ ಕಾರ್ಯಕ್ರಮ ಮಾಡುವ ಬಗ್ಗೆ ಇವರಿಗೆ vision ಇಲ್ಲವೆಂಬ ಕಾರಣಕ್ಕಾಗಿ ಹೇಳುತ್ತಿರುವುದು. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಹೇಳಿಬಿಟ್ಟರು. ಮಾನ್ಯ ಮುಖ್ಯಮಂತ್ರಿಯವರು ಒಂದು ಹೇಳಿದರು, ಇಡೀ ಎಲ್ಲಾ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದರು. ಇನ್ನೊಬ್ಬರು ಇಲ್ಲಾ ನಾವು 25 ಸಾವಿರ ರೂಪಾಯಿಗಳ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದರು. ಆಮೇಲೆ ಮಧ್ಯದಲ್ಲಿ 25 ಸಾವಿರಕ್ಕಿಂತ ಜಾಸ್ತಿ ಇದ್ದರೆ ಉಳಿದ ಸಾಲವನ್ನು ಕಟ್ಟಿದರೆ 25 ಸಾವಿರ ರೂಪಾಯಿಗಳನ್ನು ಮನ್ನಾ ಮಾಡುತ್ತೇವೆ. ಬೇರೆಯವರಿಗೆ ಸಾಲವನ್ನು ಕಟ್ಟಿದರೆ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳಿದರು. ಒಂದು ರೀತಿಯ ಗೊಂದಲದ ಗೂಡು ಆಗಿ ಇಟ್ಟುಬಿಟ್ಟಿದ್ದೀರಿ. ಇದರಿಂದ ಏನಾಯಿತು ಎಂದರೆ, ರೈತರು ಪಾಪ ಅವರು ತಬ್ಬಿಬ್ಬಾದರು, ಅವರಿಗೆ ಏನು ಮಾಡಬೇಕೆಂದು ಗೊತ್ತಾಗಲಿಲ್ಲ. ಸಾಲ ಮನ್ನಾ ಆಗುತ್ತದೆಂದು ಅವರು ಬಹಳ ಖುಷಿಯಾಗಿದ್ದರು. ಅದು ಆಗಲಿಲ್ಲ, ನಾವು ಸಾಲವನ್ನು ಮನ್ನಾ ಮಾಡಿ ಎಂದು ಕೇಳಿರಲಿಲ್ಲ. ರೈತರು ಹಾಗೂ ಯಾರು ಸಹ ಸಾಲ ಮನ್ನಾ ಮಾಡಿ ಎಂದು ಕೇಳಿರಲಿಲ್ಲ. ಈ ಬಗ್ಗೆ ವಿರೋಧ ಪಕ್ಷದವರು ಸಹ ಡಿಮ್ಯಾಂಡ್ ಮಾಡಿರಲಿಲ್ಲ. 25 ಸಾವಿರ ಬೆಳೆ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದರು. ಇದರ ಪರಿಣಾಮ ಇವತ್ತು ಏನಾಗಿದೆ ಎಂದರೆ, 2300 ಕೋಟಿ ರೂಪಾಯಿಗಳವರೆಗೆ ಮನ್ನಾ ಮಾಡಿದ್ದೇವೆ. ಇವತ್ತಿನವರೆಗೆ ಹಳೆಯ ಹಿಂದಿನ ವರ್ಷದ್ದು 500 ಕೋಟಿ ರೂಪಾಯಿಗಳು, ಈ ವರ್ಷ 250 ಕೋಟಿ ರೂಪಾಯಿಗಳು ಒಟ್ಟು 750 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆಮೇಲೆ ಈ ವರ್ಷ ಇದರ ಪರಿಣಾಮ ಏನಾಯಿತು? ಒಂದು ರೂಪಾಯಿ crop loan ಕೊಡುವುದಕ್ಕಾಗಲಿಲ್ಲ. ನೀವು ಅಪೆಕ್ಸ್ ಬ್ಯಾಂಕ್‌ನಲ್ಲಿ ಅಧ್ಯಕ್ಷರಾಗಿ ಕೆಲಸವನ್ನು ಮಾಡಿದ್ದೀರಿ. ಅಲ್ಲಿ ಯಾರಿಗೆ ಸಿಕ್ಕಿದೆ ಸಾಲ? ಬೆಳೆ ಸಾಲ ಸಿಕ್ಕದೆಯಾ? ಸಾಲ ಸಿಕ್ಕಿ ಅವರ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗಿದೆಯೇ? ಮತ್ತೇ ಅವರು ಸಾಲಕ್ಕಾಗಿ ಎಲ್ಲಿಗೆ ಹೋಗಬೇಕು? ರೈತರೆಲ್ಲರೂ ಮತ್ತೆ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಹೋಗಬೇಕು. ಅವರು ಸರ್ಕಾರದಿಂದ ಉತ್ತರ ಹೇಳುವಾಗ ಹೇಳುತ್ತಾರೆ.

ಛೇರ್ಮನ್: ಸರ್ಕಾರ ಉತ್ತರ ಹೇಳುವಾಗ ಹೇಳುತ್ತಾರೆ.

ಶ್ರೀ ಸಿದ್ದರಾಮಯ್ಯ: ಸರ್ಕಾರ ಉತ್ತರ ಕೊಡುವಾಗ ಅಂಕಿಅಂಶಗಳ ಸಹಿತ ಹೇಳುತ್ತಾರೆ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಛೇರ್ಮನ್‌ರವರೆ ತಾವು ಉತ್ತರವನ್ನು ಹೇಳಿ.

ಶ್ರೀ ಸಿದ್ದರಾಮಯ್ಯ: ಇವತ್ತು ನಬಾರ್ಡ್‌ಗೆ ವಾಪಸ್ಸು ಕೊಟ್ಟಿಲ್ಲ. ಏನು ನಿಮ್ಮ ಕಾಲದಲ್ಲಿ ಕೊಟ್ಟುಬಿಟ್ಟಿದ್ದೀರಾ? ಅವರಿಗೆ ಅರ್ಥವೇ ಆಗಲಿಲ್ಲ. ನಾವು ರೈತರ ಪರವಾಗಿದ್ದೇವೆ. ಸಾಲವನ್ನು ಮನ್ನಾ ಮಾಡಿದ್ದೇವೆ. ರೈತರು ಉದ್ಧಾರ ಆಗಿದ್ದಾರೆ. ರೈತರಿಗೆ ಯಾವುದೇ ಸಮಸ್ಯೆಗಳು ಇಲ್ಲ, ರೈತರು ಆತ್ಮಹತ್ಯೆ ಮಾಡಿಕೊಳ್ಳುವುದು ನಿಂತುಹೋಗಿಬಿಟ್ಟಿದೆ. ಎಲ್ಲಿ? ನೀವು ಅಧಿಕಾರಕ್ಕೆ ಬಂದ ಮೇಲೆ ನನಗೆ ಗೊತ್ತಿರುವಂತೆ ಸರ್ಕಾರ ಕೊಟ್ಟಿರುವಂತಹ ಅಂಕಿ ಅಂಶಗಳ ಪ್ರಕಾರ 379 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆ ಲೆಕ್ಕ ಇನ್ನು ಏರುತ್ತಲೇ ಹೋಗುತ್ತಿರುತ್ತದೆ. ಅವರಿಗೆ ಮತ್ತೆ ಬೆಳೆ ಸಾಲ ಸಿಕ್ಕಿಲ್ಲ. ಸೊಸೈಟಿಗಳಿಗೆ ಮತ್ತೆ ಅವರಿಗೆ ರೀಫೈನಾನ್ಸ್ ಮಾಡತಕ್ಕಂತಹ ಶಕ್ತಿ ಬರಲಿಲ್ಲ. ನಬಾರ್ಡ್‌ನವರು ರೀಫೈನಾನ್ಸ್ ಮಾಡುವುದಿಲ್ಲ. ಏನು ಮಾಡುವುದು? ನೀವು ಅವರಿಗೆ ಕೊಡಬೇಕಾದ ದುಡ್ಡು ಕಟ್ಟಲಿಲ್ಲ. ಅವರಿಗೆ ಹೊಸದಾಗಿ ಸಾಲ ಸಿಗಲಿಲ್ಲ. ರೈತರು ಎಲ್ಲಿಗೆ ಹೋಗಬೇಕು? 2300 ಕೋಟಿ ರೂಪಾಯಿಗಳನ್ನು ಮಾಡಿದ್ದಾರಲ್ಲಾ ಇದನ್ನು ಸರಿದೂಗಿಸಿಕೊಳ್ಳುವ ಬಗ್ಗೆ ಇವರು resources mobilization ಏನು ಮಾಡಿದರು? ಈ ಬಗ್ಗೆ ಏನು ಹೊಸ ಕ್ರಮಗಳನ್ನು ತೆಗೆದುಕೊಂಡಿದ್ದಾರೆ, 2300 ಕೋಟಿ ರೂಪಾಯಿಗಳನ್ನು ತುಂಬಿಸಿಕೊಳ್ಳುವುದಕ್ಕೆ ಏನು ಮಾಡಿದ್ದಾರೆ? ಇವರ resources mobilization ನ ಕ್ರಮಗಳೇನು? ಸಂಪನ್ಮೂಲವನ್ನು ಕ್ರೋಢೀಕರಣ ಮಾಡುವುದಕ್ಕೆ Non-Tax Revenue, ಕಳೆದ ಅನೇಕ ವರ್ಷಗಳಿಂದ it is stagnant, Non-Tax Revenue is stagnant. ಅದನ್ನು ಹೆಚ್ಚು ಮಾಡುವುದಕ್ಕೆ ಇವರು ಏನು ಮಾಡಲಿಲ್ಲ. ಕಳೆದ ವರ್ಷಕ್ಕಿಮತ ಈ ವರ್ಷ ಕಡಿಮೆಯಾಗಿದೆ. ಕಳೆದ ವರ್ಷ 4 ಸಾವಿರ ಚಿಲ್ಲರೆ ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿ Non-Tax Revenue ಬಂದಿದ್ದರೆ, ಈ ವರ್ಷ 1800 ಕೋಟಿ ರೂಪಾಯಿಗಳಷ್ಟು ಕೇಳಿದ್ದಾರೆ ಇವರದ್ದು estimated target. ಅದರ ಬಗ್ಗೆ ನನಗೆ ಗೊತ್ತಿದೆ. ಏಕೆಂದರೆ ಲಾಟರಿಯನ್ನು ನಿಲ್ಲಿಸಿರುವುದರಿಂದ, ಲಾಟರಿಯನ್ನು abolish ಮಾಡಿರುವುದರಿಂದ ಅಷ್ಟು ನಮಗೆ Non-Tax Revenue ಕಡಿಮೆಯಾಗಿದೆ ಎನ್ನುವಂತಹ ಉತ್ತರವನ್ನು ಕೊಡುತ್ತಾರೆ. ನೀವು stagnant ಆಗಿದ್ದೀರಲ್ಲಾ, ಅದನ್ನು ಹೆಚ್ಚು ಮಾಡುವುದಕ್ಕೆ ಎಲ್ಲಿ ಕ್ರಮವನ್ನು ತೆಗೆದುಕೊಂಡಿದ್ದೀರಿ ವ್ಯಾಟ್‌ನಲ್ಲಿ ಇವತ್ತು ಏನಾದರೂ ಟ್ರೆಷರಿ ಹಣ ಬರುತ್ತಿರಬೇಕಾದರೆ, ಟ್ರೆಷರಿ

ತುಂಬಬೇಕಾದರೆ 2005 ಏಪ್ರಿಲ್ 1ನೇ ತಾರೀಖಿನಿಂದ ವ್ಯಾಟ್ ಜಾರಿಗೆ ಮಾಡಿರುವುದು. ಮಾನ್ಯ ಎಸ್. ಎಂ. ಕೃಷ್ಣರವರ ಕಾಲದಲ್ಲಿ ಪಾನೀಯ ನಿಗಮವನ್ನು ಮಾಡಿ ಚಾನಲೈಸ್ ಮಾಡಿರುವುದು ಸೆಕೆಂಡ್ಸ್‌ನ್ನು ನಿಲ್ಲಿಸುವುದಕ್ಕೆ. ಸಾರಾಯಿನಲ್ಲಿ ಹೊಸ ಪಾಲಿಸಿಯನ್ನು ಮಾಡಿ ಟ್ರಿಬ್ಯುಲೈಸ್ ಮಾಡಿದ್ದು ಟ್ಯೂಟಿಯನ್ನು ಕಡಿಮೆ ಮಾಡಿರುವುದು, ಇವೆಲ್ಲದರ ಪರಿಣಾಮವಾಗಿ Exciseನಲ್ಲಿ ತೆರಿಗೆ ಜಾಸ್ತಿಯಾಯಿತು. ವ್ಯಾಟ್‌ನಲ್ಲಿ ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ತೆರಿಗೆ ಜಾಸ್ತಿಯಾಯಿತು. ಭೂಮಿಯ ಬೆಲೆ ಯದ್ವಾತದ್ವಾ 2 ರಿಂದ 4 ಪಟ್ಟು ಜಾಸ್ತಿಯಾಯಿತು. Stamps & Registration ಪರಿಷ್ಕರಣೆ ಮಾಡಿ ಕಡಿಮೆ ಮಾಡಿದ ಮೇಲೆ ಭೂಮಿಯ ಬೆಲೆ ಜಾಸ್ತಿಯಾದ ಮೇಲೆ guidance value ಹೆಚ್ಚು ಮಾಡಿದ ಮೇಲೆ ಅಲ್ಲಿ ತೆರಿಗೆ ಜಾಸ್ತಿ ಬರುವುದಕ್ಕೆ ಶುರುವಾಯಿತು. ಇವೆಲ್ಲಾ ಸುಧಾರಣಾ ಕ್ರಮಗಳು. ಎಲ್ಲಾ ಸುಧಾರಣೆಯಾಗಿ ಫಲವನ್ನು ಕೊಡುವ ಹೊತ್ತಿನಲ್ಲಿ, ಫಲ ಕೊಡುತ್ತಿರುವಾಗ ಮಾನ್ಯ ಯಡಿಯೂರಪ್ಪನವರು ಬಂದು ಕುಳಿತುಕೊಂಡರು ಇಲ್ಲಿ ತೆರಿಗೆಯನ್ನು ತುಂಬಿಸುವುದಕ್ಕೆ ಯಡಿಯೂರಪ್ಪನವರದು ಏನೂ ಇಲ್ಲ ಹಾಗೂ ಈ ಸರ್ಕಾರದ್ದು ಏನು ಇಲ್ಲ. ಈಗಲೂ ಸಹ resources mobilization ಮಾಡುತ್ತಿಲ್ಲ. ಈಗ ನೀವು resourcesನ್ನು ಹೆಚ್ಚು ಮಾಡಬೇಕಾಗಿತ್ತಲ್ಲಾ, ಇಷ್ಟೆಲ್ಲಾ ಆಗಿದೆಯಲ್ಲಾ. 250 ಕೋಟಿ ರೂಪಾಯಿಗಳು ಲಾಟರಿಯಿಂದ ಹೋಯಿತು. ಲಾಟರಿಯನ್ನು ಬಂದ್ ಮಾಡಿದ್ದೇವೆ, ಸಾರಾಯಿಯನ್ನು ಬಂದ್ ಮಾಡಿದ್ದೇವೆ. ಸಾರಾಯಿ ಬಂದ್ ಮಾಡಿರುವುದರಿಂದ ಏನಾಗಿದೆ ಎಂದು ನಾನು ನಂತರ ಹೇಳುತ್ತೇನೆ. ಲಾಟರಿಯನ್ನು ಬಂದ್ ಮಾಡಿದ್ದೇವೆ, ಲಾಟರಿಯನ್ನು ಬಂದ್ ಮಾಡಿರುವುದರಿಂದಾಗಿ 250 ಕೋಟಿ ರೂಪಾಯಿಗಳು ನಷ್ಟವಾಯಿತು. ಆಗಿರುವಂತಹ ನಷ್ಟವನ್ನು ತುಂಬಿಕೊಳ್ಳಬೇಕಲ್ಲವೇ? ನೀವು ಬೆಳೆ ಸಾಲವನ್ನು ಮಾಡುವುದಕ್ಕಾಗಿ resources mobilization ಮಾಡುತ್ತೇವೆಂದು ಹೇಳಿ, ಮಾನ್ಯ ಎ.ಟಿ. ರಾಮಸ್ವಾಮಿಯವರ ಸಮಿತಿ ಯಾರ್‍ಯಾರ ಜಮೀನನ್ನು ಯಾರ್‍ಯಾರೋ ಕಬಳಿಸಿಕೊಂಡಿದ್ದರು, ಭೂಮಿಯನ್ನು ಕಬಳಿಸಿಕೊಂಡಿರವವರಿಂದ ಬಿಡಿಸಿಕೊಂಡು ಸರ್ಕಾರ ಅದನ್ನು ಹರಾಜು ಹಾಕುತ್ತೇವೆ. ಖರಾಬು ಜಮೀನುಗಳು, ಕೆರೆಜಮೀನುಗಳು, ಯಾವುದಕ್ಕೆ ಬಿಟ್ಟಿದ್ದರೂ ಎಲ್ಲಾ ಜಮೀನುಗಳು ಈಗ ಹರಾಜು ಹಾಕುತ್ತಿದ್ದಾರೆ ಪಾರ್ಕ್ ಬಿಟ್ಟಿರುವ ಜಾಗ, ಶಾಲೆಗೆ ಬಿಟ್ಟಿರುವಂತಹ ಜಾಗ, ಎಲ್ಲಾ ಜಾಗವನ್ನು ಸಂಪನ್ಮೂಲವನ್ನು ಎಲ್ಲಿ ಕ್ರೋಢೀಕರಣ ಮಾಡುವುದಕ್ಕೆ ಹೊರಟ್ಟಿದ್ದಾರೆಂದರೆ,

ಸರ್ಕಾರಿ ಜಮೀನನ್ನು ಹರಾಜು ಮಾಡಿಬಿಟ್ಟು ಹಣವನ್ನು ಕ್ರೋಢೀಕರಣ ಮಾಡುವುದು. ಎಂತೆಂಥವರು ಮಾಡಿದ್ದಾರೆಂದರೆ ಇವತ್ತಿನವರೆಗೆ 1 ಸಾವಿರ ಎಕರೆಗಿಂತ ಹೆಚ್ಚು ಭೂಮಿಯನ್ನು ಹರಾಜು ಹಾಕಿದ್ದಾರೆ. ಸುಮಾರು 301 ಕೋಟಿ ರೂಪಾಯಿಗಳಿಗೆ ಹರಾಜು ಮಾಡಿದ್ದಾರೆ. ಅದಕ್ಕೆ ಸಿಂಡಿಕೇಟ್ ಆಗಿದ್ದಾರೆ. ಇವತ್ತು ಈ ಜಮೀನುಗಳು ಎಲ್ಲಿರುವುದೆಂದರೆ, ಬೆಂಗಳೂರಿನ ಆಸುಪಾಸಿನಲ್ಲಿರುವುದು, 15-20-30-40 ಹಾಗೂ 50 ಕಿ.ಮಿ. ಒಳಗಡೆ ಇರುವುದು. ಬೃಹತ್ ಬೆಂಗಳೂರು, ಅದರ ವ್ಯಾಪ್ತಿಯೊಳಗಡೆಯೇ ಇದು ಬರುತ್ತದೆ. 1 ಎಕರೆಗೆ ಎಷ್ಟು ಇರಬಹುದು? 1 ಕೋಟಿ ರೂಪಾಯಿಗಳಿಗಿಂತ ಕಡಿಮೆ ಇದೆಯಾ? ನನ್ನ ಪ್ರಕಾರ average 2 ಕೋಟಿ ರೂಪಾಯಿಗಳು ಇರಬಹುದು. ಇವರು 110 ಎಕರೆಯನ್ನು 301 ಕೋಟಿ ರೂಪಾಯಿಗಳಿಗೆ ಹರಾಜು ಹಾಕಿದ್ದಾರೆ. ನಾನು ಹರಾಜು ಹಾಕಿರುವ ಪಟ್ಟಿಯೆಲ್ಲವನ್ನು ತೆಗೆದುನೋಡಿದ್ದೇನೆ. 5 ಲಕ್ಷ, 10 ಲಕ್ಷ, 15 ಲಕ್ಷ, 25 ಲಕ್ಷ ಸಿಂಡಿಕೇಟ್ ಮಾಡಿರುವವರು ಯಾರು? 4-5 ಜನರು ಬಿಲ್ಡರ್ಸ್‌ಗಳು ಇವರ ಹಿಂದೆ ಯಾರು ಇದ್ದಾರೆ? Who are backing these people? ಯಾವ ಜನ ಹಿಂದೆ ಇದ್ದಾರೆ. ನೀವು ಆ ಜಮೀನನ್ನು ಉಳಿಸಿಕೊಂಡಿದ್ದರೆ ಬೆಂಗಳೂರಿಗೆ ಅನುಕೂಲವಾಗುತ್ತಿತ್ತು. ಬೃಹತ್ ಬೆಂಗಳೂರು ಮಾಡಿದ್ದೀರಿ, ಲಂಗ್ ಸ್ಪೇಸ್ ಉಳಿಯುತ್ತಿತ್ತು, parks ಮಾಡಲಿಕ್ಕೆ ಅನುಕೂಲ ಆಗುತ್ತಿತ್ತು, ಪಬ್ಲಿಕ್ ಪರ್ಪಸ್‌ಗೆ ಅನುಕೂಲವಾಗುತ್ತಿತ್ತು. ಶಾಲಾ ಕಟ್ಟಡಗಳಿಗೆ ಅನುಕೂಲವಾಗುತ್ತಿತ್ತು. ಎಲ್ಲಾ ಬಡವರಿಗೆ ಮನೆ ಕಟ್ಟಿ ಹಂಚಲಿಕ್ಕೆ ಅನುಕೂಲವಾಗುತ್ತಿತ್ತು. ಸೈಟುಗಳನ್ನು ಕೊಡಬಹುದಾಗಿತ್ತು. ಯಾರೋ ಹೇಳಿದರು ಎಂದು ಹೇಳಿ, resources mobilization ಮಾಡಿಕೊಳ್ಳಬೇಕೆಂದು ಹೇಳಿ ಸಾಲ ಮನ್ನಾ ಮಾಡಿದ್ದೀರಿ. ಅದು ನಿಮ್ಮ ಬುದ್ಧಿ ಅಲ್ಲ, ನನಗೆ ಗೊತ್ತಿರುವ ಮಟ್ಟಿಗೆ, ಯಾರದೋ ಅಡ್ವೈಸ್, ಯಾರೋ ಎಲ್ಲಿಂದಲೋ ಕುಳಿತುಕೊಂಡು ಅಡ್ವೈಸ್ ಮಾಡುವುದು, ಆ ರೀತಿ ಮಾಡಿ ನಾಲ್ಕೈದು ಜನ ಬಿಲ್ಡರ್ಸ್ ಎಲ್ಲದರಲ್ಲಿಯೂ ಅವರೇ actionನಲ್ಲಿ Who is behind it? Who is managing all these things? ಏತಕ್ಕೆ ನೀವು 25.00, 15.00 ಲಕ್ಷರೂ.ಗಳಿಗೆ ಹರಾಜು ಮಾಡುತ್ತಿದ್ದೀರಿ? ಒಂದು, ಒಂದೂವರೆ ಕೋಟಿ ರೂ.ಗಳಿಗೆ ಬೆಲೆ ಬಾಳುವುದನ್ನು ಏಕೆ ಇಷ್ಟು ಕಡಿಮೆ ಬೆಲೆಗೆ ಹರಾಜು ಮಾಡುತ್ತಿದ್ದೀರಿ? ಸರ್ಕಾರಕ್ಕೆ ಆದಾಯ ತರುವ ಸಂಪನ್ಮೂಲ ಅದು, ಅದನ್ನು ಹರಾಜು ಮಾಡುವುದೇ ನನ್ನ ಪ್ರಕಾರ ತಪ್ಪು. ನಮಗೆ ಹಣಕ್ಕೆ ತೊಂದರೆಯಾದಾಗ ಸರ್ಕಾರದ ಜಮೀನುಗಳನ್ನು ಹರಾಜು ಮಾಡಿಬಿಡುವುದು ಸರಿಯೇ? ಸರ್ಕಾರದ

ಜಮೀನುಗಳನ್ನು ಮಾರಾಟ ಮಾಡುವುದೇ? ಇವರು ಮಾರಾಟ ಮಾಡಿ ಎಂದು ಎಲ್ಲಿ ಹೇಳಿದ್ದಾರೆ? ಮಾರಾಟ ಮಾಡುವುದಾಗಿ ನೀವು ಎಲ್ಲಿ ಚರ್ಚೆ ಮಾಡಿದ್ದೀರಿ? ಮಾರಾಟ ಮಾಡಿ ಎಂದು ನಿಮಗೆ ಯಾರು ಹೇಳಿದರು?

ಶ್ರೀ ವಾಟಾಳ್ ನಾಗರಾಜ್: ಸಿದ್ಧರಾಮಯ್ಯನವರೇ, ಒಂದು ನಿಮಿಷ, ನಾನು ಸಹ ಜಂಟಿ ಸದನ ಸಮಿತಿಯ ಸದಸ್ಯನಾಗಿದ್ದೇನೆ, ಸಮಿತಿ ನೇಮಕ ಆದಮೇಲೆ ಸಮಿತಿಯ ಶಾಸನಸಭೆಗೆ ಮೊದಲನೆ ವರದಿಯನ್ನು ಮಂಡಿಸಿದ್ದೇವೆ. ಎರಡನೇ ವರದಿಯನ್ನು ಕೊಡುತ್ತಿದ್ದೇವೆ, ಮೊದಲನೇ ವರದಿಯಲ್ಲಿ ಎಷ್ಟು ಜಮೀನು ಒತ್ತುವರಿಯಾಗಿದೆ ಎಂಬ ಬಗ್ಗೆ ಮಾಹಿತಿ ಕೊಟ್ಟಿದ್ದೇವೆ. ಅದನ್ನು ಮಾರುವುದಕ್ಕೆ ಈ ಸದನವಾಗಲಿ, ಯಾರೂ ಅವರಿಗೆ ಅನುಮತಿ ಕೊಟ್ಟಿಲ್ಲ. ನೇರವಾಗಿ ಇವರೇ ಜಮೀನನ್ನು ಮಾರಾಟ ಮಾಡಲಿಕ್ಕೆ ಒಪ್ಪಿಕೊಂಡರು. ಹರಾಜು ಹಾಕಲಿಕ್ಕೆ ಸರ್ಕಾರ ಮಾರಾಟ ಮಾಡಲಿಕ್ಕೆ ಬರುವುದಿಲ್ಲ. ಅದು ಹಕ್ಕುಚ್ಯುತಿ ಆಗುತ್ತದೆ. ಮುಖ್ಯಮಂತ್ರಿಯವರು ನಿರ್ಣಯ ತೆಗೆದುಕೊಂಡರೆ ಈ ನೀತಿಯನ್ನು ಕೈಗೆತ್ತಿಕೊಂಡರೆ ಆ ನೀತಿಯಿಂದ ಈ ಸದನಕ್ಕೆ ಹಕ್ಕು ಚ್ಯುತಿ ಆಗುತ್ತದೆ. ಸಾವಿರಾರು ಎಕರೆಯನ್ನು ಯಾವರೀತಿ ಮಾರಾಟ ಮಾಡಿದರು ಅಂದರೆ ಸಿಂಡಿಕೇಟ್ಸ್, ಆ ಅಧಿಕಾರಿಗಳು ಅವರೇ ಬರುವವರು, ಅವರಿಗೆ, ಹರಾಜು ಯಾರು ಕೇಳುತ್ತಾರೋ ಅವರೇ, ಯಾರು ತೆಗೆದುಕೊಳ್ಳುತ್ತಾರೋ ಅವರೇ. ಆಮೇಲೆ ಬೇರೆಯವರಿಗೆ ಆ ಜಮೀನನ್ನು ಗುಪ್ತವಾಗಿ ಹರಾಜು ಹಾಕುವುದು ಬೇರೆ. ಏನು ಲೂಟಿ ನಡೆದುಹೋಗಿದೆ, ಇದೇನು ಒಳ್ಳೆಯ ಸೂಚನೆಯಲ್ಲ. ಇದು ನಮ್ಮ ಸಮಿತಿ ನಿಜಕ್ಕೂ ಪ್ರಾಮಾಣಿಕವಾದ ಕೆಲಸವನ್ನು ಮಾಡಿದೆ, ಆದರೆ ಹರಾಜು ಹಾಕಲು ಯಾರೂ ಎಲ್ಲಿಯೂ ಹೇಳಿಲ್ಲ, ಇದು ಸ್ಪಷ್ಟವಾಗಿದೆ. ಆದ್ದರಿಂದ ಈ ಸದನಕ್ಕೆ ದೊಡ್ಡ ಹಕ್ಕುಚ್ಯುತಿಯನ್ನು ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ ಮಾಡಿದ್ದಾರೆ.

ಶ್ರೀ ಎಸ್. ಸಿದ್ಧರಾಮಯ್ಯ: ಸರ್ಕಾರದ ಆಸ್ತಿಗಳನ್ನು ಮಾರಾಟ ಮಾಡಿ, ಬೇರೆಯವರು ಅತಿಕ್ರಮಣ ಮಾಡಿಕೊಂಡರು, ಕಬಳಿಸಿದ್ದರು, ಅವರಿಂದ ಬಿಡಿಸಿ ಸರ್ಕಾರದ ಆಸ್ತಿಯನ್ನು ರಕ್ಷಣೆ ಮಾಡಬೇಕೆನ್ನುವುದನ್ನು I also agree, ಮಾಡಬೇಕು. ಆದರೆ ಇಲ್ಲಿ ಒಂದು ಸಮಿತಿ ನೇಮಕ ಮಾಡಿದ್ದಾರೆ, ಅವರು ಇನ್ನೂ ಪೂರ್ಣ ವರದಿಯನ್ನು ಕೊಟ್ಟಿಲ್ಲ, ಇನ್ನೂ ಮಧ್ಯಂತರ ವರದಿಯ ಎರಡನೇ ಭಾಗವನ್ನು ಮಾತ್ರ ಕೊಟ್ಟಿದ್ದಾರೆ. ಇನ್ನೂ ಅಂತಿಮ ವರದಿಯನ್ನು ಕೊಟ್ಟಿಲ್ಲ. ಆಗಲೇ ಇವರು ಅವಸರ, ಅವಸರವಾಗಿ What is the intention behind it? Is there any bonafide

intention on the part of the Government? Not at all. Even a lay man, a common man ಇದರ ಹಿಂದೆ ಏನೋ ಪಿತೂರಿ ನಡೆಯುತ್ತಿದೆ, ಯಾರದೋ ಕಾಣದ ಕೈಗಳು ಕೆಲಸ ಮಾಡುತ್ತಿವೆ, ಭ್ರಷ್ಟಾಚಾರ ನಡೆಯುತ್ತಿದೆ, ಯಾರಿಗೆ ಹೋಗುತ್ತದೆಂದು ಗೊತ್ತಾಗುತ್ತಿಲ್ಲ, ಆದ್ದರಿಂದ ಇದರ ಬಗ್ಗೆ ಈಗ ಆಗಿರುವುದನ್ನು ನಿಲ್ಲಿಸಬೇಕು. ಈಗ confirm ಆಗಿರುವುದು 189 ಎಕರೆ ಅಷ್ಟೆ, ಇನ್ನುಳಿದ್ದದ್ದು confirm ಆಗಿಲ್ಲ. Not all the auctioned lands have been confirmed by the Government. ಇನ್ನು confirm ಆಗಿಲ್ಲ. I demand, ಇದನ್ನು ನಿಲ್ಲಿಸಬೇಕು. ಮಾನ್ಯ ಹಣಕಾಸಿನ ಸಚಿವರಲ್ಲಿ ನಾನು ಮನವಿ ಮಾಡುತ್ತೇನೆ. ಕೂಡಲೇ ಇದನ್ನು ನಿಲ್ಲಿಸಬೇಕು. It is coming under you. It is a resource mobilization process. ಇದು ನನಗೆ ಸಂಬಂಧಪಟ್ಟಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಬೆಂಗಳೂರು ನಗರ ನನಗೆ ಬರುವುದಿಲ್ಲ.. ಹರಾಜು ಮಾಡುವುದು ನಾನಲ್ಲ. Revenue Department ನವರು ಮಾಡುತ್ತಿದ್ದಾರೆಂದು ನೀವು ಕೈತೊಳೆದುಕೊಳ್ಳಲಿಕ್ಕಾಗುವುದಿಲ್ಲ. Because it is a Resource mobilization process Primarily, it is the responsibility of Finance Minister to look into all available resources and to mobilize resources. ನಿಮ್ಮದು ಇದು. See that it is stopped. Then, I further demand, ಈಗ auction ಆಗಿದೆಯೆಲ್ಲಾ, ಅದರಲ್ಲಿ ಐದು ಜನ ಸಿಂಡಿಕೇಟ್ ಮಾಡಿಕೊಂಡು ಮಾಡುತ್ತಿದ್ದಾರಲ್ಲಾ, ಇವರ ಬಗ್ಗೆ ಪೂರ್ಣ, ಸಮಗ್ರವಾದ ತನಿಖೆ ಆಗಬೇಕು. ಇಷ್ಟು ಕಡಿಮೆ ಬೆಲೆಗೆ ಏತಕ್ಕೆ ಮಾರಾಟವಾಗುತ್ತಿದೆ? ಕೇವಲ 5 ಜನ ಮಾತ್ರ ಏತಕ್ಕೆ ಬರುತ್ತಿದ್ದಾರೆ? Why other people are not participating? ಬೆಂಗಳೂರಿನಲ್ಲಿ ಇವರು 5 ಜನ ಮಾತ್ರವೇ ದುಡ್ಡಿರುವವರು? ಅಲ್ಲದೇ ಅವರು ಹೊರಗಡೆಯವರು, ಆಂಧ್ರದಿಂದ ಬಂದವರು, ಹೆಚ್ಚಾಗಿ ಆಂಧ್ರದವರೇ ಇದ್ದಾರೆ? Why? ಪಾರದರ್ಶಕತೆ ಅದರಲ್ಲಿ ಏಕೆ ಇಲ್ಲ? See, if there is no transparency, normally...

ಶ್ರೀ ಹೆಚ್.ಸಿ. ಮಹದೇವಪ್ಪ:- ಸರ್ಕಾರದ ಒತ್ತುವರೆ ಭೂಮಿಯನ್ನು ಮೂಲಭೂತವಾಗಿ ಹರಾಜು ಅಥವಾ ಮಾರಾಟ ಮಾಡಲಿಕ್ಕೆ ಭೂಕಾಯ್ದೆ ಶಾಸನದಡಿಯಲ್ಲಿ ಅವಕಾಶವಿಲ್ಲ. ಅದನ್ನು ಮಾರಾಟ ಮಾಡಿರುವುದೇ ತಪ್ಪು. It is also a violation and failure of this Government.

ಶ್ರೀ ಎಸ್. ಸಿದ್ಧರಾಮಯ್ಯ:- Land Reforms Act violation, Land Grant Rules violation, ಕಾನೂನುಗಳನ್ನೆಲ್ಲಾ violation ಮಾಡಿ ಯಾರೋ ಒಬ್ಬ ಬಿಲ್ಡರ್ ಸರ್ಕಾರಿ ಜಮೀನಿನ ಒಡೆಯನಾಗಲಿಕ್ಕೆ ಸರ್ಕಾರದ ಜಮೀನುಗಳ, ಹಿಡುವಳಿ ಜಮೀನುಗಳ, ಸರ್ವೆ ನಂಬರ್‌ಗಳ ಒಡೆಯನಾಗಲಿಕ್ಕೆ ಅವರಿಗೆ ಹೇಗೆ ಹಕ್ಕಿದೆ? Is the eligible under law? Transparency Act ಕೆಳಗೆ ಅವನಿಗೆ ಜಮೀನು ತೆಗೆದುಕೊಳ್ಳಲಿಕ್ಕೆ ಅಧಿಕಾರವಿದೆಯೇ? Agriculture land ಗೆ owner ಆಗಲಿಕ್ಕೆ ಅವನಿಗೆ ಅವಕಾಶವಿದೆಯೇ? How have you allowed? ನೀವು ರೆವಿನ್ಯೂ ಮಂತ್ರಿಗಳು. ರೆವಿನ್ಯೂ Act ನಲ್ಲಿ ಅವಕಾಶವಿದೆಯೇ? Land Reforms Act ನಲ್ಲಿ ಅವಕಾಶವಿದೆಯೇ? Total violation. ಇಷ್ಟೊಂದು ಕಾನೂನು ಬಾಹಿರವಾಗಿ ಸರ್ಕಾರದ ಆಸ್ತಿಯನ್ನು ಅವರು ಯಾರೋ ಕಬಳಿಸಿಕೊಂಡಿದ್ದರು, ಅವರನ್ನು ಜೈಲಿಗೆ ಕಳುಹಿಸಬೇಕು. ಯಾರಾದರೂ ಆಗಿರಲಿ, Who ever he may be. Whether he belongs to this party or that party or any political party, ಜೈಲಿಗೆ ಕಳುಹಿಸಿ ಮುಖ್ಯಮಂತ್ರಿಗಳು 282 ಜನರನ್ನು ಈ ರೀತಿಯಾಗಿ ಹೆದರಿಸುವುದನ್ನು ಬಿಟ್ಟುಬಿಡಬೇಕು. ಯಾರಿದ್ದಾರೆ ಅವರ ಹೆಸರನ್ನು ಹೇಳಬೇಕು, he is the man, ಇಂಥವರು ಜಮೀನು ಕಬಳಿಸಿದ್ದಾರೆ, ಇಂಥವರನ್ನು ಜೈಲಿಗೆ ಕಳುಹಿಸುತ್ತೇನೆಂದು ಹೇಳಬೇಕು. Send him to Jail. ಅದನ್ನು ಬಿಟ್ಟು ಧಮಕಿ ಹಾಕುವ ಕೆಲಸ, ಬಾಯಿ ಮುಚ್ಚಿಸುವಂಥ ಕೆಲಸ, ನಾನು ಹೇಳುತ್ತಿದ್ದೇನೆ, ಇಷ್ಟೊಂದು ಕಾನೂನುಬಾಹಿರವಾಗಿ ನಡೆದಿರುವುದು ಇದೊಂದು ದೊಡ್ಡ ಸ್ಕ್ಯಾಂಡಲ್ ಆಗುತ್ತದೆ. ಇದನ್ನು ನಿಲ್ಲಿಸಿ, ಇದರ ಬಗ್ಗೆ ತನಿಖೆ ಮಾಡಿಸಿ, ನೀವು ನಿಜವಾಗಿ ನಾವು ಪಾರದರ್ಶಕವಾಗಿದ್ದೇವೆ, ಪಾರದರ್ಶಕ ಕಾಯ್ದೆಯಲ್ಲಿ ನಮಗೆ ನಂಬಿಕೆ ಇದೆ. ನಾವು ಜನಪರ, ಬಡವರ ಪರವಾಗಿದ್ದೇವೆನುವುದಾದರೆ, You stop this and order for an enquiry. Other wise, ಬೆಂಗಳೂರು ಸುತ್ತಮುತ್ತ 22,000 ಎಕರೆ ಜಮೀನು ಇರುವುದು, 50,000-00 ಕೋಟಿ ರೂ.ಗಳ ಬೆಲೆ ಬಾಳುವಂಥ ಆಸ್ತಿಯಾಗಿದೆ. ಇಷ್ಟೊಂದು ಬೆಲೆ ಬಾಳತಕ್ಕಂಥ ಆಸ್ತಿಯನ್ನು ಯಾರೋ ಲೂಟಿ ಮಾಡಲಿಕ್ಕೋಸ್ಕರ, ಕಾನೂನು ಬಾಹಿರವಾಗಿ ಶ್ರೀಮಂತರಾಗುವುದಕ್ಕಾಗಿ, ಆಸ್ತಿ ಮಾಡಲಿಕ್ಕೆ ನೀವು ಹಣಕಾಸಿನ ಸಚಿವರಾಗಿ ನಿಮಗೆ ಜವಾಬ್ದಾರಿ ಇದೆ, ಇದಕ್ಕೆ ಅವಕಾಶ ಮಾಡಿಕೊಡಕೂಡದು ಎಂದು ವಿನಂತಿಸುತ್ತೇನೆ. I am requesting you, I am appealing you, Please stop it. Order ಮಾಡಿ. ನಿಮಗೆ ಅಧಿಕಾರ ಸಿಗುತ್ತದೆಯೋ,

ಬಿಡುತ್ತದೆಯೋ? ಜನಪರವಾಗಿರಿ, ರಾಜ್ಯದ ಪರವಾಗಿರಿ, ರಾಜ್ಯಕ್ಕೆ ಬರಬೇಕಾದಂಥ ಆದಾಯವನ್ನು ನಿಮ್ಮ ಕಾಲದಲ್ಲಿ ಹೋಯಿತು ಎಂಬ ಅಪವಾದಕ್ಕೆ ಗುರಿಯಾಗಲಿಕ್ಕೆ ಹೋಗಬೇಡಿ. ಇದನ್ನು ನೀವು ಮಾಡಬೇಕೆಂದು ಹೇಳಿ ಇದರ ಬಗ್ಗೆ ಇಷ್ಟಕ್ಕೆ ಸೀಮಿತಗೊಳಿಸುತ್ತೇನೆ.

ಅರ್ಧ ಗಂಟೆ ಚರ್ಚೆಯ ಸಮಯದಲ್ಲಿ ಶ್ರೀ ಬಸವರಾಜ ರಾಯರೆಡ್ಡಿಯವರು ಇದರ ಬಗ್ಗೆ ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಹಾಗಾಗಿ ಕಾನೂನು ಹೇಗೆ violate ಆಗಿದೆ ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. But there is clear violation of Law. Land reforms Act, Land Revenue Act, Land Rules ಕೆಳಗೆ ಇವರಿಗೆ ಯಾರಿಗೂ eligibility ಇಲ್ಲ. ಇದರ ಬಗ್ಗೆ ನೇರವಾಗಿ ಸರ್ಕಾರದ ಕುಮ್ಮಕ್ಕು ಇರಬೇಕು, ಇರುವವರಿಗೆ ಇಲ್ಲವಾದರೆ ಆ ಐದು ಜನರ ಸಿಂಡಿಕೇಟ್ ಮಾಡಿಕೊಂಡು ಜಮೀನನ್ನು ಹರಾಜು ಮಾಡಲಿಕ್ಕೆ ಸಾಧ್ಯವಿಲ್ಲ. Total transparency ಇದರಲ್ಲಿ ಇಲ್ಲವೇ ಇಲ್ಲ. ಬೇರೆ ಇನ್ನೇನು, 250–00 ಕೋಟಿ ರೂ. 2,300 ಕೋಟಿ ರೂ.ಗಳು. ಬೇರೆ ಬೇರೆ ಯೋಜನೆಗಳಿಗೆ ಖರ್ಚು ಮಾಡಿದ್ದೀರಿ, 5ನೇ ವೇತನ ಆಯೋಗ ಜಾರಿ ಮಾಡಿದ್ದರಿಂದ ಸುಮಾರು 800–00, 900–00 ಅಥವಾ 1000–00 ಕೋಟಿ ರೂ.ಗಳು ನಿಮಗೆ ಬಂದಿರಬೇಕು. ಅದರ ಬಗ್ಗೆ ಸರಿಯಾಗಿ ಗೊತ್ತಿಲ್ಲ. ಇಷ್ಟೆಲ್ಲಾ ಆಗಬೇಕಾದರೆ ಸುಮಾರು 1,551–00 ಕೋಟಿ ರೂ.ಗಳನ್ನು ನೀವು ಕೊಡಬೇಕು. ಸಾಲ ಮನ್ನಾ ಮಾಡಿದ್ದು, ನಿಮ್ಮ ಪ್ರಕಾರ 2,300 ಕೋಟಿ ರೂ.ಗಳು ಎಂದು ಹೇಳಿದ್ದೀರಿ. 750–00 ಕೋಟಿ ರೂ.ಗಳು ಬಡ್ಡಿ ಹಣ, 1551–00 ಕೋಟಿ ರೂ.ಗಳು ನೀವು ಕೊಡಬೇಕು. 250 ಕೋಟಿ ರೂಪಾಯಿ ಇದು. ಮತ್ತೆ 800 ಕೋಟಿ ರೂಪಾಯಿ ಅದು. ಮತ್ತೆ ನೀವು ಡಾ॥ ನಂಜುಂಡಪ್ಪನವರ ವರದಿಯ ಪ್ರಕಾರ 1571 ಕೋಟಿ ರೂಪಾಯಿ ತೆಗೆದು ಇಟ್ಟಿದ್ದೇನೆಂದು ಹೇಳುತ್ತೀರಿ. ಅದಕ್ಕೆ ನಿಮಗೆ resources ಎಲ್ಲಿದೆ? Resources mobilize ಮಾಡುವುದಕ್ಕೆ ಏನು ಮಾಡಿಕೊಂಡಿದ್ದೇವೆಂದು ಹೇಳುತ್ತೀರಿ? ನೀವು ಏನು ಮಾತನ್ನು ಹೇಳಿದ್ದೀರಿ ಎಲ್ಲಾ ಕಡೆ ಎಂದು ನಾನು ಕೇಳಿದ್ದೇನೆ. ನನಗೆ ಗೊತ್ತಿಲ್ಲ. ನೀವು ಏನು ಹೇಳುತ್ತಿದ್ದೀರಿ ಎಂದರೆ ನಾವು ಕಳೆದ ಮೂರು ತಿಂಗಳಲ್ಲಿ ಸುಮಾರು 600 ಕೋಟಿ ರೂಪಾಯಿ ಹೆಚ್ಚು ಆದಾಯ ಜಾಸ್ತಿ ಆಗಿದೆ ಎಂದು ಹೇಳುತ್ತೀರಿ. ಹಿಂದೆ ಯಾವಾಗಲೂ ಆಗಿರಲಿಲ್ಲ. 600 ಕೋಟಿ ರೂಪಾಯಿ ಜಾಸ್ತಿ ಆಗಿದೆ ಎಂದು ಹೇಳಿದ್ದೀರಿ. ಇದು normal course ನಲ್ಲಿ ಹೆಚ್ಚು

ಆಗತಕ್ಕಂಥದ್ದು 20%. ಕಳೆದ ವರ್ಷ ನಿಮ್ಮ ತೆರಿಗೆ ಎಷ್ಟು? ರಾಜ್ಯದ ತೆರಿಗೆ ಕಳೆದ ವರ್ಷ ಎಷ್ಟು? ನಿಮಗೆ ಹೋದ ವರ್ಷ 2006–07ರಲ್ಲಿ Revenue Receipts 23,887 ಕೋಟಿ ರೂಪಾಯಿ ಬಂದಿದೆ. ಇದರಲ್ಲಿ normal growth 20% ಇಡಬೇಕು. 20% ಅಂದರೆ 238x3 ತಿಂಗಳಲ್ಲಿ ಎಷ್ಟು ಬರಬೇಕು? 714 ಕೋಟಿ ರೂಪಾಯಿ ಬರಲೇಬೇಕು. ಇದು ನಿಮ್ಮ ಶ್ರಮ ಇಲ್ಲ. ಹೊಸ resources mobilize ಮಾಡಿದ್ದರಿಂದ ಬಂದಿದ್ದು ಅಲ್ಲ. ನಮ್ಮದು 600 ಕೋಟಿ ರೂಪಾಯಿ ಬಂದು ಬಿಟ್ಟಿದೆ, ನಮ್ಮದೆ ಈ ಸಾರಿ 700 ಕೋಟಿ ರೂಪಾಯಿ ಬಂದು ಬಿಟ್ಟಿದೆ ಎನ್ನುತ್ತೀರಿ. 700 ಕೋಟಿ ರೂಪಾಯಿ ಎಲ್ಲಿ ಬಂದಿದೆ ಅಂದರೆ ನಿಮಗೆ ಕಳೆದ ಸಾರಿ ಬಂದಿರುವುದಕ್ಕಿಂತ 20% growth ಇಟ್ಟುಕೊಂಡರೆ ಅಷ್ಟು ಬರುತ್ತದೆ. 15% growth ಇಟ್ಟುಕೊಂಡರೆ 600 ಕೋಟಿ ರೂಪಾಯಿ ಬರುತ್ತದೆ. 20% growth ಇಟ್ಟುಕೊಂಡರೆ 700 ಚಿಲ್ಲರೆ ಕೋಟಿ ರೂಪಾಯಿ ಬರುತ್ತದೆ. 4 ತಿಂಗಳಿಗೆ ನಿಮಗೆ ಸುಮಾರು 950 ಕೋಟಿ ರೂಪಾಯಿ ನಿಮಗೆ ಬರಬೇಕು. ಈ ತಿಂಗಳೂ ಸೇರಿದರೆ 4 ತಿಂಗಳಾಗುತ್ತದೆ. ಈ 4 ತಿಂಗಳಲ್ಲಿ ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ಈ ವರ್ಷಕ್ಕೆ 950 ಕೋಟಿ ರೂಪಾಯಿ over and above ಕಳೆದ ವರ್ಷದ receipts ಗಿಂತ ಜಾಸ್ತಿ ಬರಲೇ ಬೇಕು. ಇದು normal course ನಲ್ಲಿ ಬರುವುದು. ಇದಕ್ಕೆ ಹೆಚ್ಚೇನೂ ಶ್ರಮ ಇಲ್ಲ. ನೀವು additional resources mobilize ಮಾಡಲಿಕ್ಕೆ what are your efforts? ನೀವು ಉತ್ತರ ಕೊಡುವಾಗ ನಿಮ್ಮ ವಿಚಾರ ಹೇಳಿ. ನಿಮ್ಮ efforts ಏನು? ಅದು ಹಿಂದಿನ ವರ್ಷನೂ ಬಂದಿದೆ. ಆಚೆ ವರ್ಷನೂ ಬಂದಿದೆ.

ನಾನು ಇದ್ದಾಗಲೂ ತೆರಿಗೆ ಗ್ರೋತ್ 29% ಇತ್ತು. ಒಂದು ವೇಳೆ ನೀವು VAT introduce ಮಾಡಿದ ಮೇಲೆ ಮೊದಲನೇ ವರ್ಷ 100% compensate ಮಾಡಿ ಕೊಟ್ಟಿದ್ದಾರೆ. ಎರಡನೇ ವರ್ಷ ಅಂದರೆ ಹೋದ ವರ್ಷ 75% compensate ಮಾಡಿಕೊಟ್ಟಿದ್ದಾರೆ. ಈ ವರ್ಷ 50% compensate ಮಾಡಿಕೊಡುತ್ತಾರೆ. You are not going to lose anything. Even CST ಕೂಡ ಅದನ್ನು ಅಬಾಲಿಷ್ ಮಾಡಬೇಕೆಂದು ಇದ್ದಾರೆ. ಈ ವರ್ಷ 4 ರಿಂದ 2%ಗೆ ಇಳಿಸಬೇಕೆಂದು ಮಾಡಿದ್ದಾರೆ, ಹೌದಲ್ಲವೇ? 2 ರಿಂದ ಮುಂದಿನ ವರ್ಷ zero ಗೆ ತರಬೇಕೆಂದು ಹೇಳಿದ್ದಾರೆ. ಅದನ್ನೂ ಸಹ 100% compensate ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಇದರಿಂದ VAT introduce ಮಾಡಿದ ಮೇಲೆ basic tax base ಹೆಚ್ಚಾಗಿ ಹೋಯಿತು.

All the commodities which were left out, sales tax ಇರುವಾಗ, ಅವೆಲ್ಲಾ commodities ಕೂಡ except ನಾವು ಯಾವ ಯಾವುದಕ್ಕೆ ಇಲ್ಲಿ tax ಹಾಕುವುದಿಲ್ಲವೆಂದು ಹೇಳಿದ್ದೇವೆ, ಅವುಗಳನ್ನು ತೆರಿಗೆಯಿಂದ ಹೊರಗಡೆ ಇಟ್ಟಿದ್ದೇವೆ. ಆ ಪದಾರ್ಥಗಳನ್ನು ಬಿಟ್ಟು, ಬಡವರಿಗೆ ಉಪಯೋಗ ಆಗತಕ್ಕಂಥ ಪದಾರ್ಥಗಳನ್ನು ಬಿಟ್ಟು, ಉಳಿದ ಎಲ್ಲಾ ಪದಾರ್ಥಗಳನ್ನೂ tax base ಗೆ ತರಿಸಬೇಕು. ಇದೆಲ್ಲಾ ಆಗಿದೆಯೋ ಇಲ್ಲವೋ ಎಂದು ನನ್ನ ಪ್ರಕಾರ, I do not know. ನಿಮಗೆ 6 ತಿಂಗಳು, 7 ತಿಂಗಳು, 8 ತಿಂಗಳು Finance Secretary ಇರಲಿಲ್ಲ. Finance Secretary review ಮಾಡಿಲ್ಲ. ನನಗೆ ಇರುವ information ಪ್ರಕಾರ ನೀವು ಒಂದು ದಿನ ಕೂಡ ಇವತ್ತಿನವರೆಗೆ Finance ಇಲಾಖೆಯನ್ನು review ಮಾಡಿಲ್ಲ. That is my information, I may be wrong. According to my information, ಈ 18 ತಿಂಗಳಲ್ಲಿ ನೀವು ಒಂದೇ ಒಂದು ದಿನ Finance ಇಲಾಖೆಯನ್ನು review ಮಾಡಿಲ್ಲ. ಒಂದು ಜಿಲ್ಲೆಗೆ ಹೋಗಿ ಕುಳಿತುಕೊಂಡು ನಿಮಗೆ ಯಾವುದು ಸಂಪನ್ಮೂಲ ಕೊಡುತ್ತೇವೆ, Motor Vehicles Department, Stamps and Registration, Sales Tax and Commercial Tax Department, Excise Department, ಹೀಗೆ ಯಾವ್ಯಾವುದು Major tax ಕೊಡತಕ್ಕಂಥ ಇಲಾಖೆಗಳು ಇದ್ದಾವೆ ಅವುಗಳೊಡನೆ ರಿವ್ಯೂ ಮೀಟಿಂಗ್ ಮಾಡಿಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯುಡು:– ಸಾರ್, ತಾವು ಹೇಳಿದಿರಲ್ಲ ಒಂದೂ ಮೀಟಿಂಗ್ ಮಾಡಿಲ್ಲವೆಂದು.

ಶ್ರೀ ಸಿದ್ದರಾಮಯ್ಯ:– ನನಗೆ ಇರುವ information ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯುಡು:– ನಾವೆಲ್ಲಾ ಅಟೆಂಡ್ ಆಗಿದ್ದೇವೆ. ಎಲ್ಲಾ ಇಲಾಖೆಯವರನ್ನೂ ಕರೆದಿದ್ದರು.

ಶ್ರೀ ಸಿದ್ದರಾಮಯ್ಯ:– ನನಗೆ ಇರುವ information ಪ್ರಕಾರ ಹೇಳುತ್ತಿದ್ದೇನೆ. ನಾನು ಸಹ ಹಣಕಾಸು ಮಂತ್ರಿ ಆಗಿದ್ದೇನಲ್ಲಾ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯುಡು:– ಎಲ್ಲಾ ಇಲಾಖೆಯವರನ್ನೂ ಕರೆದಿದ್ದರು. Finance ಇಲಾಖೆಯವರನ್ನೂ ಕರೆದಿದ್ದರು. ಒಂದು ಬಾರಿ ಅಲ್ಲ, ಎರಡು ತಿಂಗಳಿಗೊಮ್ಮೆ ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ:- ಸರಿ ಬಹಳ ಸಂತೋಷ. ನನಗೆ ಇರುವ information ಪ್ರಕಾರ ಒಂದು ದಿನ review ಮಾಡಿಲ್ಲ. ಯಾವ ಜಿಲ್ಲೆಗೆ ಹೋಗಿ ಕೂಡ review ಮಾಡಿಲ್ಲ. ಬರೇ ಪ್ರಚಾರ ಮಾಡಿಕೊಳ್ಳತಕ್ಕದ್ದು. ಬರೇ ಪ್ರಚಾರದಿಂದ ಕಾರ್ಯಕ್ರಮಗಳು ಜಾರಿ ಆಗುವುದಿಲ್ಲ. Resources mobilize ಆಗುವುದಿಲ್ಲ. ಹಾಗಾಗಿ ನನ್ನ ಪ್ರಕಾರ VAT Tax growth ಈಗ 15% ಇದೆ. 15–16% ಇರಬೇಕು. ಅದರಲ್ಲಿ ಇನ್ನೂ ಜಾಸ್ತಿ ಆಗಲಿಕ್ಕೆ ಸಾಧ್ಯತೆ ಇದೆ. ಇನ್ನೂ ಅದನ್ನು ಹೆಚ್ಚು ಮಾಡಲಿಕ್ಕೆ ಸಾಧ್ಯತೆ ಇದೆ. ನೀವು strict ಆಗಿ resources mobilization ಕಡೆಗೆ ಗಮನ ಕೊಟ್ಟು strict review ಗಳನ್ನು ಮಾಡಿದರೆ ಇನ್ನೂ ಕೂಡ tax ಅನ್ನು ಹೆಚ್ಚು ಮಾಡಲಿಕ್ಕೆ ಅವಕಾಶ ಇದೆ. Not 16%, it will more than 20% vat du. ಅಂತೂ ನೀವು ಮಾಡಿಲ್ಲ ಎನ್ನತಕ್ಕದ್ದು ನನ್ನ ವಿಚಾರ. ಹಾಗಾಗಿ ನೀವು resources mobilize ಹೆಚ್ಚು ಮಾಡಲಿಕ್ಕೆ ಗಮನ ಕೊಟ್ಟಿಲ್ಲ. Tax reforms ಆಗಿಬಿಟ್ಟಿದೆ, fiscal reforms ಆಗಿಬಿಟ್ಟಿದೆ. ತೆರಿಗೆ ಖಜಾನೆಗೆ ಬರುತ್ತಿದೆ. ದುಡ್ಡು ಇದೆಯಲ್ಲಾ ಖರ್ಚು ಮಾಡೋಣ ಎನ್ನತಕ್ಕ ಭಾವನೆಗೆ ಬಂದು ಬಿಟ್ಟಿದ್ದೀರಿ. ಅದು ಮುಂದಿನ ದಿನಗಳಲ್ಲಿ ಬಹಳ ತೊಂದರೆ ಆಗುತ್ತದೆ. ಮತ್ತೆ ನಾವು ಹಳೆಯ ಪರಿಸ್ಥಿತಿಗೆ ಹೋಗಬೇಕಾದಂತಹ ಸ್ಥಿತಿಗೆ ಬರಬಹುದು ಎನ್ನುವ ಕಾರಣಕ್ಕೋಸ್ಕರ, ನಾನು ಹಣಕಾಸು ಮಂತ್ರಿ ಆಗಿದ್ದರಿಂದ ನೀವು ಎಚ್ಚರಿಕೆ ಎಂತಲಾದರೂ ಅಂದುಕೊಳ್ಳಿ ಅಥವಾ ನಿಮಗೆ ಸಲಹೆಗಳು ಎಂತಲಾದರೂ ತಿಳಿದುಕೊಳ್ಳಿ. ಸಲಹೆಗಳು ಎಂದು ತಿಳಿದುಕೊಳ್ಳಿ. ನಿಮಗೆ ನಾನು ಎಚ್ಚರಿಕೆ ಕೊಡುವುದಕ್ಕೆ ಹೋಗುವುದಿಲ್ಲ. ನನ್ನ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ನಿಮಗೆ 2500 ಕೋಟಿ ರೂಪಾಯಿ resources mobilize ಮಾಡಬೇಕಾದರೆ ಏನು ಮಾಡಬೇಕು? ನಿಮಗೆ ಇದರಿಂದ ಏನೂ ನಷ್ಟವಾಗುವುದಿಲ್ಲ. ಯಾವುದರಿಂದ ಅಂದರೆ ಸಾರಾಯಿ ನಿಷೇಧದಿಂದ, ಸಾರಾಯಿ ನಿಷೇಧ ಮಾಡಿದರು, ಲಾಟರಿ ನಿಷೇಧ ಮಾಡಿದರು. ರೈತರಿಗೆ ಸಾಲ ಮನ್ನಾ ಮಾಡಿದರು. ಏನು ಬೆನ್ನು ತಟ್ಟಿಕೊಂಡಿದ್ದೇ ತಟ್ಟಿಕೊಂಡಿದ್ದು. ಪ್ರಚಾರ ಮಾಡಿಕೊಂಡಿದ್ದೇ ಮಾಡಿಕೊಂಡಿದ್ದು. ಜನರಿಗೆ ಹೇಳಿದ್ದೇ ಹೇಳಿದ್ದು. ಸ್ತ್ರೀ ಸಂಘಗಳನ್ನು ಕರೆದು ಸಭೆಗಳನ್ನು ಮಾಡಿದ್ದೇ ಮಾಡಿದ್ದು. ಇವರು ಜುಲೈ 1 ರಿಂದ ಸಾರಾಯಿ ಮನ್ನಾ ಮಾಡಿದ್ದಾರೆ. ಇವತ್ತೂ ಕೂಡ ಕಳ್ಳಭಟ್ಟಿ ಜಾಸ್ತಿ ಆಗಿವೆ. ಮೊದಲು ಕಳ್ಳಭಟ್ಟಿ ಇರಲಿಲ್ಲ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈಗ ಕಳ್ಳಭಟ್ಟಿಗಳು ವ್ಯಾಪಕವಾಗಿವೆ. ನಿನ್ನೆ ನಾನು ಪತ್ರಿಕೆಯಲ್ಲಿ ಓದಿದೆ. ಕನ್ನಡಪ್ರಭದಲ್ಲಿ ಓದಿದೆ. ಹೊಳೆ ನರಸೀಪುರದಲ್ಲಿ

ಹಗಲು ಹೊತ್ತೇ ಸಾರಾಯಿಯನ್ನು ಮಾರುತ್ತಿದ್ದಾರೆ. ಕನ್ನಡ ಪ್ರಭದಲ್ಲಿ ಓದಿದೆ. 1ನೇ ತಾರೀಖಿನಿಂದ stop ಆದ ದಿವಸದಿಂದ ಇವತ್ತಿನವರೆಗೆ ಹಗಲು ಹೊತ್ತೇ ಮಾರುತ್ತಿದ್ದಾರಂತೆ.

ಶ್ರೀ ಬಿ. ಶಿವರಾಂ:– ಈಗ ಹೊಳೆ ನರಸೀಪುರದಲ್ಲಿ ಎಷ್ಟು ಧಾರಾಳವಾಗಿ ಸಾರಾಯಿ ಮಾರುತ್ತಿದ್ದಾರೆ ಎಂದರೆ ನೀವು ಯಾವುದೇ ಗಲ್ಲಿಗೆ ಹೋದರೂ ಒಂದು ಸಾವಿರ, ಎರಡು ಸಾವಿರ ಪ್ಯಾಕೆಟ್ ಧಾರಾಳವಾಗಿ ಸಿಗುತ್ತಿವೆ. ಸೋಮವಾರದ ದಿವಸ ಸಾಧಾರಣ ಎರಡು ಸಾವಿರ ಜನ ಆ ಪಟ್ಟಣದಲ್ಲಿ ಧರಣಿ ಮಾಡಿದ್ದು, Excise ಕಛೇರಿಗೆ ಬೀಗ ಹಾಕಿಸಿದ್ದು, ಪೋಲಿಸ್‌ನವರು 4 reserve force ತಂದಿದ್ದು, ಆ ಕಂಟ್ರಾಕ್ಟರ್ ಅವರ ಮನೆಯ ಹತ್ತಿರ ನಾಲ್ಕು reserve ಹಾಕುತ್ತಾರೆ. ಕೊನೆಗೆ ಸಂಜೆ ಹೊತ್ತಿಗೆ ಜನಜನಿತವಾಗಿ ಹೇಗೆ ದೊರೆಯಿತು ಎಂದರೆ 15 ಸಾವಿರ ಪ್ಯಾಕೆಟ್ ಅನ್ನು ಹೇಮಾವತಿ ನದಿಗೆ ತೆಗೆದುಕೊಂಡು ಹೋಗಿ ಬಿಡುತ್ತಿದ್ದುದನ್ನು ಜನ ನೋಡುತ್ತಿದ್ದರು. ಅವು ತೇಲುತ್ತಿರುತ್ತವೆ. ಎಷ್ಟು ದಿವಸದ ಮೇಲೆ ಜನ ಪ್ರತಿಭಟನೆ ಮಾಡುವ ಮಟ್ಟಕ್ಕೆ ಬರುತ್ತದೆ ಹಾಸನ ಜಿಲ್ಲೆಯ ಹೊಳೆನರಸೀಪುರದಲ್ಲಿ ಎಂಧರೆ ಈ ರಾಜ್ಯದಲ್ಲಿ ಯಾವ ಮಟ್ಟಿಗೆ ಸಾರಾಯಿ ನಿಷೇಧ ಇದೆ, ಕಾನೂನು ವ್ಯವಸ್ಥೆ ಇದೆ ಎನ್ನುವುದನ್ನು ಯೋಚನೆ ಮಾಡಬೇಕು.

ಶ್ರೀ ಶ್ರೀನಿವಾಸ ಗೌಡ ಕುಡುವನ ಹಳ್ಳಿ:– ಈಗ ಸಾರಾಯಿ ನಿಷೇಧ ಮಾಡಿದ್ದು ಒಳ್ಳೆಯದೇ. ಏಕೆಂದರೆ ಸಾರಾಯಿ ಮನ್ನಾ ಇಲ್ಲದೇ ಇದ್ದಾಗ ರಾತ್ರಿ ಹೊತ್ತು ಕುಡಿಯುತ್ತಿದ್ದರು. ಸಾರಾಯಿ ನಿಷೇಧ ಮಾಡುವ ಮೊದಲು ರಾತ್ರಿ ಹೊತ್ತು ಕುಡಿಯುತ್ತಿದ್ದರು. ನಿಷೇಧ ಮಾಡಿದ್ದರಿಂದ ಜನ ಹಗಲು ಹೊತ್ತೇ ಕುಡಿಯುತ್ತಿದ್ದಾರೆ. ರಾತ್ರಿಗೆ ಹಿಡಿಯಬಹುದೇನೋ ಎಂದು ಹೇಳಿ ಹಗಲೇ ಶುರು ಮಾಡಿದ್ದಾರೆ ಎಂದು ಕಾಣುತ್ತದೆ.

ಶ್ರೀ ಹೆಚ್.ಎಂ. ವಿಶ್ವನಾಥ್:– ಹೊಳೆ ನರಸೀಪುರ ಒಂದೇ ಕಡೆ ಅಲ್ಲ, ಎಲ್ಲಾ ಕಡೆ ಸಿಗುತ್ತಿವೆ. ಸ್ವಲ್ಪ ದಿವಸ ಸಮಯ ಬೇಕು. ನೀವು ಬರೇ ಹೊಳೆನರಸೀಪುರದ ವಿಚಾರವನ್ನೇ ಹೇಳುತ್ತೀರಲ್ಲ. ಗಂಡಸಿಯಲ್ಲಿ ಸಿಗುತ್ತಿಲ್ಲವೇ ?

ಶ್ರೀ ಬಿ. ಶಿವರಾಂ:– ಮಾನ್ಯ ವಿಶ್ವನಾಥ್ ಅವರೇ ಸಿಗುತ್ತಿಲ್ಲ ಎಂದು ಡಿನೈ ಮಾಡಿಲ್ಲ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ:- ಹೊಳೆ ನರಸೀಪುರದಲ್ಲಿ ಹೊಳೆ ಹರಿಯುತ್ತದೆ, ಹೊಳೆಗೆ ಹಾಕುತ್ತಾರೆ.

ಶ್ರೀ ಸಿದ್ದರಾಮಯ್ಯ:- ಆಯಿತು ಬಿಡಿ, ಚನ್ನರಾಯಪಟ್ಟಣ ಅಂತ ಹೇಳುತ್ತೇನೆ ಬಿಡಿ. ಹೊಳೆ ನರಸೀಪುರ ಎಂದರೆ ನಿಮಗೆ ಏಕೆ ಕೋಪ?

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ:- ಗಂಡಸಿ ಗ್ರಾಮದಲ್ಲಿ ಇಲ್ಲವಾ? ಗಂಡಸಿಯಲ್ಲಿ ಹೊಳೆ ಹರಿಯುವುದಿಲ್ಲ, ಅದಕ್ಕೆ ಅಲ್ಲಿ ಹಾಕಲಿಲ್ಲ.

ಶ್ರೀ ಬಿ. ಶಿವರಾಂ:- ಗಂಡಸಿಯಲ್ಲೂ ಇದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಗಂಡಸಿಯಲ್ಲಿ ಇದೆ. ಅರಕಲಗೂಡಿನಲ್ಲಿ ಇದೆ, ನಮ್ಮ ತಾಲ್ಲೂಕಿನಲ್ಲೂ ಇದೆ.

(ಗೊಂದಲ)

ಶ್ರೀ ಬಿ. ಶಿವರಾಮು:- ಹಾಗಾದರೆ ನಿಮ್ಮ ಸರ್ಕಾರ ನಿಷೇಧ ಮಾಡಿಯೂ ಏನು ಉಪಯೋಗ ಬಂತು? ನೋಡಿ, ಎಲ್ಲಾ ಕಡೆಗಳಲ್ಲೂ ಇದೆಯಂತೆ! ಈಗ ಎಲ್ಲಾ ಕಡೆಗಳಲ್ಲೂ ನಡೆಯುತ್ತಿದೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ತಾವು ಬಜೆಟ್‌ನಲ್ಲಿ ಮಾತನಾಡುವಾಗ, ಸಾರಾಯಿ ನಿಲ್ಲಿಸಬೇಡಿ ಎಂದು ನಾವು ಹೇಳಿದೆವೆ? ಇದು ಜುಲೈ 1ನೇ ತಾರೀಖಿನಿಂದ ಜಾರಿಗೆ ಬರುತ್ತಿತ್ತು. 1ನೇ ಜುಲೈನಿಂದ excise year ಪ್ರಾರಂಭವಾಗುವುದು. ನಾವೇನೂ ವಿರೋಧಿಸಲಿಲ್ಲ. ನಿಷೇಧ ಮಾಡಲಿ, ಅದು ಒಳ್ಳೆಯ ಕೆಲಸ. ಕುಡಿಯುವವರೆಲ್ಲರೂ ಬಿಟ್ಟು ಬಿಟ್ಟರೆ, ಇದರಿಂದ ಬಡವರಿಗೆಲ್ಲರಿಗೂ ಅನುಕೂಲವಾಗುವುದಾದರೆ, ಅನುಕೂಲವಾಗಲಿ. ಅವರ ಆರೋಗ್ಯ ಸುಧಾರಣೆಯಾಗಲಿ. ಅವರ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುವುದಾದರೆ, ಆಗಲಿ. ಉದ್ದೇಶ ಚೆನ್ನಾಗಿದೆ. I am not disputing your intention. ಅವರ ಉದ್ದೇಶವಿದೆಯಲ್ಲ, ಅದನ್ನು ನಾನು dispute ಮಾಡುತ್ತಿಲ್ಲ. ಅದನ್ನು ತಡೆಗಟ್ಟುವುದಕ್ಕೆ ನೀವು ಏನು ತಯಾರು ಮಾಡಿಕೊಂಡಿದ್ದೀರಿ? ಯಾವುದೇ ತಯಾರಿ ಇಲ್ಲ. ಇದು ಒಂದು. ಈಗ ಸಾರಾಯಿ ಕುಡಿಯುವವರೆಲ್ಲರೂ ಬಿಟ್ಟು ಬಿಟ್ಟರೇ?

ಅದೆಲ್ಲೋ ಬಿಟ್ಟು ಬಿಟ್ಟಿದ್ದಾರೆ, ನಮಗೆ ಯಾರೋ ಹೆಣ್ಣು ಮಕ್ಕಳು ಹೇಳಿದರು ಎಂದು ತಾವು ಹೇಳಿದಿರಿ. ತಾವು ತಮ್ಮ Excise Departmentನವರನ್ನು ಕೇಳಿ ಇವತ್ತು IML ಎಷ್ಟು ಖರ್ಚಾಗುತ್ತಿದೆ ಎಂಬುದನ್ನು ಕೇಳಿ. ಈ ತಿಂಗಳು IML ಎಷ್ಟು ಕೇಸ್‌ಗಳು ಖರ್ಚಾಗಿದೆ ಎಂಬುದನ್ನು ಕೇಳಿ. ಒಂದು ತಿಂಗಳಿಗೆ average 12 ಲಕ್ಷ ಕೇಸ್‌ಗಳು ಖರ್ಚಾಗಿದೆ. ಪಾನೀಯ ನಿಗಮ ಮಾಡಿದ ಮೇಲೆ ಸೆಕೆಂಡ್ಸ್ ಎಲ್ಲವೂ ಕಡಿಮೆಯಾದ ನಂತರ ಸುಮಾರು 12 ಲಕ್ಷದಷ್ಟು ಕೇಸ್‌ಗಳು ಖರ್ಚಾಯಿತು. ಈಗ ಈ ತಿಂಗಳು 28 ಲಕ್ಷ ಕೇಸ್‌ಗಳು ಖರ್ಚಾಗುತ್ತದೆ. More than the double. ಇದ್ದಕ್ಕಿದ್ದಂತೆ ಬರೀ IML ಕುಡಿಯುವವರು ಹೆಚ್ಚಾಗಿ ಬಿಟ್ಟರೇ? 125%, ಸಾರಾಯಿ ಕುಡಿಯುತ್ತಿದ್ದವರೆಲ್ಲರೂ IML ಕುಡಿಯಲು shift ಆಗಿಬಿಟ್ಟರು. ಇದರ ಬಗ್ಗೆ ನೀವು ಉತ್ತರ ಕೊಡುವಾಗ ಹೇಳಬೇಕು. ಈ ತಿಂಗಳು ಎಷ್ಟು ಕೇಸ್‌ಗಳು ಖರ್ಚಾಗಿದೆ ಎಂಬುದನ್ನು ಹೇಳಬೇಕು. IML ಎಷ್ಟು ಖರ್ಚಾಗಿದೆ ಎಂಬುದನ್ನು ಹೇಳಬೇಕು. 28 ಲಕ್ಷ ಈ ತಿಂಗಳು 25 ಲಕ್ಷಕ್ಕಿಂತಲೂ ಹೆಚ್ಚು ಕೇಸ್‌ಗಳು ಖರ್ಚಾಗುತ್ತದೆಂಬುದು ನನಗೆ information ಬಂದಿದೆ. ನೀವು ಹೇಳುವಾಗ ಹೇಳಿ. ಅಲ್ಲಿ ಕೇಸ್‌ಗಳು ಖರ್ಚಾಗಿರುತ್ತದಲ್ಲ. ಅಲ್ಲಿಂದ ಮಾಹಿತಿ ಪಡೆದುಕೊಂಡು ಎಷ್ಟು ಕೇಸ್‌ಗಳು ಖರ್ಚಾಗಿವೆ ಎಂಬುದನ್ನು ಉತ್ತರ ಕೊಡುವಾಗ ನೀವು ಹೇಳಿ.

ಡಾ॥ ಹೆಚ್.ಸಿ. ಮಹದೇವಪ್ಪ:- IML consumption ಜಾಸ್ತಿಯಾಗುವುದರ ಜೊತೆಗೆ 'ನೀರಾ' ಸಿಗುತ್ತಿದೆ. ಅದು 'ಕಿಕ್ ಬರದೇ ಇದ್ದಾಗ ಕ್ಲೋರಲ್ ಹೈಡ್ರೇಡ್ ಹಾಕಿ ಕುಡಿದು ಜನರು ಸಾಯತಕ್ಕಂಥ ಪರಿಸ್ಥಿತಿ ಇದೆಯೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಶ್ರೀ ಸಿದ್ದರಾಮಯ್ಯ:- ಸುಮಾರು 25 ಲಕ್ಷ ಕೇಸ್‌ಗಿಂತಲೂ ಹೆಚ್ಚಾಗುತ್ತದೆ. ಮಾನ್ಯ ಅಧ್ಯಕ್ಷರೆ, ಒಂದು ಕೇಸ್ ಎಂದರೆ, ಅದರಲ್ಲಿ 48 ಕ್ವಾರ್ಟರ್ ಬಾಟಲಿಗಳಿರುತ್ತವೆ. 25 lakhs X 48... 12 ಲಕ್ಷದಷ್ಟು ಕೇಸ್ ಇದ್ದುದು, ಈಗ ಇದ್ದಕ್ಕಿದ್ದಂತೆ 100%ಗೆ jump ಆಗುತ್ತದೆಂದರೆ, IML ಕುಡಿಯುವವರು ಜಾಸ್ತಿಯಾಗಿ ಬಿಟ್ಟರೆ? ಈ ಜನರಾದರೂ ಯಾರು? ಈ 12 ಲಕ್ಷ ಹೆಚ್ಚಾಯಿತಲ್ಲ, ಸಾರಾಯಿ ಕುಡಿಯುತ್ತಿದ್ದ ಜನರೆಲ್ಲರೂ ಇದಕ್ಕೆ shift ಆಗಿದ್ದಾರೆ. ಈಗ ಏನಾಗಿದೆ? ಈಗ ಸಾರಾಯಿ, ವಿಸ್ಕಿ ಮಾಡುವುದೆಲ್ಲವೂ ಸುಲಭವಾಗಿದೆ. ಬಣ್ಣ ಹಾಕಿ ಕಲಸಿ ಬಿಡುವುದಷ್ಟೇ. ಅದು ಮೊದಲು ಪೊಟ್ಟಣದಲ್ಲಿ

ಬಿಳಿಯಾಗಿತ್ತು. ಈಗ ಬಣ್ಣದಲ್ಲಿ ಬಾಟಲಿಯಲ್ಲಿ ಸಿಗುತ್ತಿದೆಯಷ್ಟೇ. ಅಲ್ಲಿಗೆ ಕುಡಿಯುವುದಕ್ಕೆ ಹೋಗುತ್ತಿದ್ದಾರೆ. ಈಗ ಅವರ ಆರ್ಥಿಕ ಪರಿಸ್ಥಿತಿ ಏನಾಯಿತು? ಸುಧಾರಣೆಯಾಯಿತೇ? ಸಾರಾಯಿಯಿಂದ IMLಗೆ shift ಆದವನ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಯಿತೇ? ಅವನ ಮನೆಯಲ್ಲಿ ಹೆಂಡತಿ-ಮಕ್ಕಳೆಲ್ಲರೂ ನೆಮ್ಮದಿಯಿಂದಿದ್ದಾರೆಯೇ? ಅವರು ಕೂಲಿ ಮಾಡಿಕೊಂಡು ತಂದ ದುಡ್ಡು ಉಳಿಯಿತೇ? ಅವರು ದುಡ್ಡನ್ನು ಮನೆಗೆ ತೆಗೆದುಕೊಂಡು ಹೋಗಿ ತಲುಪಿಸಿದ್ದಾರೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ:-ನೀವು ಒಪ್ಪುವುದಾದರೆ, ನಾವೂ-ನೀವೂ ಒಟ್ಟಿಗೆ ಪ್ರವಾಸ ಮಾಡಿ ಹಳ್ಳಿಗಳಿಗೆ ಹೋಗಿ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು, ಸ್ಲಮ್‌ನಲ್ಲಿರುವ ಹೆಣ್ಣು ಮಕ್ಕಳನ್ನು ಭೇಟಿ ಮಾಡಿ ಕೇಳೋಣ.

ಶ್ರೀ ಸಿದ್ಧರಾಮಯ್ಯ:- ಹೋಗೋಣ, ಜೊತೆಯಲ್ಲೇ ಹೋಗೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಹಳ್ಳಿಗಳಲ್ಲಿ ಸ್ವಾಗತ ಮಾಡಿ ಅಲ್ಲಿಂದ ಫೋನ್ ಕರೆಗಳು ಬರುತ್ತಿವೆ. ನಮ್ಮ ಮಾಂಗಲ್ಯ ಉಳಿಯಿತೆಂದು ಅಲ್ಲಿರುವ ಹೆಣ್ಣು ಮಕ್ಕಳೆಲ್ಲರೂ ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ:- ಅದು ಪತ್ರಿಕೆಗಳಲ್ಲಿ ಬಂದಿತ್ತು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಹಳ್ಳಿಗಳಲ್ಲಿನ ಹೆಣ್ಣು ಮಕ್ಕಳಿಂದ ಫೋನ್ ಬರುತ್ತಿದೆಯೆಂದು ಹೇಳಿದಿರಿ. ಯಾವ ಹೆಣ್ಣು ಮಕ್ಕಳಿಂದ ತಮಗೆ ಫೋನ್ ಕರೆಗಳು ಬಂದವು?

ಶ್ರೀ ವಿ. ಸೋಮಣ್ಣ:- ಸನ್ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ನಾನು ವಿನಂತಿ ಮಾಡುತ್ತೇನೆ. ಸಾರಾಯಿಯನ್ನು ನಿಷೇಧಿಸಿರುವುದು ಉತ್ತಮ ಬೆಳವಣಿಗೆಯಾಗಿದೆ. ಆದರೆ, ಬೆಂಗಳೂರು ನಗರದಲ್ಲಿರುವ CL-2 ಅಂಗಡಿಗಳೇನಿವೆ, ಇವತ್ತು CL-2 ಅಂಗಡಿಗಳೆಲ್ಲವೂ ಸಾರಾಯಿ ಅಂಗಡಿಗಳಾಗಿವೆ. ದಯಮಾಡಿ ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಎಲ್ಲೆಲ್ಲಿ ಜನನಿಬಿಡವಾದ, ಜನರ ವಾಸಸ್ಥಾನಗಳಿವೆಯೋ, ಸಂಜೆ 5 ಗಂಟೆಯಾದ ಬಳಿಕ ರಾತ್ರಿ 1.00 ಗಂಟೆವರೆಗೂ ಎಲ್ಲಾ CL-2 ಅಂಗಡಿಗಳ ಮುಂದೆ queue system ಬಂದು ಬಿಟ್ಟಿದೆ. ಆ ಜಾಗಗಳಲ್ಲಿ ಸಾರ್ವಜನಿಕರು, ಸಾಮಾನ್ಯ ಜನರು ಓಡಾಡಬೇಕಾಗಿದೆ. ದಯಮಾಡಿ ತಾವು Excise Department ನವರನ್ನು ಕರೆಸಿ,

ಅವರೊಂದಿಗೆ ಮೀಟಿಂಗ್ ಮಾಡಬೇಕು. ಆ CL-2 ಅಂಗಡಿಗಳೆಲ್ಲವೂ ಸಾರಾಯಿ ಅಂಗಡಿಗಳಾಗಿವೆ. ಅವುಗಳನ್ನು ನಿಷೇಧ ಮಾಡುವುದಕ್ಕೆ ಏನಾದರೂ ಕ್ರಮ ಕೈಗೊಳ್ಳಬೇಕು.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಮಾತನಾಡುತ್ತಾ ನಮಗೆ ಹಳ್ಳಿ ಹಳ್ಳಿಗಳಿಂದಲೂ ಹೆಣ್ಣು ಮಕ್ಕಳು ಫೋನ್ ಮಾಡುತ್ತಿದ್ದಾರೆಂದರು. ನಾನೂ ಹಳ್ಳಿವರೊಂದಿಗೆ ಸಂಪರ್ಕವಿಟ್ಟುಕೊಂಡಿದ್ದೇನೆ. ನಾನೂ ಪ್ರವಾಸ ಮಾಡುತ್ತೇನೆ. ನಿಮ್ಮಷ್ಟು ಪ್ರವಾಸ ಮಾಡುವುದಕ್ಕೆ ಆಗದಿದ್ದರೂ, ನಾನೂ ಹಳ್ಳಿಗಳಲ್ಲೆಲ್ಲಾ ಪ್ರವಾಸ ಮಾಡುತ್ತೇನೆ, ಸಭೆಗಳಿಗೆ ಹೋಗುತ್ತೇನೆ, ಜನರನ್ನು ನೋಡುತ್ತೇನೆ, ಎಲ್ಲರನ್ನೂ ಮಾತನಾಡಿಸುತ್ತೇನೆ. ನನಗೂ ಸ್ವಲ್ಪವಾದರೂ ಮಾಹಿತಿಗಳು ಬಂದೇ ಬರುತ್ತದೆ. ನಿಮ್ಮದೇ ಸರ್ಕಾರವಿರುವುದರಿಂದ ನಿಮಗೆ ಜಾಸ್ತಿ ಮಾಹಿತಿಗಳು ಬರಬಹುದು. ನಮಗೂ ಸ್ವಲ್ಪ ಮಾಹಿತಿಗಳು ಬರುತ್ತವೆ. ನನಗೆ ಬಂದಿರುವ ಮಾಹಿತಿಗಳ ಪ್ರಕಾರ, ಮಾನ್ಯ ಸದಸ್ಯರಾದ ಸೋಮಣ್ಣನವರು ಹೇಳಿದ ರೀತಿಯಲ್ಲಿ ಇವತು CL-2 Retail Shops ಗಳಿವೆಯಲ್ಲ, ಅವು ಸಾರಾಯಿ ಅಂಗಡಿಗಳಿಗಿಂತಲೂ ಜಾಸ್ತಿಯಾಗಿವೆ. ಅಲ್ಲಿಯೇ ಕುಡಿಯುತ್ತಾರೆ. ಮೊದಲು ಕುಡಿಯುತ್ತಿದ್ದರು, ಇಲ್ಲವೆಂದಲ್ಲ. ಕದ್ದು ಕುಡಿಯುತ್ತಿದ್ದರು. ಆದರೆ, ಈಗ ರಾಜಾರೋಷವಾಗಿ ಕುಡಿಯುತ್ತಿದ್ದಾರೆ. ಈ ಜವಾಬ್ದಾರಿಯನ್ನು ತಾವು ಯಾರಿಗೆ ವಹಿಸಿದ್ದೀರಿ? Police Squad ರಚನೆ ಮಾಡಿದ್ದೀರಿ. Excise Department ನವರದೂ ಬೇರೆ squad ಇದೆ. ಇವರಿಬ್ಬರಿಗೂ ಏನಾಗಿದೆಯೆಂದರೆ, ಪೊಲೀಸಿನವರು ಇದರ ಜವಾಬ್ದಾರಿ ವಹಿಸಿಕೊಂಡ ಬಳಿಕ Excise Department ನವರಿಗೆ ಅಸಮಾಧಾನ ಶುರುವಾಗಿ ಬಿಟ್ಟಿದೆ. ಅವರು ಮಾಡಲಿ ಎಂದು ಇವರು, ಇವರು ಮಾಡಲಿ ಎಂದು ಅವರು, ಕೊನೆಗೆ, ಇವರೂ ಮಾಡುವುದಿಲ್ಲ, ಅವರೂ ಮಾಡುವುದಿಲ್ಲ. ಕುರಿ ಕಾಯಿ ತೋಳ ಎಂದರೆ, ಸಂಬಳವೇ ಬೇಡ ಎನ್ನುವುದು! ಇದು ಬಹಳ ಸುಲಭ ಕುರಿಗಳನ್ನು ಕಾಯುವುದಕ್ಕೆ ತೋಳಗಳಿಗೆ ಸಂಬಳವನ್ನೇಕೆ ಕೊಡಬೇಕು? ಆ ತರಹ ಆಗಿಬಿಟ್ಟಿದೆ. ಯಡಿಯೂರಪ್ಪನವರೆ, ನೀವು ಪೊಲೀಸಿನವರಿಗೆ ವಹಿಸಿ, ಅವರ ಮೂಲಕ ಈ ದಂಧೆಯನ್ನು ನಿಲ್ಲಿಸುವುದಕ್ಕಾಗುತ್ತದೆಯೇ? ಅನೇಕ ಕಡೆಗಳಲ್ಲಿ ಪೊಲೀಸಿನವರೇ ನಿಂತು ಮಾರಾಟ ಮಾಡಿಸುತ್ತಿರುವುದು ನಿಮಗೆ ಗೊತ್ತೇ? ನಾನು ಬೇಜವಾಬ್ದಾರಿಯಿಂದ ಮಾತನಾಡುತ್ತಿಲ್ಲ. With information I am speaking. ಈಗ ಹೊಳೆನರಸೀಪುರದಲ್ಲಿ ಏನಾಗುತ್ತಿತ್ತು? ಅಲ್ಲಿ ಪೊಲೀಸರನ್ನು ಸೇರಿಸಿ

ಕೂಡಿ ಹಾಕಿ ಬಿಟ್ಟಿದ್ದರು! Dy. S.P. Excise Inspector, ಇವರಿಬ್ಬರನ್ನೂ ಸೇರಿಸಿ ಅಲ್ಲಿ ಕೂಡಿ ಹಾಕಿದ್ದರು. ಅಲ್ಲಿ ಏಕೆ ಹಿಡಿಯಲಿಲ್ಲ? ಹೊಳೆನರಸೀಪುರ ಟೌನ್ ಅಲ್ಲವೇ? ಹಾಗಾದರೆ, ಅಲ್ಲಿ ಸಾರಾಯಿ ಮಾರಾಟ ಮಾಡುತ್ತಿದ್ದವರನ್ನು ಏಕೆ ಹಿಡಿಯಲಿಲ್ಲ? ಪೊಲೀಸಿನವರ ಕುಮ್ಮಕ್ಕಿಲ್ಲದೇ ಮಾರುತ್ತಿದ್ದರೇ? Excise Departmentನವರ ಕುಮ್ಮಕ್ಕಿಲ್ಲದೇ ಮಾಡುತ್ತಿದ್ದರೇ? ಅಥವಾ ಸರ್ಕಾರದ ಕುಮ್ಮಕ್ಕು ಇಲ್ಲದೇ ಹಾಗೆ ಮಾರುವುದಕ್ಕೆ ಸಾಧ್ಯವಾಗುತ್ತದೆಯೇ? ಅದುವೇ open ಆಗಿ, ಹಾಡು ಹಗಲಲ್ಲೇ, ರಾತ್ರಿ ಹೊತ್ತು, ಇನ್ನೆಲ್ಲೋ ಕದ್ದು ಎಂತಹದೋ ಬೈಲುನರಸಾಪುರದಲ್ಲಿ ಮಾರುತ್ತಿದ್ದಾರೆಂದರೆ, I can understand. ಅಥವಾ ಹುಬ್ಬಳ್ಳಿಯ ಕಮರೀಪೇಟೆಯಲ್ಲಿ ಮಾರಾಟ ಮಾಡುತ್ತಿದ್ದರು ಎಂದರೆ, I can understand. ಹೊಳೆನರಸೀಪುರ, ಹಾಡು ಹಗಲೇ ಅಲ್ಲಿ ಮಾರಾಟ ಮಾಡುತ್ತಿದ್ದಾರೆ. Dy. S.P. ಅವರನ್ನು ಕೂಡಿ ಹಾಕಿದ್ದಾರೆ ನೀವು ರಿಪೋರ್ಟ್ ತರಿಸಿಕೊಳ್ಳಿ, Excise Department Inspector ಅವರನ್ನು ಕೂಡಿ ಹಾಕಿದ್ದಾರೆ. ಮಾನ್ಯ ಸದಸ್ಯರಾದ ಶಿವರಾಮುರವರು ಹೇಳಿದ ರೀತಿಯಲ್ಲಿ ಅವುಗಳನ್ನೆಲ್ಲಾ ತೆಗೆದುಕೊಂಡು, ಓಡಿ ಹೋಗಿ, ಹೊಳೆಗೆ ಎಸೆದಿದ್ದರಿಂದ ಅವೆಲ್ಲವೂ ಹೊಳೆಯಲ್ಲಿ ತೇಲಾಡುತ್ತಿದ್ದವು!

ಶ್ರೀ ಬಿ. ಶಿವರಾಮು:– ಹುಡುಗರೆಲ್ಲರೂ ಅಂಗಡಿಗಳಿಗೆ ನುಗ್ಗಿ, ಎಳೆದುಕೊಂಡು, ದುಡ್ಡನ್ನೂ ತೆಗೆದುಕೊಂಡು ಹೋಗಿಬಿಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ:– How it is happening without anybody's support? ಇದನ್ನು ಪೊಲೀಸಿನವರ ಮೂಲಕ ನಿಲ್ಲಿಸುತ್ತೇವೆಂದು ನೀವೇನಾದರೂ ನಂಬಿಕೊಂಡಿದ್ದರೆ, ಸಾಧ್ಯವಾಗುವುದಿಲ್ಲ. ನಿಲ್ಲಿಸುವುದಾದರೆ, ಈ IML ಅನ್ನೂ ನಿಲ್ಲಿಸಿ. Total ban ಮಾಡಿ. If you are able to mobilize the resources, if you find alternative resources, ban ಮಾಡಿ.

ಶ್ರೀ ಬಿ. ಶಿವರಾಮು:– ಭೂಮಿ ಮಾರಿಕೊಂಡರಾಯಿತು.

ಶ್ರೀ ಸಿದ್ದರಾಮಯ್ಯ:– ಎಲ್ಲವನ್ನೂ ಬ್ಯಾನ್ ಮಾಡಿ. 25 ಲಕ್ಷ ಕೇಸ್‌ಗಳನ್ನು ಮಾರಾಟ ಮಾಡುವುದಕ್ಕೋಸ್ಕರ ಇದನ್ನು ಮಾಡುತ್ತೀರಾ? ನಾವು CL-2 ಕೊಡುತ್ತೇವೆ ಎಂದು ನೀವು ಬಜೆಟ್‌ನಲ್ಲಿ ಹೇಳಿದ್ದೀರಿ. ಕೊಟ್ಟು ಏನು ಮಾಡುತ್ತೀರಿ? ಸುಧಾರಣೆ ಆಗಿಬಿಡುತ್ತದೆಯೇ? ಸಾರಾಯಿ ಕುಡಿಯುವವರ ಸ್ವಾಸ್ಥ್ಯ ಸುಧಾರಣೆ ಆಗಿಹೋಯಿತೆ?

ಅವರ ಬಡತನ ನಿವಾರಣೆಯಾಗಿ ಬಿಡುತ್ತದೆಯೇ? ಅವರ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಿ ಬಿಡುತ್ತದೆಯೇ? ಹಾಗಾದರೆ, ಇವುಗಳನ್ನೂ ನಿಲ್ಲಿಸಿ, If you are really committed to prohibition, you stop, Bring total prohibition.

ಶ್ರೀ ಬಿ.ಎಸ್.ಯಡಿಯೂರಪ್ಪ:- ಇದರ ಬಗ್ಗೆ ಚರ್ಚೆಯಾಗಿ ಸರ್ವಾನುಮತದಿಂದ ಎರಡೂ ಮನೆಗಳಲ್ಲಿ ಒಪ್ಪಿಗೆ ಕೊಟ್ಟರೆ, ಇದರ ಬಗ್ಗೆ....

ಶ್ರೀ ಸಿದ್ಧರಾಮಯ್ಯ:- I am for that. If you are ready to face the consequences, bring prohibition.

ಶ್ರೀ ಬಿ. ಶಿವರಾಮು:- ನಾವೂ ರೆಡಿ ಇದ್ದೇವೆ, ಮಾಡಿ.

(ಕಾಂಗ್ರೆಸ್ ಪಕ್ಷ ಬಹುತೇಕ ಮಾನ್ಯ ಸದಸ್ಯರುಗಳು "ದಯವಿಟ್ಟು ಅದನ್ನು ಮಾಡಿ" ಎಂದು ಒಕ್ಕೊರೊಲಿನಿಂದ ಒತ್ತಾಯಿಸಿದರು)

ಶ್ರೀ ಸಿದ್ಧರಾಮಯ್ಯ:- ಈಗ ಸಾರಾಯಿ ಬ್ಯಾನ್ ಮಾಡುವುದಕ್ಕೆ ನೀವು ನಮ್ಮನ್ನು ಕೇಳಿದ್ದಿರಾ? ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದಿರಾ? ಆದರೂ ನಾವು ಒಪ್ಪಿಗೆ ಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ನಾಲ್ಕಾರು ಬಾರಿ ಒಂದು ಮಾತನ್ನು ಹೇಳಿದ್ದೇನೆ. ಪ್ರಾಮಾಣಿಕವಾಗಿ ನನ್ನ ಕಳಕಳಿಯನ್ನು ಅರ್ಥ ಮಾಡಿಕೊಳ್ಳಿ. ಎಕ್ಸೈಸ್ ಇಲಾಖೆಯನ್ನು ನನ್ನ ಕೈಗೆ ತೆಗೆದುಕೊಂಡಿದ್ದೇ ಹೋದ ವರ್ಷ. ಹೋದ ವರ್ಷವೇ ಸಾರಾಯಿ ನಿಷೇಧ ಮಾಡಬೇಕು ಎಂದು ವಾತಾವರಣ ಮೂಡಿತ್ತು, ಸ್ತ್ರೀಶಕ್ತಿ ಗುಂಪುಗಳು, ಮಠಾಧಿಪತಿಗಳು ಹೇಳುತ್ತಿದ್ದರು. ಆ ಒಂದು ಇಚ್ಛೆಯಿಂದ ನಾನು ಈ ಇಲಾಖೆಯನ್ನು ತೆಗೆದುಕೊಂಡೆ. ಆದರೆ ಒಂದು ವಾತಾವರಣ ಮೂಡಿಸಬೇಕು ಎಂದು ಸಮಯ ಆಯಿತು. ಹೋದ ಬಾರಿ ಅನೇಕ ವಿರೋಧ ಬಂದರೂ whole sale ನ್ನು ರದ್ದು ಮಾಡಿದ್ದೆ. ಇದರಿಂದ 250 ಕೋಟಿ ಹೆಚ್ಚುವರಿ ಬಂತು. ಹಿಂದೆ ಸಾರಾಯಿಯ ಹರಾಜು ಹೇಗೆ ಆಗುತ್ತಿತ್ತು ಎಂಬುದು ನಿಮಗೆಲ್ಲಾ ಗೊತ್ತಿದೆ. ಎಲ್ಲೋ ಕುಳಿತು ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟಕ್ಕೆ ಆಗಬೇಕು ಎಂದು ನಿರ್ಧಾರ ಆಗುತ್ತಿತ್ತು. ಕಳೆದ ಎರಡು ವರ್ಷಕ್ಕೆ ಹೋಲಿಸಿದರೆ ಎಕ್ಸೈಸ್‌ನಲ್ಲಿ double income ಆಗಿದೆ. ಬಿಗಿ ಮಾಡಿದೆವು. ಈ ಬಾರಿ ಧೈರ್ಯ ಮಾಡಿ ನಿಮ್ಮೆಲ್ಲರ ಸಹಕಾರದಿಂದ ಸಾರಾಯಿ ನಿಷೇಧ

ಮಾಡಿದ್ದೇವೆ. ನೀವು ಸಂಪೂರ್ಣವಾಗಿ ಈ ಒಂದು ಸಿ.ಎಲ್-2 ಮುಕ್ತವಾಗಬೇಕು, ರದ್ದಾಗಬೇಕು ಎಂದು ಏನು ಸಲಹೆ ಕೊಡುತ್ತಿದ್ದೀರಿ, ಸಂಪೂರ್ಣ ಪಾನ ನಿಷೇಧ ಆಗಬೇಕೆಂದು ಏನು ಸಲಹೆ ಕೊಡುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ:- Indian and Foreign made liquour ಎಲ್ಲವನ್ನು ಸಂಪೂರ್ಣ ನಿಷೇಧ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ತಾವು ಏನು ಸಲಹೆ ಕೊಟ್ಟಿದ್ದೀರಿ ಇದನ್ನು ನಾವು ಕರ್ನಾಟಕದಲ್ಲಿ ಈ ಮನೆಯಲ್ಲಿ ಕುಳಿತು ನಾವೇ ತೀರ್ಮಾನ ತೆಗೆದುಕೊಳ್ಳುವಂಥದ್ದಲ್ಲ. ಇರತಕ್ಕ ಸತ್ಯವನ್ನು ನಾನು ಹೇಳುತ್ತಿದ್ದೇನೆ. ಈ ದೇಶದ ಎಲ್ಲಾ ಪಾರ್ಲಿಮೆಂಟ್ ಸದಸ್ಯರು ಸೇರಿ ಎಲ್ಲಾ ವಿಧಾನಸಭೆ ಎಲ್ಲಾ ಕಡೆ ಚರ್ಚೆಯಾಗಿ ಒಮ್ಮತದ ಅಭಿಪ್ರಾಯ ಬಾರದೇ ನಾನು ಇಲ್ಲಿ ರದ್ದು ಮಾಡಿಕೊಂಡು ಹೋದರೆ ಹೊರ ರಾಜ್ಯದಿಂದ ಬಂದರೆ ನಿಮ್ಮದು ಏನಾಯಿತು ಎಂದು ನಾಳೆ ನೀವೇ ಕೇಳುತ್ತೀರಿ. ಈ ಒಂದು ಸಲಹೆ ಏನು ಬಂದಿದೆ, ಈ ಮನೆಯಲ್ಲಿ ಚರ್ಚೆಯೇನು ಪ್ರಾರಂಭವಾಗಿದೆ ಇದು ಇಡೀ ದೇಶದ ಉದ್ದಗಲಕ್ಕು, ಪಾರ್ಲಿಮೆಂಟ್‌ನಲ್ಲೂ ಚರ್ಚೆಯಾಗಲಿ, ಅವರು ನಿರ್ಧಾರಕ್ಕೆ ಬಂದಾಗ ನೋಡೋಣ.

ಶ್ರೀ ಬಿ. ಶಿವರಾಂ:- ಈಗ ತಾನೇ ನೀವು ಇಲ್ಲಿ ಒಪ್ಪಿಕೊಂಡಿದ್ದೀರಿ. ನಮ್ಮಗಳ ಒಪ್ಪಿಗೆ ಇದೆಯೆಂದು ಹೇಳಿದೆವಲ್ಲಾ. ಹಳ್ಳಿಯಲ್ಲಿ ಹೆಣ್ಣುಮಕ್ಕಳು ಕುಡಿಯುವುದನ್ನು ಸಂಪೂರ್ಣವಾಗಿ ನಿಲ್ಲಿಸಿ ಎಂದು ಹೇಳುವುದು. ಅವರು ಸಾರಾಯಿ ಮಾತ್ರ ನಿಲ್ಲಿಸಿ ಎಂದು ಹೇಳುವುದಿಲ್ಲ.

ಶ್ರೀ ಸಿದ್ದರಾಮಯ್ಯ:- ನಾವು ಅದಕ್ಕೆ ಒಪ್ಪಿಗೆ ನೀಡದೆ ಸುಮ್ಮನೆ ಕುಳಿತುಬಿಟ್ಟಿದ್ದರೆ ಏನು ಗತಿ? ಆಗಲೆ ಒಪ್ಪಿಗೆ ಕೊಡುತ್ತೇನೆಂದು ನೀವು ಹೇಳಿ ಈಗ ಬೇರೆ ದಾರಿ ಹಿಡಿದುಬಿಟ್ಟಿರಿ?

(ಗೊಂದಲ)

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು:- 50 ವರ್ಷದಿಂದ ನೀವೇನು ಇದರ ಬಗ್ಗೆ ಪ್ರಯತ್ನ ಮಾಡಿದಿರಿ? ತಾವು ನಿಲ್ಲಿಸಲು ಏಕೆ ಪ್ರಯತ್ನ ಮಾಡಲಿಲ್ಲ? ತಾವು ಆ ಪ್ರಯತ್ನವನ್ನೇ ಮಾಡಲಿಲ್ಲ. ಜನರು ಹಾಳಾಗಲಿ, ಕುಡಿಯಲಿ ಎಂದು ತೀರ್ಮಾನ ಮಾಡಿದ್ದಿರಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಕೆ.ಐ.ಎ.ಡಿ.ಬಿ. ಬಗ್ಗೆ ಮಾತನಾಡುವಾಗ ನೀವು ಉತ್ತರ ಕೊಡಿ. ಈಗ ಏಕೆ ಮಾತನಾಡುತ್ತೀರಿ?

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು:- 50 ವರ್ಷದಿಂದ ಸಾರಾಯಿ ನಿಷೇಧ ಮಾಡುವ ಪ್ರಯತ್ನವನ್ನು ತಾವು ಎಂದೂ ಮಾಡಲಿಲ್ಲ.

ಶ್ರೀ ಸಿದ್ದರಾಮಯ್ಯ:- I have not yielded.

ಛೇರ್ಮನ್:- ಅವರು ಮಾತನಾಡಲು ಬಿಡಿ. ಅವರು ಈಲ್ಡ್ ಆಗಿಲ್ಲ.

ಗೊಂದಲ

ಶ್ರೀ ಸಿದ್ದರಾಮಯ್ಯ:- It is too much. ಯಡಿಯೂರಪ್ಪನವರು ಇದ್ದಾರೆ, ಅವರು ಉತ್ತರ ಕೊಡುತ್ತಾರೆ ಕುಳಿತುಕೊಳ್ಳಿ.

ಗೊಂದಲ

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು:- ಸಾರಾಯಿ ನಿಷೇಧ ಮಾಡಿರುವುದನ್ನು ನಾವೆಲ್ಲರೂ ಸ್ವಾಗತ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳನ್ನು, ಉಪಮುಖ್ಯಮಂತ್ರಿಗಳನ್ನು ಹಾಗೂ ಸರ್ಕಾರವನ್ನು ಅಭಿನಂದಿಸಬೇಕು. ಇಷ್ಟು ವರ್ಷಗಳ ಕಾಲ ಸರ್ಕಾರ ಮಾಡಿರುವವರು ಸಾರಾಯಿಯನ್ನು ಇಷ್ಟರವರೆಗೆ ನಿಷೇಧ ಮಾಡಿರಲಿಲ್ಲ.

ಛೇರ್ಮನ್:- ಸರ್ಕಾರದ ಪರವಾಗಿ ಉತ್ತರ ಕೊಡುವಾಗ ಹೇಳಬಹುದು ಬಿಡಿ.

ಗೊಂದಲ

ಶ್ರೀ ಸಿದ್ದರಾಮ್ಮಯ್ಯ:- ನಾನು ಈಲ್ಡ್ ಆಗಿಲ್ಲ.

ಶ್ರೀ ಹೆಚ್.ಸಿ. ಮಹದೇವಪ್ಪ:- ಮಾನ್ಯ ಉಪಮುಖ್ಯಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಸಂಪೂರ್ಣವಾಗಿ ಪಾನ ನಿಷೇಧದಲ್ಲಿ ನಂಬಿಕೆ ಇದೆ. ನಮಗೆ commitment ಇದೆ, ಎಲ್ಲರೂ ಒಪ್ಪಿಕೊಳ್ಳುವುದಾದರೆ ನಾನು ಮಾಡುತ್ತೇನೆ ಎಂಬ ಮಾತನ್ನು ಹೇಳಿದರೆ ಸಂತೋಷ. ಇಡೀ ಪಾರ್ಲಿಮೆಂಟ್‌ನಲ್ಲಿ ಸಂಪೂರ್ಣ ಪಾನ ನಿಷೇಧದ ಬಗ್ಗೆ ಚರ್ಚೆಯಾಗಬೇಕಾದ ಅಗತ್ಯ ಇಲ್ಲ. ಹಿಂದೆ ತಮಿಳುನಾಡು ಸರ್ಕಾರವಿತ್ತು, ಪ್ರಭುದಾಸ್‌ಪಟ್ವಾರಿಯವರು ರಾಜ್ಯಪಾಲರಾಗಿದ್ದರು, ರಾಷ್ಟ್ರಪತಿಗಳು,

ಪ್ರಧಾನ ಮಂತ್ರಿಗಳು, ರಾಜಭವನದಲ್ಲಿ ಒಂದು ಹನಿ ಆಲ್ಕೋಹಾಲನ್ನು consume ಮಾಡದೇ ಇರುವ ರೀತಿ ಮಾಡಿದ್ದರು. ಸಂಪೂರ್ಣ ಪಾನ ನಿಷೇಧ ಮಾಡಿದ್ದರು. ಆ ರೀತಿ ಇದಕ್ಕೆ ಯಾರನ್ನೂ ಕೇಳಬೇಕಾಗಿಲ್ಲ, ಪಾರ್ಲಿಮೆಂಟ್‌ನಲ್ಲೂ ಚರ್ಚೆ ಬೇಕಿಲ್ಲ. ತಮಿಳುನಾಡಿನವರು ಇಡೀ ದೇಶಕ್ಕೆ ಮಾಡಿ ತೋರಿಸಿಕೊಟ್ಟಿದ್ದಾರೆ, ಅದನ್ನು ದಯಮಾಡಿ ಮಾಡಿ.

ಶ್ರೀ ಸಿದ್ದರಾಮಯ್ಯ:- ರಾಷ್ಟ್ರಮಟ್ಟದಲ್ಲಿ ಪಾನ ನಿಷೇಧ ಬರಬೇಕು ಎಂಬ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ. ಇವತ್ತಿಗೂ ಗುಜರಾತ್‌ನಲ್ಲಿ...

ಛೇರ್ಮನ್:- ನೀವೇ ಪಾನ ನಿಷೇಧ ಮಾಡುವ ಹಿನ್ನೆಲೆಯಲ್ಲಿ ಅಲ್ಲಿಗೆ ಪ್ರವಾಸ ಮಾಡಿ ನೀಡಿರುವ ವರದಿ ಇದೆ. ಅದರ ಬಗ್ಗೆ ಸಹ ಸ್ವಲ್ಪ ಹೇಳಿಬಿಡಿ.

ಶ್ರೀ ಸಿದ್ದರಾಮಯ್ಯ:- ಹೇಳುತ್ತೇನೆ. ನೀವು ಹೇಳಿದಂತೆ ನಾವು ಕೊಟ್ಟಿರುವ ವರದಿಯೊಂದು ಇದೆ. ತಾವು ಅದನ್ನು ಓದಿದ್ದೀರಿ ಎಂದು ಅಂದುಕೊಂಡಿದ್ದೇನೆ. ಓದಿದ್ದೀರೋ ನೋಡಿದ್ದೀರೋ ನನಗೆ ಗೊತ್ತಿಲ್ಲ. There is a report. ನಮ್ಮ ಕ್ಯಾಬಿನೆಟ್ ಸಬ್ ಕಮಿಟಿಯವರು ಒಂದು ವರದಿ ಕೊಟ್ಟಿದ್ದೇವೆ. ನಾನು, ನಾಣಯ್ಯನವರು, ದಿವಂಗತ ಬೈರೇಗೌಡರು, ಸಿಂಧ್ಯಾರವರು ಮತ್ತು ಎಕ್ಸೈಸ್ ಇಲಾಖೆಯವರು ನಾವೆಲ್ಲಾ ಗುಜರಾತ್, ಮಹಾರಾಷ್ಟ್ರ, ಕೇರಳಾ, ಆಂಧ್ರ ಪ್ರದೇಶ್, ತಮಿಳುನಾಡು ಈ ಎಲ್ಲಾ ರಾಜ್ಯಗಳಲ್ಲಿ ಪ್ರವಾಸ ಮಾಡಿಕೊಂಡು ಬಂದೆವು. ಆವತ್ತು ಕೂಡ ನಮಗೆ ಒಂದು ಪ್ರಪೋಸ್ ಸಾರಾಯಿ ಬಂದ್ ಮಾಡಬೇಕೆಂದು ಇತು. ಗುಜರಾತ್‌ನಲ್ಲಿ even today total prohibition ಇದೆ. ಏಕೆಂದರೆ ಮಹಾತ್ಮಾ ಗಾಂಧೀಜಿಯವರು ಹುಟ್ಟಿದ ಜಾಗ ಎಂದು ಅಲ್ಲಿ ಆ ರೀತಿ ಇದೆ. ಅಲ್ಲಿ ಸರಿಯಾಗಿ total prohibition ಮಾಡುವುದಕ್ಕೆ ಆಗದಿದ್ದರೂ ಕೂಡ illicit liquor ಎಲ್ಲಾ ಕಡೆ ಸಿಕ್ಕುತ್ತಿದ್ದರೂ ಅದು ನಡೆದುಕೊಂಡು ಹೋಗುತ್ತಿದೆ, because Gandhiji was born in that state. ಆದರೂ ಅವರು ಅದನ್ನು ಮಾಡುತ್ತಿದ್ದಾರೆ. ನಾವು ಅಲ್ಲಿಗೆ ಹೋಗಿದ್ದಾಗ ಶಂಕರ್‌ಸಿಂಗ್‌ವಘೇಲಾರವರು ಮುಖ್ಯಮಂತ್ರಿಗಳಾಗಿದ್ದರು. ನಾವು ಅವರೊಂದಿಗೆ ಒಂದು ಸಭೆ ಮಾಡಿದೆವು. ನಾನು ಅವರಿಗೆ what is your honest opinion about prohibition ಎಂದು ಕೇಳಿದೆ. Because there is total prohibition in Gujarat, what is your sincere opinion and honest opinion ಎಂದು ಕೇಳಿದೆ. ನಾವು ಕರ್ನಾಟಕದಲ್ಲಿ ಸಾರಾಯಿ ban

ಮಾಡಬೇಕೆಂದು ಹೊರಟಿದ್ದೇವೆ ನಿಮ್ಮ ಅಭಿಪ್ರಾಯವೇನು ಎಂದು ಅವರಿಗೆ ಕೇಳಿದೆ. "You please don't do it. It is a hypocracy ಎಂದು ಅವರು ಹೇಳಿದರು. These are the words he used. ಇದು ನನ್ನದಲ್ಲ. ಅವರು ಹೇಳಿದ್ದು. ಆಗ ಅವರು ಬಿ.ಜೆ.ಪಿ. Minister ಆಗಿದ್ದರು. ಈಗ ಅವರು ಕಾಂಗ್ರೆಸ್‌ನಲ್ಲಿ ಇದ್ದಾರೆ. It is a different thing. ಅವರು ಆಗ ಎಲ್ಲಿದ್ದರು, ಈಗ ಎಲ್ಲಿ ಇದ್ದಾರೆ ಎಂಬುದು ಬೇರೆ ವಿಚಾರ. ಅವರು ಇದ್ದಿದ್ದನ್ನು ಹೇಳಿದರು. ನಾವು ರಿಪೋರ್ಟ್ ಏನು ಮಾಡುವುದು, ತಮಿಳುನಾಡಿನಲ್ಲಿ ಕೇಳಿದೆವು, ಆಂಧ್ರದವರು ಹೋಗಿ ವಾಪಸ್ ಬಂದರು, ಕೇರಳದವರು, ತಮಿಳುನಾಡಿನವರು ಹೋಗಿ ವಾಪಸ್ ಬಂದಿದ್ದರು. ಇವೆಲ್ಲದರ ಹಿನ್ನೆಲೆಯಲ್ಲಿ ನಮ್ಮ ಅನುಭವದ ಮೇಲೆ ಅವರ ಅನುಭವದ ಮೇಲೆ ಸಾರಾಯಿ ಒಂದನ್ನೇ ಬ್ಯಾನ್ ಮಾಡುವುದರಿಂದ ಆಗುವುದಿಲ್ಲ, border area ದಲ್ಲೆಲ್ಲಾ illicit liquor ಶುರುವಾಗಿಬಿಡುತ್ತದೆ, ಕಳ್ಳಭಟ್ಟಿ ಶುರುವಾಗಿಬಿಡುತ್ತದೆ, ಐ.ಎಂ.ಎಲ್. switch on ಆಗಿಬಿಡುತ್ತಾರೆ, ಈ ಎಲ್ಲಾ ಕಾರಣಗಳಿಂದ ಮಾಡಲು ಆಗುವುದಿಲ್ಲವೆಂದು ನನ್ನ ವರದಿ ಇದೆ. ಹಾಗೆಂದು ನಾನು Prohibition ಗೆ ವಿರುದ್ಧವಾಗಿ ಇದ್ದೇನೆ ಎಂದು ಅಲ್ಲ. ಆ ವರದಿ ಆದ ಮೇಲೆ ನಾನು 1997–98ರಲ್ಲಿ ಬಜೆಟ್‌ನ್ನು ಮಂಡಿಸುವಾಗ Governors address ನಲ್ಲಿ ಸಾರಾಯಿ ಬ್ಯಾನ್ ಮಾಡುತ್ತೇವೆ ಎಂದು ಬಂದಿತ್ತು. ಆದರೆ ಬಜೆಟ್ ಮಂಡಿಸುವಾಗ ಅದನ್ನು ನಾವು ಈ ಕಾರಣಕ್ಕೋಸ್ಕರವಾಗಿ ಮಾಡಲು ಆಗಲಿಲ್ಲ. That report is available with the Government. ನಾನು ಆ ಸಮಿತಿಗೆ ಅಧ್ಯಕ್ಷನಾಗಿದ್ದಾಗಲೇ ಆ ವರದಿಯನ್ನು ಕೊಟ್ಟಿರತಕ್ಕದ್ದು. ಹಾಗೆಂದು ನಾನು prohibition ಗೆ ವಿರುದ್ಧವಾಗಿದ್ದೇನೆ ಎಂದು ಅಲ್ಲ. Practically it is not possible ಎಂಬ ಕಾರಣಕ್ಕಾಗಿ ಆ ರೀತಿ ಆಯಿತು.

ಪ್ರಕಟಣೆ

ಛೇರ್ಮನ್:- ಮಾನ್ಯ ಉಪಮುಖ್ಯಮಂತ್ರಿಯವರು ವಿಧಾನ ಸಭೆಯ ಮೊಗಸಾಲೆಯಲ್ಲಿ ಭೋಜನವನ್ನು ಏರ್ಪಡಿಸಿರುತ್ತಾರೆ. ಮಾನ್ಯ ಸದಸ್ಯರುಗಳು, ಪತ್ರಕರ್ತರು ಹಾಗೂ ಅಧಿಕಾರಿಗಳು ಸದನ ನಡೆಯುತ್ತಿರುವಾಗಲೇ ಮಧ್ಯದಲ್ಲಿ ಹೋಗಿ ಭೋಜನದಲ್ಲಿ ಪಾಲ್ಗೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ.

ಶ್ರೀ ಸಿದ್ದರಾಮಯ್ಯ:- ಆ ಕಾರಣದಿಂದ ನಾನು ಸಾರಾಯಿ ನಿಷೇಧ ಮಾಡುವುದಕ್ಕೆ ವಿರೋಧವಾಗಿದ್ದೇನೆ ಎಂದು ತಪ್ಪು ತಿಳಿದುಕೊಳ್ಳಬೇಕಾಗಿಲ್ಲ

ಸುಬ್ರಮಣ್ಯನಾಯ್ಡುರವರೆ, ಗುಜರಾತ್‌ನಲ್ಲಿ ಮಾಡಿದ್ದವರು ಅವರೇ ಅಲ್ಲವೇ. ನೀವು ಬಂದು ಮಾಡಿದ್ದೀರ? ಈಗ ಇರುವ ಮೋದಿಯವರು ಬಂದು ಮಾಡಿದ್ದರಾ?

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು:- ನಾನು ತಮ್ಮನ್ನು ಆರೋಪ ಮಾಡಲಿಲ್ಲ. ತಾವು ಒಳ್ಳೆಯ ಉಪಮುಖ್ಯಮಂತ್ರಿಗಳಾಗಿ ಒಳ್ಳೆಯ ಕೆಲಸವನ್ನು ಮಾಡಿದಿರಿ. ಒಳ್ಳೆಯ ಬಜೆಟ್‌ನ್ನು ಮಂಡನೆ ಮಾಡಿದಿರಿ, ರಾಜ್ಯದ ಜನತೆಗೆ ಒಳ್ಳೆಯದನ್ನು ಮಾಡಿದಿರಿ. ತಮ್ಮ ಬಗ್ಗೆ ನಾವೇನು ಕಾಮೆಂಟ್ಸ್ ಮಾಡಲಿಲ್ಲ. ನಾನು ಕೇಳಿದ್ದು ಕಳೆದ 50 ವರ್ಷಗಳಲ್ಲಿ ಯಾವುದೇ ಸರ್ಕಾರಗಳು ಅಧಿಕಾರದಲ್ಲಿ ಇದ್ದರು ಕೂಡ ಆವತ್ತಿನ ದಿವಸ ತಾವು ಅಬ್ಕಾರಿ ಸಚಿವರಾಗಿದ್ದಿರಿ, ಹಣಕಾಸು ಸಚಿವರಾಗಿದ್ದಿರಿ, ನಾನು ವೈಯಕ್ತಿಕವಾಗಿ ತಮ್ಮನ್ನು ಹೇಳುತ್ತಿಲ್ಲ. ಹಿಂದಿನ ಸರ್ಕಾರಗಳು ಈ ರೀತಿಯಾದ ಒಂದು ಅಬಕಾರಿ ನೀತಿಯನ್ನು ಜಾರಿಗೆ ತಂದಿದ್ದರೆ, ಸಾರಾಯಿಯನ್ನು ನಿಷೇಧ ಮಾಡಿದ್ದರೆ ಒಳ್ಳೆಯದಾಗುತ್ತಿತ್ತು, ಅದಕ್ಕಾಗಿ ತಾವು ಈ ಸರ್ಕಾರಕ್ಕೆ ಅಭಿನಂದಿಸಬೇಕೆಂದು ನಾನು ಹೇಳಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಅವರು ಹಿಂದೆ ಏನೂ ಆಗಿಲ್ಲ ಎನ್ನುವಂತಹ ಅಭಿಪ್ರಾಯವನ್ನು ಕೊಡುತ್ತಿದ್ದಾರೆ. ಪ್ರತಿಯೊಂದು ಸರ್ಕಾರ ಕೂಡ ಯಾವ ಐಟಂನಿಂದ, ಅದು ಸೆರೆ ಇರಬಹುದು ಅಥವಾ Toddy ಇರಬಹುದು, ಯಾವುದರಿಂದ ತೊಂದರೆ ಇತ್ತೋ, ಅದನ್ನು ಹಂತ ಹಂತವಾಗಿ ಬ್ಯಾನ್ ಮಾಡಿಕೊಂಡು ಹೋಗಿದ್ದಾರೆ. ಮೊದಲು Toddy ಇಡೀ ರಾಜ್ಯದಲ್ಲಿತ್ತು. ನೀವು ಅದನ್ನು ಬ್ಯಾನ್ ಮಾಡಿದಿರಾ? ಇಲ್ಲ. ಸೆರೆ ಇಲ್ಲವೆಂದು ಹಿಂದಿನ ಕಾಂಗ್ರೆಸ್ ಪಕ್ಷದ ಸರ್ಕಾರ ಅದನ್ನು ಬ್ಯಾನ್ ಮಾಡಿತು. ಮಾನ್ಯ ಪಟೇಲ್‌ರವರಿಗಿಂತ ಹಿಂದೆಯೂ ಕೆಲವು ಭಾಗದಲ್ಲಿ ಬ್ಯಾನ್ ಮಾಡಿದ್ದರು. ಆಮೇಲೆ ಕೆಲವೇ ಭಾಗದಲ್ಲಿ ಇಡಬೇಕೆಂದು ಆಯಿತು. ಪುನಃ ಅದು ಸೆರೆ ಇಲ್ಲವೆಂದು ತಿಳಿದ ಮೇಲೆ ವಿಶೇಷವಾಗಿ ಮಂಗಳೂರು, ಉಡುಪಿ, ಗುಲ್ಬರ್ಗಾ ಮತ್ತು ರಾಯಚೂರು ಈ ಭಾಗದಲ್ಲಿತ್ತು. ಪುನಃ ಅದನ್ನೂ ಬ್ಯಾನ್ ಮಾಡಿಯಾಯಿತು. ಹೀಗೆ ಅದರ ಪರಿಣಾಮಗಳನ್ನು ನೋಡಿಕೊಂಡು ಸರ್ಕಾರಗಳು ಬ್ಯಾನ್ ಮಾಡಿಕೊಂಡೇ ಬಂದಿವೆ. ಈಗಲೂ ಕೂಡ ನೀವು Toddy ಆದಮೇಲೆ ಸೆರೆಗೆ ಬಂದಿದ್ದೀರಿ. ಈ ಸೆರೆ ಸರಿಯಿಲ್ಲವೆಂದು ಹೇಳಿ ಈಗ ಅದನ್ನೂ ಬ್ಯಾನ್ ಮಾಡಿದ್ದೀರಿ. ಮುಂದೆ ಏನಾಗುತ್ತದೋ ನೋಡೋಣ. ಅದಕ್ಕೆ ಯಾರೂ ಏನೂ ಮಾಡಿಲ್ಲ ಎನ್ನತಕ್ಕಂಥದ್ದು ಸರಿಯಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಮಾನ್ಯ ಅಧ್ಯಕ್ಷರೆ,....

ಶ್ರೀ ಸಿದ್ದರಾಮಯ್ಯ:- ಆಗಲೇ ಹೇಳಿದಿರಲ್ಲಾ, ಪುನಃ ವಾದ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಇವತ್ತು ಈ ಸರ್ಕಾರ ಸಾರಾಯಿ ನಿಷೇಧ ಮಾಡುವ ನಿರ್ಧಾರವನ್ನೇನು ತೆಗೆದುಕೊಂಡಿದೆಯೋ, ಅದಕ್ಕಾಗಿ ನೀವು ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಬೇಕೆಂದು ನಾನು ಹೇಳಿದೆ.

ಶ್ರೀ ಸಿದ್ದರಾಮಯ್ಯ:- ನೋಡಿ, ಅದಕ್ಕಾಗಿ ಅಭಿನಂದನೆ ಸಲ್ಲಿಸಿಯೂ ಆಯಿತು, ಸ್ವಾಗತ ಮಾಡಿದ್ದೂ ಆಯಿತು. ಈಗ ಪರಿಣಾಮಗಳ ಬಗ್ಗೆ ಅಂದರೆ ಅದರ consequences, ಅದರ impact ಬಗ್ಗೆ ಮಾತ್ರ ನಾವು ಚರ್ಚೆ ಮಾಡುತ್ತಿದ್ದೇವೆ. ಅವರು ಈ ನಿಷೇಧ ತಂದಿರುವುದರಿಂದ ಜನರ ಮೇಲೆ ಏನು impact ಆಯಿತು? ಇದರ ಪರಿಣಾಮ ಏನಾಗಿದೆ?...

ಶ್ರೀ ಬಿ.ಸಿ. ಪಾಟೀಲ್:- ಮಾನ್ಯ ಸಿದ್ದರಾಮಣ್ಣನವರೆ, ಒಂದು ನಿಮಿಷ....

ಶ್ರೀ ಸಿದ್ದರಾಮಯ್ಯ:- ಬೇಡ, ಆಮೇಲೆ ಮಾತನಾಡಿ, ಈಗ ದಯವಿಟ್ಟು ಕುಳಿತುಕೊಳ್ಳಿ, ಸುಮ್ಮನೆ ನನ್ನ ಸಮಯ ವ್ಯರ್ಥವಾಗುತ್ತದೆ.

ಛೇರ್ಮನ್:- ಮಾನ್ಯ ಪಾಟೀಲ್‌ರವರೆ, ತಾವು ತಮ್ಮ ಸರದಿ ಬಂದಾಗ ಮಾತನಾಡುವಿರಂತೆ.

ಶ್ರೀ ಬಿ.ಸಿ. ಪಾಟೀಲ್:- ಸಾರಾಯಿ ಬಂದ್ ಮಾಡಿದರೂ, ಸಾರಾಯಿಯ equal rate ಇದೆ ಎಂದು CL-2 ಗಳೂ Bar and Restaurant ಗಳಾಗಿ ಬಿಟ್ಟಿವೆ, ಈಗ ಏನು ಮಾಡಬೇಕೆಂದರೆ, ಅವರೆಲ್ಲರೂ ಕುಡಿಯುವುದನ್ನು ನಿಲ್ಲಿಸಬೇಕೆಂದರೆ, ಸದ್ಯದ ಪರಿಸ್ಥಿತಿಯಲ್ಲಿ ಸಾರಾಯಿ, IML ಎರಡೂ ಬ್ಯಾನ್ ಮಾಡಿ, ಸ್ಕಾಚ್ ಮತ್ತು ಬೀರನ್ನಷ್ಟೇ ಬಿಟ್ಟು ಬಿಡಲಿ. ಮೂರನೇ ಹಂತಕ್ಕೆ ಅದನ್ನೂ ಕೂಡ ಬಂದ್ ಮಾಡಬಹುದು.

ಶ್ರೀ ಸಿದ್ದರಾಮಯ್ಯ:- ನಿಮಗೆ ಅವಕಾಶ ಸಿಕ್ಕಾಗ ಅದನ್ನೂ ಮಾಡುವಿರಂತೆ. ಮಾನ್ಯ ಅಧ್ಯಕ್ಷರೆ, ಅದರ impact ಏನಾಗಿದೆ ಎಂಬ ಬಗ್ಗೆ ಹೇಳುತ್ತಿದ್ದೆ. IML ನಿಲ್ಲಿಸಿ ಎನ್ನುವುದನ್ನು ಮಾನ್ಯ ಯಡಿಯೂರಪ್ಪನವರು ಏಕೆ ಒಪ್ಪಿಕೊಳ್ಳಲಿಲ್ಲ? ಇದು ರಾಷ್ಟ್ರಮಟ್ಟದಲ್ಲಿ ಆಗಬೇಕೆಂದು ಅವರು ಏಕೆ ಹೇಳಿದರು? ಅದರ ಪರಿಣಾಮಗಳನ್ನೂ ನೋಡಬೇಕಾಗುತ್ತದೆ. ಒಂದು ಕಡೆ ಸರ್ಕಾರಕ್ಕೆ ಬರುವ ಆದಾಯಕ್ಕೆ ಕೊರತೆ

ಉಂಟಾಗುತ್ತದೆ, ಅದು ಬರುವುದು ನಿಂತು ಹೋಗುತ್ತದೆ. ಇನ್ನೊಂದು ಕಡೆ ಅದರಿಂದ ಆಗತಕ್ಕಂಥ ದುಷ್ಪರಿಣಾಮಗಳನ್ನೂ ನೋಡಬೇಕಾಗಿದೆ. ಸಾರಾಯಿ ನಿಲ್ಲಿಸಿರುವುದರಿಂದ ಆಗಿರತಕ್ಕಂಥ ದುಷ್ಪರಿಣಾಮಗಳೇನು? ಜನರಿಗೆ ಸಾರಾಯಿ ನಿಲ್ಲಿಸಿ ಒಳ್ಳೆಯ ಕೆಲಸ ಮಾಡಲಾಗಿದೆಯೇ? ಅದರಿಂದ ಎಲ್ಲರೂ ಸಾರಾಯಿ ಕುಡಿಯುವುದನ್ನು ನಿಲ್ಲಿಸಿ ಬಿಟ್ಟಿದ್ದಾರೆಯೇ? ಅಥವಾ 90% ಜನ ಸಾರಾಯಿ ಕುಡಿಯುವುದನ್ನು ನಿಲ್ಲಿಸಿದ್ದಾರೆಯೇ? ಹಾಗಿದ್ದರೆ, ಬಹಳ ಒಳ್ಳೆಯದು ಆಯಿತು. ಇನ್ನೊಂದು 10 ಜನ ಹೋಗಿ IML ಕುಡಿಯುತ್ತಾರೆ ಅಥವಾ ಇನ್ನೇನೋ ಮಾಡುತ್ತಾರೆ, ಅವರ ಹತ್ತಿರ ದುಡ್ಡಿದೆ, ಕುಡಿಯುತ್ತಿದ್ದಾರೆ ಎಂದರೆ ಪರವಾಗಿಲ್ಲ, But, ಇದು ಹಾಗಲ್ಲ. ಈ ಚಟ ಇದೆಯಲ್ಲಾ, ಕೆಲವು ಕೆಟ್ಟ ಚಟಗಳು ನಾವು ಕಲಿತುಕೊಂಡಿರುತ್ತೇವಲ್ಲಾ, ಆ ಚಟಗಳನ್ನು ಸುಮ್ಮನೆ ಈ ರೀತಿ ಧಮಕಿ ಹಾಕಿ ಅಥವಾ ಇನ್ನೇನೋ ಮಾಡಿ ಅಥವಾ ನಿರ್ಬಂಧಗಳನ್ನು ಹಾಕಿ ನಿಲ್ಲಿಸುತ್ತೇವೆ ಎನ್ನತಕ್ಕಂಥದ್ದು ನಮ್ಮ ಸಮಾಜದಲ್ಲಿ ಸಾಧ್ಯವಿಲ್ಲದಿರತಕ್ಕಂಥ ಮಾತುಗಳಾಗಿದೆ. ಅನೇಕ ವರ್ಷಗಳಿಂದ ನಾವು ನೋಡಿಕೊಂಡು ಬಂದಿದ್ದೇವೆ. ಈಗ ಹೆಂಡ ನಿಲ್ಲಿಸಿದೆವು. ಹಿಂದಿನ ಸರ್ಕಾರಗಳು ಹೆಂಡ ನಿಲ್ಲಿಸಿದ್ದವು. ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ, ರಾಯಚೂರು ಮತ್ತು ಗುಲ್ಬರ್ಗಾದಲ್ಲಿ ಈಚಲು ಮರಗಳಿವೆ ಎಂದು Toddy ಗೆ ಅವಕಾಶ ಮಾಡಿಕೊಡಲಾಗಿತ್ತು. ಆದರೆ ಅಲ್ಲಿ ಈಚಲು ಮರಗಳೇ ಇರಲಿಲ್ಲ. ರಾಯಚೂರಿನಲ್ಲಿ ಮತ್ತು ಗುಲ್ಬರ್ಗಾದಲ್ಲಿ Chloral Hydrate ಹಾಕಿ ಮಾರಾಟ ಮಾಡುತ್ತಿದ್ದರು. ನಾನು ಅದನ್ನು ನಿಲ್ಲಿಸಿಬಿಟ್ಟೆ, ಅದರ ಬಗ್ಗೆ ದೊಡ್ಡದಾಗಿ ಗಲಾಟೆಯಾಯಿತು, ಅದರ ಬಗ್ಗೆ ಈಗ ಬೇಡ ಬಿಡಿ. ಗಲಾಟೆಯಾಗಿ ಮತ್ತೆ ಇನ್ನೇನೋ ಆಯಿತು. ನಾವು ನಿಲ್ಲಿಸುವುದಿಲ್ಲವೆಂದು ಯಾರೋ ಒಂದಷ್ಟು ಜನ ವಕಾಲತ್ತನ್ನು ತೆಗೆದುಕೊಂಡು ವಾದಿಸಿದರು. ಯಾರು ವಕಾಲತ್ತನ್ನು ತೆಗೆದುಕೊಂಡರೂ ಅದು ಆಗಲಿಲ್ಲ. ಅದು ಮುಗಿದು ಹೋಯಿತು, ಈಗ ಅದನ್ನು ನಿಲ್ಲಿಸಲಾಗಿದೆ. ಆದ್ದರಿಂದ ನಾನೇನು ಹೇಳುತ್ತೇನೆ ಎಂದರೆ, ನಾವೂ ಕೂಡ ಹಳ್ಳಿಯಿಂದ ಬಂದವರು, ಹಳ್ಳಿ ಜನಗಳ ಜೊತೆಗೆ ಇರತಕ್ಕಂಥವರು. ಪಾಪ!, ಬಹಳ ಜನ ಕುಡಿದು ಸತ್ತು ಹೋಗಿರುವವರನ್ನೆಲ್ಲಾ ನೋಡಿರತಕ್ಕಂಥವರು. ಬಹಳ ರೋಗಗಳು ಬಂದು ಸತ್ತಿರುವುದನ್ನೆಲ್ಲಾ ನಾವು ನೋಡಿದ್ದೇವೆ. But, ಅದರ ದುಷ್ಪರಿಣಾಮಗಳಿವೆಯಲ್ಲಾ, ಅದರಿಂದ ಆಗತಕ್ಕಂಥದ್ದು, ಆ ದುಷ್ಪರಿಣಾಮಗಳು ನಿಂತಿಲ್ಲ. ಅದರ ಬಗ್ಗೆ ಒಳ್ಳೆಯದೂ ಕೂಡ ಆಗುತ್ತಿಲ್ಲ. ನಮಗೆ 2000 ಕೋಟಿ ರೂ.ಗಳು ಸಾರಾಯಿಯಿಂದ ಏನು ದುಡ್ಡು

ಬರುತ್ತಿತ್ತು, ಅದೆಲ್ಲಾ ನಷ್ಟವಾಗಿ ಬಿಡುತ್ತದೆ, ಅದನ್ನು ತುಂಬಿಕೊಳ್ಳಬೇಕು ಎನ್ನುವುದು ಸರಿಯಲ್ಲ. ನನ್ನ ಪ್ರಕಾರ ಸಾರಾಯಿ ಬ್ಯಾನ್ ಮಾಡುವುದರಿಂದ ಸರ್ಕಾರಕ್ಕೆ ಏನೂ ನಷ್ಟವಾಗುವುದಿಲ್ಲ. ಸರ್ಕಾರಕ್ಕೆ ಅದರಿಂದ ಒಂದು ರೂಪಾಯಿ ಕೂಡ ನಷ್ಟವಾಗುವುದಿಲ್ಲ. ಜನ IML ಕುಡಿಯುತ್ತಾರೆ, ಅದರಿಂದ ಜಾಸ್ತಿ ದುಡ್ಡು ಬರುತ್ತದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಗಮನ ಹರಿಸಬೇಕು. ಅದರ impact ಏನಾಗಿದೆ ಎಂಬುದನ್ನು ನೋಡಬೇಕು. ಅದರ ವರದಿ ತರಿಸಿಕೊಳ್ಳಬೇಕು. ಯಾವಾಗಲೂ ಒಂದು ಕಾರ್ಯಕ್ರಮ ಮಾಡುವಾಗ, ಬಹಳ ಕೂಲಂಕಷವಾಗಿ ಚರ್ಚೆ ಮಾಡಿ, ಅದರ ಪರಿಣಾಮ, ದುಷ್ಪರಿಣಾಮಗಳು, ಒಳ್ಳೆಯದು, ಕೆಟ್ಟದ್ದು, ಇದನ್ನೆಲ್ಲಾ ಯೋಚನೆ ಮಾಡಿ ಕಾರ್ಯಕ್ರಮಗಳನ್ನು ಮಾಡಿದಾಗ ಮಾತ್ರ ಅದು ಜನರಿಗೆ ಒಳ್ಳೆಯದಾಗುತ್ತದೆ ಹೊರತು ಏನೋ ಪ್ರಚಾರಕ್ಕೋಸ್ಕರ ಕಾರ್ಯಕ್ರಮ ಮಾಡಿದರೆ, ಅದರಿಂದ ರಾಜಕೀಯವಾಗಿ ಲಾಭ ಸಿಗುತ್ತದೆಂದು ಮಾಡಿದರೆ, ಅದರಿಂದ ಜನರಿಗೂ ಒಳ್ಳೆಯದಾಗುವುದಿಲ್ಲ, ಸರ್ಕಾರಕ್ಕೂ ಒಳ್ಳೆಯದಾಗುವುದಿಲ್ಲ, ಈ ನಾಡಿಗೂ ಕೂಡ ಒಳ್ಳೆಯದಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಈ ಸಂದರ್ಭದಲ್ಲಿ ಇನ್ನೊಂದು ಹೇಳಬಯಸುತ್ತೇನೆ. ಈ ಹೆಂಡ-ಸಾರಾಯಿ ಮಾರಾಟ ಮಾಡುತ್ತಿದ್ದವರು ಇದ್ದರಲ್ಲಾ, ಅವರದೆಲ್ಲಾ ಸುಮಾರು 700 ಕೋಟಿ ರೂ.ಗಳು ಬಾಕಿ ಉಳಿದುಕೊಂಡಿತ್ತು. ಆ ಬಾಕಿಯ ಅಸಲು ಕಟ್ಟಿದರೆ ಎಷ್ಟೋ ವರ್ಷಗಳಿಂದ ಉಳಿದಿರತಕ್ಕಂಥ ಬಡ್ಡಿ ಮನ್ನಾ ಮಾಡಲಾಗುವುದು ಎಂದು ಸರ್ಕಾರ ಘೋಷಿಸಿತು. ನಾನು ಇದ್ದಾಗಲೂ ಕೂಡ ಅದರ ಬಗ್ಗೆ one time settlement ಮಾಡಬೇಕೆಂದು ಯೋಚನೆ ಮಾಡಿದ್ದೆ. ಅದನ್ನು ಮಾಡಬೇಕೆಂದು ನಿರ್ಧಾರ ಕೂಡ ಮಾಡಿದ್ದೆ. ಆದರೆ ಅದನ್ನು ಜಾರಿ ಮಾಡಿರಲಿಲ್ಲ. ಈಗ ಇವರು ಅದನ್ನು ಜಾರಿ ಮಾಡಿದರು. ನಾನು ಬಿಡುವಷ್ಟರ ಹೊತ್ತಿಗೆ ಜಾರಿಗೆ ಕೊಡಲಿಲ್ಲ, ಅದು ಹಾಗೆಯೇ ನಿಂತು ಹೋಗಿತ್ತು. ಮಾನ್ಯ ಯಡಿಯೂರಪ್ಪನವರು ಆ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡ ಮೇಲೆ ಅದನ್ನು ಜಾರಿಗೆ ಕೊಟ್ಟರು. ಅವರು ಇವತ್ತು ಈ ಸದನಕ್ಕೆ ಹೇಳಬೇಕು. ಸುಮಾರು 700 ಕೋಟಿ ರೂ.ಗಳು ಬಾಕಿ ಇತ್ತು. ಅದರಲ್ಲಿ ಅಸಲು 200-300 ಕೋಟಿ ರೂ.ಗಳು ಇತ್ತು, ಬಡ್ಡಿ ಅಸಲಿಗಿಂತ ಜಾಸ್ತಿ ಇತ್ತು. ಸಂಪೂರ್ಣ ಅಸಲು ಕಟ್ಟಿಬಿಟ್ಟರೆ ಬಡ್ಡಿ ಮನ್ನಾ ಮಾಡಲಾಗುವುದು ಎಂದು ಹೇಳಿದ್ದಿರಿ. ಇವತ್ತು ಎಷ್ಟು ಅದರಿಂದ ಅಸಲು ಬಂದಿದೆ? ನನ್ನ ಪ್ರಕಾರ 40-50 ಕೋಟಿ ರೂ.ಗಳು ಬಂದಿದ್ದರೆ ಹೆಚ್ಚು. Not more than 40-50 Crores. ಅಸಲು

ಇದ್ದದ್ದೇ nearly 300 Crores. ಆದರೆ ಆ ಯೋಜನೆಯನ್ನು ಜಾರಿಗೆ ಕೊಟ್ಟು, ಬಡ್ಡಿಯೆಲ್ಲಾ ಮನ್ನಾ ಮಾಡಿಬಿಡುತ್ತೇವೆ ಎಂದು ಹೇಳಿದ ಮೇಲೆ, ಅದರಿಂದ ಎಷ್ಟು ಹಣ ಬಂತು? All right, ಅದನ್ನು ವಸೂಲು ಮಾಡಲಿಕ್ಕೆ ಆಗುತ್ತಿರಲಿಲ್ಲ, ಬಹಳ ಕಷ್ಟವಿತ್ತು. ನಾನು ಇದ್ದಾಗಲೂ ಕೂಡ ಪ್ರಯತ್ನ ಮಾಡಿದೆ, ವಸೂಲು ಮಾಡಲಿಕ್ಕೆ ಆಗುತ್ತಿರಲಿಲ್ಲ, ನೀವು ಮಾಡಿದ್ದು ಸರಿ ಆದರೆ 300 ಕೋಟಿ ರೂ.ಗಳ ಅಸಲಿಗೆ 40–50 ಕೋಟಿ ರೂ.ಗಳು ಬಂದಿದ್ದರೆ ಹೆಚ್ಚು, ಅದಕ್ಕಿಂತ ಹೆಚ್ಚು ಬಂದಿಲ್ಲ. That is my information. So, ಅದು ಸರ್ಕಾರಕ್ಕೆ ಬರಬೇಕಾದಂತಹ ಹಣ, ಅದನ್ನು ಸರಿಯಾಗಿ ಯಾರ್ಯಾರು ಕೊಡಬೇಕಾಗಿತ್ತೋ, ಅವರಿಂದ ವಸೂಲು ಮಾಡಲಿಕ್ಕೆ ಸರ್ಕಾರ ವಿಫಲವಾಗಿದೆ. ನಾನು ಏಕೆ ಇದನ್ನೆಲ್ಲಾ ಹೇಳುತ್ತಿದ್ದೇನೆ ಎಂದರೆ, ಎಲ್ಲಿ resources ಅನ್ನು ಹೆಚ್ಚು ಮಾಡಬೇಕಾಗಿತ್ತೋ, ಅಲ್ಲಿ ಮಾಡಬೇಕಾಗಿತ್ತು. ಅದರ ಜೊತೆಗೆ wasteful expenditure cut down ಮಾಡತಕ್ಕಂಥ ಪ್ರಯತ್ನವನ್ನೂ ಕೂಡ ಮಾಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ಇವರು wasteful expenditure ಕಡಿಮೆ ಮಾಡಿ developmental expenditure ಕಡೆಗೆ ಹೆಚ್ಚು ಹಣ ವಿನಿಯೋಗ ಮಾಡಬೇಕು. Non-plan expenditure ಅನ್ನು control ಮಾಡಬೇಕು, ಅಭಿವೃದ್ಧಿ ಕಡೆ, Plan ಕಡೆ ಹೆಚ್ಚು ಹಣ ಖರ್ಚು ಮಾಡಬೇಕು, ಇದನ್ನು ಮಾಡಬೇಕಾಗಿತ್ತು. ಇವರು ಕಳೆದ ವರ್ಷ non-plan expenditure ಅನ್ನು ಕಡಿಮೆ ಮಾಡುವುದರ ಬದಲು ಹೆಚ್ಚು ಮಾಡಿದ್ದಾರೆ. ಸಾಲ ಎತ್ತುವುದನ್ನೂ ಕೂಡ ಹೆಚ್ಚು ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ಸರ್ಕಾರವೇ Economic Survey ನಲ್ಲಿ ಕೊಟ್ಟಿರತಕ್ಕಂಥ ಅಂಕಿ ಅಂಶಗಳನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. 2004–05 ರಲ್ಲಿ non-plan expenditure 25,515 ಕೋಟಿ ರೂ.ಗಳಾಗಿತ್ತು. 2005–06ರಲ್ಲಿ ಅದು 23,586 ಕೋಟಿ ರೂ.ಗಳಾಯಿತು. ಅಂದರೆ non-plan expenditure 2000 ಕೋಟಿ ರೂ.ಗಳಷ್ಟು ಕಡಿಮೆಯಾಯಿತು. ಅದನ್ನು ಕಡಿಮೆ ಮಾಡಿ, ಪ್ಲಾನ್ ಸೈಡ್‌ಗೆ ಹೆಚ್ಚು ಖರ್ಚು ಮಾಡತಕ್ಕಂಥ, ಅಭಿವೃದ್ಧಿ ಹೆಚ್ಚು ಖರ್ಚು ಮಾಡತಕ್ಕಂಥ ಕೆಲಸವನ್ನು ನಾವು ಮಾಡಿದ್ದೆವು. ಆದರೆ ಇವರು 2006–07 ರಲ್ಲಿ, ಮಾನ್ಯ ಯಡಿಯೂರಪ್ಪನವರ ಕಾಲದಲ್ಲಿ non-plan expenditure 23,586 ಕೋಟಿ ರೂ.ಗಳಿಂದ 28,831 ಕೋಟಿ ರೂ.ಗಳಿಗೆ ಏರಿಕೆಯಾಯಿತು. The difference is 3300 ಕೋಟಿ ರೂ.ಗಳು. 2005–06ಕ್ಕೆ ಹೋಲಿಸಿದರೆ 2006–07ರಲ್ಲಿ non-plan expenditure 3300 ಕೋಟಿ ರೂ.ಗಳಷ್ಟು jump ಆಗಿ ಬಿಟ್ಟಿತು. ಮತ್ತೆ ಆರ್ಥಿಕ

ಶಿಸ್ತು ಎಲ್ಲಿ ಉಳಿಯುತ್ತದೆ? Non-developmental expenditure ಎಲ್ಲಿ ಕಡಿಮೆಯಾಯಿತು? Non-plan expenditure ಎಲ್ಲಿ ಕಡಿಮೆ ಆಯಿತು? ಇದನ್ನು ನಾನು ಹೇಳುತ್ತಿರುವ ಅಂಕಿ ಅಂಶಗಳಲ್ಲ, ಇವರೇ ಕೊಟ್ಟಿರುವ 2006–07ರ Economic Servey ನಲ್ಲಿ ಹೇಳಿರುವ ಅಂಕಿ ಅಂಶಗಳು. 2004–05 ರಲ್ಲಿ ಇನ್ನು 500 ಕೋಟಿ ಜಾಸ್ತಿ, ಕಡಿಮೆಯಾಗಿತ್ತು ಈಗ ಮತ್ತೆ ಜಾಸ್ತಿಯಾಗಿದೆ, ಗ್ರಾಫ್ ಕೆಳಗೆ ಬಂದು ಮೇಲಕ್ಕೆ ಬಂದಿದೆ. ಇವರು ನಾವು ರಾಜ್ಯವನ್ನು ಅಭಿವೃದ್ಧಿ ಮಾಡುತ್ತೇವೆ. ನಮ್ಮದೇ ಅಭಿವೃದ್ಧಿ ರಂಗ, ಅಭಿವೃದ್ಧಿ ಬಿಟ್ಟು ನಮಗೆ ಬೇರೆ ಯೋಚನೆ ಮಾಡಿಲ್ಲವೆಂದು ಹೇಳುತ್ತಾರಲ್ಲ, ಇವರೇ ಕೊಟ್ಟಿರುವ ಈ ಅಂಕಿ ಅಂಶಗಳ ಪ್ರಕಾರ ಎಲ್ಲಿ ಮಾಡಿದ್ದಾರೆ, ಇವರು ಏನೂ ಮಾಡಿಲ್ಲ. ಮತ್ತೆ ಇವರು ಅಭಿವೃದ್ಧಿ ಕಡೆ ಖರ್ಚು ಮಾಡಿಲ್ಲ. Non-developmental expenditure ಒಂದು ಕಾಲದಲ್ಲಿ, 2001–02ನೇ ಸಾಲಿನಲ್ಲಿ 63% ಇತ್ತು. That has been reduced to 37%. 63% Non-developmental expenditure ಇದ್ದದ್ದು, ಸಂಬಳ, pension, debt, repayment of interest ಇದೆಲ್ಲಾ ಸೇರಿ Non-developmental expenditure ಎಷ್ಟಿತ್ತು ಎಂದರೆ 63% of the total revenue receipts ಇತ್ತು. ಅದು 63% ನಿಂದ 2004–05ರಲ್ಲಿ 37% ಬಂತು, ಅಂದರೆ ಎಷ್ಟು ಪರ್ಸೆಂಟ್ ಕಡಿಮೆಯಾಯಿತು 26% ಕಡಿಮೆಯಾಯಿತು, 26% ಉಳಿತಾಯವಾಯಿತು, ಅದು Developmental expenditure ಗೆ ವರ್ಗಾವಣೆಯಾಯಿತು. 2004–05 ರಲ್ಲಿ percentage of developmental expenditure to the total expenditure ಇದ್ದದು 56.72%. 2005–06 ರಲ್ಲಿ 62.95%. Development Expenditure ಹೆಚ್ಚಾಯಿತು. ಇವರ ಕಾಲದಲ್ಲಿ 62.95% ರಿಂದ 63% ಇವರ ಕಾಲದಲ್ಲಿ 0.5% ಅಷ್ಟೆ development ಆಗಿರುವುದು. ಹಣಕಾಸು ಏನು ತುಂಬಿ ತುಳುಕುತ್ತಿದೆ, ಯಾರು ಕೇಳಿದರೂ ಬೇಕಾದರೆ ಹಣ ಕೊಡುತ್ತೇವೆ, ಎಲ್ಲಿ ನೋಡಿದರು ಅಭಿವೃದ್ಧಿ, 60 ವರ್ಷದಲ್ಲಿ ಇಂಥ ಸರ್ಕಾರವೇ ಬಂದಿರಲಿಲ್ಲ ಎಂದು ಹೇಳುತ್ತಾರೆ. ಉಲ್ಲಾಳದಲ್ಲಿ, ನಮ್ಮ ಚಾಮುಂಡೇಶ್ವರಿಯಲ್ಲೆಲ್ಲಾ ಚುನಾವಣೆಯಲ್ಲಿ ಹೇಳಿದರು, ನೀವು ಬಡಗಿ ತೆಗೆದುಕೊಂಡು ಹೊಡೆಯುತ್ತಾರೆಂದು ಹೇಳಿದಿರಿ, ಹೋಗಿ ಜನಗಳ ಹತ್ತಿರಕ್ಕೆ, ಅಲ್ಲಿ ಯಾರಿಗೆ ಬಡಗಿ ತೆಗೆದುಕೊಂಡು ಹೊಡೆದರು? ಈ ಅಂಕಿ ಅಂಶ ನಿಮ್ಮದೇ ನಾನು ಹೇಳಿದ್ದಾ? ನಿಮಗೆ ಹೇಳುವುದಕ್ಕೆ ಜನರಿಗೆ ಇದು ಗೊತ್ತಾ? ಜನರು ಆರ್ಥಿಕ ಸಮೀಕ್ಷೆಯನ್ನು ಓದಿಕೊಂಡಿದ್ದಾರಾ?

ಶ್ರೀ ಬಸವರಾಜ ರಾಯರೆಡ್ಡಿ:- ನೋಡಿ, ಕರ್ನಾಟಕ ಮಧ್ಯಮ ವಿತ್ತೀಯ ಯೋಜನೆಯಲ್ಲಿ ಕೊಟ್ಟಿರುವುದರಲ್ಲೇ ಗೊತ್ತಾಗುತ್ತದೆ. 2003–04 ರಲ್ಲಿ ಕ್ರೋಡೀಕೃತೆ ವಿತ್ತೀಯ ಕೊರತೆ 2003–04 Rs. 4876 crores, 2004-05 Rs. 3253 crores, 2005-06 Rs. 2871 crores, 2006-07 Rs. 5225 crores. ಆಮೇಲೆ ಕ್ರೋಢೀಕೃತ ಸಾಲದ ಪ್ರಮಾಣ 2003–04 ರಲ್ಲಿ 50596 ಕೋಟಿ 2004–05 ರಲ್ಲಿ 53750 ಕೋಟಿ, 2005–06 ರಲ್ಲಿ 66506 ಕೋಟಿ, 2006–07ರಲ್ಲಿ 66630 ಕೋಟಿ. ಅಂದರೆ ಇವರು ಮೂರು ವರ್ಷದಲ್ಲಿ ಹದಿನೇಳು ಸಾವಿರ ಕೋಟಿ ಹೆಚ್ಚು ಸಾಲ ಮಾಡಿದರು.

ಶ್ರೀ ಸಿದ್ದರಾಮಯ್ಯ:- ನಾನು ಹೇಳಿರುವುದು ಯಾವ ಫಿಗರ್ಸ್, ನಾನು ತಪ್ಪು ಹೇಳಿದ್ದರೆ ಇಲ್ಲವೆಂದು ಹೇಳಿ ನೋಡೋಣ, ಎಕನಾಮಿಕ್ ಸರ್ವೇನಲ್ಲಿ ಪೇಜ್ ನಂಬರ್ ತೆಗೆದು ನೋಡಿ. ಇದ್ಯಾವುದು? who has presented this? ನೀವಲ್ಲವೇ? ಯೋಜನಾ ಇಲಾಖೆಯಲ್ಲವೇ ? ಕರ್ನಾಟಕ ಸರ್ಕಾರವಲ್ಲವೇ?

ಶ್ರೀ ಬಸವರಾಜ ರಾಯರೆಡ್ಡಿ:- ಸಿದ್ದರಾಮಯ್ಯನವರೆ, ಕನ್ನಡದಲ್ಲೆ ಬೇರೆ, ಇಂಗ್ಲಿಷ್‌ನಲ್ಲಿ ಬೇರೆ ಇದೆ.

ಶ್ರೀ ಸಿದ್ದರಾಮಯ್ಯ:- ಆ ಮಿಸ್ಟೇಕ್‌ಗಳನ್ನೆಲ್ಲಾ ದೊಡ್ಡದು ಮಾಡುವುದಕ್ಕೆ ಹೋಗುವುದು ಬೇಡ, ಅದು ಇರಲಿ ಬಿಡಪ್ಪ.

ಶ್ರೀ ಡಿ.ಆರ್. ಪಾಟೀಲ್:- ಬೇರೆಯವರಿಗೆ ಕಂಪೇರ್ ಮಾಡಿದಾಗ ನಮ್ಮ ಪರ್ಫಾಮೆನ್ಸ್ ಒಳ್ಳೆಯದಿದೆ, ನಮ್ಮದಕ್ಕೆ ಕಂಪೇರ್ ಮಾಡಿದರೆ ಎಡವಿದ್ದಾರೆ.

ಶ್ರೀ ಸಿದ್ದರಾಮಯ್ಯ:- ಹಾಗಾದರೆ, ಅಭಿವೃದ್ಧಿಯಲ್ಲಿ ನಮ್ಮದು ಎಷ್ಟನೇ ಸ್ಥಾನವೆಂದರೆ 7ನೇ ಸ್ಥಾನ, ಅಂದರೆ ಮೊದಲನೇ ಸ್ಥಾನಕ್ಕೆ ನಾವು ಹೊರಟುಹೋಗಿಬಿಟ್ಟಿದ್ದೇವೆಯೇ? 2004–05 ರಲ್ಲಿ, 2005–06ನೇ ಸಾಲಿನಲ್ಲೂ 7ನೇ ಸ್ಥಾನದಲ್ಲಿತ್ತು, ನೀವು ಬಂದ ಮೇಲೆ ಮೊದಲನೆ ಸ್ಥಾನಕ್ಕೆ ಏನು ಜಂಪ್ ಆಗಿಬಿಟ್ಟಿತಾ? ಎಲ್ಲಾ ಬಹಳ ಮೆಚ್ಚಿಗೆಯನ್ನು ಕೊಟ್ಟುಬಿಟ್ಟಿದ್ದಾರೆ. ಎಕನಾಮಿಕ್ ಸರ್ವೇ, ಪೇಜೆ ನಂಬರ್ 286, 287ರಲ್ಲಿ ನಾನು ಈಗ ಹೇಳಿದ Non-plan Expenditure, plan outlay ಇವೆಲ್ಲಾ ಇದೆ, ಓದಿಕೊಳ್ಳಿ, ನಾನು ಇದರಲ್ಲಿರುವುದನ್ನು ಬಿಟ್ಟು ಬೇರೆಯದನ್ನು ಹೇಳಿಲ್ಲ. ನಾವು ಅಭಿವೃದ್ಧಿ ಮಾಡುತ್ತೇವೆ, ನಮ್ಮದು ಅಭಿವೃದ್ಧಿರಂಗ,

ಅದಕ್ಕೋಸ್ಕರ ನಾವು ಬಂದಿರುವುದು, ನಾವು ಯಾವ ತರಹ ಬಂದಿದ್ದೇವೆ, ಆಕಸ್ಮಿಕವಾಗಿ ಬಂದಿದ್ದೇವೆ, ಕಾನೂನು ರೀತಿಯಾಗಿ ಬಂದಿಲ್ಲ, ಜನಗಳ ಅಪ್ಪಣೆ ಪಡೆದು ಬಂದಿಲ್ಲ. ಜನರ ಆಶೀರ್ವಾದದಿಂದೇನು ಬಂದಿಲ್ಲ, ನಾವು ಅಭಿವೃದ್ಧಿ ಮಾಡುತ್ತೇವೆ, ಮಾಡುತ್ತೇವೆಂದು ಹೇಳಿಕೊಂಡು ಈ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಯಾವ ಕಡೆಗೆ ತೆಗೆದುಕೊಂಡು ಹೋಗುತ್ತಿದ್ದೀರಿ, ಈಗಾಗಲೇ ಯಾವ ರೀತಿ ದಾರಿ ತಪ್ಪಿದ್ದಿರೆನ್ನುವುದಕ್ಕೆ ಇದೆಲ್ಲಾ ನಿದರ್ಶನಗಳು.

ಈಗಾಗಲೇ ದಾರಿತಪ್ಪಿ ಹೊರಟುಬಿಟ್ಟಿದ್ದಾರೆ, ಇವರು ಹೀಗೆ ಮುಂದುವರೆದರೆ, ಮತ್ತೆ ಹೆಚ್ಚಾಗಿ, ದಾರಿತಪ್ಪಿ ಕರ್ನಾಟಕ ರಾಜ್ಯದಲ್ಲಿ ಮತ್ತೆ ಅನಾಹುತವಾಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ, ಆದುದರಿಂದ ಈಗಲಾದರೂ ಸರ್ಕಾರ ಎಚ್ಚರವಹಿಸಬೇಕಾಗುತ್ತದೆ. Non-plan Expenditure, Wasteful Expenditure ಅನ್ನು cut down ಮಾಡುವುದು ಇದು ಒಂದು, ಯಡಿಯೂರಪ್ಪನವರು ಮಾತಾಡಿದರೆ ನಮಗೆ ಬಹಳ ದುಡ್ಡು ಬಂದಿದೆ ಎಂದು ಹೇಳುತ್ತಾರೆ. ಈಗ 2005–06ನೇ ಸಾಲಿಗೆ ಕಂಪೇರ್ ಮಾಡಿದರೆ 7651 ಕೋಟಿ ಹೆಚ್ಚಾಗಿದೆ. ಆದರೆ ನಿಮ್ಮ ಪ್ರಯತ್ನದಿಂದ ರಾಜ್ಯ ಸರ್ಕಾರದ್ದು, ನಮ್ಮ ಟ್ಯಾಕ್ಸ್ ರೆವಿನ್ಯು, 4383 ಕೋಟಿ ಬಂದಿದೆ. ಕೇಂದ್ರ ಸರ್ಕಾರದಿಂದ ಬಂದಿರುವುದು ಎಷ್ಟಿದೆ? ನಮ್ಮ ಪಾಲಿನ ಕೇಂದ್ರ ಸರ್ಕಾರದ ತೆರಿಗೆ ಕೆಳಗೆ 1087 ಕೋಟಿ ಹೆಚ್ಚಾಗಿದೆ. ಅದನ್ನು ನೀವೇ ನಾವೇ ಮಾಡಿದ್ದೆಂದು ಹೇಳುವುದಕ್ಕಾಗುತ್ತದೆಯೆ? ಆಮೇಲೆ ಕೇಂದ್ರ ಸರ್ಕಾರದಿಂದ ಬರುವ ಗ್ರಾಂಟ್ಸ್ 2181 ಕೋಟಿ ಜಾಸ್ತಿಯಾಗಿದೆ. ಹಿಂದಿನ ವರ್ಷಕ್ಕೆ ಹೋಲಿಕೆ ಮಾಡಿದರೆ ಕಳೆದ ವರ್ಷ ಕೇಂದ್ರ ಸರ್ಕಾರದಿಂದ 3268 ಕೋಟಿ ಹೆಚ್ಚುವರಿಯಾಗಿ ಬಂತು. ಇದನ್ನೂ ನಾವೇ ಮಾಡಿದ್ದೇವೆಂದು, 7651 ಕೋಟಿ ಹೆಚ್ಚಾಗಿ ಬಂದಿದೆ ಎಂದು ಹೇಳಿದರೆ, ಕೇಂದ್ರ ಸರ್ಕಾರ ಕೊಟ್ಟವರಿಗೆ ಈ ಬಗ್ಗೆ ಕ್ರೆಡಿಟ್ ಕೊಡುವಂತಿಲ್ಲವೋ ಅವರು ನಮಗೆ ಷೇರ್‌ನಲ್ಲಿ ಹೆಚ್ಚಾಗಿ ಕೊಟ್ಟಿದ್ದಾರೆ, ಗ್ರಾಂಟ್ಸ್‌ನಲ್ಲಿ ಹೆಚ್ಚಾಗಿ ಕೊಟ್ಟಿದ್ದಾರೆ, I am not happy with this.

ಕೇಂದ್ರ ಸರ್ಕಾರದಿಂದ ನಮ್ಮ ಶೇರು ಇನ್ನು ಜಾಸ್ತಿ ಬರಬೇಕೆಂದು ಹೇಳುವವನು, ಇನ್ನು ಸರ್ವಿಸ್ ಟ್ಯಾಕ್ಸ್‌ನಲ್ಲಿ ಜಾಸ್ತಿ ಕೊಡಬೇಕೆಂದು ಹೇಳುವವನು ನಾನು. ಇವತ್ತು ಸರ್ವಿಸ್ ಟ್ಯಾಕ್ಸ್‌ನಲ್ಲಿ ನಮ್ಮ ರಾಜ್ಯದ ಪಾಲು ಇನ್ನು ಸರಿಯಾಗಿ ಸಿಗುತ್ತಿಲ್ಲ, Finance Minister, Empower Committeeನಲ್ಲಿ ತೀವ್ರವಾಗಿ ನಾವು

ಒತ್ತಾಯ ಮಾಡಬೇಕು. ನಾನು ಇರುವಾಗ, Empower Committee ಸಭೆಗೆ ಹೋಗಿದ್ದಾಗ ಕೇಂದ್ರ ಹಣಕಾಸು ಸಚಿವರಾದ ಚಿದಂಬರಂ ಅವರು Empower Committeeನಲ್ಲಿ ನಾನು Principally ಒಪ್ಪಿಕೊಂಡೆದ್ದೇನೆಂದು ಹೇಳಿದ್ದರು. ಸಂವಿಧಾನವನ್ನು ತಿದ್ದುಪಡಿ ಮಾಡಿ, ಸರ್ವಿಸ್ ಟ್ಯಾಕ್ಸ್‌ನಲ್ಲು ಕೂಡ ರಾಜ್ಯಗಳಿಗೆ ಪಾಲು ಕೊಡುತ್ತೇವೆಂದು ಒಪ್ಪಿಕೊಂಡಿದ್ದರು, ಅದು ಇವತ್ತಿನವರೆಗೆ ಆಗಿಲ್ಲ. ಒಕ್ಕೂಟದ ವ್ಯವಸ್ಥೆನಲ್ಲಿ ಅದಕ್ಕೆ ಎಲ್ಲಾ ರಾಜ್ಯಗಳ ಹಣಕಾಸಿನ ಸಚಿವರು ಸೇರಿದಂತೆ ಒಂದು Empower Committee ಮಾಡಿದ್ದಾರೆ, ಅಲ್ಲಿ ನಮಗೆ ಹೆಚ್ಚು ತೆರಿಗೆ ಬರುವುದನ್ನು ಮಾಡಬೇಕು, ಇವತ್ತು ಸರ್ವಿಸ್ ಟ್ಯಾಕ್ಸ್ ಹೆಚ್ಚು ಬೆಳೆಯುತ್ತಿದೆ, ಇವತ್ತು service sector is growing like anything. GDPಗೆ more than 50%, nearly 55% , ಸರ್ವಿಸ್ ಸೆಕ್ಟಾರ್‌ನಿಂದ ಬರುತ್ತಿದೆ. That means it is growing. Highest income ಬರುತ್ತಿದೆ, ಸರ್ವಿಸ್ ಸೆಕ್ಟಾರ್‌ನಲ್ಲಿ ನಮ್ಮ

2–00 ಪಿ.ಎಂ.

ಪಾಲು ಬರಬೇಕು. ಆ ಪಾಲನ್ನು ಡಿಮಾಂಡ್ ಮಾಡಿ, ಅದನ್ನು ಪಡೆದುಕೊಳ್ಳಲಿಕ್ಕೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಲಿಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಕೊಡುವುದಕ್ಕೆ ಬಯಸುತ್ತೇನೆ. ಇವತ್ತು ನಾವು ರಿಸೋರ್ಸಸ್ ಮೊಬಲೈಸ್ ಮಾಡಿಕೊಳ್ಳತಕ್ಕಂತಹ ಯಾವುದೇ ಪ್ರಯತ್ನಗಳನ್ನು ಮಾಡದೇ ನಾವು reforms ಮಾಡದೇ ಇರುವುದರಿಂದ ಅದರಿಂದ ಬರತಕ್ಕಂಥಾದ್ದು ಒಳ್ಳೆಯದಾಗಿರುವುದನ್ನು ನಾವು ಮಾಡಿದೆವು ಎಂದು ಹೇಳಿಕೊಂಡು ಬೆನ್ನು ತಟ್ಟಿಕೊಂಡು, ರಾಜ್ಯದಲ್ಲಿ ಬಹಳ ಬೆಳೆ ಬಂದು ಬಿಟ್ಟಿದೆ ಎಂದು ಹೇಳಿ ನಾವು ಸಿಕ್ಕಾಪಟ್ಟೆ ಚೆಲ್ಲುತ್ತೇವೆಂದು ಹೋದರೆ, ಇವರು ಖರ್ಚು ಮಾಡತಕ್ಕಂತಹ ರೀತಿ ಯಾವ ತರಹ ಇದೆ, ಅನೇಕ ಕಾರ್ಯಕ್ರಮಗಳನ್ನು ಇವರಿಗೆ ಜಾರಿ ಮಾಡುವುದಕ್ಕಾಗಲಿಲ್ಲ. 2006–07ರಲ್ಲಿ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ಕೊಡಲಿಲ್ಲ. ಬಜೆಟ್ ಭಾಷಣದಲ್ಲಿ ಹೇಳಿದ್ದೂ ಹಣ ಬಿಡುಗಡೆ ಮಾಡಲಿಲ್ಲ. BJP ಯವರು ಬಹಳ appreciate ಮಾಡಿದರು. ಕನ್ನಡ ಸಂಸ್ಕೃತಿ ಸಂರಕ್ಷಣೆ ಪ್ರಾಧಿಕಾರ ಎಂದು ಒಂದು ಮಾಡಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಕೋಲಾರ ಜಿಲ್ಲೆಗೆ ಡ್ರಿಪ್ ಇರ್ರಿಗೇಷನ್‌ಗೆ 100% subsidy ಎಂದು ಹೇಳಿದರು, ಇವತ್ತಿಗೂ ಕೂಡ 80% ಹಣವನ್ನು ಬಿಡುಗಡೆ ಮಾಡಲಿಲ್ಲ. ಹೆಸರಿಗೆ 100% ಸಬ್ಸಿಡಿ ಎಂದು ಹೇಳಿದರು.

ಶ್ರೀ ಸಿದ್ದರಾಮಯ್ಯ:– ಕನ್ನಡ ಸಂಸ್ಕೃತಿ ಸಂರಕ್ಷಣಾ ಪ್ರಾಧಿಕಾರ ಮಾಡುತ್ತೇವೆಂದು

5 ಕೋಟಿ ರೂಪಾಯಿ ಬಜೆಟ್‌ನಲ್ಲಿ ಇಟ್ಟರು. ನಾನು ಒಂದು ಉದಾಹರಣೆ ಹೇಳಿದೆ. ಹೋದ ವರ್ಷ 2006-07 ರಲ್ಲಿ ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರು. ಅದು ಇಡೀ ರಾಜ್ಯಕ್ಕೆ ಮಾಡಿದ್ದು. BJP ಯ ಮಾನ್ಯ ಸದಸ್ಯರುಗಳೆಲ್ಲಾ ಇದನ್ನು ಓದುವಾಗ ಬೆಂಚು ತಟ್ಟಿದ್ದೇ ತಟ್ಟಿದ್ದು. ಎರಡು ಕೋಟಿ ರೂಪಾಯಿ ಘೋಷಣೆ ಮಾಡಿ ಅದನ್ನು ಎಲ್ಲಿ ತೆಗೆದುಕೊಂಡು ಹೋಗಿ ಖರ್ಚು ಮಾಡಿದರು ಅವರು? ಶಿಕಾರಿಪುರದಲ್ಲಿ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಖರ್ಚು ಮಾಡಿದರು ಅಷ್ಟೆ. ಈ ವರ್ಷ ಒಂದು ರೂಪಾಯಿಯೂ ಖರ್ಚು ಮಾಡಲಿಲ್ಲ. ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಅದನ್ನು ಶಿಕಾರಿಪುರಕ್ಕೆ ಖರ್ಚು ಮಾಡಿ, ಇನ್ನು ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಿಲ್ಲ, ಈ ವರ್ಷ that programme has been stopped. Where is that programme? ಅದನ್ನೇಕೆ announce ಮಾಡಿದಿರಿ, ಏಕೆ ಚಪ್ಪಾಳೆ ಗಿಟ್ಟಿಸಿಕೊಂಡಿರಿ, ಇಲ್ಲೆಲ್ಲ ಮೇಜು ತಟ್ಟಿಸಿಕೊಂಡಿರಿ. ಕನ್ನಡ ನಾಡಿನ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಎಂದು ಹೇಳಿದಿರಿ. ಎಲ್ಲಿದೆ, ಬರೀ ಶಿಕಾರಿಪುರದಲ್ಲಿ ಒಂದು ದೇವಸ್ಥಾನ ಜೀರ್ಣೋದ್ಧಾರ ಆದ ತಕ್ಷಣ ಕನ್ನಡ ನಾಡಿನ ಸಂಸ್ಕೃತಿ ಸಂರಕ್ಷಣೆ ಆಯಿತಾ? ಬಡವರ ಹೆಣ್ಣುಮಕ್ಕಳಿಗಾಗಿ 'ಭಾಗ್ಯಲಕ್ಷ್ಮಿ' ಯೋಜನೆಯ ಬಗ್ಗೆ ಬಹಳ ದೊಡ್ಡ ಪ್ರಚಾರ ಮಾಡಿದಿರಿ. ನಾನೂ ಮಾಡಿದ್ದೆ ಅದನ್ನು. 'ನಮ್ಮ ಮಗಳು ಮತ್ತು ನಮ್ಮ ಶಕ್ತಿ' ಎಂದು ನಾನೂ ಆ ಕಾರ್ಯಕ್ರಮ ಮಾಡಿದ್ದೆ. ನೀವೇನು ಮೊದಲು ಮಾಡಿದ್ದು ಅಲ್ಲ ಅದು. 'ನಮ್ಮ ಮಗಳು ಮತ್ತು ನಮ್ಮ ಶಕ್ತಿ' ಯೋಜನೆಯಲ್ಲಿ ಹೆಣ್ಣು ಮಕ್ಕಳಿಗಾಗಿ 10,000 ರೂಪಾಯಿಗಳನ್ನು ಇಡುವುದು. ಅದೂ ನಾವು ಹೋದ ಮೇಲೆ ಜಾರಿ ಆಗಲಿಲ್ಲ. ಇವರೂ ಮಾಡಿದರು, ಎಲ್ಲೋ ಟ್ರಸ್ಟ್ ಮಾಡಿ ದುಡ್ಡು ಇಟ್ಟಿದ್ದೇನೆ ಎಂದು ಹೇಳಿದಿರಿ. ಅದು ಜಾರಿಯಾಯಿತಾ? ಏನಾಯಿತು ಅದು? ಯಾವುದೋ ಒಂದು ಕಂಪನಿಗೆ ಕೊಡುವುದಕ್ಕಾ? ಇವತ್ತಿನವರೆಗೂ ಮಾಡುವುದಕ್ಕಾಗಲಿಲ್ಲ. What happened to your programme, much publicized programme? What happened to it? ಬರೀ ಪ್ರಚಾರಕ್ಕೋಸ್ಕರ ಏಕೆ ಇಂತಹವೆಲ್ಲ ಮಾಡುತ್ತೀರಿ? ಹಾರ್ಟಿಕಲ್ಚರ್ ಮಿಷನ್‌ಗೆ ಇವರಿಗೆ ಬಂದ ದುಡ್ಡು ಖರ್ಚು ಮಾಡುವುದಕ್ಕಾಗಲಿಲ್ಲ. ಕೋಲಾರಕ್ಕೆ subsidy ಕೊಡುವುದಕ್ಕೆ ದುಡ್ಡು ಕೊಡುವುದಕ್ಕಾಗಲಿಲ್ಲ. ದುಡ್ಡು ತುಂಬಿ ತುಳುಕುತ್ತಿದೆ. ಹಾರ್ಟಿಕಲ್ಚರ್ ಮಿಷನ್‌ನಲ್ಲಿ 89 ಕೋಟಿ ಬಂದಿದೆ. ಎರಡು ವರ್ಷಗಳಲ್ಲಿ ಬರೀ 29 ಕೋಟಿ ಖರ್ಚು ಮಾಡಿದ್ದಾರೆ. ಬಂದಿರುವ ದುಡ್ಡಿನಲ್ಲಿ ಇನ್ನು 50 ಕೋಟಿ

ಖರ್ಚು ಮಾಡುವುದಕ್ಕಾಗಲಿಲ್ಲ. ಬಂದಿರುವ ದುಡ್ಡು ಖರ್ಚು ಮಾಡುವುದಕ್ಕಾಗಲಿಲ್ಲ. ಸರ್ಕಾರ ಏನು ಬಹಳ ಸಾಧನೆ ಮಾಡಿ ಬಿಟ್ಟಿದೆ, 60 ವರ್ಷಗಳಲ್ಲಿ ಯಾರೂ ಮಾಡಿರಲಿಲ್ಲವೆಂದು ಹೇಳುತ್ತಾರೆ. ಸಾಧನಾ ಸಮಾವೇಶ ಮಾಡುತ್ತಾರೆ. ಕಳೆದ ವರ್ಷ SCP ಯಲ್ಲಿ 1459 ರೂ. ಕೋಟಿ ಇಟ್ಟಿದ್ದೇವೆ. ಎಷ್ಟು ಬಿಡುಗಡೆ ಮಾಡಿದ್ದೀರಿ, 729 ಕೋಟಿ ರೂ. till February end. 1459 ಕೋಟಿ ಇಟ್ಟಿದ್ದಾರೆ. ದಲಿತರಿಗೆ ಯಾರೂ ಮಾಡಿರಲಿಲ್ಲ ಅಂತಹ ಕಾರ್ಯಕ್ರಮ ಮಾಡಿದ್ದಾರೆ. ದುಡ್ಡೇ ಬಿಡುಗಡೆ ಮಾಡಲಿಲ್ಲ. Till February end 729 ಕೋಟಿ ರೂ. ಬಿಡುಗಡೆ ಮಾಡಿದ್ದೀರಿ. ಗಂಗಾ ಕಲ್ಯಾಣ ಕಾರ್ಯಕ್ರಮ, ಬಡವರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರ ಜನರ ಬಗ್ಗೆ ಇವತ್ತಿನವರೆಗೂ ತೀರ್ಮಾನ ಮಾಡುವುದಕ್ಕಾಗಲಿಲ್ಲ. ಆ ಸರ್ವೀಸ್‌ಗೆ ಒಂದು ಲಕ್ಷ ರೂಪಾಯಿಗಿಂತ ಜಾಸ್ತಿ estimate ಆದರೆ ಕೊಡುವುದಕ್ಕಾಗುವುದಿಲ್ಲ. ದುಡ್ಡು ಇದೆಯಲ್ಲಾ ಎರಡು ಲಕ್ಷ ರೂ ಅವರಿಗೆ ಕೊಡಿ. ಒಂದೂವರೆ ಲಕ್ಷ ರೂ. ಆಗಲಿ ಕೊಡಿ. ಏಕೆ ಕೊಡುವುದಿಲ್ಲ, 2005–06, 2007–08ರ ಹಣವನ್ನೂ ಕೊಟ್ಟಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: Taskforce ಎಂದು ಮಾಡಿ ಎಲ್ಲೆಲ್ಲಿ ಬೋರ್‌ವೆಲ್‌ಗಳು ಇಲ್ಲ, ಅಲ್ಲಲ್ಲಿ ಕೊರೆಯಿರಿ ಎಂದು ಬೋರ್‌ವೆಲ್ ಕೊರೆಸಿ ಇನ್ನೂ ಹಣ ಕೊಟ್ಟಿಲ್ಲ. ಯಾರೂ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ಬರುತ್ತಿಲ್ಲ.

ಶ್ರೀ ಸಿದ್ದರಾಮಯ್ಯ: ಹಣ ಕೊಡದೇ ಇರುವುದರಿಂದ ಯಾರೂ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ಬರುತ್ತಿಲ್ಲ. ಗಂಗಾ ಕಲ್ಯಾಣ ಸರ್ವೀಸ್ ಇಲ್ಲ. ಮಾನ್ಯ ರೇವಣ್ಣನವರು ಇಲ್ಲ. ಇಲ್ಲಿಯೇ ಅಸೆಂಬ್ಲಿಯಲ್ಲಿ ಉತ್ತರ ಕೊಟ್ಟರು. ಒಂದು ಲಕ್ಷ ರೂಪಾಯಿಗಿಂತ ಜಾಸ್ತಿಯಾದರೆ ನಾನು ಕೊಡುವುದಿಲ್ಲ. ಬಡವರ ಬಗ್ಗೆ ಮಾತನಾಡುವುದಕ್ಕೆ ಇವರಿಗೆ ಯಾವ ನೈತಿಕ ಹಕ್ಕು ಇದೆ? ಯಾರಿಗಾಗಿ ಅದು ಮಾಡಿರುವುದು?

ಶ್ರೀ ಅಂಜನಮೂರ್ತಿ: ಕುಟೀರ ಜ್ಯೋತಿ ಮತ್ತು ಭಾಗ್ಯ ಜ್ಯೋತಿ disconnect ಮಾಡಿದರು. ಇದು ಸರ್ಕಾರದ ಸಾಧನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಛೇರ್ಮನ್‌ರೇ, ಈಗ ಬಡವರ ಬಗ್ಗೆ ಬಹಳ ಧಾರಾಳವಾಗಿ ಮಾತನಾಡುವುದು ಕಾರ್ಯಕ್ರಮದ ಮೂಲಕ ತೋರಿಸಬೇಕು. ಇಲ್ಲಿ establish ಆಗಬೇಕು. ನಾವು ಬಡವರ ಪರ ಇದ್ದೇವೆ, ರೈತರ ಪರ ಇದ್ದೇವೆ. ನೀವು ದುಡ್ಡೇ ಬಿಡುಗಡೆ ಮಾಡದೇ ರೈತರಿಗೆ ಸಾಲ ಸಿಗದೇ, ರೈತರ ಪರ ಇದ್ದೇವೆ, ರೈತರ ಆತ್ಮಹತ್ಯೆ ನಿಲ್ಲದೇ ರೈತರ ಪರ

ಇದ್ದೇವೆ, ದಲಿತರ ಪರ ಇದ್ದೇವೆ, ಎಂದು ಹೇಳುತ್ತೀರಿ. ಹಿಂದುಳಿದ ವರ್ಗಗಳ ಆಯೋಗವನ್ನು 18 ತಿಂಗಳ ನಂತರ ರಚನೆ ಮಾಡಿದ್ದೀರಿ. ಹಿಂದುಳಿದವರ ಬಗ್ಗೆ ಒಳ ಮೀಸಲಾತಿ ಮಾಡಬೇಡಿ ಎಂದು ಯಾರಾದರೂ ಹೇಳಿದ್ದರಾ? Did any body oppose it? ಮಾತಿನಲ್ಲಿ ಹೇಳುವುದರಿಂದ ಒಳ ಮೀಸಲಾತಿ ಬಂದು ಬಿಡುತ್ತದಾ? ಇವತ್ತಿನವರೆಗೆ ಮಾಡಲಿಲ್ಲ. ಈಗ ಒಬ್ಬ ಅಧ್ಯಕ್ಷರನ್ನು ಹಾಗೂ ಸದಸ್ಯರನ್ನು ಮಾಡಿದ್ದೀರಿ. ಅದೂ ಇನ್ನೂ full fledged Commission ಆಗಿಲ್ಲ. Backward Class Commission ನಲ್ಲಿ 23 ಕೋಟಿ ರೂಪಾಯಿ ಕೊಳೆಯುತ್ತಾ ಬಿದ್ದಿದೆ. ಇವತ್ತಿನವರೆಗೆ ಜಾತಿವಾರು ಸರ್ವೇ ಮಾಡುವುದಕ್ಕಾಗಲಿಲ್ಲ. Backward Class ಬಗ್ಗೆ ಬಹಳ ಪ್ರೀತಿ ತೋರಿಸುವುದು, now you are committing. ಎಲ್ಲಿದೆ? It is mandatory 17 ತಿಂಗಳ ಕಾಲ ಸರ್ಕಾರ ನಿದ್ದೆ ಮಾಡಿಬಿಟ್ಟಿತು. Backward Class commission ಇವತ್ತಿನವರೆಗೂ ಸಂಪೂರ್ಣವಾಗಿ ಆಗಲಿಲ್ಲ. ಒಬ್ಬರು ಸದಸ್ಯರು, ಒಬ್ಬರು ಅಧ್ಯಕ್ಷರಾಗಿದ್ದಾರೆ. ಇನ್ನು ನಾಲ್ಕು ಜನರಿಗೆ ಏಕೆ ಮಾಡುವುದಕ್ಕಾಗಲಿಲ್ಲ? 18 ತಿಂಗಳು ಬೇಕಾ ಕಮಿಷನ್ ಮಾಡುವುದಕ್ಕೆ? ಯಾರನ್ನಾದರೂ ಇವರಿಗೆ ಇಷ್ಟ ಬಂದವರಿಗೆ ಮಾಡಿಕೊಳ್ಳಲಿ. ಒಟ್ಟಿನಲ್ಲಿ ನೇಮಕ ಮಾಡಬೇಕೋ ಬೇಡವೋ? ಹಿಂದುಳಿದ ಜನಾಂಗದ ಬಗ್ಗೆ, ಈ ವರ್ಷ ಜಲಶ್ರೀ ಕಾರ್ಯಕ್ರಮಕ್ಕೆ ಎಷ್ಟು ದುಡ್ಡು ಇಟ್ಟಿದ್ದೀರಿ? Irrigationಗೆ ಎಷ್ಟು ದುಡ್ಡು ಇಟ್ಟಿದ್ದೀರಿ? 3145 ಕೋಟಿ ಈ ಸಾರಿ ಇಟ್ಟಿದ್ದೇವೆಂದು ಹೇಳುತ್ತೀರಿ. 17.69 ಇಟ್ಟಿದ್ದೀರಿ. ಅದು estimated. ಅಷ್ಟು ಖರ್ಚು ಮಾಡುತ್ತೀರಿ ಬಿಡುತ್ತೀರಿ ಅದೆಲ್ಲಾ ನನಗೆ ಗೊತ್ತಿಲ್ಲ. 17% ನಲ್ಲಿ 2005–06ರಲ್ಲಿ ಖರ್ಚಾಗಿರುವುದು 24.48. 2004–05ರಲ್ಲಿ 29% ನೀವು ಎಷ್ಟು ಇಟ್ಟಿದ್ದೀರಿ, 17.69% ಈ ವರ್ಷದ 2007–08ರಿಂದ 11ನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುತ್ತಿದೆ. 11ನೇ ಪಂಚವಾರ್ಷಿಕ ಯೋಜನೆಯ ಗಾತ್ರ Planning Commission approve ಮಾಡಿರುವುದು 96,703 ಕೋಟಿ ರೂ. ಐದು ವರ್ಷಗಳಲ್ಲಿ ನಾವು Irrigation Sectorಗೆ allocate ಮಾಡಿರುವುದು 24,700 ಕೋಟಿ ರೂ. ಈ ವರ್ಷ ಮೊದಲನೇ ವರ್ಷ ನೀರಾವರಿಗೆ ನೀವು ಎಷ್ಟು ಇಡಬೇಕಾಗಿತ್ತು, More than 5,000 crores. 3,145 ಕೋಟಿ ರೂ. ಅದು ಹೇಳಿರುವುದು. It is estimate projection. ಈ ವರ್ಷಕ್ಕೆ ನಾವು ಇಷ್ಟು ಖರ್ಚು ಮಾಡುತ್ತೇವೆಂದು ಹೇಳಿರುವುದು. 2004–05ರ figure ಅದು. 2005–06 ಖರ್ಚಾಗಿರುವುದು 26.48 ಕೋಟಿ ರೂ. Irrigationಗೆ ಹಣ ಇಡದೇ Production ಹೇಗೆ ಆಗುತ್ತದೆ? Irrigation ಗೆ ಹಣ ಕೊಡಲೇ ಇಲ್ಲ. ಇನ್ನು ಬೇಕಾದಷ್ಟು pending project ಗಳಿವೆ. ಇನ್ನು ಸಾವಿರಾರು ಕೋಟಿ ರೂಪಾಯಿಗಳು

ಖರ್ಚು ಮಾಡಬೇಕು. ಏಕೆ ಖರ್ಚು ಮಾಡುವುದಿಲ್ಲ? ಈ ವರ್ಷ ನನ್ನ ಪ್ರಕಾರ ಇವತ್ತಿನ 2007-08ರ ಪ್ರೈಸಸ್ ಪ್ರಕಾರ ಎಷ್ಟು ಇಡಬೇಕಾಗುತ್ತದೆ, 24,700 ಕೋಟಿ ರೂ. ನೀವು 11ನೇ ಪಂಚವಾರ್ಷಿಕ ಯೋಜನೆಯಲ್ಲಿದ್ದರೆ ನೀವು ಎಷ್ಟು ಕೋಟಿ ಇಡಬೇಕು?

ನೀವು ಹಿಂದಕ್ಕೆ ಹೋಗುತ್ತಿದ್ದೀರಲ್ಲ. Irrigation potential ಹೇಗೆ create ಆಗುತ್ತದೆ? Agriculture production ಹೇಗೆ create ಆಗುತ್ತದೆ? ನಮ್ಮ ಪಾಲಿನ ನೀರಿನ ಹಕ್ಕಗಳನ್ನು ಹೇಗೆ ರಕ್ಷಣೆ ಮಾಡಿಕೊಳ್ಳುವುದಕ್ಕೆ ಆಗುತ್ತದೆ? Cauvery dispute ಇದೆ. Krishna dispute ಇದೆ. ನೀವು ಹಣವನ್ನೇ ಖರ್ಚು ಮಾಡದೇ ಹೋದರೆ ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ? ನಾನು ಎಲ್ಲಿ ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಇದು ಅಭಿವೃದ್ಧಿ ಅಲ್ಲವೇ? ದೇವಸ್ಥಾನಗಳು ಹಾಗೂ ಮಠಗಳಿಗೆ ಯಾರಾದರೂ ಕೇಳಿದ್ದರಾ? ಸಿದ್ಧರೂಢಾ ಮಠಕ್ಕೆ ಒಂದು ಕೋಟಿ ರೂಪಾಯಿ ಕೊಟ್ಟಿದ್ದೀರಿ. ಬೆಳಗಾಂನವರು ಹಾಗೂ ಹುಬ್ಬಳ್ಳಿಯವರು ಜಗಳಕ್ಕೆ ಅಂಟಿಕೊಂಡು ಬಿಟ್ಟಿದ್ದಾರೆ. ಯಾರಾದರೂ ಕೇಳಿದರಾ? ನೀವು ದರ್ಗಾಗಳಿಗೆ ಏಕೆ ಕೊಡಲಿಲ್ಲ? ವಕ್ಫ್ Board ಇರುವುದು ಏಕೆ? ಅಲ್ಲಿಗೆ ಕೊಟ್ಟು ಕೊಡಬಹುದಾಗಿತ್ತಲ್ಲ. ಅಲ್ಲಿ ಯಾರೂ ಅರ್ಜಿ ಕೇಳಿಲ್ಲ. ರಾಮಚಂದ್ರಪುರ, we are ommitted to secularism. ಎಲ್ಲರೂ ಕೂಡ, ನೀವು ಇಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ನಾವು constitution ನಲ್ಲಿ secular state ಅನ್ನು ಸ್ಥಾಪನೆ ಮಾಡಬೇಕು ಎಂದು we are all committed. ನಾವೆಲ್ಲಾ constitution ಅನ್ನು uphold ಮಾಡುತ್ತೇವೆ. ಇವತ್ತು ರಾಮಚಂದ್ರಪುರದಲ್ಲಿ ಏನು ನಡೆದಿದೆ? ಅದು ಒಂದು ಧಾರ್ಮಿಕ ಕಾರ್ಯಕ್ರಮ. ನಿಜ, ಗೋಮಾತೆ ಪೂಜೆ ಮಾಡುತ್ತಾರೆ. ಅಲ್ಲಿ agriculture ಬಗ್ಗೆ ಚರ್ಚೆಯಾಯಿತೇ ಅಲ್ಲಿ ಪಶು ಸಂಗೋಪನೆ ಬಗ್ಗೆ ಚರ್ಚೆಯಾಯಿತೇ? ವಿಶ್ವ ಸಮ್ಮೇಳನವನ್ನು Agriculture Universityನಲ್ಲಿ ಮಾಡಬಹುದಾಗಿತ್ತಲ್ಲ. veterinary University ಇದೆಯಲ್ಲ ಅಲ್ಲಿ ಮಾಡಬಹುದಾಗಿತ್ತಲ್ಲ. ಅವರು ಕೇಳಿಲ್ಲ, ಏನಿಲ್ಲ. ಕುರಿಗಳಿಗೆ ಔಷಧಿ ಇಲ್ಲ. ಅವುಗಳು ರೋಗ ಬಂದು ಸಾಯುತ್ತಿವೆ. ದನಕರುಗಳಿಗೆ ಔಷಧಿ ಇಲ್ಲ. ಅದಕ್ಕೆ ಕೊಡುವುದಕ್ಕೆ ನಿಮ್ಮ ಹತ್ತಿರ ದುಡ್ಡಿಲ್ಲ. ರಾಮಚಂದ್ರಪುರ ವಿಷಯದಲ್ಲಿ ನಾವೇನು ವಿರೋಧ ಇಲ್ಲ. ನಾವೇನು ಮಠಗಳ ವಿರೋಧ ಇಲ್ಲ. ಯಾವುದಕ್ಕೆ ವಿರೋಧ ಇಲ್ಲ. ಜನಶ್ರೀ ವಿಮೆಗೆ, ಈ ವರ್ಷ 2007-08ಕ್ಕೆ ನೀವು ಎಷ್ಟು ದುಡ್ಡು ಇಟ್ಟಿದ್ದೀರಿ ಎಂದು ಹೇಳಿ. ನಾನು 2005-06ರಲ್ಲಿ ಇಟ್ಟಂತಹ ದುಡ್ಡು ಇನ್ನೂ ಖರ್ಚಾಗಿಲ್ಲ. ಇನ್ನೂ ಅದು ಪೂರ್ಣ ಮುಗಿದಿಲ್ಲ. ಈ ಸಾರಿ ನೀವು ಎಷ್ಟು ಕೋಟಿ ರೂಪಾಯಿ ಇಟ್ಟಿದ್ದೀರಿ ಹೇಳಿ.

ಶ್ರೀ ರೇವು ನಾಯಕ್ ಬೆಳಮಗಿ: ಈ ವರ್ಷ ಇಡೀ ನಮ್ಮ ಭಾರತ ದೇಶದಲ್ಲಿ ಇಲ್ಲಿ ಜನಶ್ರೀ ವಿಮೆನಲ್ಲಿ ಕುರಿಗಳು ಇಲ್ಲ. ಡೆಲ್ಲಿಯಲ್ಲಿ ಶರದ್ ಪವಾರ್ ಮೀಟಿಂಗ್ ಮಾಡಿದಾಗ ಅಲ್ಲಿ ಪ್ರಸ್ತಾವನೆಯಾದಾಗ ನಮ್ಮ ರಾಜ್ಯದಿಂದ ಜನಶ್ರೀ ವಿಮೆಯನ್ನು ಕುರಿಗಳಿಗೆ ಮಾಡುವುದಕ್ಕೆ ತರಿಸಿಕೊಂಡಿದ್ದಾರೆ. ಪ್ರಪ್ರಥಮವಾಗಿ ಎಂಟು ಲಕ್ಷ ಕುರಿಗಳಿಗೆ ಜನಶ್ರೀ ವಿಮೆ ಜಾರಿಯಲ್ಲಿ ತಂದಿದೆ. ಅದಕ್ಕೆ 4,70,000.00 ಅನುದಾನವನ್ನು ಇಟ್ಟಿದ್ದೇವೆ. ಎರಡು ಲಕ್ಷ ಕುರಿಗಳಿಗೆ...

ಶ್ರೀ ಸಿದ್ದರಾಮಯ್ಯ: ಈ ವರ್ಷದ್ದು ಹೇಳಿ, ಅದು ಹಳೆಯದು. ಕುಳಿತುಕೊಳ್ಳಿ ನೀವು ಹೇಳಿದ್ದನ್ನು ನಾವು ಒಪ್ಪಿಕೊಂಡಿದ್ದೇವೆ. ಈ ವರ್ಷ ಇಲ್ಲ ಬಿಡಿ.

ಶ್ರೀ ರೇವು ನಾಯಕ್ ಬೆಳಮಗಿ: ವರ್ಷ ಚಾಲ್ತಿಯಲ್ಲಿದೆ. 1,00,900 ಕುರಿಗಳಿಗೆ ಜನಶ್ರೀ ವಿಮೆ ... continue ಆಗಿದೆ.

ಶ್ರೀ ಸಿದ್ದರಾಮಯ್ಯ: Thank you very much. ಈಗ ನಾನೇನು ಹೇಳುತ್ತೇನೆಂದರೆ ಜನಶ್ರೀ ಎನ್ನುವ ಕಾರ್ಯಕ್ರಮ 2005–06ರಲ್ಲಿ announce ಮಾಡಿದ್ದು. Am I correct? ಮಾನ್ಯ ಮೀರಾಜುದ್ದೀನ್‌ರವರು ಪಶುಸಂಗೋಪನಾ ಮಂತ್ರಿಯಾಗಿದ್ದಾಗ ಅದನ್ನು ಮಾಡಿದರು. ಅದನ್ನು ಆ ವರ್ಷ ಜಾರಿ ಮಾಡಲಿಲ್ಲ. 2006–07ರಲ್ಲಿ ಪ್ರಾರಂಭವಾಯಿತು. ಈಗ ನೀವು ಎಷ್ಟೋ ಸಾವಿರ ಕುರಿಗಳಿಗೆ ಮಾಡಿದ್ದೇವೆಂದು ಹೇಳಿದ್ದೀರಲ್ಲ, ಅದೂ ಕೂಡ ನೀವು ಎಷ್ಟು ಮಾಡಿದ್ದೀರಿ? ಬರೀ ಹತ್ತು ಕುರಿಗಳಿಗೆ ಮಾತ್ರ, ನೀವು ಎಲ್ಲಾ ಕುರಿಗಳಿಗೆ ಏಕೆ ಮಾಡುವುದಕ್ಕಾಗುವುದಿಲ್ಲ? ಎಲ್ಲಾ ಕುರಿಗಳಿಗೆ ಮಾಡಿ. ಅವರ ಹತ್ತಿರ ಎಷ್ಟೆಷ್ಟು ಕುರಿಗಳು ಇವೆ ಅವೆಲ್ಲದಕ್ಕೂ ಮಾಡಿ. ನಾನು programme ನಲ್ಲಿ ಹತ್ತು ಕುರಿಗಳಿಗೆ ಮಾಡಿ ಎಂದು ಹೇಳಿರಲಿಲ್ಲ. ನನ್ನ 2005–06ರ ಬಜೆಟ್ ಸ್ಪೀಚ್ ತೆಗೆದು ನೋಡಿ. ಅದರಲ್ಲಿ ನಾನು ಹತ್ತು ಕುರಿಗಳಿಗೆ ಮಾತ್ರ ಸೀಮಿತ ಎಂದು ಹೇಳಿದ್ದೆನಾ? ಅದಕ್ಕೆ grants ಹೆಚ್ಚು ಮಾಡಿ. ಅದಕ್ಕೆ allocation ಹೆಚ್ಚು ಕೊಡಿ. ಎಲ್ಲಾ ಕುರಿಗಳಿಗೆ ಮಾಡಿ. It is a developmental programme ಕುರಿ ಸಾಕುವವರಿಗೆ ಸಹಾಯ ಮಾಡುವುದು, ನಿಮಗೆ ಸಹಾಯ ಮಾಡುತ್ತಿದ್ದೇನೆ. ನಿಮಗೆ ಹೆಚ್ಚು ಮಾಡಿಕೊಡಲಿ ಎಂದು ಹೇಳುತ್ತಿದ್ದೇನೆ. ಅದು ಬೇಡವೇ?

ಶ್ರೀ ಎ.ವಿ. ಉಮಾಪತಿ: Medicineಗೆ ದುಡ್ಡಿಲ್ಲದೆ ನೀಲಿ ನಾಲಿಗೆ ಆಗಿ ಕುರಿಗಳು ಸಾಯುತ್ತಿವೆ.

ಶ್ರೀ ಸಿದ್ದರಾಮಯ್ಯ: Blue tongue ಖಾಯಿಲೆ ಎಂದು ಅದಕ್ಕೆ ಕರೆಯುತ್ತಾರೆ. ಆ ರೋಗ ಶೀತದ ಕಾಲದಲ್ಲಿ ಬರುತ್ತದೆ. ಈ ಬಾರಿ ಮಳೆಗಾಲದಲ್ಲಿ ಅನೇಕ ಕುರಿಗಳು ಸತ್ತು ಹೋದವು. ಅವರಿಗೆ ಪರಿಹಾರ ಕೊಡುವುದಕ್ಕೆ ನಿಮ್ಮ ಕೈಯಲ್ಲಿ ಆಗುತ್ತದೆಯೇ? ಕೊಡುವುದಕ್ಕಾಗುವುದಿಲ್ಲ. ಪರಿಹಾರ ಕೊಟ್ಟಿದ್ದೀರಾ? ನಿಮ್ಮ ಈ ಜನಶ್ರೀ ಕಾರ್ಯಕ್ರಮದ ಪ್ರಕಾರ ಯಾರಿಗಾದರೂ ಪರಿಹಾರ ಸಿಕ್ಕಿದೆಯಾ? ಮಳೆಗಾಲದಲ್ಲಿ ಪ್ರವಾಹ ಬಂದು ಬಹಳ ಕುರಿಗಳು ಸತ್ತು ಹೋದವು. ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಆ ಕಾರ್ಯಕ್ರಮ ಮಾಡಿದಾಗ ಆ ಕಾರ್ಯಕ್ರಮ ಬರೀ ಪ್ರಚಾರಕ್ಕೆ ಹೇಳಿಕೊಳ್ಳುವುದಕ್ಕೋಸ್ಕರ ಇರಬಾರದು. ಅದರಿಂದ ಜನರಿಗೆ ಹೆಚ್ಚು ಅನುಕೂಲವಾಗತಕ್ಕಂಥ, ಜನರಿಗೆ ತಲುಪತಕ್ಕಂಥ ಕೆಲಸವಾಗಬೇಕು. ಈಗ food, ನೀವು unit system ಮಾಡಿದ್ದೀರಿ, ಏಕೆ unit system ಮಾಡಿದ್ದೀರಿ? ಏಕೆಂದರೆ subsidy cut down ಮಾಡುವುದಕ್ಕೆ. 2005-06ರಲ್ಲಿ 730 ಕೋಟಿ ರೂಪಾಯಿ ಖರ್ಚಾಗಿದ್ದರೆ, ಕಳೆದ ವರ್ಷ estimate expenditure 2,713 ಕೋಟಿ ರೂಪಾಯಿ. ಈಗ ಕಡಿಮೆ ಮಾಡಿದ್ದಾರೆ. ಏಕೆ? ಅದು ಬಡವರ ಕಾರ್ಯಕ್ರಮ ಅಲ್ಲವೇ? ಏಕೆ ಕಡಿಮೆ ಮಾಡಿದಿರಿ? ಮೊದಲು ಇದ್ದಾಗ unit system ಬಗ್ಗೆ ಮಾನ್ಯ ಮಹದೇವಪ್ರಸಾದ್‌ರವರು ಮಂತ್ರಿಯಾಗಿದ್ದಾಗ ನಾವೇ ಮಾತನಾಡಿದ್ದೆವು.ಆದರೆ ಈಗ ಅದಕ್ಕೆ ವ್ಯಾಪಕವಾಗಿ unit system ಬೇಡ ಎಂದು ವಿರೋಧ ಇದೆ. ಏಕೆಂದರೆ 12 ವರ್ಷದೊಳಗೆ ಇರುವವರನ್ನು ತೆಗೆದುಕೊಳ್ಳುವುದಿಲ್ಲ. 12 ವರ್ಷದೊಳಗೆ ಇರುವಂತಹ ಮಕ್ಕಳಿಗೆ food grains ಕೊಡುವುದಿಲ್ಲ. ಉಳಿದವರಿಗೆ per headನಂತೆ ಗೋಧಿ ಒಂದು ಕೆಜಿ ಕೊಡುತ್ತೇವೆ. ಸಕ್ಕರೆ ಒಂದು ಕಾರ್ಡ್‌ಗೆ ಒಂದು ಕೆಜಿ ಕೊಡುತ್ತೇವೆ. ಸೀಮೆ ಎಣ್ಣೆ ನಾಲ್ಕು ಲೀಟರ್ ಕೊಡುತ್ತೇವೆ. ಹಳ್ಳಿಯಲ್ಲಿ ಸೀಮೆ ಎಣ್ಣೆ ಸಿಗುತ್ತಿಲ್ಲ. ಸಕ್ಕರೆ ಸಿಗುತ್ತಿಲ್ಲ. ಮಹದೇವ ಪ್ರಸಾದ್ ನೀವು ಮಂತ್ರಿಯಾಗಿದ್ದಿರಿ. ಅನೇಕ ಕಡೆ ಸೀಮೆಎಣ್ಣೆ ಇಲ್ಲ. ನಾನು ಈಗ ನನ್ನ constituencyನಲ್ಲಿ ಪಾದಯಾತ್ರೆ ಮಾಡುತ್ತಿದ್ದೇನೆ. ಮಾನ್ಯ ಕಾರಜೋಳರವರು ನಾವು ಎಲ್ಲಾ DCಗೆ ಕೊಟ್ಟು ಬಿಟ್ಟಿದ್ದೇನೆ. ಅವರೆಲ್ಲಾ ವಿತರಣೆ ಮಾಡಿಬಿಡುತ್ತಾರೆ. 12.50 ಲಕ್ಷ ಇತ್ಯರ್ಥ ಮಾಡಿಬಿಟ್ಟಿದ್ದೇವೆ ಎಂದು ಹೇಳಿದಿರಿ. ಆದರೆ ಇದುವರೆಗೆ ಒಂದು ಕಾರ್ಡ್ ಕೊಟ್ಟಿಲ್ಲ. ಇವತ್ತು ಏನಾಗಿ ಬಿಟ್ಟಿದೆ ಪರಿಸ್ಥಿತಿ ಎಂದರೆ APL cardನಲ್ಲಿ ಅಕ್ಕಿ ಕೂಡ ಬರುತ್ತಿಲ್ಲ. APL cardನಲ್ಲಿ 9.50 ರೂಪಾಯಿಗೆ ಅಕ್ಕಿ ಇತ್ತು. Catagory -G ಎಂದು ಮಾಡಿದ್ದಾರೆ. ಅದು ಇನ್ನೂ take off ಆಗಿಲ್ಲ. ಎಷ್ಟು ದಿನವಾಯಿತು? 18 ತಿಂಗಳಾಯಿತು. ಎಲ್ಲಾ computer ಮಾಡಿ computer ಮೂಲಕ ಕೊಡುತ್ತೇವೆಂದು ಹೇಳಿ ಆಯಿತು.

ಅದಕ್ಕೆ ದುಡ್ಡು ಖರ್ಚಾಯಿತು. ಎಲ್ಲಾ ಆಯಿತು. ಆದರ ಬಡವರಿಗೆ ಮಾತ್ರ ಅಕ್ಕಿ ಸಿಗಲಿಲ್ಲ. ಇವತ್ತು BPL card ಗೆ ನಮಗೆ ಸಿಕ್ಕಿಲ್ಲವೆಂದು 65 ಲಕ್ಷ ಅರ್ಜಿಯನ್ನು ಕೊಟ್ಟಿದ್ದರು. ಆದರೆ ಇವತ್ತಿನವರೆಗೂ ಕೊಟ್ಟಿಲ್ಲ. ಎಲ್ಲಾ ಕಡೆ ಹಾಹಾಕಾರ ಇದೆ. 60 ರೂಪಾಯಿಗೆ 20 ಕೆಜಿ ಅಕ್ಕಿ ಸಿಗುತ್ತಿದ್ದ ಕಡೆ, ಅವರಿಗೆ BPL card ಸಿಗದೆ ಇದ್ದಲ್ಲಿ, ಅವರಿಗೆ APL card ಕೊಟ್ಟುಬಿಟ್ಟಿದ್ದರೆ ಅವರು ಹೊರಗಡೆ ಅಕ್ಕಿ ತೆಗೆದುಕೊಳ್ಳಬೇಕಾದರೆ ಎಷ್ಟು ದುಡ್ಡು ಕೊಡಬೇಕು? 15 ರೂಪಾಯಿ ಅಥವಾ 16 ರೂಪಾಯಿ ಇರಬೇಕು.

ಶ್ರೀ ಬಿ. ಶಿವರಾಂ: ನಮ್ಮ ಹೊಳೆ ನರಸೀಪುರಕ್ಕೆ 101% ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ: ನೀವು lucky.

ಶ್ರೀ ಬಿ. ಶಿವರಾಂ: ಇನ್ನು ಜಿ–9 ಸೇರಿದರೆ 109% ಆಗುತ್ತದೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡು ಬಿಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ: ನೀವು ರೇವಣ್ಣನವರನ್ನು ಜಿಲ್ಲಾ ಮಂತ್ರಿಯಾಗಿ ಪಡೆದುಕೊಂಡಿರುವುದಕ್ಕೆ ನಿಮಗೆ ...

ಶ್ರೀ ಬಿ. ಶಿವರಾಂ: ಅದು ಹೊಳೆ ನರಸೀಪುರಕ್ಕೆ ಮಾತ್ರ ಅದೇ ನನ್ನ ಗ್ರಹಚಾರ. ನನ್ನ ಕ್ಷೇತ್ರಕ್ಕೆ ಇನ್ನು 63% ಅಷ್ಟೇ.

(ಗೊಂದಲ)

ಶ್ರೀ ಸಿದ್ದರಾಮಯ್ಯ : It is a very serious matter. ನಿಮ್ಮ ಕ್ಷೇತ್ರದಲ್ಲಿ ಕೂಡ ಆಗಿರಬೇಕು. It is a problem throughout the State.

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಈ card ಸಮಸ್ಯೆ ಇವತ್ತು ಆಗಿರುವುದಿಲ್ಲ. ಆ ಕಾಂಗ್ರೆಸ್ ಸರ್ಕಾರದಲ್ಲಿ ಆ cardಗಳನ್ನು ಬದಲಾವಣೆ ಮಾಡುವುದಕ್ಕೆ ಹೋಗಿ ಅದು ಆಗಿರುವ ದುರಂತ ಈಗ ಅದು ನಮ್ಮ ತಲೆ ಮೇಲೆ ಬಂದು ಕುಳಿತರೆ ಅಷ್ಟೇ. ಹಿಂದೆ ಕಾಂಗ್ರೆಸ್ ಸರ್ಕಾರದಲ್ಲಿ ಇದ್ದಾಗ ...

(ಗೊಂದಲ)

ಶ್ರೀ ಸಿದ್ದರಾಮಯ್ಯ: APL ನವರಿಗೆ BPL, BPL ನವರಿಗೆ APL, ಇದನ್ನು ಯಾವಾಗ ಸರಿಪಡಿಸುವುದು? ಇವರು ಬಡವರ ಬಗ್ಗೆ ಏನು ಮಾತನಾಡುವುದು? ಗ್ರಾಮ ವಾಸ್ತವ್ಯ, ಅಲ್ಲಿ ಯಾರೂ ಅರ್ಜಿ ಕೊಟ್ಟಿಲ್ಲವೇ? ಒಂದು ತಿಂಗಳಲ್ಲಿ ಸರಿ ಮಾಡುತ್ತೇವೆಂದು ಎಷ್ಟು

ಸಲ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು? ಮಾನ್ಯ ಆಹಾರ ಮಂತ್ರಿಗಳು ಎಷ್ಟು ಬಾರಿ ಹೇಳಿದರು. ಇದನ್ನು ಇವತ್ತಿನವರೆಗೂ ಮಾಡುವುದಕ್ಕೆ ಆಗಿಲ್ಲ. I dint know ಇವರ ಕೈಯಲ್ಲಿ ಮಾಡುವುದಕ್ಕೆ ಆಗುತ್ತದೋ ಇಲ್ಲವೋ, ಎಂದು ನನಗಂತೂ ಅನುಮಾನ ಬಂದಿದೆ. ಬಡವರ ಹಾಹಾಕಾರವಿದೆ. ಇವತ್ತು 20K.G.ಅಕ್ಕಿ 60 ರೂಪಾಯಿಗಳಿಗೆ ಸಿಗುತ್ತಿತ್ತು. ಇವತ್ತು ಅದೇ 20K.G. ಅಕ್ಕಿಗೆ 300 ರೂ. 400 ರೂಗಳನ್ನು ಕೊಡಬೇಕು. ಮಾರ್ಕೆಟಿಗೆ ಹೋಗಿ ಅಕ್ಕಿಯನ್ನು ತೆಗೆದುಕೊಂಡರೆ, 15ರೂ, 20ರೂಪಾಯಿಗಳನ್ನು ಕೊಡಬೇಕು. ಅಂದ ಮೇಲೆ 300 ರೂಪಾಯಿಗಳಿಂದ 400 ರೂಪಾಯಿಗಳವರೆಗೆ ಕೊಡಬೇಕು. ಇದನ್ನು ಕೂಲಿ ಮಾಡುವವನು ಎಲ್ಲಿಂದ ತರುತ್ತಾನೆ? ಇದು ಅವನ ಹೊಟ್ಟೆಯ ಮೇಲೆ ಹೊಡೆದ ಹಾಗೆ ಅಲ್ಲವೇ?

(ಈ ಹಂತದಲ್ಲಿ ಶ್ರೀಮತಿ ಭಾಗೀರಥಿ ಟಿ. ಮರುಳಸಿದ್ಧನಗೌಡ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಈ ಸರ್ಕಾರ ಬಡವರ ಬಗ್ಗೆ ಏನು ಮಾಡಿದ್ದೀರಿ? ಇದು ಬಡವರ ಹೊಟ್ಟೆಯ ಮೇಲೆ ಹೊಡೆಯುವ ಕೆಲಸ ಅಲ್ಲವೇ? ಇವತ್ತಿನವರೆಗೂ ಕೊಡದೇ ಹೋದರೆ, ಈಗ ನಾವು ಮಾಡುತ್ತೇವೆಂದು, D.C ಗಳಿಗೆ ಕೊಡುತ್ತೇವೆಂದು ಹೇಳುತ್ತೀರಿ. ಅದನ್ನು ಅಧಿಕಾರಿಗಳೇ ಎಲ್ಲವನ್ನು ಹಾಳು ಮಾಡಿ ಇಟ್ಟಿರುವುದು. ನಾನು ಹೇಳುವುದೇನೆಂದರೆ, ಕೂಡಲೇ ಮತ್ತೆ ಮತ್ತೆ ನೀವು ಇದನ್ನು 15 ದಿವಸಗಳಲ್ಲಿ ಮಾಡುತ್ತೇವೆ, ತಿಂಗಳಲ್ಲಿ ಮಾಡುತ್ತೇವೆಂದು ಹೇಳುವಂಥಾದ್ದನ್ನು ಬಿಡಬೇಕು. ನೀವು ಬಡವರಿಗೆ ಅನ್ಯಾಯ ಮಾಡುತ್ತಿದ್ದೀರಿ. ಬಡವರ ಹೊಟ್ಟೆಯ ಮೇಲೆ ಹೊಡೆಯುವಂಥಾ ಕೆಲಸ ನಡೆಯುತ್ತಿದೆ. ಇದನ್ನು ಕೂಡಲೇ ಸರಿಪಡಿಸುವಂಥಾದ್ದು ಆಗಬೇಕು. ಈ ಬಗ್ಗೆ ಅನೇಕ ಸಾರಿ ಪ್ರತಿ ಸದನದಲ್ಲೂ ಚರ್ಚೆಯಾಯಿತು. ಇವತ್ತಿನವರೆಗೂ ಸರ್ಕಾರ ಏನೂ ಗೊತ್ತೇ ಇಲ್ಲವೆಂಬ ರೀತಿಯಲ್ಲಿ, ನಾನಲ್ಲ ಗಾಂಧಾರಿ ಅನ್ನುವ ರೀತಿಯಲ್ಲಿ ಮಲಗಿ ಬಿಟ್ಟಿದ್ದಾರೆ. They are sleeping over the matter. ಇದು ರಾಜ್ಯದ ಒಂದು constituency ಅಲ್ಲ, ಇಡೀ ರಾಜ್ಯದಲ್ಲಿರುವಂಥಾ ಸಮಸ್ಯೆ. ಇದರ ಕಡೆಗೆ ತಾವು ಗಮನವನ್ನು ಕೊಡಬೇಕು. ಈಗ ಇವರು ಇನ್ನೊಂದು ಸಮಸ್ಯೆ ಏನು ಹೇಳುತ್ತಿದ್ದಾರೆಂದರೆ, ಕೇಂದ್ರ ಸರ್ಕಾರದವರು stock ಇಲ್ಲವೆಂದು ಅಕ್ಕಿ ಕೊಡುವುದನ್ನು ಕಡಿಮೆ ಮಾಡಿ ಬಿಟ್ಟಿದ್ದಾರೆ. ಅದಕ್ಕೋಸ್ಕರ ಬಹಳ ತೊಂದರೆಯಾಗಿ ಬಿಟ್ಟಿದೆ. ನಮ್ಮ ಕರ್ನಾಟಕ ಸರ್ಕಾರದಲ್ಲಿ ಬಡತನ ರೇಖೆಗಿಂತ

ಕೆಳಗೆ ಇರುವಂಥಾ ಕುಟುಂಬಗಳು ಶೇ. 33 ರಷ್ಟು ಎಂದು ಅವರು ಲೆಕ್ಕ ಹೇಳಿದ್ದಾರೆ. ಅಷ್ಟಕ್ಕೆ ಅವರು ಕಡಿಮೆ ದುಡ್ಡಿನಲ್ಲಿ ಕೊಡುವುದು, ಸಬ್ಸಿಡೈಸ್ ರೇಟ್‌ನಲ್ಲಿ ಕೊಡುವುದು ಅಷ್ಟೆ. ಇನ್ನು ಉಳಿದದ್ದಕ್ಕೆಲ್ಲಾ, ಇವರು BPL Card 54 ಲಕ್ಷ ಕುಟುಂಬಗಳಿಗೆ ಕೊಟ್ಟಿದ್ದಾರೆ. ಇದು ಹಿಂದೆಯೇ 65 ಲಕ್ಷ ಇತ್ತು. ಅದು 1994, 1995, 1996ನೇ ಸಾಲಿನಲ್ಲಿ 65 ಲಕ್ಷ, 70 ಲಕ್ಷ ಕುಟುಂಬಗಳು ಇತ್ತು. ಅದು APL ಅಂತ್ಯೋದಯ, ಅನ್ನಪೂರ್ಣ, ಅಕ್ಷಯ, ಇದೆಲ್ಲಾ ಸೇರಿ 1 ಕೋಟಿ 10 ಲಕ್ಷ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಸಿದ್ದರಾಮಯ್ಯನವರೆ, BPL 72 ಲಕ್ಷ ಕುಟುಂಬಗಳು ಸರ್ವೆ ಮಾಡಿರುವಂಥಾದ್ದು ಇದೆ.

ಶ್ರೀ ಸಿದ್ದರಾಮಯ್ಯ: BPL Card 54 ಲಕ್ಷ ಕುಟುಂಬಗಳಿಗೆ ಕೊಟ್ಟಿದ್ದಾರೆ. ಹಿಂದೆ ಅದು 65 ಲಕ್ಷ, 70 ಲಕ್ಷ ಕುಟುಂಬಗಳು ಇದೆಯೆಂದು ಆಗಿತ್ತು. 1994 ರಿಂದ 1999ರವರೆಗೆ ನನಗೆ ಜ್ಞಾಪನ ಇರುವ ಮಟ್ಟಿಗೆ ಆವತಿಗೆ 65–70 ಲಕ್ಷ ಕುಟುಂಬಗಳು ಇತ್ತು. ಈಗ 54 ಲಕ್ಷಕ್ಕೆ ಕಡಿಮೆ ಮಾಡಿದ್ದಾರೆ. ನನ್ನ ಪ್ರಕಾರ ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಯಾರೋ ಒಬ್ಬ ಬಡವರಲ್ಲದವರು, ನೀವು ಆದಾಯವನ್ನು ನಿಗದಿ ಮಾಡಿದ್ದಿರಲ್ಲಾ, ಅದು 12,000 ರೂಪಾಯಿಗಳೆಂದು ಮಾಡಿದ್ದೀರಿ. ಅದು 12,000 ಕ್ಕಿಂತ ಹೆಚ್ಚಿಗೆ ಇರುವವರಿಗೆ ಸಿಗದೇ ಇದ್ದರೂ ಪರವಾಗಿಲ್ಲ, 12,000 ಒಳಗಡೆ ಆದಾಯ ಇರುವವರಿಗೆ ಯಾರಿಗೂ ಇದು ತಪ್ಪಿ ಹೋಗಬಾರದು. ಅದು ಅಪರಾಧವಾಗುತ್ತದೆ. ನಾವು ಬಡವರ ಬಗ್ಗೆ ಮಾತನಾಡುವಾಗ, ಇದನ್ನು ಖಾತರಿ ಮಾಡುವಂಥಾ ಕೆಲಸವನ್ನು ಸರ್ಕಾರ ಮಾಡಲೇ ಬೇಕೆಂದು ಹೇಳಿ, ನಾನು ತೀವ್ರವಾಗಿ ಒತ್ತಾಯ ಮಾಡುತ್ತೇನೆ. ಇದರ ಬಗ್ಗೆ ಜನರೇ ನಿಮ್ಮ ವಿರುದ್ಧ ದಂಗೆ ಏಳುವಂಥಾ ಕಾಲ, ಸಮೀಪಿಸುತ್ತದೆಂಬ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಮನೆ ಕಟ್ಟುವ ವಿಚಾರವಾಗಿ ಹೇಳುವುದಾದರೆ, ಮಾನ್ಯ ಮುಖ್ಯಮಂತ್ರಿಯವರು 6 ಲಕ್ಷ ಮನೆಗಳನ್ನು ಕಳೆದ ಮಾರ್ಚ್ ಒಳಗೆ ಕಟ್ಟುತ್ತೇವೆಂದು ಹೇಳಿದರು. ಇವರು 2006–07ರಲ್ಲಿ 3 ಲಕ್ಷ ಮನೆಗಳ ಗುರಿಯನ್ನು ಇಟ್ಟುಕೊಂಡಿದ್ದರು. ಇವರು ಕಟ್ಟಿರುವಂಥಾದ್ದು ಎಷ್ಟೆಂದರೆ 1 ಲಕ್ಷದ 7000 ಮನೆಗಳನ್ನು ಕಟ್ಟಿದ್ದಾರೆ. ನಿಮ್ಮ performance report ನಲ್ಲಿರುವಂಥಾದ್ದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಡಿ.ಟಿ. ಜಯಕುಮಾರ್: ಮಾನ್ಯ ಚೇರ್ಮನ್‌ರವರೆ, ನಾವು ಜನವರಿ 1ನೇ ತಾರೀಖಿನಿಂದ ಮಾರ್ಚ್ 31ನೇ ತಾರೀಖಿನವರೆಗೂ ಕೂಡ ಮಾಸಾಚರಣೆ ಮಾಡಿ,

3ಲಕ್ಷ ಜನರನ್ನು ನಾವು ಈಗಾಗಲೇ ಐಡೆಂಟಿಫೈ ಮಾಡಿದ್ದೇವೆ. ಆಶ್ರಯ ಯೋಜನೆ, ಡಾ: ಅಂಬೇಡ್ಕರ್ ಯೋಜನೆಯದು 5 ಲಕ್ಷ 20 ಸಾವಿರ ಕುಟುಂಬಗಳು... ....

ಶ್ರೀ ಸಿದ್ದರಾಮಯ್ಯ: ಆಯಿತು, ನೀವು ಉತ್ತರವನ್ನು ಕೊಡುವಾಗ ಹೇಳಿ. ನಾವು ಯಾರೂ ಆರೂವರೆ ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ಹೇಳಿರಲಿಲ್ಲ. ಮಾರ್ಚ್ ಒಳಗಡೆ ಆರೂವರೆ ಲಕ್ಷ ಮನೆಗಳು. ಸೂರು ಇಲ್ಲದೇ ಇರುವವರಿಗೆ ಸೂರು, ಎಂದು 1 ಲಕ್ಷ 7,000 ಮನೆಗಳು ಕೊಟ್ಟಿರುವಂಥಾದ್ದು. ಕಳೆದ ವರ್ಷ ಸೈಟುಗಳನ್ನು ಎಷ್ಟು ಹಂಚಿದ್ದಾರೆ. ಅರ್ಬನ್, ಆಶ್ರಯದಲ್ಲಿ ಒಂದು ಸೈಟ್ ಇಲ್ಲ. ನಾನು ಮನೆಗಳ ಬಗ್ಗೆ ಓದಿ ಹೇಳುತ್ತೇನೆ. ಅದು economic serveyಯಲ್ಲಿ ಇದೆ, ಮಾನ್ಯ ಮುಖ್ಯಮಂತ್ರಿಯವರು 3 ಲಕ್ಷ ಮನೆಗಳೆಂದು ಗುರಿ ಇಟ್ಟುಕೊಂಡಿದ್ದರು. ಅಷ್ಟು ಮನೆಗಳನ್ನು ಕಟ್ಟುವುದಕ್ಕೆ ಆಯಿತಾ? ಹಿಂದೆ ಬ್ಯಾಕ್ ಲಾಗ್ ಇತ್ತಲ್ಲಾ, ಆ ಬ್ಯಾಕ್ ಲಾಗ್‌ನಲ್ಲಿ 2,26000 ಮನೆಗಳನ್ನು ಕಟ್ಟಬೇಕು. ಈ 2,26,000 ಮನೆಗಳ ಬಗ್ಗೆ ಇವರು ವರದಿಯಲ್ಲಿ ಏನು ಕೊಟ್ಟಿದ್ದಾರೆ. 1,50,000 ಮನೆಗಳು ವಿವಿಧ ಹಂತದಲ್ಲಿದೆಯೆಂದು ಕೊಟ್ಟಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅವು ಮುಗಿಯುವುದಿಲ್ಲ.

ಶ್ರೀ ಸಿದ್ದರಾಮಯ್ಯ: ಅವು ಮುಗಿಯುವುದಿಲ್ಲ, ಅವು ವಿವಿಧ ಹಂತದಲ್ಲಿ ಇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಚೇರ್ಮನ್‌ರೆ, ಇಗ ಸಿಮೆಂಟ್ ಮೂಟೆ 280 ರೂಪಾಯಿಗಳಾಗಿದೆ. ನಾವು ಕಳೆದ ಸದನದಲ್ಲಿ 25,000 ರೂಪಾಯಿಗಳು ಇದ್ದದ್ದನ್ನು 30,000 ರೂಪಾಯಿಗಳು ಮಾಡಿದ್ದೇವೆಂದು ಹೇಳುವುದರಲ್ಲಿ ಪ್ರಯೋಜನವಿಲ್ಲ. ಒಂದು ಮನೆಗೆ ಸಿಮೆಂಟ್ ರೇಟ್ ಎಲ್ಲಾ ಸೇರಿಸಿ, ಒಂದು ಯೂನಿಟ್ ಕಾಸ್ಟ್ ಎಷ್ಟು ಆಗುತ್ತದೆಂಬುದನ್ನು ಲೆಕ್ಕ ಹಾಕಿ, ನೀವು ಹಣವನ್ನು ಕೊಡಿ. ಅವರು 20,000 ರೂಪಾಯಿಗಳನ್ನು ಕೊಡುತ್ತಿದ್ದರು, 25,000 ರೂಪಾಯಿಗಳನ್ನು ಕೊಟ್ಟೆ, 30,000 ರೂಪಾಯಿಗಳನ್ನು ಕೊಟ್ಟೆ ಎಂಬುದು ಮುಖ್ಯವಲ್ಲ. ಒಂದು ಮನೆ ಕಟ್ಟುವಂಥಾದಕ್ಕೆ ಯೂನಿಟ್ ಕಾಸ್ಟ್ ಎಷ್ಟು ಆಗುತ್ತದೆ? ಸಿಮೆಂಟ್ ರೇಟ್, material rate ಎಷ್ಟು ಇದೆಯೆಂಬುದನ್ನು ಲೆಕ್ಕ ಹಾಕಿ ಹಣವನ್ನು ಕೊಡಿ. ಅದು ಕೊಡಿ, ಇಲ್ಲವೆಂದರೆ ಮನೆಯನ್ನು ಕಟ್ಟುವುದಕ್ಕೆ ಆಗುವುದಿಲ್ಲ.

ಶ್ರೀ ಡಿ.ಟಿ. ಜಯಕುಮಾರ್: ಮಾನ್ಯ ಚೇರ್ಮನ್‌ರೆ, ಫಲಾನುಭವಿಗಳು ಕೂಡ ಅವರ ಶೇರು ಹಾಕುವಂಥಾದ್ದು ಮಾಡಬೇಕು. ಈಗ 20,000 ರೂಪಾಯಿಗಳು ಇದ್ದದ್ದನ್ನು 30,000 ರೂಪಾಯಿಗಳನ್ನು ಮಾಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಜಯಕುಮಾರ್‌ರವರೆ, ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಿ. ಆಗ ಸಿಮೆಂಟ್ ರೇಟ್ 50 ರೂಪಾಯಿಗಳಿತ್ತು, ಈಗ 300 ರೂಪಾಯಿಗಳಾಗಿದೆ. ಇಟ್ಟಿಗೆ ರೇಟ್ ಎಷ್ಟು? ಟೈಲ್ಸ್ ರೇಟ್ ಎಷ್ಟು? ಅವತ್ತು 20,000 ರೂಪಾಯಿಗಳಿದ್ದಾಗ, ಸಿಮೆಂಟ್ ರೇಟ್ 50 ರೂಪಾಯಿಗಳಿತ್ತು.

ಶ್ರೀ ಬಿ. ಶಿವರಾಂ: ಆಯಿತು, ನಿಮ್ಮ S.R.Rate ಎಷ್ಟು ಜಾಸ್ತಿಯಾಗಿದೆ? ನಿಮ್ಮ S.R.Rate ಕಳೆದ ಬಾರಿಗಿಂತ 2006-07ರಲ್ಲಿ ಕಟ್ಟಡಕ್ಕೆ ನಿಮ್ಮ ಬೆಂಗಳೂರು P.W.D. ಯವರು ಶೇ. 36ರಷ್ಟು ಹೆಚ್ಚು ಮಾಡಿದ್ದಾರೆ. ಅಂದ ಮೇಲೆ ನೀವು ಯೂನಿಟ್ ಕಾಸ್ಟ್ ಅನ್ನು ಎಷ್ಟು ಹೆಚ್ಚುವರಿ ಮಾಡಬೇಕು? ಹೇಳಿ. ನಾನು ನಿಮ್ಮ S.R.Rate ಅನ್ನು ಹೇಳುತ್ತಿದ್ದೇನೆ. ಅದು P.W.D. Survey ಪ್ರಕಾರ ನಿಖರವಾದಂಥ ಅಂಕಿ ಅಂಶವಿರುವಂಥಾದ್ದು.

ಶ್ರೀ ಡಿ.ಟಿ. ಜಯಕುಮಾರ್: ತಾವು ಹೇಳುವ ವಿಚಾರವನ್ನು ಒಪ್ಪಿಕೊಳ್ಳುತ್ತೇನೆ. 30,000 ರೂಪಾಯಿಗಳಿಗೆ ಮನೆಯನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಹಿಂದೆ 20,000 ರೂಪಾಯಿಗಳು ಇತ್ತು. ಅದನ್ನು ಹೋದ ವರ್ಷ 25,000 ರೂಪಾಯಿಗಳನ್ನು ಮಾಡಿದೆವು. ಈ ಸಾರಿ ಅದನ್ನು 30,000 ರೂಪಾಯಿಗಳನ್ನು ಮಾಡಿದ್ದೇವೆ. ಅದನ್ನು 60,000 ರೂಪಾಯಿಗಳನ್ನು ಮಾಡಬೇಕೆಂಬ ಪ್ರಪೋಜಲ್ ಕೂಡ ಇದೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಚೇರ್ಮನ್‌ರೆ, ಆಯಿತು, 25,000 ರೂಪಾಯಿಗಳನ್ನು ಮಾಡಿದ್ದಾರೆಂಬುದು ಬೇರೆ. ಈಗ ಎಲ್ಲಾ materials ಬೆಲೆ ಎಲ್ಲಾ ಜಾಸ್ತಿಯಾಗಿದೆ. inputs ಬೆಲೆಗಳೆಲ್ಲಾ ಜಾಸ್ತಿಯಾಗಿದೆ. ಇವರು 25,000 ರೂಪಾಯಿಗಳೆಂದು ಮಾಡಿದರೂ ಕೂಡ ಅದು ಆಶ್ರಯ ಮನೆಗಳಿಗೆ, ಅಂಬೇಡ್ಕರ್ ಮನೆಗಳು ಬಿಟ್ಟರೆ, 25,000 ರೂಪಾಯಿಗಳಲ್ಲಿ ಅದು 50% ಸಾಲವೆಂದು ಇರುತ್ತದೆ. ಇಲ್ಲಿ 5,000 ರೂಪಾಯಿಗಳು ಜಾಸ್ತಿಯಾದರೆ, ಅದರಲ್ಲಿ 2,500 ರೂಪಾಯಿಗಳ ಸಾಲ ಅವರ ಮೇಲೆ ಹೆಚ್ಚಾಗುತ್ತದೆ. ಇಲ್ಲಿ 2,500 ರೂಪಾಯಿಗಳ ಸಬ್ಸಿಡಿ ಸಿಗುತ್ತದೆ ಅಷ್ಟೆ. ನೀವು 30,000 ರೂಪಾಯಿಗಳೆಂದು ಮಾಡಿದರೆ, ಅವರಿಗೆ 15,000 ರೂಪಾಯಿಗಳು ಸಾಲವೆಂದು, 15,000 ರೂಪಾಯಿಗಳ ಸಬ್ಸಿಡಿ ಎಂದು ಆಗುತ್ತದೆ. ಅದರ ಮೇಲೆ ಶೇ. 11% Interest ಇದೆ. ಅದನ್ನು ನೀವು ತೆಗೆದು ಹಾಕಿ, ನಾವು 6% ಮಾಡಿದ್ದೆವಲ್ಲಾ, ರೈತರಿಗೆ 4% ಕೊಡುತ್ತಿದ್ದಿರಲ್ಲಾ, ಅದೇ ರೀತಿಯಲ್ಲಿ ಇದನ್ನು ತೆಗೆದುಹಾಕಿ. You bring the proposal. ಆ ಬಡವರಿಗೆ ಏಕೆ 11% ಬಡ್ಡಿಯನ್ನು ಹಾಕುತ್ತೀರಾ?

(ಗೊಂದಲ)

ಶ್ರೀ ಹೆಚ್.ಸಿ. ಮಹದೇವಪ್ಪ: ಮಾನ್ಯ ಡಿ.ಟಿ. ಜಯಕುಮಾರ್‌ರವರೆ, ನೀವು interest ಅನ್ನು ತೆಗೆದು ಹಾಕುತ್ತೇವೆಂದು ಹೇಳಿ.

ಶ್ರೀ ಡಿ.ಟಿ. ಜಯಕುಮಾರ್: ಶೇ.11% ಇರುವಂಥಾದನ್ನು ಕಡಿಮೆ ಮಾಡಬೇಕೆಂದು ಸರ್ಕಾರದ ಪರಿಶೀಲನೆಯಲ್ಲಿದೆ, ಮತ್ತು 60,000 ರೂಪಾಯಿಗಳನ್ನು ಮಾಡಬೇಕೆಂಬ ಪ್ರಪೋಜಲ್ ಹೋಗಿದೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಚೇರ್ಮನ್‌ರೆ, notionally ಸಾಲವನ್ನು ಯಾರೂ ಮರುಪಾವತಿ ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ: ಕೆಲವೆಲ್ಲಾ ದುಡ್ಡು ವಸೂಲಾಗಿದೆ, ಮಾನ್ಯ ಪ್ರಕಾಶ್‌ರವರೆ, ಏನೂ ವಸೂಲಾಗಿಲ್ಲವೆಂದು ಅಲ್ಲ, ವಸೂಲಾಗಿದೆ. 80 ಕಂತುಗಳೆಂದು ಕೊಟ್ಟಿದ್ದಾರಲ್ಲಾ, 80 ಕಂತುಗಳಲ್ಲಿ ಕಟ್ಟಬೇಕು. ಮತ್ತು ಇದಕ್ಕೆ 11% interest ಇದೆ. ನಾನು ಮಾಡಲಿಲ್ಲ ಎನ್ನುವುದು ನಿಜ. ನನಗೆ ಅದನ್ನು ಯಾರೂ ಹೇಳಲಿಲ್ಲ. ನನಗೆ ಅದು ಗೊತ್ತಾಗಲಿಲ್ಲ. ಅದರಿಂದಾಗಿ ನಾನು ಮಾಡಲಿಲ್ಲ. ಅದರ ಮೇಲೆ 4% tax ಇದೆ. ಅವರ ಮೇಲೆ ಏಕೆ 4% tax? ಇದೆ. ಅದರಿಂದ quality ಹೋಗುತ್ತದೆ. ಆ 4% tax ಅನ್ನು ತೆಗೆದು ಹಾಕಿ. ಪರಿಶೀಲನೆ ಎಂದು ಹೇಳುವುದಲ್ಲ. ಅದನ್ನು ತೆಗೆಯಬೇಕು. ಆ taxನಿಂದ ಭಾರೀ ದುಡ್ಡೇನೂ ಬರುತ್ತಿಲ್ಲ.ಆ tax ಬರುತ್ತಿಲ್ಲ. You are not getting the tax. It is only notional. You are not getting anything. Not a single pie you are getting. ನೀವು ಕಾಮಗಾರಿಯನ್ನು Land Armyಯವರಿಗೆ ಕೊಡುತ್ತೀರಿ. ಅವರು tax ಕೊಡಬೇಕಾಗುತ್ತದೆ. To that extent ಕಳಪೆ ಕೆಲಸವಾಗುತ್ತದೆ. ಅದೇ ರೀತಿ ನಿರ್ಮಿತಿ ಕೇಂದ್ರದವರೂ ಕೊಡಬೇಕಾಗಿದೆ. ನೀವು ಬಡವರಿಗೆ ಸಹಾಯ ಮಾಡಬೇಕಾದರೆ, ಎಲ್ಲಿ ಬಡವರಿಗೆ ಹೊರೆಯಾಗುತ್ತದೆ, ಎಲ್ಲಿ ಅನಾನುಕೂಲವಾಗುತ್ತದೆ ಎನ್ನುವುದನ್ನು ನೋಡಿಕೊಂಡು ಮಾಡಬೇಕಲ್ಲವೇ, ಅದನ್ನು ನೀವು ಮಾಡಲೇ ಇಲ್ಲ. ನೀವು ಬಂದ ಮೇಲೆ ಒಂದು ಪಂಚಾಯಿತಿಗೆ ಹೊಸದಾಗಿ 60 ಮನೆಗಳನ್ನು ಹಂಚಿರುವುದನ್ನು ಬಿಟ್ಟರೆ ಬೇರೆ ಯಾವುದನ್ನೂ ಕೊಟ್ಟಿಲ್ಲ. ಹಿಂದೆ ಇದ್ದಂಥ backlog ಮನೆಗಳೇ ಇವತ್ತಿನವರೆಗೂ ಮುಂದುವರೆಯುತ್ತಿವೆ.

ಶ್ರೀ ಡಿ.ಟಿ. ಜಯಕುಮಾರ್: ಹಿಂದೆ ಯಾವ ಕಾಲದಲ್ಲೂ ಕೂಡ 20 ಮನೆಗಳ ಮೇಲೆ ಕೊಟ್ಟಿರಲಿಲ್ಲ.

ಶ್ರೀ ಸಿದ್ದರಾಮಯ್ಯ: ನನ್ನಲ್ಲಿರತಕ್ಕಂಥ information ಮತ್ತು ನೀವು ಕೊಟ್ಟಿರತಕ್ಕಂಥ ಅಂಕಿ ಅಂಶಗಳ ಆಧಾರದ ಮೇಲೆ ನಾನು ಮಾತನಾಡುತ್ತಿದ್ದೇನೆ. ನಾವು 2004–05ರಲ್ಲಿ ಹೊಸ ಮನೆಗಳನ್ನು ಕೊಡಬಾರದು, ಬಾಕಿ ಇರುವ backlog ಎಲ್ಲ ಮುಗಿಯಲಿ ಎಂದು ಹೇಳಿ 2 ವರ್ಷಗಳು ಹೊಸ ಮನೆಗಳನ್ನು ಹಂಚುವುದಕ್ಕೆ ಹೋಗಲಿಲ್ಲ. ಆ backlog ಅನ್ನೇ ನೀವು 3 ಲಕ್ಷ, 2.26 ಲಕ್ಷ ಎಂದು ಹೇಳುತ್ತಿರುವುದು. ಈಗ ನಾವು ಒಂದೊಂದು ಪಂಚಾಯಿತಿಗೆ 60 ಮನೆಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಿರಲ್ಲ, ಇನ್ನೂ ನಿಮಗೆ ಪಂಚಾಯಿತಿಗಳಿಂದ ಆ ಲಿಸ್ಟೇ ಬಂದಿಲ್ಲ. 3 ವರ್ಷಗಳಿಂದ ಬಾಕಿ ಇದ್ದಂಥಾದ್ದನ್ನು ಒಂದೊಂದು ಪಂಚಾಯಿತಿಗಳಿಗೆ 60 ಮನೆಗಳೆಂದು ಕೊಟ್ಟಿದ್ದೀರಲ್ಲ, ಆ ಲಿಸ್ಟ್ ಇನ್ನೂ ಬಂದೇ ಇಲ್ಲ, ನಾವು beneficlariesಅನ್ನು ಗುರುತು ಮಾಡಿಬಿಟ್ಟಿದ್ದೇವೆ ಎಂದರೆ ಅದು ಒಂದು ಸಾಧನೆಯೇ? ಅದರಿಂದ ಬಡವರಿಗೆ ಮನೆ ಕಟ್ಟಿಕೊಟ್ಟ ಹಾಗೆ ಆಯಿತೇ? ಬಡವರಿಗೆ ಮನೆ ಸಿಕ್ಕಿದ ಹಾಗೆ ಆಯಿತೇ? ಬಡವರಿಗೆ ನೆರಳು ಸಿಕ್ಕಿದ ಹಾಗೆ ಆಯಿತೇ? ನಮ್ಮ ಹತ್ತಿರ ದುಡ್ಡು ಬಹಳ ಇದೆ ಎಂದು ಹೇಳುತ್ತೀರಿ. ಇದಕ್ಕೆ ಹೆಚ್ಚಾಗಿ ದುಡ್ಡು ಖರ್ಚು ಮಾಡಿ. ದುಡ್ಡು ತುಂಬಿ ತುಳುಕುತ್ತಿದೆ. Finance Minister ಇದಕ್ಕೆ ಹೆಚ್ಚಾಗಿ ದುಡ್ಡು ಖರ್ಚು ಮಾಡಲಿ. ಏಕೆ ದುಡ್ಡನ್ನು ಖರ್ಚು ಮಾಡುವುದಿಲ್ಲ? ಯಡಿಯೂರಪ್ಪನವರೇ, ನಿಮಗೆ ಒಂದು ಮನವಿ. ಆಶ್ರಯ ಮನೆಗಳು, ಅಂಬೇಡ್ಕರ್ ಮನೆಗಳು, ಇಂದಿರಾ ಅವಾಸ್ ಮನೆಗಳು ಇವುಗಳಿಗೆಲ್ಲ 4% tax ಇದೆ. ಅದನ್ನು ತೆಗೆದುಹಾಕಿಬಿಡಿ. ನಾನು ನಿಜವಾಗಿ ಹೇಳುತ್ತೇನೆ, I admit, ನಾನು ಇದ್ದಾಗ ಇದು ನನ್ನ ಗಮನಕ್ಕೆ ಬರಲಿಲ್ಲ. ಪ್ರಾಮಾಣಿಕವಾಗಿ ಹೇಳುತ್ತೇನೆ. ನಾನು ಹಣಕಾಸು ಮಂತ್ರಿಯಾಗಿದ್ದಾಗ it has not come to my knowledge nor anybody has brought it to my notice. ಅದನ್ನು ದಯವಿಟ್ಟು ತೆಗೆದು ಹಾಕಿಬಿಡಿ. ಇದು ಮನೆಗಳಿಗೆ ಸಂಬಂಧಿಸಿದಂತೆ ನೀವೇ ಕೊಟ್ಟಿರುವ ಅಂಕಿ ಅಂಶಗಳು. 2001–02ರಲ್ಲಿ 1,63,000 ಮನೆಗಳು ನಿರ್ಮಾಣವಾಗಿವೆ. 2002–03ರಲ್ಲಿ 1,33,000 ಮನೆಗಳು ನಿರ್ಮಾಣವಾಗಿವೆ. 2004–05 ರಲ್ಲಿ 1,30,000 ಮನೆಗಳು ನಿರ್ಮಾಣವಾಗಿವೆ. 2005–06ರಲ್ಲಿ 1,35,850 ಮನೆಗಳು ನಿರ್ಮಾಣವಾಗಿವೆ. 2006–07ರಲ್ಲಿ 73,998 ಮನೆಗಳು ನಿರ್ಮಾಣವಾಗಿವೆ, ಎರಡು ತಿಂಗಳಲ್ಲಿ miracle ಆಗುತ್ತದೆಯೇ? ಹೇಗೆ ಆಗುತ್ತದೆ? ಆರೂವರೆ ಲಕ್ಷ ಮನೆಗಳು ಎಲ್ಲಿ ಹೋದವು?

ಶ್ರೀ ಡಿ.ಟಿ. ಜಯಕುಮಾರ್: ಒಂದು ಮನೆ ಕಟ್ಟಬೇಕಾದರೆ ಸಮಯ ಹಿಡಿಯುತ್ತದೆ. ನೀವು ಸಚಿವರಾಗಿದ್ದಿರಿ, ನಿಮಗೂ ಗೊತ್ತಿದೆ. I Stage, II Stage, III Stage ಎಂದು ಇದೆ.

ಶ್ರೀ ಸಿದ್ದರಾಮಯ್ಯ: ಹಾಗಿದ್ದರೆ ಆರೂವರೆ ಲಕ್ಷ ಮನೆಗಳು ಎಂದು ಏಕೆ ಹೇಳಿಕೊಳ್ಳುವುದಕ್ಕೆ ಹೋದಿರಿ? ಕೇವಲ ಪ್ರಚಾರ ಮಾಡಿಕೊಳ್ಳಲಿಕ್ಕೇ ಕಟ್ಟುವುದಕ್ಕೆ ಆಗುವುದಿಲ್ಲ ಎಂದು ಗೊತ್ತಿದ್ದೂ ಆರೂವರೆ ಲಕ್ಷ ಮನೆಗಳನ್ನು ಕಟ್ಟುತ್ತೇವೆ ಎಂದು ಏಕೆ ಹೇಳುವುದಕ್ಕೆ ಹೋದಿರಿ?

ಶ್ರೀ ಡಿ.ಟಿ. ಜಯಕುಮಾರ್: ಕಟ್ಟಿ ತೋರಿಸುತ್ತೇವೆ.

ಶ್ರೀ ಸಿದ್ದರಾಮಯ್ಯ: ಎಲ್ಲಿ ನೀವು ತೋರಿಸುವುದು? ಈಗಾಗಲೇ 18 ತಿಂಗಳಾಯಿತು. 18 ತಿಂಗಳಲ್ಲಿ ತೋರಿಸಲಿಲ್ಲ. ಇನ್ನೆರಡು ತಿಂಗಳಲ್ಲಿ ತೋರಿಸುವಿರಾ? ಅದೇ ರೀತಿ ಸೈಟುಗಳ ಬಗ್ಗೆ ಹೇಳುವುದಾದರೆ, 2006-07ರಲ್ಲಿ 81 ಸೈಟುಗಳನ್ನು ಹಂಚಿದ್ದಾರೆ. ನಗರ ಆಶ್ರಯದಲ್ಲಿ ಸೈಟುಗಳನ್ನು ಕೊಟ್ಟಿರುವುದು Nil.

ಶ್ರೀ ಡಿ.ಆರ್. ಪಾಟೀಲ್: ಬಹುಶಃ ಅಂತರದಲ್ಲಿ ಮನೆ ಕಟ್ಟುವ technology ಯನ್ನು ತಂದಿದ್ದಿರಿ ಎಂದು ಕಾಣುತ್ತದೆ. ಸೈಟೇ ಕೊಡದಿದ್ದರೆ, ಮುಂದೆ ಮನೆ ಹೇಗೆ ಕಟ್ಟುತ್ತೀರಿ?

ಶ್ರೀ ಬಸವರಾಜ ರಾಯರೆಡ್ಡಿ: ಸಿದ್ದರಾಮಯ್ಯನವರೇ, Ambedkar Housing zero ಇದೆ ನೋಡಿ.

ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ: ನಗರ ಆಶ್ರಯ ಯೋಜನೆಯಲ್ಲಿ ಚಿತ್ರದುರ್ಗ ನಗರದಲ್ಲಿ 1300 ಸೈಟುಗಳನ್ನು ಮಾಡಿ ಎರಡು ವರ್ಷವಾಯಿತು. ಅವುಗಳನ್ನು ಇದುವರೆಗೂ distribution ಮಾಡಿಲ್ಲ.

ಶ್ರೀ ಡಿ.ಟಿ. ಜಯಕುಮಾರ್: ನಗರ ಆಶ್ರಯ ಯೋಜನೆಯ ಸಮಿತಿಗೆ ಶಾಸಕರೇ ಅಧ್ಯಕ್ಷರು. ಅದಕ್ಕೆ concerned M.L.A. ಗಳು ಜವಾಬ್ದಾರರು.

ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ: ನೀವು ಸಮಿತಿಗಳನ್ನು ಮಾಡಿ ಒಂದು ತಿಂಗಳಾಗಿದೆ ಅಷ್ಟೇ. ಆದರೆ, 1,300 ಸೈಟು ರೆಡಿಯಾಗಿ ಎರಡು ವರ್ಷವಾಯಿತು.

(ಗೊಂದಲ)

ಚೇರ್ಮನ್: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ: ಪರಿಶಿಷ್ಟ ಜಾತಿಯವರಿಗಾಗಿ ಇರುವ ನಗರ ಅಂಬೇಡ್ಕರ್ ಯೋಜನೆಯಲ್ಲಿ 2006-07ರ ಸಾಧನೆ zero. ಸೈಟುಗಳನ್ನು ಕೊಟ್ಟಿರುವುದು zero.

ಶ್ರೀ ಡಿ.ಟಿ. ಜಯಕುಮಾರ್: ತಮಗೆ ಅನುಭವ ಇದೆ, ಎಲ್ಲ ಗೊತ್ತಿದೆ. ಈಗ I.H.S.D.P. ಎಂದು ಬಂದಿದೆ. ಅದಕ್ಕಾಗಿ ನೀವು ಹೇಳುತ್ತಿರುವಂಥಾದ್ದು wind up ಆಗಿದೆ. ಬೆಂಗಳೂರು ಮತ್ತು ಮೈಸೂರುಗಳು ನರ್ಮ್ಸ್‌ನಲ್ಲಿ ಬರುವುದರಿಂದ, ಇನ್ನಿತರ ನಗರಗಳು I.H.S.D.P. ಯಲ್ಲಿ ಬರುವುದರಿಂದ ಈ ಯೋಜನೆಗಳೆಲ್ಲವೂ ಹೆಚ್ಚು ಚಾಲ್ತಿಯಲ್ಲಿಲ್ಲ.

ಶ್ರೀ ಸಿದ್ದರಾಮಯ್ಯ: ನರ್ಮ್ಸ್ ದುಡ್ಡು ನಿಮ್ಮದಲ್ಲ. ಅದು ಕೇಂದ್ರ ಸರ್ಕಾರದ ದುಡ್ಡು ಅಂಬೇಡ್ಕರ್ ಮನೆಗಳನ್ನು ನಿರ್ಮಾಣ ಮಾಡುವುದಕ್ಕೆ S.C.P. ಯಿಂದ ದುಡ್ಡು ಬರುತ್ತದೆ. S.C.P. ಹಣ ದುರುಪಯೋಗವಾಗಬಾರದು ಎಂದು ಹೇಳಿ ನಾವು 1996-97ರಲ್ಲಿ, ಅದನ್ನು ಪರಿಶಿಷ್ಟ ಜಾತಿಯವರಿಗೆ ಮನೆ ಕಟ್ಟಲಿಕ್ಕೆ, educationಗೆ ಮತ್ತು ನೀರಾವರಿಗೆ, ಈ ಮೂರಕ್ಕೆ ಖರ್ಚಾಗಬೇಕು ಎಂದು ಮಾಡಿದ್ದೆವು. ಆದರೆ, S.C.P.ನೀವು ದುಡ್ಡನ್ನು ಉಪಯೋಗಿಸಿ ಮನೆಗಳನ್ನೇ ಕಟ್ಟದಿದ್ದರೆ ಹೇಗೆ? 1,459 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ಎಂದು ಹೇಳುತ್ತಾರೆ. ಅದರಲ್ಲಿ ಇವತ್ತಿನವರೆಗೆ ಬಿಡುಗಡೆಯಾಗಿರುವುದು 729 ಕೋಟಿ ರೂಪಾಯಿಗಳು. ಅಂಬೇಡ್ಕರ್ ಯೋಜನೆಗೆ ಏಕೆ ದುಡ್ಡು ಬಿಡುಗಡೆ ಮಾಡಲಿಲ್ಲ? ನರ್ಮ್ಸ್ ಕೇಂದ್ರ ಸರ್ಕಾರದ ಕಾರ್ಯಕ್ರಮ. ಅದರಲ್ಲಿ ಕುಡಿಯುವ ನೀರು ಮತ್ತು ಬೇರೆ ಬೇರೆ programmeಗಳೆಲ್ಲ ಬರುತ್ತವೆ. S.C.P.ದುಡ್ಡು ಬರುತ್ತದಲ್ಲ, ಆ ದುಡ್ಡು ಎಲ್ಲಿ?

ಶ್ರೀ ಬಸವರಾಜ ರಾಯರೆಡ್ಡಿ: ಬೆಂಗಳೂರು, Nurm is nothing to do with housing. ಬೆಂಗಳೂರು ಮೈಸೂರಿಗೆ ಮಾತ್ರ ಅದು.

ಶ್ರೀ ಸಿದ್ದರಾಮಯ್ಯ: what happened to the S.C.P. money? ಅಂಬೇಡ್ಕರ್ ಯೋಜನೆಯಲ್ಲಿ ಬಡವರಿಗೆ ಮನೆಗಳನ್ನು ಕಟ್ಟಿಕೊಡುವ S.C.P. ಹಣ ಎಲ್ಲಿ ಹೋಯಿತು? ಯಾವುದೋ ಒಂದನ್ನು ಯಾವುದಕ್ಕೂ ಹೇಳುವುದು. ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಇವರು ಎಲ್ಲಿ ಹಣ ಖರ್ಚು ಮಾಡಬೇಕು. ಎಲ್ಲಿ ಅಗತ್ಯ ಇದೆ, ಯಾವ ವರ್ಗದ ಜನರಿಗೆ ಮುಟ್ಟಿಸಬೇಕು, ಆ ವರ್ಗದ ಜನರಿಗೆ ದುಡ್ಡು ಖರ್ಚು ಮಾಡುತ್ತಿಲ್ಲ. ಮಠಗಳಿಗೆ ಕೊಟ್ಟಿದ್ದೀರಿ, ದೇವಸ್ಥಾನಗಳಿಗೆ ಕೊಟ್ಟಿದ್ದೀರಿ, ಬೇರೆಯವರಿಗೆ ಕೊಟ್ಟಿದ್ದೀರಿ. ಇದು ಯಾರ ದುಡ್ಡು?

ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡು ಸುಮಾರು 375 ಜನರು ಸತ್ತಿದ್ದರೆ, ಇದುವರೆಗೆ compensation ಕೊಟ್ಟಿರುವುದು 199 ಜನರಿಗೆ ಮಾತ್ರ, ಉಳಿದವರಿಗೆ ಏಕೆ ಕೊಟ್ಟಿಲ್ಲ. ಒಬ್ಬರಾದರೂ ಅಲ್ಲಿಗೆ ನೋಡುವುದಕ್ಕೆ ಹೋಗಿದ್ದಿರಾ? ಅವರಿಗೆ ಒಂದು ರೂಪಾಯಿಯನ್ನೇನಾದರೂ ಕೊಟ್ಟಿರಾ? ಉಳಿದ ಸುಮಾರು 280 ಜನರಿಗೆ ಏಕೆ ಕೊಡಲಿಲ್ಲ. ದುಡ್ಡು ಇದೆ, ಎಲ್ಲದಕ್ಕೂ ಖರ್ಚು ಮಾಡುತ್ತೇವೆ ಎಂದು ಹೇಳುತ್ತೀರಿ, ಇದಕ್ಕೆ ಏಕೆ ಕೊಡಲಿಲ್ಲ? ನಮ್ಮ ಹತ್ತಿರ ದುಡ್ಡು ಇದೆ, ಬೇಕಾದಷ್ಟು ಬಂದಿದೆ, ಈ ವರ್ಷವೂ ದೊಡ್ಡದಾಗಿ ಬೆಳೆಯುತ್ತಿದೆ ಎಂದೆಲ್ಲ ಹೇಳುತ್ತೀರಲ್ಲ, ಎಲ್ಲಿದೆ ದುಡ್ಡು? ಕಳೆದ ವರ್ಷ ಪೂರ್ಣವಾಗಿ S.C.P. ದುಡ್ಡನ್ನು ಪೂರ್ಣವಾಗಿ ಬಿಡುಗಡೆ ಮಾಡಲಿಲ್ಲ. ಸ್ಕಾಲರ್‌ಷಿಪ್ ದುಡ್ಡು ಇವತ್ತಿನವರೆಗೆ ಕೊಟ್ಟಿಲ್ಲ. ಇನ್ನೂ 71 ಕೋಟಿ ರೂಪಾಯಿ ಸ್ಕಾಲರ್‌ಷಿಪ್ ಕೊಡಬೇಕಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದವರಿಗೆ ಕೊಟ್ಟಿಲ್ಲ. Technical colleges ನಲ್ಲಿ ಓದುವವರಿಗೆ ಸ್ಕಾಲರ್‌ಷಿಪ್ ಕೊಟ್ಟಿಲ್ಲ. ಏಕೆ ಕೊಟ್ಟಿಲ್ಲ? ನಾವು ಎಲ್ಲಾ ಮಾಡಿ ಬಿಟ್ಟಿದ್ದೇವೆಂದು ಹೇಳುತ್ತೀರಿ. ಬಡವರಿಗೆಲ್ಲ social securities ಕೊಟ್ಟು ಮುಗಿದುಹೋಯಿತು! ಅಲ್ಲವೇ? ನಾನು ಮತ್ತೆ I demand. ಆ diet charge 7ನೇ ತರಗತಿಯವರೆಗೆ ಓದುತ್ತಿರುವ ಪರಿಶಿಷ್ಟ ಮತ್ತು ಹಿಂದುಳಿದ ಜಾತಿ ಮಕ್ಕಳಿಗೆ sholarship ಕೊಡುತ್ತಾರೆ. ಇದು 25 ವರ್ಷಗಳ ಹಿಂದೆ ತೀರ್ಮಾನವಾಗಿರುವಂಥದ್ದು 7ನೇ ತರಗತಿವರೆಗೆ ಓದುತ್ತಿರುವ ಪರಿಶಿಷ್ಟ ಮತ್ತು ಹಿಂದುಳಿದ ಜಾತಿಯ ಹೆಣ್ಣು ಮತ್ತು ಗಂಡುಮಕ್ಕಳಿಗೆ 75ರೂ. ಗಳು ಮತ್ತು SSLC ವರೆಗೆ ಓದುವವರಿಗೆ 100 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅದು ಯಾವುದೋ ಕಾಲದಲ್ಲಿ ತೀರ್ಮಾನ ಮಾಡಿರುವಂಥದ್ದು. ಅದನ್ನು ಹೆಚ್ಚು ಮಾಡಬೇಕು. ಅದು ಈಗಲೂ ಇದೆ. ಈ scholarship ಕೊಡುವುದು ಯಾರಿಗೆಂದರೆ, ಯಾರು ಹಾಸ್ಟೆಲ್‌ನಲ್ಲಿ ಇಲ್ಲವೋ ಅಂಥವರಿಗೆ ಕೊಡುತ್ತಾರೆ ಆದ್ದರಿಂದ ನಿಮ್ಮ ಗಮನಕ್ಕೆ ಬಂದ ಹಾಗೆ ಕಾಣಿಸಲಿಲ್ಲ. ಮಿಸ್ಟರ್ ಅನ್ನದಾನಿಯವರೆ, ಈ 75ರೂ. ಗಳನ್ನು ಕೊಡುವಂಥದ್ದು ಯಾವುದೋ ಓಬಿರಾಯನ ಕಾಲದಲ್ಲಿ ತೀರ್ಮಾನವಾಗಿರುವಂಥದ್ದು. ಆ scholarship ನ್ನೆಲ್ಲ ಹೆಚ್ಚು ಮಾಡಿ. ನಾನು ಆ diet charge ನಲ್ಲಿ 2004–05ರಲ್ಲಿ 50 ರೂ. ಗಳನ್ನು ಹೆಚ್ಚು ಮಾಡಿದ್ದೆ. Pre-metric ನವರಿಗೆ 450 ರೂ. ಗಳು ಮತ್ತು metric ನಲ್ಲಿರುವವರಿಗೆ 500 ರೂ.ಗಳನ್ನು ಮಾಡಿದ್ದರೆ. ಹಾಸ್ಟೆಲ್‌ಗಳಿಗೆ BPL card ಅಕ್ಕಿ ಕೊಡುತ್ತಿದ್ದರು. ಅದನ್ನು ಕೂಡ ಈಗ ಕೊಡುತ್ತಿಲ್ಲ . ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟರಿಗೆ ಒಂದೂವರೆ ಸಾವಿರ ಹಾಸ್ಟೆಲ್‌ಗಳಿವೆ. ಹಿಂದುಳಿದ ಜಾತಿಯವರಿಗೆ 1400 ಹಾಸ್ಟೆಲ್‌ಗಳಿವೆ. ಸುಮಾರು 95 ಲಕ್ಷ

ಪರಿಶಿಷ್ಟ ಜಾತಿಯ ಮಕ್ಕಳು ಹಾಸ್ಟೆಲ್‌ಗಳಲ್ಲಿ ಓದುತ್ತಿದ್ದಾರೆ. ಹಿಂದುಳಿದ ಜಾತಿಯವರ ಮಕ್ಕಳು ಸುಮಾರು ಒಂದು ಲಕ್ಷ ಮಕ್ಕಳು ಹಾಸ್ಟೆಲ್‌ಗಳಲ್ಲಿ ಓದುತ್ತಿದ್ದಾರೆ. ಅವರಿಗೆ diet charge ಹೆಚ್ಚು ಮಾಡಿಕೊಡಿ. ನೀವು ಹಣ ಖರ್ಚು ಮಾಡಬೇಕಾಗಿರುವುದು ಎಲ್ಲಿ ಎಂದರೆ, These are the areas where you have investments. Where you have spent. ಇದು ಬಿಟ್ಟು ಸಿಕ್ಕ ಸಿಕ್ಕ ಕಡೆ ಸಿಕ್ಕಿದ ಹಾಗೆ ಹಣ ಚೆಲ್ಲುವುದಕ್ಕಾಗುವುದಿಲ್ಲ. ಹಣ ಚೆಲ್ಲುವುದರಿಂದ discipline ಬರುವುದಿಲ್ಲ. Fiscal discipline ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲಾ ಕಡೆ ತಮಗೆ ಇಷ್ಟ ಬಂದ ಹಾಗೆ ಚೆಲ್ಲುವುದು ಸರಿಯಾಗಲಾರದು. ಇವರು ಕೇಳುವುದಕ್ಕೆ ಯಾರು ಎನ್ನುವ ಭಾವನೆ ಸರ್ಕಾರದಲ್ಲಿ ಇರಬಾರದು. ಇವೆಲ್ಲಾ ಚರ್ಚೆ ಆಗಬೇಕಲ್ಲವೇ? ಖರ್ಚು ಮಾಡುವುದಕ್ಕೆ ನಾವು ಸದನದಲ್ಲಿ ಒಪ್ಪಿಗೆ ಕೊಟ್ಟ ಮೇಲಲ್ಲವೇ ಖರ್ಚು ಮಾಡುವುದು?

ಡಾ: ಹೆಚ್.ಸಿ. ಮಹಾದೇವಪ್ಪ: Metric ನಂತರದ SC/ST ವಿದ್ಯಾರ್ಥಿಗಳಿಗೆ ಕೇಂದ್ರ scholarship ಪಡೆಯಬೇಕಾದರೆ ಸರ್ಕಾರ ಒಂದು ಲಕ್ಷ ರೂಪಾಯಿಗಳ ವರಮಾನ ನಿಗದಿ ಮಾಡಿದೆ. ಈಗಿನ ವಿದ್ಯಾಭ್ಯಾಸದ ಮಟ್ಟ, fee structure ಇವೆಲ್ಲವನ್ನು ನೀಡಿದಾಗ ಆ ಒಂದು ಲಕ್ಷ ರೂ.ಗಳ ಮಿತಿಯಲ್ಲಿ ಮಾಡಿಬಿಟ್ಟು ಕೊಡುವುದಕ್ಕಾಗುವುದಿಲ್ಲ. ಅದನ್ನು 2 ಲಕ್ಷ ರೂ. ಗಳಿಗೆ ಏರಿಸಿ, ಅವರಿಗೆಲ್ಲ ವಿದ್ಯಾಭ್ಯಾಸಕ್ಕೆ scholarship ಪಡೆಯುವುದಕ್ಕೆ ಕೇಂದ್ರ ಸರ್ಕಾರ ಮಾಡುವುದಕ್ಕೆ ಅದನ್ನು ಅನುವು ಮಾಡುವುದಕ್ಕೆ ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕು. ಇಲ್ಲವೆಂದರೆ ಈ SC/ST ಮಕ್ಕಳಿಗೆ ಕಷ್ಟವಾಗುತ್ತದೆ.

ಶ್ರೀ ಸಿದ್ದರಾಮಯ್ಯ: ಯಾವ ಕಾಲದಲ್ಲಿ ಕೂಡ ಪರಿಶಿಷ್ಟ ಜಾತಿಯವರಿಗೆ ಪರಿಶಿಷ್ಟ ವರ್ಗದವರಿಗೆ ಇಷ್ಟೊಂದು ಹಣ allocate ಮಾಡಲಿಲ್ಲ. ನಾವು ಮಾಡಿಬಿಟ್ಟಿದ್ದೇವೆಂದು ಬಹಳ ಪ್ರಚಾರ ಮಾಡಿದರು. ಎಲ್ಲಿ? ಇವೆಲ್ಲ ಏಕೆ ಆಗಲಿಲ್ಲ? ಆದ್ದರಿಂದ I demand. 450ರೂ. ಇರುವುದನ್ನು ಕನಿಷ್ಟ 600 ರೂ. ಗಳಿಗೆ ತಿಂಗಳ diet charge ಅನ್ನು ಏರಿಸಬೇಕು. ಈಗ ಅವರಿಗೆ BPL card ಅಕ್ಕಿ ಸಿಗುತ್ತಿಲ್ಲ. ಏಕೆಂದರೆ ಹಿಂದೆ 3 ರೂ. ಗಳ ಅಕ್ಕಿ ಸಿಗುತ್ತಿತ್ತು. ಈಗ ಅದೂ ಸಿಗುವುದಿಲ್ಲ. ಅವರಿಗೆ ಪೌಷ್ಠಿಕ ಆಹಾರ ಸಿಗುತ್ತಿಲ್ಲ. ಒಳ್ಳೆಯ ಆಹಾರ ಸಿಗುತ್ತಿಲ್ಲ. ಅವರಿಗೆ breakfast, ಮಧ್ಯಾಹ್ನದ ಊಟ ಕೊಡುವುದಕ್ಕಾಗುತ್ತಿಲ್ಲ. ರಾತ್ರಿ ಊಟ ಹೊಟ್ಟೆ ತುಂಬಾ ಕೊಡುವುದಕ್ಕಾಗುತ್ತಿಲ್ಲ. ಆದ್ದರಿಂದ I demand. ಪರಿಶಿಷ್ಟ ಜಾತಿ pre metric ಮಕ್ಕಳಿಗೆ ಕೊಡುತ್ತಿರುವ ಆ 450ರೂ. ಇರುವುದನ್ನು 600 ರೂ.

ಮಾಡಿ. ಹಾಗೆಯೇ 50 ರೂ. ಕೊಡುತ್ತಿರುವುದನ್ನು 750 ರೂ.ಗೆ ಹೆಚ್ಚು ಮಾಡಿ. ಹೊಟ್ಟೆ ತುಂಬ ಎರಡು ಹೊತ್ತು ಊಟವನ್ನಾದರೂ ಮಾಡಲಿ, breakfast ಇರಲಿ. ಈ ಬಿಸಿಯೂಟದ ವ್ಯವಸ್ಥೆ ಬೇರೆ. ಬಿಸಿಯೂಟ ಜನರಲ್ ಆಗಿ ಎಲ್ಲಾ ಮಕ್ಕಳಿಗೂ ಕೊಡುತ್ತಾರೆ. ನಾನು ಹೇಳುತ್ತಿರುವುದು ಪರಿಶಿಷ್ಟ ಜಾತಿಯ ಹಾಸ್ಟೆಲ್‌ಗಳು, ಹಿಂದುಳಿದ ಜಾತಿಯ ಹಾಸ್ಟೆಲ್‌ಗಳು, ಅಲ್ಪಸಂಖ್ಯಾತರ ಹಾಸ್ಟೆಲ್‌ಗಳು ಏನಿವೆ, ಈ ಹಾಸ್ಟೆಲ್‌ಗಳಲ್ಲಿ ಓದುವ ಮಕ್ಕಳ ಬಗ್ಗೆ ಹೇಳುತ್ತಿದ್ದೇನೆ. SC/ST Corporation ನಿಂದ ಇವರೇನು ಸಾಲ ತೆಗೆದುಕೊಂಡಿದ್ದಾರೆ ಅದನ್ನು ರೈತರ ಸಾಲ ಹೇಗೆ ಮನ್ನಾ ಮಾಡುತ್ತಿದ್ದೀರಿ, ಅದೇ ತರಹ ಇವರದು ಸಹ ಮನ್ನಾ ಮಾಡಿ ಎಂದು ನಾವು ಕಳೆದ ಸಲ Demand ಮಾಡಿದೆವು SC/ST Coporation ನಿಂದ ಏನು ಸಾಲ ತೆಗೆದುಕೊಂಡಿದ್ದಾರೆ ಅವರೂ ಕೂಡ ಅವಕಾಶ ವಂಚಿತ, ನಿರ್ಗತಿಕ ಜನರಲ್ಲವೇ? ಅಲ್ಲಿಂದ ಸಾಲ ತೆಗೆದುಕೊಂಡಿರುವುದು ಭಾರೀ ಹಣವೇನೂ ಇಲ್ಲ. ಅದನ್ನು ಕೂಡ ಮನ್ನಾ ಮಾಡಿ, ಈ ತರಹ ಅನೇಕ ಇಲಾಖೆಗಳ ಬಗ್ಗೆ ಸಹ ನಾನು ಹೇಳಬಹುದು. ಆದರೆ, ಸಮಯದ ಅಭಾವದಿಂದ ಎಲ್ಲಾ ಇಲಾಖೆಗಳ ಕಡೆಗೆ ಗಮನಹರಿಸುವುದಕ್ಕೆ ಆಗುತ್ತಿಲ್ಲ. ಅದಕ್ಕೆ ನಾನು ಹೇಳಿದ್ದೇನೆಂದರೆ, 28 ಬೇಡಿಕೆಗಳ ಮೇಲಿನ ಚರ್ಚೆಯನ್ನು ಒಟ್ಟಿಗೆ ಬಿಟ್ಟರೆ ಯಾವುದರ ಮೇಲೆ ಚರ್ಚೆ ಮಾಡಬೇಕು? ಹಾಗಾಗಿ, Management of expenditure is very bad. It is the most indisciplined way of expending the money. So, ಈ ತರಹ ಮಾಡಿ ನಾವು ಏನು ಈ ರಾಜ್ಯದಲ್ಲಿ ಕಳೆದ 60 ವರ್ಷಗಳಿಂದ ಯಾವ ಸರ್ಕಾರವೂ ಮಾಡಿಲ್ಲ. 60 ವರ್ಷಗಳ ಕಾಲ ಯಾರೂ ಮಾಡಿರಲಿಲ್ಲ. ಇಂಥ ಮುಖ್ಯಮಂತ್ರಿ ಬಂದಿರಲಿಲ್ಲ, ಇಂಥ ಉಪ ಮುಖ್ಯಮಂತ್ರಿ ಬಂದಿರಲಿಲ್ಲ. ಇಂಥ ಮಂತ್ರಿಗಳೇ ಬಂದಿರಲಿಲ್ಲವೆಂದು ಹೇಳಿಕೊಳ್ಳುವುದು. 16, 18 ತಿಂಗಳಲ್ಲಿ ಎಲ್ಲ ಆಗಿಹೋಗಿಬಿಟ್ಟಿದು, ಅಲ್ಲವೇ? ಇನ್ನು ಏನೂ ಉಳಿದಿಲ್ಲ ಅಲ್ಲವೇ? ಗಂಗಾಕಲ್ಯಾಣಕ್ಕೆ ಒಂದು ಲಕ್ಷ ರೂ. ಗಳಿಗಿಂತ ಹೆಚ್ಚಿಗೆ ಏಕೆ ಕೊಡಬಾರದು? (ಗೊಂದಲ) ನಾನು ಏನು ಹೇಳಿದ್ದೇನೆ ಗೊತ್ತಾ? ಆಲಂಗೂರು ಶ್ರೀನಿವಾಸ್ ರವರೇ, ಮೊದಲು ಕೆಲಸ ಮಾಡಿ ಆಮೇಲೆ ಹಣ ತೆಗೆದುಕೊಳ್ಳಿ ಎಂದು ನಾನು KEB ಯವರಿಗೆ ಹೇಳಿದ್ದೆ. ಮೊದಲು electrification ಮಾಡಿ ಅವರಿಗೆ connection ಕೊಟ್ಟು ಹಣ ಪಡೆದುಕೊಳ್ಳಿ ಎಂದು ಕಟ್ಟುನಿಟ್ಟಾಗಿ ಹೇಳಿದ್ದೆ. ರೈತರ pump set ಗಳಿಗೋಸ್ಕರ, ಅವರು ಖರ್ಚು ಮಾಡತಕ್ಕಂಥ power ಗೆ ಎಂದು ಒಂದು ವರ್ಷಕ್ಕೆ 1800 ಕೋಟಿ, 1750 ಕೋಟಿ ರೂಪಾಯಿಗಳನ್ನು KEB ಗೆ subsidy ಕೊಡುತ್ತೇವೆ.

ಅದನ್ನು ಕೊಡಿ ಎಂದು ಹೇಳಿದ್ದೆ, ಪರಿಶಿಷ್ಟ ಜಾತಿಯವರಿಗೂ ಕೊಡಿ. ಒಂದು ಲಕ್ಷ ರೂಪಾಯಿಗಳಿಗೆ ಏಕೆ ನಿಲ್ಲಿಸಿದ್ದಿರಿ? ಇನ್ನೂ ಹೆಚ್ಚಿಗೆ ಹಣವನ್ನು ಕೊಡಿ. ಅನೇಕ ಜನ bore well ಕೊರೆಸಿ ಅದಕ್ಕೆ electrification ಆಗದೆ ಹಾಗೆಯೇ ನಿಂತಿದೆ. ಕೆಲವು ಕಡೆ bore well ಅನ್ನೇ ಕೊರೆಸಿಲ್ಲ. Bore digging ಅನ್ನೇ ಮಾಡಲಿಲ್ಲ. ಈ ತರಹ ರಾಜ್ಯದಲ್ಲಿ ನಡೆಯುತ್ತಿದೆ. ಇವರ allocation ಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, paln ನಲ್ಲಿ 17782 ಕೋಟಿ ರೂ. ಗಳು ಎಂದು ಹೇಳಿದ್ದೀರಿ. 1571 ಕೋಟಿ ರೂಪಾಯಿಗಳನ್ನು ನಂಜುಂಡಪ್ಪನವರ ವರದಿ ಪ್ರಕಾರ ಖರ್ಚು ಮಾಡಬೇಕೆಂದು ನೀವು ಇಲ್ಲಿ ಒಂದು ಯೋಜನ ಪತ್ರ, action plan ಕೊಟ್ಟಿದ್ದೀರಿ. 17782 ಕೋಟಿ ರೂ. ಗಳ ಒಳಗೆಯೇ 1571 ಕೋಟಿ ನಂಜುಂಡಪ್ಪನವರ ವರದಿ, regional imbalance ಅನ್ನು ಸರಿಮಾಡುವುದಕ್ಕೆ ಇಟ್ಟಿದ್ದೀರಿ. ಅಂದರೆ ಆ ಹಣ ಒಟ್ಟು plan ಒಳಗಡೆಯೇ ಇದೆ. ನೀವು 17782 ಕೋಟಿ ರೂ.ಗಳಲ್ಲಿ 1571 ಕೋಟಿ ರೂ.ಗಳನ್ನು ತೆಗೆದು ಹಾಕಿದರೆ plan ನಲ್ಲಿ ಎಷ್ಟು ಉಳಿದುಕೊಳ್ಳುತ್ತದೆ? 16211 ಕೋಟಿ ರೂ. ಗಳು ಆಗುತ್ತದೆ. ಕಳೆದ ವರ್ಷ ನಿಮ್ಮ plan 16165 ಕೋಟಿ ರೂ. ಗಳಿತ್ತು. ಹಾಗಾದರೆ plan growth ಎಲ್ಲಿ? Where is the growth? If there is no plan growth, where is the development? ಅದಕ್ಕೋಸ್ಕರ ಎಲ್ಲಾ ಇಲಾಖೆಗಳ ಹಣದಲ್ಲಿ cut ಮಾಡಿಬಿಟ್ಟಿದ್ದಾರೆ. Irrigation ಗೆ cut, power ಗೆ cut, agricultureಗೆ cut, ಹೀಗೆ ಒಂದು ತರಹ power cut ಆದ ಹಾಗೆ ಎಲ್ಲದರಲ್ಲೂ ಹಣ cut ಮಾಡಿದ್ದಾರೆ. ಏಕೆಂದರೆ ಇವರ plan 17782 ಕೋಟಿ, ಕಳೆದ ವರ್ಷ 16165 ಕೋಟಿ plan ಇತ್ತು. ಈ ವರ್ಷದ 17782 ಕೋಟಿ ರೂ. ನಲ್ಲಿ minus 1571 ಕೋಟಿ ರೂ. ಹೋಯಿತೆಂದರೆ ಉಳಿದುಕೊಳ್ಳುವುದು 16211 ಕೋಟಿ ರೂ. ನಿಮ್ಮ ಜಿಲ್ಲೆ ಸಹ ಬರುತ್ತದೆ ಮಾನ್ಯ ಪ್ರಕಾಶ್ ರವರೆ, ನೀವು ಇದನ್ನು ಎಲ್ಲೋ ಒಂದು ಕಡೆ ಹೇಳಿದ್ದಿರಿ. ಹಾಗಾದರೆ, ನಂಜುಂಡಪ್ಪ ವರದಿಯಂತೆ ಯಾರೂ ಮಾಡಿಲ್ಲ. ನಾವು action plan ಮಾಡಿದ್ದೇವೆಂದು ಹೇಳುತ್ತೀರಿ. ನೀವು ಮಾಡುವುದಾಗಿದ್ದರೆ ಕೊನೆಯ ಪಕ್ಷ 1570 ಕೊಟಿ ರೂ. ಗಳನ್ನು additional ಆಗಿ ಇಡಬೇಕಾಗಿತ್ತು. with addition to plan size of Rs. 7782 crores, additional ಆಗಿ ಇಡಬೇಕಾಗಿತ್ತು. ಇದನ್ನು ನಾವು ಮುಂದೆ resoures mobilization ಮಾಡಿ ಇಡುತ್ತೇವೆಂದು ಹೇಳುತ್ತೀರಿ. Resources mobilization ಅನ್ನು ಎಲ್ಲಿ ಮಾಡುತ್ತಿದ್ದೀರಿ? ಎಲ್ಲಿ ಮಾಡಿದ್ದೀರಿ? ಏನೂ ಮಾಡಿಲ್ಲ. Additional resources ಮಾಡಿಕೊಳ್ಳುವುದಕ್ಕೂ ವ್ಯವಸ್ಥೆ

ಮಾಡಿಕೊಂಡಿಲ್ಲ. ಆ plan ಒಳಗಡೆ ಇರುವ ಹಣವನ್ನೇ ಒಂದು action plan ಪುಸ್ತಕ ಕೊಟ್ಟುಬಿಟ್ಟು ಆ ಬೆಳಗಾಂನಲ್ಲಿ ನಡೆದಂಥ ಅಧಿವೇಶನದಲ್ಲಿ ಮಾಡಿಬಿಟ್ಟು, ಏನು, ಉತ್ತರ ಕರ್ನಾಟಕದಲ್ಲೆಲ್ಲ ನಾವು ಅಭಿವೃದ್ಧಿಪಡಿಸಿಬಿಡುತ್ತೇವೆ, ಮುಂದಿನ ಅಧಿವೇಶನ ಅಲ್ಲಿಯೇ ಮಾಡುತ್ತೇವೆಂದು Deputy Chief MInister ರವರು ಹೇಳಿದ್ದಾರೆ. Where is the money? to address the problems of the imbalance, regional imbalance, ಎಲ್ಲಿದೆ money? ಇದಕ್ಕೆ ಹಣವನ್ನೇ ಇಟ್ಟಿಲ್ಲ. ನಂಜುಂಡಪ್ಪನವರು 2002ರಲ್ಲಿ ವರದಿ ಕೊಟ್ಟಾಗ Regional imbalance ಅನು ತೆಗೆದು ಹಾಕುವುದಕ್ಕೆ 31 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಹೇಳಿದ್ದರು. ಇದನ್ನು ಆವತ್ತಿನ cost, prices ಮೇಲೆ ಹೇಳಿದ್ದಾರೆ. ಆದರೆ, ಇವತ್ತಿನ prices ನ ಆಧಾರದಲ್ಲಿ inflation ಆಧಾರದ ಮೇಲೆ ಲೆಕ್ಕ ಹಾಕಿದರೆ 31 ಸಾವಿರ ಕೋಟಿ ಇದ್ದದ್ದು ಈಗ 50 ಸಾವಿರ ಕೋಟಿ ರೂ. ಆಗಬೇಕಾಗುತ್ತದೆ. ಇಷ್ಟೊತ್ತಿಗೆ 50 thousand crores, 2002ರಲ್ಲಿ 31 ಸಾವಿರ ಕೋಟಿ ರೂ. ಗಳಲ್ಲಿ normal plan ನಲ್ಲಿ 15 ಸಾವಿರ ಕೋಟಿ ರೂ. ಬರುತ್ತದೆ, additional ಆಗಿ ನೀವು 16 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು. ವರ್ಷಕ್ಕೆ 2000 ಕೋಟಿ ರೂ. ಖರ್ಚು ಮಾಡಬೇಕು. ಅದರಂತೆ 8 ವರ್ಷಗಳಲ್ಲಿ face out ಮಾಡಿಕೊಂಡು ಮಾಡಬೇಕೆಂದು ಹೇಳಿದಿರಿ. ಈಗ ಒಂದು ವರ್ಷಕ್ಕೆ ಅವರು 2 ಸಾವಿರ ಕೋಟಿ ರೂ. ಎಂದು 10ನೇ ಇಸವಿಯೊಳಗೆ ಮಾಡಬೇಕಾಗಿತ್ತು. ಅಂದರೆ, 2002 ರಿಂದ 2010ನೇ ಇಸವಿಯೊಳಗೆ ಮುಗಿಸಬೇಕೆಂದು ಹೇಳುತ್ತಾರೆ. ಅದಕ್ಕೆ 16 ಸಾವಿರ ಕೋಟಿ ರೂ. ಬೇಕಾಗುತ್ತದೆ. ಈಗ 2007–08 ರಿಂದ ಅಂದರೆ 2017–1018ನೇ ಇಸವಿಗೆ ಈಗ ಆ 16 ಸಾವಿರ ಕೋಟಿ ರೂ. 32 ಸಾವಿರ ಕೋಟಿ ರೂ. ಆಗಿದೆ. ಈಗ ನೀವು ಪ್ರತಿ ವರ್ಷ 3,000, 4,000 ಕೋಟಿ ರೂ. ಖರ್ಚು ಮಾಡಬೇಕು. ಪ್ರಾಮಾಣಿಕವಾಗಿ ಮಾಡಬೇಕು. ಅದನ್ನು ಜಾರಿ ಮಾಡುತ್ತೇವೆ ಎನ್ನುವುದಾದರೆ, imbalance ಸರಿಪಡಿಸುತ್ತೇವೆ ಎನ್ನುವುದಾದರೆ, ಒಂದು ವರ್ಷಕ್ಕೆ ಕನಿಷ್ಟ 3 ರಿಂದ 4 ಸಾವಿರ ಕೋಟಿ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. 1575 ಕೋಟಿ ರೂಪಾಯಿ ಬಜೆಟ್‌ನಲ್ಲಿರುವ ಹಣವನ್ನೇ ತೋರಿಸಿ ಉತ್ತರ ಕರ್ನಾಟಕದವರ ಮೂಗಿಗೆ ತುಪ್ಪ ಹಚ್ಚಿ ಮಾಡಿದ್ದಾರೆ. ಇದೊಂದು ಭಾಗ. Regional imbalance ಸರಿಪಡಿಸುತ್ತೇವೆಂದು ಇಲ್ಲಿ action paln ಕೊಟ್ಟು, 1,000 High School ಕೊಟ್ಟಿರಿ, ಹಾಸ್ಟೆಲ್, Junior Collages, ಪ್ರಥಮ ದರ್ಜೆ ಕಾಲೇಜುಗಳನ್ನು, ಮೊರಾರ್ಜಿ ದೇಸಾಯಿ ಶಾಲೆಗಳನ್ನು ಕೊಟ್ಟಿರಿ. ಎಲ್ಲಿಗೆ ಕೊಟ್ಟಿರಿ?

Most Backward 39 ತಾಲ್ಲೂಕುಗಳು, more backward 40 ತಾಲ್ಲೂಕುಗಳು, backward 35 ತಾಲ್ಲೂಕುಗಳು ಅವುಗಳಿಗೆ ಎಷ್ಟೆಷ್ಟು ಕೊಟ್ಟಿದ್ದೀರಿ ಎಂಬ ಬಗ್ಗೆ ಇಲ್ಲಿ ಅಂಕಿ ಅಂಶ ಕೊಡಬೇಕು. ರಾಯಚೂರಿನಲ್ಲಿ ಇವತ್ತು literacy percentage 49%, ಗುಲ್ಬರ್ಗಾ ದಲ್ಲಿ 50%, SC/ST ನವರದು ಇವತ್ತಿನವರೆಗೂ literacy 51% ಇದೆ. ಮಹಿಳೆಯರ percentage 38 ಇದೆ. High school ಗಳನ್ನು ಎಲ್ಲಿಗೆ ಕೊಟ್ಟಿದ್ದೀರಿ?

ಶ್ರೀ ಡಿ. ಆರ್. ಪಾಟೀಲ್: ಹಿಂದೆ ಎಸ್.ಎಂ. ಕೃಷ್ಣರವರ ಸರ್ಕಾರವಿದ್ದಾಗ education ನಲ್ಲಿ undeveloped districts ಎಂದು 7 districts ಅನ್ನು identify ಮಾಡಿ, 60% of the educational budget must go to those 7 districts ಎಂದು ಮಾಡಿದ್ದರು. ಆ ಪ್ರಕಾರ alloacation ಆಗುತ್ತಿತ್ತು. High school, college, hostel ಎಲ್ಲ allot ಆಗುತ್ತಿತ್ತು. ಈಗ ಅದೇನೂ ಇಲ್ಲ.

ಶ್ರೀ ಡಿ.ಟಿ. ಜಯಕುಮಾರ್: ಮಾನ್ಯ ಸಿದ್ದರಾಮಯ್ಯನವರಿಗೆ ಮಾತನಾಡುವ ಕಲೆ ಚೆನ್ನಾಗಿ ಗೊತ್ತಿದೆ. ಈಗ ಅಲ್ಲಿ ಎಷ್ಟು defend ಮಾಡಿಕೊಳ್ಳುತ್ತಿದ್ದಾರೋ ಅಷ್ಟೇ ಚೆನ್ನಾಗಿ ಆಡಳಿತ ಪಕ್ಷದಲ್ಲಿ ಕುಳಿತಿದ್ದಾಗಲೂ ನಾನು ಅದು ಮಾಡಿದೆ, ಇದು ಮಾಡಿದೆ, ಯಾವ ಅರ್ಥ ಸಚಿವರೂ ಕೂಡ ಮಾಡಿರಲಿಲ್ಲ ಎನ್ನುತ್ತಿದ್ದರು.

ಛೇರ್ಮನ್: ನೀವು note ಮಾಡಿಕೊಂಡು ನಂತರ ನೀವು defend ಮಾಡಿಕೊಳ್ಳಬಹುದು.

ಶ್ರೀ ಡಿ.ಟಿ. ಜಯಕುಮಾರ್: ಮಾತಿನಲ್ಲಿ ಹೇಳುವುದು ಸುಲಭ.

ಶ್ರೀ ಸಿದ್ದರಾಮಯ್ಯ: ಮಾತಲ್ಲ. Facts and figures ಇದೆ. ದಾಖಲಾತಿಗಳಿವೆ. ನಾನು yield ಆಗಿಲ್ಲ. ನೀವು ಉತ್ತರ ಕೊಡುವಾಗ ಏನೇನು ಹೇಳಬೇಕೋ ಹೇಳಿ.

ಶ್ರೀ ಡಿ.ಟಿ. ಜಯಕುಮಾರ್: ಮಾತಿನಿಂದ ಮನೆ ಕಟ್ಟುತ್ತಾರೆ.

ಶ್ರೀ ಸಿದ್ದರಾಮಯ್ಯ: ನೀವು ಈಗ ಕಟ್ಟಿದ್ದು ಆಯ್ತಲ್ಲ. ಈಗ ಕಟ್ಟುತ್ತಿದ್ದೀರಲ್ಲ. ನಾವು ಮಾತಿನಲ್ಲಿ ಮನೆ ಕಟ್ಟುವುದಿಲ್ಲ. ನಾನು ಏನು ಹೇಳುತ್ತೇವೋ ಅದನ್ನು ಮಾಡುತ್ತೇವೆ.

ಡಾ॥ ಹೆಚ್.ಸಿ. ಮಹಾದೇವಪ್ಪ: ನೀವು ಕೊಟ್ಟಿರುವ ಅಂಕಿ ಅಂಶಗಳ ಬಗ್ಗೆ ಮಾತನಾಡುತ್ತಿದ್ದಾರೆ. Based on that he is talking. ಸುಮ್ಮಸುಮ್ಮನೆ ಮಾತನಾಡುವುದಕ್ಕಾಗುತ್ತದೆಯೇ?

ಶ್ರಿ ಸಿದ್ದರಾಮಯ್ಯ: ಅಂಕಿ ಅಂಶ ಕೊಟ್ಟು ಹೇಳುತ್ತಿದ್ದೇನೆ. Can't you understand?

ಡಾ॥ ಹೆಚ್.ಸಿ. ಮಹಾದೇವಪ್ಪ: ಸರ್ಕಾರದಲ್ಲಿದ್ದುಕೊಂಡು ಹೀಗೆ ಮಾತನಾಡಿದರೆ ಹೇಗೆ? ಏನೇನು ದಾಖಲಾತಿ ಕೊಟ್ಟಿದ್ದೀರಿ ಅದರ ಆಧಾರದ ಮೇಲೆಯೇ ಮಾತನಾಡುತ್ತಿದ್ದಾರೆ. ಸುಮ್ಮಸುಮ್ಮನೆ ಮಾತನಾಡುವುದಕ್ಕಾಗುತ್ತದೆಯೇ? ಈ ಕಡೆ ಇದ್ದಾಗ ಏನು achieve ಮಾಡಿದ್ದೀರ ಅಂದರೆ?

ಶ್ರೀ ಸಿದ್ದರಾಮಯ್ಯ: ನಾವು ಹಾಗೆ ಹೇಳಿದ್ದೇವೆಯೇ? 35 ವರ್ಷ ಯಾವ ಸರ್ಕಾರ ಮಾಡದೇ ಇರುವುದನ್ನು ನಾವು ಮಾಡಿದ್ದೇವೆಂದು ಹೇಳಿದ್ದೇವೆಯೇ?

ಶ್ರೀ ಡಿ.ಟಿ. ಜಯಕುಮಾರ್: ನೀವಿದ್ದಾಗ 100 ರೂ.ಗಳ ವೃದ್ಧಾಪ್ಯ ವೇತನ ಕೊಡುತ್ತಿದ್ದಿರಿ. ಇವತ್ತು 400 ರೂ. ವೃದ್ಧಾಪ್ಯ ವೇತನ ಮತ್ತು ವಿಧವಾ ವೇತನ ಕೊಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ: ಅದಕ್ಕೆ ಕೇಂದ್ರ ಸರ್ಕಾರವೂ ಕೊಡುತ್ತಿದೆ. ರಾಜ್ಯ ಸರ್ಕಾರ ಮಾತ್ರ ಕೊಡುವುದಲ್ಲ. Government of India is also contributing to that. you are a Minister. ಮಧ್ಯೆ ಮಧ್ಯೆ ಏಳುವುದೇನು? I am not Yielding. you take the permission from the chair and speak. ಅವರು ಒಪ್ಪಿದರೆ ಮಾತನಾಡಿ. ಮಾನ್ಯ ಛೇರ್ಮನ್‌ರವರೆ, ನೀವು ಅವರಿಗೆ ಮಾತನಾಡುವುದಕ್ಕೆ permission ಕೊಟ್ಟಿದ್ದೀರಾ?

ಛೇರ್ಮನ್: ಇಲ್ಲ. ನಿಮಗೂ ಅವಕಾಶವಿದೆ. ಉತ್ತರ ಕೊಡುವ ಸಂದರ್ಭದಲ್ಲಿ ಹೇಳಬಹುದು.

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್: ಸುಮ್ಮನಿರಿ. ನಾವೂ senior ಇದ್ದೇವೆ. ಒಂದು ದಿವಸವಾದರೂ ಸಿದ್ದರಾಮಯ್ಯನವರು rules ಪ್ರಕಾರ ಮಾತನಾಡಿ ಬಿಡಲಿ. ಅವರು ಹೊಸಬರಂತೆ ಪದೇ ಪದೇ ಮಾತನಾಡಲು...

(ಗೊಂದಲ)

ಶ್ರೀ ಸಿದ್ದರಾಮಯ್ಯ: ನೀವು ಅವರ permision ತೆಗೆದುಕೊಂಡು ಮಾತನಾಡಿ, I am not yielding. (ಗೊಂದಲ) You take permission of the Chair.

(ಗೊಂದಲ)

ಛೇರ್ಮನ್: ದಯಮಾಡಿ ಸದಸ್ಯರಾರೂ ಮಧ್ಯದಲ್ಲಿ ಎದ್ದು ಮಾತನಾಡಬೇಡಿ.

ಡಾ॥ ಹೆಚ್.ಸಿ. ಮಹಾದೇವಪ್ಪ: Rules and Regulations ಮಾತನಾಡುವ ಮಂತ್ರಿಗಳು ಈಗ ಮಧ್ಯದಲ್ಲಿ ಎದ್ದು ಮಾತನಾಡಿದವರು ನೀವಾ ಅಥವಾ ಅವರೇ?

ಶ್ರೀ ಸಿದ್ದರಾಮಯ್ಯ: ನಾನು yield ಆಗಿಲ್ಲ. ನಾನು yield ಆದರೆ ಮಾತನಾಡಿ. ನಾವಿದ್ದಾಗ ಏನು ಮಾಡಿದೆವು ಎಂದು ಆವತ್ತು ವಿರೋಧ ಪಕ್ಷದಲ್ಲಿದ್ದವರು ಕೇಳಿದರು. ನಾನು ಇದ್ದಾಗ ಏನು ಮಾಡಿದ್ದೇನೆ, ಏನು ಹೇಳಿದ್ದೇನೆ, it was subject to the scrutiny of the House, subject to scrutiny of the then opposition. ನಾನೇನಾದರೂ ಮಾತನಾಡಿದ್ದರೆ, ತಪ್ಪು ಮಾಡಿದ್ದರೆ ಅವರು ಹೇಳುತ್ತಿದ್ದರು. ಇವತ್ತು ನೀವು ಸರ್ಕಾರದಲ್ಲಿದ್ದೀರಿ, ನೀವೇನು ತಪ್ಪು ಮಾಡಿದ್ದೀರಿ ಎಂದು ಕೇಳುವುದಕ್ಕೆ I have got every right. I am in the opposition. ನಾವು ಅಂಕಿ ಅಂಶವಿಲ್ಲದೇ ಆಧಾರವಿಲ್ಲದೆ ಮಾತನಾಡಿದರೆ., I can understand.

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್: ಅವರು ಹಾಗೆ ಮಾತನಾಡಿದರೆ, ನಾವೂ ಉದ್ಧಟತನದಿಂದ ಮಾತನಾಡಬೇಕಾಗುತ್ತದೆ. ನಮಗೇನೂ ರೈಟ್ ಇಲ್ಲವೇ?

(ಗೊಂದಲ)

ಛೇರ್ಮನ್: ನಿಮಗೆ ಅವಕಾಶವಿದೆ. ಆಗ ಮಾತನಾಡಿ.

ಶ್ರೀ ಸಿದ್ದರಾಮಯ್ಯ: ನಿಮಗೆ ರೈಟ್ ಇದ್ದಾಗ ಮಾತನಾಡಿ.

(ಗೊಂದಲ)

ಛೇರ್ಮನ್: ದಯವಿಟ್ಟು, ಉತ್ತರ ಕೊಡುವಾಗ ಹೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನೀವು ಉತ್ತರ ಕೊಡುವಾಗ whatever you want, you speak. You have got every right to reply.

ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಳೂರು. ಸಚಿವರಿಗೆ ಗೌರವ ಕೊಡಲಿ. ಅವರೂ ಹಿರಿಯ ಸಚಿವರು. ಅವರಿಗೂ ಗೌರವ ಕೊಡಬೇಕು.

ಶ್ರೀ ಸಿದ್ದರಾಮಯ್ಯ: ಸರ್ಕಾರದವರು ಉತ್ತರ ಕೊಡುವಾಗ ಅವರೇನು ಹೇಳಬೇಕೋ ಹೇಳಲಿ. ಅವರು ಕೊಟ್ಟಿರುವ ಬಜೆಟ್ ಪುಸ್ತಕ, ಬಜೆಟ್ ಸ್ಪೀಚ್, Economic Survey, ಬೇರೆ ಬೇರೆ ಅವರು ಕೊಟ್ಟಿರುವ Annual Reports, ಅವರು ಕೊಟ್ಟಿರುವ Performance Budget ಇವನ್ನೇ ಆಧಾರವಾಗಿಟ್ಟುಕೊಂಡು ನಾನು ಮಾತನಾಡುತ್ತಿದ್ದೇನೆ. ಅದಕ್ಕೆ ಹಣಕಾಸು ಮಂತ್ರಿಗಳಿದ್ದಾರೆ. ಅವರಿಲ್ಲವೆಂದರೆ, dispute ಮಾಡಲಿ. ನಾನು ಹೇಳಿರುವ figures ಸರಿಯಿಲ್ಲವೆಂದರೆ, ಅಥವಾ ತಪ್ಪು ಲೆಕ್ಕ ಕೊಟ್ಟಿದ್ದರೆ dispute ಮಾಡಲಿ. you dispute it. ಸರಿಯಿಲ್ಲವೆಂದು ಹೇಳಿ. ಸದನಕ್ಕೆ ಹೇಳಿ. Prove ಮಾಡಿ. I will take back my words. ಇವತ್ತು ಇವರು ಹಣವನ್ನು ಹಂಚಿಕೆ ಮಾಡುವುದರಲ್ಲಿ ಎಲ್ಲಿ ಯಾವ ಇಲಾಖೆಗೆ ಯಾವುದು priority ಇದೆ, ಅಲ್ಲಿ ಖರ್ಚು ಮಾಡುವುದನ್ನು ಮಾಡಿಲ್ಲ. ಅದು ಆಶ್ರಯ ಮನೆ ಕಟ್ಟುವುದಿರಬಹುದು, ಫುಡ್ ಇರಬಹುದು, ನೀರಾವರಿ ಇರಬಹುದು, ಇಂಧನ ಇರಬಹುದು. ಇವತ್ತು ಇಂಧನಕ್ಕೆ ಹೋದ ಸಾರಿಗಿಂತ ಈ ವರ್ಷ ಕಡಿಮೆಯಾಗಿದೆ. ಈ ವರ್ಷ ಬಜೆಟ್ ಅಲೋಕೇಷನ್ ಕಡಿಮೆಯಾಗಿದೆ. ಕಳೆದ 3 ವರ್ಷಗಳಿಂದ ಒಂದೇ ಒಂದು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗಿಲ್ಲ. 2004-05ರಲ್ಲಿ 4994 MW ವಿದ್ಯುತ್ ಉತ್ಪಾದನೆಯಾಗಿದೆ. ಅದೇ ರೀತಿ 2005-06, 2006-07ರಲ್ಲಿಯೂ 4994 MW ಇದೆ. ಇಷ್ಟೇ. ಮತ್ತೆ ನೀವು ವಿದ್ಯುತ್ ಅನ್ನೇ ಉತ್ಪಾದನೆ ಮಾಡದೇ ಹೋದರೆ ಹೇಗೆ? ಇದು ಅತ್ಯಂತ ಪ್ರಾಮುಖ್ಯವಾದ ಕಚ್ಚಾ ವಸ್ತು. ಕೈಗಾರಿಕೆಗೆ, Agriculture ಗೆ, Service sector ಗೆ ಎಲ್ಲಕ್ಕೂ ಕೂಡ ಒಂದು MW ವಿದ್ಯುತ್ ಉತ್ಪಾದನೆ ಮಾಡಿಲ್ಲ. ಪುಸ್ತಕದಲ್ಲಿ ನೋಡಿ. 2004ರಿಂದ 2007 ರವರೆಗೂ 4994 MW ವಿದ್ಯುತ್ ಇದೆ. ಇವರು 3 ವರ್ಷಗಳಿಂದ ಒಂದೇ ಒಂದು MW ವಿದ್ಯುತ್ addition ಆಗಿಲ್ಲ. Demand is increasing. Demandಗೂ supplyಗೂ ಒಂದಕ್ಕೊಂದು ತಾಳೆಯೇ ಇಲ್ಲ. ಬೆಳೆಯುತ್ತಿದೆ. ಇವತ್ತಿನವರೆಗೆ ನಾವು ಜಲ ವಿದ್ಯುತ್ ಉಪಯೋಗ ಮಾಡಿಕೊಂಡಿರುವುದು ಸುಮಾರು ಮೂರೂವರೆ ಸಾವಿರ, ಮೂರು ಸಾವಿರದ 600 MW. ನಮಗೆ Potential ಇರುವುದು 7750MW. Not even 50% ಕೂಡ ಇವತ್ತಿನವರೆಗೆ ನಾವು ಬಳಸಿಕೊಳ್ಳುವುದಕ್ಕಾಗಲಿಲ್ಲ. Second phase ಶುರು ಮಾಡಲೇ ಇಲ್ಲ. ವರಾಹಿ ಅದಕ್ಕೆಲ್ಲ ಹಣ ಕೊಡಲಿಲ್ಲ. ಹಣ ಕೊಡದೇ ಹೇಗಾಗುತ್ತದೆ? ಕೇಂದ್ರ ಸರ್ಕಾರದಿಂದ ಬಂದ ಹಣ. Accelerated Power Development Scheme ಗೆ 1300 ಚಿಲ್ಲರೆ ಕೋಟಿ ರೂ. ಬಂತು. 2004 ರಿಂದ 2005ರಲ್ಲಿ

ಕೊಟ್ಟಿದ್ದಾರೆ ಅದು ಇವತ್ತಿನವರೆಗೆ ಖರ್ಚಾಗಿಲ್ಲ. ಕೇವಲ 900 ಕೋಟಿ ರೂ. ಅಷ್ಟೇ till the end of February ಖರ್ಚಾಗಿರುವುದು. ಏಕೆ ಮಾಡಲಿಲ್ಲ? ಮತ್ತೆ ಪವರ್ ಹೇಗೆ ಉತ್ಪನ್ನವಾಗುತ್ತದೆ? ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ 613 ಕೋಟಿ ರೂ. 90% subsidy, 10 % soft loan. ಆಕ್ಸಿಲರೇಟರಿಯಲ್ಲಿ 25% ಸಬ್ಸಿಡಿ ಮತ್ತು 25% ನಷ್ಟು ಕೇಂದ್ರ ಸರ್ಕಾರದಿಂದ ಸಾಲ ಮತ್ತು 50% ನಷ್ಟು ಸಾಫ್ಟ್ ಲೋನ್ ಇರುತ್ತದೆ. ಅದನ್ನು ಏಕೆ ಉಪಯೋಗಿಸಿಕೊಂಡಿಲ್ಲ? ಮತ್ತೆ ಪವರ್‌ನ್ನು ಇವತ್ತಿನವರೆಗೆ ಉತ್ಪಾದನೆ ಮಾಡಿಲ್ಲ. ಮಾನ್ಯ ರೇವಣ್ಣನವರು ಇಲ್ಲಿಲ್ಲ. Power and PWD are very important departments. ಇವತ್ತಿನವರೆಗೆ T & D Loss ಕಡಿಮೆಯಾಗಿಲ್ಲ. Even today, there is 29% T & D loss ಇದೆ. ಎಷ್ಟು ಕಡಿಮೆ ಮಾಡಿದ್ದೀರೆಂಬುದರ ಬಗ್ಗೆ ಹೇಳಿ ನೋಡೋಣ? ಇಲಾಖೆಯಲ್ಲಿ ಬಹಳ ಮಾಡಿದ್ದೇನೆಂದು ಹೇಳುತ್ತಾರಲ್ಲಾ ಎಲ್ಲಿ ಮಾಡಿದ್ದಾರೆ ಹೇಳಲಿ? T &D loss ಕಡಿಮೆ ಮಾಡಬೇಕೋ ಬೇಡವೋ ಕೆಇಬಿ ಕಾರ್ಯಚಟುವಟಿಕೆಗಳನ್ನು ನೋಡುವುದಕ್ಕಾಗಿ ನಾನೂ ಕೂಡ ಸುಮಾರು 8 ತಿಂಗಳು ಸಬ್ ಕಮಿಟಿ ಛೇರ್ಮನ್ ಆಗಿದ್ದೆ. ಮಾನ್ಯ ಪ್ರಕಾಶ್‌ರವರೂ ಕೂಡ ಆ ಸಮಿತಿಯ ಸದಸ್ಯರಾಗಿದ್ದರು. 1% ನಷ್ಟು ರಿಕವರಿ ಏನಾದರೂ ಕಡಿಮೆಯಾಗಿದೆಯೇ? The rcovery is only 36% KPCಯಿಂದ 100 ರೂಪಾಯಿಗೆ ನಾವು ಪವರ್ ತೆಗೆದುಕೊಂಡರೆ ನಮಗೆ ಬರುವುದೇ ಕೇವಲ 36 ರೂಪಾಯಿ ಮಾತ್ರ, ಬಾಕಿದೆಲ್ಲಾ Where it is going ? ಆದ್ದರಿಂದಲೇ ಎನರ್ಜಿ ಬಗ್ಗೆ ಆಡಿಟ್ ಮಾಡಿ ಎಂದು ಹೇಳಿದರೂ ಕೂಡ ಇದುವರೆಗೂ ಎನರ್ಜಿ ಆಡಿಟ್ ಆಗಲಿಲ್ಲ? ಇಷ್ಟೆಲ್ಲಾ ಪವರ್ ಬರುತ್ತದೆಯಲ್ಲಾ ಅದು ಎಲ್ಲಿಗೆ ಹೋಗುತ್ತದೆ? 42% ಪಂಪ್‌ಸೆಟ್‌ಗಳಿಗೆ ಹೋಗುತ್ತದೆಂದು ಹೇಳುತ್ತಾರೆ. ಇದು ನಿಜವಾಗಿಯೂ ಪಂಪ್‌ಸೆಟ್‌ಗಳಿಗೆ ಹೋಗುತ್ತಿದೆಯೇ? 42% ಹೋಗುತ್ತದೆ ಎಂಬುದಕ್ಕೆ ಆಧಾರ ಮತ್ತು ಲೆಕ್ಕ ಎಲ್ಲಿದೆ ಎಂದು ತೋರಿಸಲಿ? ಎನರ್ಜಿ ಆಡಿಟ್‌ನ್ನು ಏಕೆ ಮಾಡಲಿಲ್ಲ? ಎನರ್ಜಿ ಆಡಿಟ್ ಮಾಡಬೇಕೆಂದು ಹಿಂದೆಯೇ ಪ್ರಾರಂಭವಾಗಿತ್ತು. ಆದರೆ, ಅಧಿಕಾರಿಗಳು ಇದನ್ನು ಮಾಡುವುದಕ್ಕೆ ಹೋಗಲಿಲ್ಲ. ಏಕೆಂದರೆ, ಎಲ್ಲೆಲ್ಲಿ ಕಳ್ಳತನವಾಗುತ್ತಿದೆ ಎಂದು ಮತ್ತು ಯಾವ್ಯಾವ ಕೈಗಾರಿಕೆಗಳಿಗೆ ಕದ್ದು ಕೊಡುತ್ತಿದ್ದಾರೆಂಬ ಕಳ್ಳತನವೆಲ್ಲಾ ಗೊತ್ತಾಗುತ್ತದೆಂದು ಅವರು ಅವಕಾಶ ಕೊಡುತ್ತಿಲ್ಲ. ಅದರೆ, 42% ನಷ್ಟು ವಿದ್ಯುತ್ ರೈತರ ಪಂಪ್‌ಸೆಟ್‌ಗೆ ಹೋಗುತ್ತದೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಲೆಕ್ಕ ಕೊಡಿ? T &D loss 29% ಎಂದು ಅವರು ಹೇಳುತ್ತಿರುವುದು ಕೂಡ ಸರಿಯಲ್ಲ. 29% ಆಗುತ್ತಿದೆ ಎಂಬುದಕ್ಕೆ ಆಧಾರ ಎಲ್ಲಿದೆ? what is the basis to arrive? 29% ಆಗಿದೆ

ಎಂಬುದಕ್ಕೆ what is the basis? there is no basis. there are no facts. ಮತ್ತೆ ಎಲ್ಲದಕ್ಕೂ ಮೀಟರ್ ಹಾಕಿಲ್ಲ. ಮೀಟರ್ ಹಾಕದೇ ಹೇಗೆ ಗೊತ್ತಾಗುತ್ತದೆ? ಯೂನಿವರ್ಸಲ್ ಮೀಟರಿಂಗ್ ಮಾಡುತ್ತೇವೆಂದು ಹೇಳಿದರು. ಆದರೆ, ಯೂನಿವರ್ಸಲ್ ಮೀಟರಿಂಗ್ ಇಲ್ಲ. ಮತ್ತೆ ಮೀಟಿಂಗ್ ಕೂಡ ಇಲ್ಲ ಹಾಗೆಯೇ ಮಾನ್ಯ ಸಚಿವರು ಇಲ್ಲಿ ಪ್ರೆಸೆಂಟ್ ಕೂಡ ಇಲ್ಲ. ಆದ್ದರಿಂದ ಇದು ಯಾವ ರೀತಿಯಾಗಿ ಆಗಬೇಕು? ಹಳ್ಳಿಗಾಡಿಗೆ ಒಂದು ದಿವಸಕ್ಕೆ 6 ಗಂಟೆಯವರೆಗೆ ಪವರ್ ಎಲ್ಲಿ ಕೊಡುತ್ತಿದ್ದಾರೆ? ಇದು ಈಗ ಇರತಕ್ಕಂಥ ಪರಿಸ್ಥಿತಿ. ಇದಕ್ಕೆ ಹಣ ಖರ್ಚು ಮಾಡಿ ಪವರ್ ಜನರೇಟ್ ಮಾಡಬೇಕಾಗುತ್ತದೆ. ಮತ್ತೆ ಬೇಡಿಕೆ ಎಷ್ಟಿದೆ ಅದಕ್ಕೆ ಅನುಗುಣವಾಗಿ ಮಾಡಬೇಕೆಂಬುದೇ ಇಲ್ಲ. ಇಲ್ಲಿ ಸಿಗದಿದ್ದರೆ ಹೊರಗಡೆಯಿಂದಾದರೂ ಪವರ್ ತೆಗೆದುಕೊಂಡು ಬಂದರೆ? ಪವರ್ ಪರ್ಚೆಸ್ ಕಮಿಟಿ ಅಧ್ಯಕ್ಷ ಸ್ಥಾನವೇ ಬೇಡವೆಂದು ಮಾನ್ಯ ಯಡಿಯೂರಪ್ಪನವರು ಹೇಳಿದರು. ಏಕೆಂದರೆ, ಹೊರ ರಾಜ್ಯಗಳಿಂದ ಪವರ್ ಖರೀದಿ ಮಾಡಬೇಕು ಮತ್ತೆ ಇದಕ್ಕೆ ಹಣ ಕೊಡಬೇಕೆಂದು ನನಗೆ ಬೇಡವೆಂದು ಹೇಳಿಬಿಟ್ಟರು.

ಶ್ರೀ ಬಿ.ಶಿವರಾಂ:- ಅವರು ಏಕೆ ಬಿಟ್ಟರೆಂದರೆ, ಮಾನ್ಯ ರೇವಣ್ಣನವರ ಸಹವಾಸ ಬೇಡವೆಂದು ಬಿಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ:- ಇವತ್ತಿನವರೆಗೆ ಒಂದೇ ಒಂದು ಯುನಿಟ್ ಪವರನ್ನು ತೆಗೆದುಕೊಂಡಿಲ್ಲ. ಹಾಗೆಯೇ ನಡೆದುಕೊಂಡು ಬಂದಿದೆ. ಕಳೆದ ವರ್ಷ ಮಳೆ ಆದ ಪ್ರಯುಕ್ತ ಸುಮಾರು 20% ನಷ್ಟು ಹೈಡಲ್ ಪವರ್ ಜಾಸ್ತಿಯಾಯಿತು. ಮತ್ತೆ ಈ ವರ್ಷ ಕೂಡ 20% ನಷ್ಟು ಹೈಡಲ್ ಪವರ್ ಜಾಸ್ತಿಯಾಗುತ್ತದೆ. ಮಾನ್ಯ ಪ್ರಕಾಶ್‌ರವರೆ ಇದಕ್ಕೆ ದುಡ್ಡು ಕೊಡಬೇಕಲ್ಲವೆ? is it not a priority area? ಇದು ರೈತರಿಗೆ ಮತ್ತು ಬಡವರಿಗೆ ಸಂಬಂಧಪಟ್ಟಿರತಕ್ಕಂಥದಲ್ಲವೆ? 9th plan ನಲ್ಲಿ food production the growth was 2.8%. 10th plan ನಲ್ಲಿ food production growth 2.1% ಕಳೆದ ವರ್ಷ food production growth 1.2%. It is not only stagnate, food production is declining. ಇವತ್ತಿನ ದಿವಸ ನೀರಾವರಿಗೆ ದುಡ್ಡು ಕೊಡದೇ ಮತ್ತು ಪವರ್ ಜನರೇಟ್ ಮಾಡದೇ ಫುಡ್ ಪ್ರೊಡಕ್ಷನ್ ಹೇಗೆ ಹೆಚ್ಚಾಗುತ್ತದೆ?

ಶ್ರೀ ಎಂ.ಪಿ. ಪ್ರಕಾಶ್:- ತಾವು ಬಹಳ ಮುಖ್ಯವಾದ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೀರಿ. ಮಧ್ಯೆ ನಾವು ಪ್ರವೇಶ ಮಾಡತಕ್ಕಂಥದ್ದೂ ಸಹ ತಪ್ಪಾಗುತ್ತದೆ. ಆದರೆ,

ಇಡೀ ಭಾರತ ದೇಶದಲ್ಲಿ ಈ ಪರಿಸ್ಥಿತಿ ಆಗುತ್ತಿದೆ. ಆದ್ದರಿಂದಲೇ ಮಾನ್ಯ ಪ್ರಧಾನ ಮಂತ್ರಿಗಳು 25 ಸಾವಿರ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಮಾಡಿದ್ದಾರೆ. Food production and productivities growth rate 1.8 ಎಂದು ಭಾರತ ಸರ್ಕಾರ ಇಟ್ಟಿದೆ. ಈ ಎರಡರ ಬಗ್ಗೆ ಯೋಜನೆ ಮಾಡಬೇಕೆಂದು 3ನೇ ತಾರೀಖಿನ ದಿವಸ ಮಾನ್ಯ ಪ್ರಧಾನ ಮಂತ್ರಿಗಳು ಇಲ್ಲಿಗೆ ಬರುತ್ತಿದ್ದಾರೆ. ಇದು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ಇಡೀ ಭಾರತ ದೇಶಕ್ಕೂ ಇದು ಸೀಮಿತವಾಗಿದೆ.

ಶ್ರೀ ಸಿದ್ದರಾಮಯ್ಯ :- ಭಾರತ ದೇಶದಲ್ಲಿಯೇ Food production stagnate ಆಗಿದೆ. 2015ನೇ ಇಸವಿಗೆ 215 ಮಿಲಿಯನ್ ಟನ್ ಆಹಾರವನ್ನು ನಾವು ಏನು ಉತ್ಪಾದನೆ ಮಾಡುತ್ತಿದ್ದೇವೆ ಅದನ್ನು 420 ಮಿಲಿಯನ್ ಟನ್ ಮಾಡಬೇಕೆಂಬುದರ ಬಗ್ಗೆ ಭಾರತ ಸರ್ಕಾರ ಯೋಜನೆ ಮಾಡುತ್ತಿದೆ. ಇದನ್ನು ಮಾನ್ಯ ಪ್ರಧಾನ ಮಂತ್ರಿಗಳು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದಾರೆ. ನಾನು ಹೇಳುವುದೇನೆಂದರೆ, ಇಲ್ಲಿರತಕ್ಕಂಥ ಪ್ಲಾನ್ ಆಲೋಕೇಶನ್ ಮತ್ತು ಪ್ಲಾನ್ ಸೈಜ್ ವರ್ಷೆ ವರ್ಷೆ ಜಾಸ್ತಿ ಆಗಬೇಕು. ಮತ್ತೆ ಇನ್‌ಫ್ಲೇಷನ್‌ಗೆ ಅನುಗುಣವಾಗಿ ಹೆಚ್ಚಾಗಿರಬೇಕು. ಆದ್ದರಿಂದ, ಇದನ್ನು ಮಾಡುತ್ತಿಲ್ಲವೆಂದು ನಾನು ಹೇಳುತ್ತಿದ್ದೇನಷ್ಟೆ. ಮತ್ತೆ 1 ಮೆ.ವ್ಯಾ. ಆದರೂ ವಿದ್ಯುತ್ ಉತ್ಪಾದನೆ ಮಾಡಬೇಕಿತ್ತಲ್ಲವೇ? on going projects ಕೂಡ ಮುಗಿದಿಲ್ಲ. ರಾಯಚೂರಿನಲ್ಲಿ 1470 ಮೆ.ವ್ಯಾ. ಉತ್ಪಾದನೆ ಆಗುವುದನ್ನು ಬಿಟ್ಟರೆ ಬೇರೆ ಎಲ್ಲಿಯೂ ಕೂಡ ಮಾಡಿಲ್ಲ. 8ನೇ ಪ್ರಾಜೆಕ್ಟ್‌ನ್ನು ಪ್ರಾರಂಭ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಬಿಡದಿ ಹತ್ತಿರ ಇನ್ನು ಮಾಡಿಲ್ಲ. ಮತ್ತೆ ಬಳ್ಳಾರಿಯಲ್ಲಿ ಮೊದಲನೇ ಹಂತದಲ್ಲಿ 500 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಇನ್ನು ಪ್ರಾರಂಭವಾಗಿಲ್ಲ. ಮತ್ತೆ 2ನೇ ಫೇಸ್‌ದು ಕೆಲಸ ಆಗಬೇಕಾಗಿದೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ವಿದ್ಯುತ್ ಉತ್ಪಾದನೆಗೆ ನೀವು ಗಮನ ಕೊಟ್ಟಿಲ್ಲ. ಮತ್ತೆ T & D loss ಕಡಿಮೆ ಮಾಡುವುದಕ್ಕೆ ಗಮನ ಕೊಟ್ಟಿಲ್ಲ. ಇದು ಹಾಗೆ ನಡೆಯುತ್ತಾ ಬರುತ್ತಿದೆ. ನಾವು ಕೆಲಸಕ್ಕೆ ನೇಮಕ ಮಾಡಿದ್ದೇವೆಂದು ಮತ್ತು ಎಲ್ಲ ಕಡೆ wire ಮತ್ತು transformer ಅನ್ನು ಬದಲಾವಣೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಇದಕ್ಕೆಲ್ಲ 1300 ಕೊಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬಂದಿದೆ. ಮತ್ತೆ 24 ಜಿಲ್ಲೆಗಳಿಗೆ ರಾಜೀವ್ ಗಾಂಧಿ ಗ್ರಾಮೀಣಾಭಿವೃದ್ಧಿ ಕೆಲಸಕ್ಕಾಗಿ 613 ಕೋಟಿ ರೂಪಾಯಿ ಬಂದಿದೆ. ಕೇಂದ್ರ ಸರ್ಕಾರದಿಂದ ದುಡ್ಡು ಬಂದಿದ್ದರೂ ಕೂಡ ಆ ಕೆಲಸವನ್ನು ಸರಿಯಾಗಿ ಮಾಡುತ್ತಿಲ್ಲ. ಒಟ್ಟಿನಲ್ಲಿ ಕೆ.ಇ.ಬಿ. most miserable department. ಅವರಿಂದ

1% T & D loss, theft ಕಡಿಮೆ ಮಾಡುವುದಕ್ಕೆ ಆಗಿಲ್ಲ. ಆದರೂ ಕೂಡ ಕೆಪಿಟಿಸಿಎಲ್‌ನಲ್ಲಿ ಕೆಲಸ ಮಾಡತಕ್ಕಂಥವರಿಗೆ ಸರ್ಕಾರಿ ನೌಕರರಿಗಿಂತ ಹೆಚ್ಚು ಸಂಬಳ ತೆಗೆದುಕೊಳ್ಳುತ್ತಾರೆ. ಯಾರ ನಿಯಂತ್ರಣ ಇಲ್ಲ ಮತ್ತೆ ಅವರಿಗೆ ಹೇಳುವವರು ಮತ್ತು ಕೇಳುವವರಿಲ್ಲ. ಹುಚ್ಚುಂಡೆ ಮದುವೆಗೆ ಉಂಡವನೇ ಜಾಣ ರೀತಿ ಇಲ್ಲಿಯಾಗಿದೆ. ಒಂದು ಕೆಟ್ಟ ಮಿಸರಬಲ್ ಪರ್ಫಾಮೆನ್ಸ್‌ನಲ್ಲಿ ನಡೆಯುತ್ತಿದೆ. ನಂಜುಂಡಪ್ಪನವರ ವರದಿ ಪ್ರಕಾರ 1000 ಹೈಸ್ಕೂಲ್‌ಗಳನ್ನು ಕೊಟ್ಟಿದ್ದೇವೆಂದು ಹೇಳುತ್ತೀರಿ. ಕಾಲೇಜು, ಹಾಸ್ಟೆಲ್‌ಗಳನ್ನು ಕೊಟ್ಟೆವೆಂದು ಹೇಳುತ್ತಿದ್ದೀರಿ. ಎಲ್ಲಿಗೆ ಕೊಟ್ಟಿದ್ದೀರಿ? 39 ತಾಲ್ಲೂಕುಗಳಿಗೆ ಎಷ್ಟು ಕೊಟಿದ್ದೀರಿ? 35 ಮೋಸ್ಟ್ ಬ್ಯಾಕ್‌ವರ್ಡ್ ತಾಲ್ಲೂಕಿಗೆ ಎಷ್ಟು ಕೊಟ್ಟಿದ್ದೀರಿ? ಹೊಳೆನರಸೀಪುರ ತಾಲ್ಲೂಕು ಬ್ಯಾಕ್‌ವರ್ಡ್ ತಾಲ್ಲೂಕಿನಲ್ಲಿ ಬರುತ್ತದೆ. ಆದರೆ, ಅದು ಮೋಸ್ಟ್ ಬ್ಯಾಕ್‌ವರ್ಡ್ ಮತ್ತು ಮೋರ್ ಬ್ಯಾಕ್‌ವರ್ಡ್‌ನಲ್ಲಿ ಬರುವುದಿಲ್ಲ. ಮತ್ತೆ ರಾಮನಗರ ತಾಲ್ಲೂಕು ಬ್ಯಾಕ್‌ವರ್ಡ್, ಮೋಸ್ಟ್ ಬ್ಯಾಕ್‌ವರ್ಡ್, ಮೊರ್ ಬ್ಯಾಕ್‌ವರ್ಡ್ ತಾಲ್ಲೂಕುಗಳಲ್ಲಿಲ್ಲ. ಮತ್ತು ಶಿಕಾರಿಪುರ ಬ್ಯಾಕ್‌ವರ್ಡ್‌ನಲ್ಲಿದೆ. ಆದರೆ, ಮೋಸ್ಟ್ ಬ್ಯಾಕ್‌ವರ್ಡ್ ಮತ್ತು ಮೋರ್ ಬ್ಯಾಕ್‌ವರ್ಡ್‌ನಲ್ಲಿ ಇಲ್ಲ. ನೀವು ಇಲ್ಲಿಗೆ ಎಷ್ಟೆಷ್ಟು ತೆಗೆದುಕೊಂಡಿದ್ದೀರಿ, ಬೇರೆಯವರಿಗೆ ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ಹೇಳಿ? ಈ ರೀತಿಯಾದರೆ ರಿಜನಲ್ ಇಂಬ್ಯಾಲೆನ್ಸ್ ಸರಿ ಮಾಡುವುದು ಹೇಗೆ? ಈ ತಾರತಮ್ಯಗಳ ಜೊತೆಗೆ ಇನ್ನೊಂದಷ್ಟು ಗ್ಯಾಪ್‌ಅನ್ನು ದೊಡ್ಡದನ್ನಾಗಿ ಮಾಡುವುದಕ್ಕೆ ಹೊರಟಿದ್ದೀರಿ. you are widening the gap. ಸರ್ಕಾರ ಹಣ ಇದೆ ಎಂದು ಈ ರೀತಿಯಾಗಿ ಮನಸ್ಸಾ ಇಚ್ಛೆಯಾಗಿ ಮತ್ತು ಸ್ವೇಚ್ಛಾಚಾರವಾಗಿ ಖರ್ಚು ಮಾಡಬಹುದೇ? ಏನು ಬೇಕಾದರೂ ಮಾಡಬಹುದೆಂದು ಮಾಡುತ್ತಿದ್ದೀರಾ? ಕೇಳಿದರೆ ನಾವೆಲ್ಲಾ ಕೊಟ್ಟಿದ್ದೇವೆಂದು ಹೇಳುತ್ತೀರಿ. ಇವತ್ತಿನ ದಿವಸ ಹೈಸ್ಕೂಲ್ ಕೊಟ್ಟ ತಕ್ಷಣವೇ ಶಿಕ್ಷಣದ ಗುಣಮಟ್ಟ ಸುಧಾರಣೆಯಾಗಿಬಿಡುತ್ತದೆಯೇ? ಅಲ್ಲಿ library ತೆಗೆದಿದ್ದೀರಾ, ಕಟ್ಟಡಗಳು ಇವೆಯಾ, ಸಿಬ್ಬಂದಿ ಇದ್ದಾರಾ, ಮೇಸ್ಟ್ರುಗಳು ಇದ್ದಾರಾ? ಯಾವ ಆಧಾರದ ಮೇಲೆ ಕೊಟ್ಟಿರುತ್ತೀರಿ? ಇದಕ್ಕೆ ನಾರ್ಮ್ಸ್ ಏನು? ಅಲ್ಲಿ ಫೀಡೀಂಗ್ ಹೈಸ್ಕೂಲ್‌ಗಳು ಎಷ್ಟಿವೆ? Junior College ಗಳನ್ನು ತೆಗೆಯುವುದಕ್ಕೆ ಅಲ್ಲಿ ಫೀಡಿಂಗ್ ಹೈಸ್ಕೂಲ್‌ಗಳು ಇವೆಯಾ ಅಥವಾ ಇಲ್ಲವೇ? ಅಲ್ಲಿ ಅಗತ್ಯ ಇದೆಯಾ ಇಲ್ಲವೇ? ಅಲ್ಲಿ literacy percentage ಎಷ್ಟು ಇದೆ? ಅದು ನಂಜುಂಡಪ್ಪ ವರದಿಯಲ್ಲಿ backward, most backward, more backward ನಲ್ಲಿ ಬರುತ್ತದೋ ಇಲ್ಲವೋ ನಾನು ಬೇರೆ ಕೊಡಬೇಡಿ ಎಂದು ಹೇಳುವುದಿಲ್ಲ. ಈಗ South Canara ದಲ್ಲಿ ಒಂದು ತಾಲ್ಲೂಕು ಬರುವುದಿಲ್ಲ. backward ಇಲ್ಲ most backward

ಇಲ್ಲ.ಉಡುಪಿ ಜಿಲ್ಲೆಯಲ್ಲಿಯೂ ಒಂದು ಬರುವುದಿಲ್ಲ. ಆದರೆ ನಾನು ಬೇಡವೆಂದು ಹೇಳುವುದಿಲ್ಲ. Normal course ನಲ್ಲಿ ಮಾಡಬೇಕಾದವುಗಳು normal plan, normal programme ನಲ್ಲಿ ಅವು ಆಗುತ್ತವೆ. ಏಕೆಂದರೆ ಅವು ಅಭಿವೃದ್ಧಿಯಾಗಬೇಕು. ಅವುಗಳ ಜೊತೆಗೆ ಇವುಗಳನ್ನು ತರಬೇಕು ಅಲ್ಲವೇ? ನಮಗೆ ಅಧಿಕಾರ ಇದೆ ಎಂದು ಹೇಳಿ. ನಮಗೆ ಹಣ ಖರ್ಚು ಮಾಡುವುದಕ್ಕೆ ಅಧಿಕಾರ ಇದೆ ಎಂದು ಹೇಳಿ, ನಮಗೆ ಬೇಕಾದಲ್ಲಿ ಕೊಟ್ಟುಕೊಳ್ಳಬಹುದು, ನಮ್ಮನ್ನು ಕೇಳುವವರು ಇಲ್ಲ, ಹೇಳುವವರು ಇಲ್ಲವೆಂದರೆ ಹೇಗೆ? ರಾಮನಗರಕ್ಕೆ ಎಷ್ಟು ದುಡ್ಡು ಕೊಟ್ಟಿರುವುದು, ಬೇರೆ ಹೊಸ ಜಿಲ್ಲೆಗಳು ಆಗಿಲ್ಲವೆ? ಆ ಜಿಲ್ಲೆಗಳಿಗೆಲ್ಲಾ ಏನು ಮಾಡಿದ್ದಾರೆ. ಆ ಜಿಲ್ಲೆಗಳಿಗೆಲ್ಲಾ infrastructure development ಆಗಿ ಹೋಯಿತಾ? why Ramanagar alone?

ಶ್ರೀ ಬಿ.ಆರ್. ಪಾಟೀಲ್: ಹಾಸನ್ ಜಿಲ್ಲೆಗೆ 10 Junior College ಗಳು ಆಗಿದ್ದರೆ, ಇಡೀ ಹೈದ್ರಾಬಾದ್-ಕರ್ನಾಟಕಕ್ಕೆ 10 Junior College ಗಳು. ಅತ್ಯಂತ ಹಿಂದುಳಿದ 21 ತಾಲ್ಲೂಕುಗಳು ಇವೆ.

ಶ್ರೀ ಸಿದ್ದರಾಮಯ್ಯ: Most backward ತಾಲ್ಲೂಕುಗಳಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿಯೇ 21 ಇವೆ. 21 most backward talukas are in Gulbarga Division. ಹಾಸನ್ ಜಿಲ್ಲೆಗೆ 10 junior College ಗಳು, ಇಲ್ಲಿಗೂ 10 Junior College ಗಳು. what is the norm? ಇದಕ್ಕೆ ಮಾನದಂಡ ಏನು ಇದೆ.

ಶ್ರೀ ಬಿ. ಆರ್. ಪಾಟೀಲ್: ರಾಯಚೂರಿಗೆ ಒಂದೇ ಒಂದು Junior College

ಶ್ರೀ ಸಿದ್ದರಾಮಯ್ಯ: ಏಕೆ ಈ ತಾರತಮ್ಯ, ಈ ರಾಜ್ಯ ಸಮಾನ ಬೆಳವಣಿಗೆ.

ಶ್ರೀ ಬಿ. ಶಿವರಾಂ: ಹಾಸನ್ ಜಿಲ್ಲೆಗೆ ಎಲ್ಲರಿಗೂ ಕೊಟ್ಟಿದ್ದಾರೆಂದು ತಿಳಿದುಕೊಳ್ಳಬೇಡಿ. ಆದರೆ ಗಂಡಸಿ ಕ್ಷೇತ್ರಕ್ಕೆ ಒಂದು Junior College ನಾನು ಕೊಟ್ಟಿಲ್ಲ.

ಶ್ರೀ ಸಿದ್ದರಾಮಯ್ಯ: ಹಾಗಾದರೆ ಅಲ್ಲಿ ಯಾರಿಗೆ ಕೊಟ್ಟಿರುವುದು. ಅವರ ಪಕ್ಷದವರಿಗೆ ಕೊಡಬೇಡಿ ಎಂದು ನಾನು ಹೇಳುವುದಿಲ್ಲ. ರಾಜ್ಯ ಬೆಳವಣಿಗೆ ಆಗಬೇಕಾದರೆ ಬೇರೆಯವರಿಗೂ ಕೊಡಬೇಕಲ್ಲವೆ? ನೀವು ರಾಜ್ಯ ಸರ್ಕಾರವನ್ನು ನಡೆಸುವವರು, ಸಮಾನ ಬೆಳವಣಿಗೆ ಎಂದರೆ ಏನು? ಸಾಮಾಜಿಕ ನ್ಯಾಯ ಇರತಕ್ಕಂಥದ್ದು ಸಮಾನ ಬೆಳವಣಿಗೆ. it is our policy. ಸಮಾನ ಬೆಳವಣಿಗೆ. ನೀವು regional imbalanceನ್ನು ಎಲ್ಲಿ address

ಮಾಡುತ್ತಿದ್ದೀರಿ? ಒಂದು ಕಡೆ ಪ್ರಚಾರ ಉತ್ತರ ಕರ್ನಾಟಕದ ಭಾಗದವರಿಗೆ, ಗುಲ್ಬರ್ಗಾ ಭಾಗದವರಿಗೆ most ಹಿಂದುಳಿದವರಿಗೆ ನಾವು ನ್ಯಾಯವನ್ನು ಕೊಡುತ್ತಿದ್ದೇವೆ, ಹಿಂದೆ ಯಾರೂ ಮಾಡಿರಲಿಲ್ಲವೆಂದು ಹೇಳುವುದು. ಇಲ್ಲಿ ಅವರ ಮೂಗಿಗೆ ತುಪ್ಪವನ್ನು ಹಚ್ಚುವುದು, ಅ ಜನರಿಗೆ ಮೋಸ ಆಗತಕ್ಕಂಥ ಕೆಲಸ, ಇದು ಮೋಸ ಅಲ್ಲವೆ? ನೀವು ಹಾಗೆ ಹೇಳುವುದಕ್ಕೆ ಹೊಗಬಾರದಾಗಿತ್ತು. ನಿಮಗೆ ಇಷ್ಟ ಬಂದಂತೆ ನಿಮ್ಮ ಪಕ್ಷವನ್ನು ಬೆಳೆಸುವುದಕ್ಕೆ M.L.A. ಗಳಿಗೆ ಹೆಚ್ಚು ಅನುಕೂಲವಾಗಲಿ ಎಂದು ಮಾಡುವುದಾದರೆ ಸಾರ್ವಜನಿಕರ ಹಣ ಆ ರೀತಿ ಖರ್ಚು ಮಾಡುವುದಕ್ಕೆ ಆಗುತ್ತದೆಯೇ? ವಿವೇಚನೆ ಇರಬೇಕು ಅಲ್ಲವೇ? ಹಣಕಾಸಿನ ಮಂತ್ರಿಗಳಾಗಿ ಹಣ ಖರ್ಚು ಮಾಡುವಾಗ ಅತ್ಯಂತ ವಿವೇಚನೆಯಿಂದ ಖರ್ಚು ಮಾಡಬೇಕಾಗುತ್ತದೆ. ನಾವು ಏನು ಬೇಕಾದರೂ ಮಾಡಬಹುದು ಎಂದು ಅಂದುಕೊಂಡು ಬಿಟ್ಟರೆ, ಇದ್ದಕೆ ನಾವು ಒಪ್ಪಿಗೆಯನ್ನು ಕೊಡಬೇಕೇ? ಹೀಗೆ ಮಾಡಿರುವುದಕ್ಕೆ ನಾವೆಲ್ಲಾ ಒಪ್ಪಿಗೆ ಕೊಡಬೇಕೆ? ಯಡಿಯೂರಪ್ಪನವರೆ ತಾವು ಹೇಳಿ, ಇದಕ್ಕೆ ತಾವು ಒಪ್ಪಿಗೆ ಕೊಡಬೇಕೆಂದರೆ ಕೊಡೋಣ. ಈ ತರಹ Imbalance ಆದರೂ ಪರವಾಗಿಲ್ಲ ಕೊಡಿ ಎಂದರೆ, ಒಂದೊಂದು constituency ಗೆ 35–36 ಕೋಟಿ ರೂ ಗಳು 5054ನಲ್ಲಿ, ಬೇರೆ ಬೇರೆ constituency ಗಳಿಗೆ ಈ 5054ನಲ್ಲಿ ಎಷ್ಟೆಷ್ಟು ಕೊಟ್ಟಿದ್ದೀರಿ? ನಬಾರ್ಡಿನಲ್ಲಿ ಎಷ್ಟು ಕೊಟ್ಟಿದ್ದೀರಿ. ಹಾಗೆ 3054 ನಲ್ಲಿ ಎಷ್ಟು ಕೊಟ್ಟಿದ್ದೀರಿ? CRF Fund ನಲ್ಲಿ ಎಷ್ಟು ಕೊಟ್ಟಿದ್ದೀರಿ ಹೇಳಬೇಕು. ಸೆಂಟ್ರಲ್‌ದಿಂದ ಬರುವ ಹಣವನ್ನಾದರೂ ಸಮಾನವಾಗಿ ಹಂಚಬೇಕಲ್ಲವೆ? CRF Fund ಅದು ಇಲ್ಲ. ಅತೀವೃಷ್ಟಿಗೆ ಯಾವುದು ಇಲ್ಲ. ನಬಾರ್ಡಿನಲ್ಲಿಯೂ ಇಲ್ಲ. ಈ ತರಹ ಆದರೆ, ಈ ರಾಜ್ಯವನ್ನು ಯಾವ ಕಡೆಗೆ ತೆಗೆದುಕೊಂಡು ಹೋಗುತ್ತಿದ್ದೀರಿ. ಒಂದು ಕಡೆ there is no proper expenditure management, ಇನ್ನೊಂದು ಕಡೆ, resource ನ್ನು ಸರಿಯಾಗಿ mobilize ಮಾಡುತ್ತಿಲ್ಲ. ಇನ್ನೊಂದು ಕಡೆ ಮನಸೋ ಇಚ್ಛೆ ಹೇಗೆ ಬೇಕು ಹಾಗೆ ದುಡ್ಡನ್ನು ಚೆಲ್ಲುವುದು. ಹೇಗೆ ಬೇಕು ಹಾಗೆ ಖರ್ಚು ಮಾಡುವುದು. ಇದಕ್ಕೆ ಈ ಸದನ ಒಪ್ಪುವುದಕ್ಕೆ ತಯಾರಿಲ್ಲ ಒಪ್ಪಕೂಡದು. ಈ ರಾಜ್ಯದ ಬೆಳವಣಿಗೆ ಆಗುವುದಿಲ್ಲ.

ಶ್ರೀ ಮಹದೇವ: ತಾವು ಬಹಳ detail ಆಗಿ ಮಾತನಾಡುತ್ತಿದ್ದೀರಿ ಮಾನ್ಯ ಉಪ ಮುಖ್ಯಮಂತ್ರಿಗಳು ನಿಮ್ಮನ್ನು ಆಲಿಸುತ್ತಿದ್ದಾರೋ ಬೇರೆ ಏನು ಯೋಚನೆ ಮಾಡುತ್ತಿದ್ದಾರೋ ಗೊತ್ತಾಗುತ್ತಿಲ್ಲ.

ಶ್ರೀ ಸಿದ್ದರಾಮಯ್ಯ: ಇರಲಿ ಬಿಡಿ ಪಾಪ. ಅವರು ಇತ್ತೀಚೆಗೆ ಏಕೋ depression ಆದಂತೆ ಕಾಣಿಸುತ್ತಾರೆ.

ಶ್ರೀ ಎಂ.ಟಿ. ಕೃಷ್ಣಪ್ಪ: Discrimination ಇದು ಎಲ್ಲಾ ಕಾಲದಲ್ಲಿ ನಡೆದಿದೆ. ಇದು ಹೊಸದು ಏನು ಅಲ್ಲ. ಅವರು Finance Minister ಆದಾಗ ಅವರು ಎಷ್ಟೆಷ್ಟು ತೆಗೆದುಕೊಂಡಿದ್ದಾರೆ ಗೊತ್ತಿದೆ ಬಿಡಿ, ಇದು ಹೊಸದು ಏನು ಅಲ್ಲ ಬಿಡಿ. No.No. allow me also to speak. ಏನಿದು. ಎಷ್ಟೆಷ್ಟು hour ಮಾತನಾಡಬೇಕು.

(ಗೊಂದಲ)

ಛೇರ್ಮನ್: ದಯಮಾಡಿ ಕುಳಿತುಕೊಳ್ಳಿ, ತಾವು ಮಾತನಾಡುವಾಗ ಮಾತನಾಡಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: I am talking to the Chair only. You are nobody to interfere.

ಶ್ರೀ ಸಿದ್ದರಾಮಯ್ಯ: ಶ್ರೀಮಂತರ ಮಕ್ಕಳ ಜೊತೆಯಲ್ಲಿ ಬಡವರ ಮಕ್ಕಳಿಗೆ competation ಮಾಡುವುದಕ್ಕಾಗುತ್ತದೆಯೇ? Is it not disparity? ಇವತ್ತು ಈ ತರಹ ರಾಜ್ಯ ಸರ್ಕಾರ ನಡೆದುಕೊಳ್ಳುತ್ತಿದೆ. ನಾನು ಇನ್ನೂ ಬಹಳ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ಇದ್ದರೂ ಕೂಡ, ಇವತ್ತು ಇವರು 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಡವಿ ಬಿಟ್ಟರು. ಏಕೆಂದರೆ ಇವರು ಅದಕ್ಕೆ ಬೇಕಾದಷ್ಟು resourcesನ್ನು mobillize ಮಾಡಿಕೊಳ್ಳುವುದಕ್ಕೆ ಹೋಗಲಿಲ್ಲ. Approval ಆಗಿರತಕ್ಕಂಥ paln ಮುಂದಿನ 5 ವರ್ಷಗಳಿಗೆ 96703 ಕೋಟಿ ರೂ. ಗಳನ್ನು ಖರ್ಚು ಮಾಡಬೇಕು. ಹಿಂದಿನ 9th five year paln ನಲ್ಲಿ ಎಷ್ಟು ಯೋಜನಾಗಾತ್ರ ಇತ್ತು ಅದಕ್ಕಿಂತ ಹೆಚ್ಚು ಖರ್ಚಾಗಿದೆ. 10th five year plan ಎಷು ಗಾತ್ರ ಇತ್ತು ಅದಕ್ಕಿಂತ ಹೆಚ್ಚು ಖರ್ಚಾಗಿದೆ. 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದರ ಗಾತ್ರವನ್ನು ನಾವು ತಲುಪಬೇಕಾದರೆ, ಇವರ sector allocation is very very low. ಇಷ್ಟೆಲ್ಲಾ ಆದ ಮೇಲೆ ಇಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವಲ್ಲವೆ, ನನ್ನ ಪ್ರಕಾರ ಅನೇಕ ಇಲಾಖೆಗಳು ಹಣ ಖರ್ಚು ಮಾಡತಕ್ಕಂಥದ್ದರಲ್ಲಿ evaluation ಮಾಡಬೇಕಾಗುತ್ತದೆ. ಅದಕ್ಕೆ ಮಾನ್ಯ ಚಿದಂಬರಂರವರು 2005-06ರ ಬಜೆಟ್‌ನ್ನು ಮಂಡಿಸುವಾಗ out lays should be linked without income ಎಂದು ಹೇಳಿದರು. ನಾವು ಎಷ್ಟು ಹಣವನ್ನು

ಖರ್ಚು ಮಾಡುತ್ತೇವೆ ಎನ್ನುವುದು ಒಂದು ಭಾಗ. allocation ಎಷ್ಟು ಮಾಡುತ್ತೇವೆ ಎನ್ನುವುದು ಒಂದು ಭಾಗ. ನಮ್ಮ ಪ್ರತಿಫಲ ಎಷ್ಟು ಆಗಿದೆ ಎನ್ನುವುದು ಬಹಳ ಮುಖ್ಯ. ಅದರ ಬಗ್ಗೆ ನನಗೆ ಇರುವ ಮಾಹಿತಿ ಪ್ರಕಾರ, ಲೋಕೋಪಯೋಗಿ ಇಲಾಖೆ ಇರಬಹುದು, ನೀರಾವರಿ ಇಲಾಖೆ ಇರಬಹುದು. 40-50 ರೂ.ಗಳು ಖರ್ಚಾದರೆ ಅತೀ ಹೆಚ್ಚು. ಅದಕ್ಕೊಂದು evaluation system ಈಗ ಆಗಬೇಕು. Fiscal Responsibility Act ಅವೆಲ್ಲವನ್ನು ಅದರಲ್ಲಿ ಹೇಳಿರುವುದು. ಇವತ್ತಿನವರೆಗೆ evaluation ಇಲ್ಲ. No body is responsible. No body is accountable. ನೀವು ಸುಮ್ಮನೆ Forest ನವರನ್ನು ಕೇಳಿ, ಎಷ್ಟು ಗಿಡಗಳನ್ನು ಈ ವರ್ಷ ನೆಟ್ಟಿದ್ದೀರಿ, ಸುಮಾರು 5 ಕೋಟಿ ಎಂದು ಹೇಳುತ್ತಾರೆ, ಎಲ್ಲಿ ಇದ್ದಾವೆ ಎಂದು ಕೇಳಿದರೆ ಅವುಗಳನ್ನು ತೋರಿಸುವುದಿಲ್ಲ. ಎಷ್ಟು perecentage of survival 60% ಸರ್. ಎಲ್ಲಿ ತೋರಿಸಿ ಎಂದರೆ, not even ten percent. ನಾನು Animal Husbandry Minister ಆದಾಗ ಇಲಾಖೆಯವರನ್ನು ಕೇಳುತ್ತಿದ್ದೆ. Artificial insemination ಎಷ್ಟು ಮಾಡಿದಿರಿ? ಸುಮಾರು ಲಕ್ಷಗಳನ್ನು ಮಾಡಿದ್ದೇವೆ ಸರ್, ಎಷ್ಟು ಮಿಶ್ರತಳಿಗಳು ಬಂದಿವೆ ಎಂದರೆ 60% ಕರುಗಳು ಬಂದಿವೆ ಸರ್, ಯಾವ ಊರಿನಲ್ಲಿ ಮಾಡಿದ್ದೀರಿ ತೆಗೆದುಕೊಂಡು ಬಂದು ತೋರಿಸಿ ಎಂದರೆ ಒಂದು ಮಿಶ್ರತಳಿ ಇಲ್ಲ. What is happening? ಎಲ್ಲಿಯೂ ಒಂದು ಮಿಶ್ರತಳಿ ಕರು ಕಾಣುತ್ತಿರಲಿಲ್ಲ. ಇವತ್ತು ನಾವು ಖರ್ಚು ಮಾಡುವುದಕ್ಕೂ ಅಲ್ಲಿ ಉತ್ಪನ್ನ ಆಗುತ್ತಿರುವುದಕ್ಕೆ ಒಂದಕ್ಕೊಂದು ತಾಳೆ ಇಲ್ಲ. ಸರ್ಕಾರದ ಹಣದ ಬಗ್ಗೆ ನಾನು ಅಧಿಕಾರಿಗಳಿಗೆ ಹೇಳುತ್ತಿದ್ದೆ. ನಾವು ಸಾಲ ತೆಗೆದುಕೊಂಡು ಬಂದು ಒಂದು ಕಾಲದಲ್ಲಿ ಕೃಷ್ಣಭಾಗ್ಯ ಜಲನಿಗಮಕ್ಕೆ 18% ಬಡ್ಡಿಯಂತೆ ಹಣ ತಂದು ಕೊಟ್ಟಿರುವುದು. ಇದು 1996 ರಿಂದ ಪ್ರಾರಂಭವಾಗಿ ಕಳೆದ ವರ್ಷದವರೆಗೆ 4500 ಕೋಟಿ ರೂ.ಗಳ ಬಡ್ಡಿ ಕೊಟ್ಟಿರುತ್ತೇವೆ. 4500 ಕೋಟಿ ರೂಪಾಯಿಗಳ ಬಡ್ಡಿಯನ್ನು ತಿಂದುಬಿಟ್ಟಿದ್ದಾರಲ್ಲಾ, 50% ಅದನ್ನು ಸಹ ಸೇರಿಸಿಕೊಟ್ಟಿದ್ದೇವೆ. ಅದರಲ್ಲಿ ಸಾಲವು ಸಹ ಇದೆ, ಇದು ಯಾವ ಕಡೆಗೆ ಹೋಗುತ್ತಿದ್ದೇವೆಂದರೆ concerned minister ಗಳು actually ಇದನ್ನು ಮಾಡಬೇಕು, ಎಲ್ಲಿ ಹಣ ತಲುಪುತ್ತಿದೆಯೇ? ಕನಿಷ್ಟ 70% ಹಣ ಬೇಕು. ಕೆಲಸದ ಮೇಲೆ ಖರ್ಚಾಗುತ್ತಿದೆ ಎಂದರೆ, we can do wonder in the state. There will be wonderful development ಇದು ಒಂದು ತರಹ ಆಗುತ್ತಿದೆ. ನಾನು ಬಹಳ ಟೈಮ್‌ನ್ನು ಮಾತನಾಡುವುದಕ್ಕೆ ತೆಗೆದುಕೊಂಡುಬಿಟ್ಟಿದ್ದೇನೆ ಅದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಸರ್ಕಾರಕ್ಕೆ ಇದನ್ನು ಮಂಜೂರಾತಿ ಮಾಡುವುದಕ್ಕೆ ಅರ್ಹತೆ ಇಲ್ಲ. ಇದನ್ನು ಮಂಜೂರು

ಮಾಡಿ ಎಂದು ಕೇಳುವುದಕ್ಕೂ ಕೂಡ ಅರ್ಹತೆ ಇಲ್ಲ. ಈ ತರಹ finances ನ ಇವತ್ತು indiscipline ಶುರು ಆಗಿದೆ. ಅದು ಮತ್ತೆ U- Turn ಆಗದಂತೆ ತಾವು ದಯಮಾಡಿ ನೋಡಿಕೊಳ್ಳಬೇಕು. ಒಂದೊಂದು ಸಾರಿ ಹೊರಟು ಹೋಗಿಬಿಟ್ಟರೆ it is very difficult to come out from the fiscal crisis. ಬಹಳ ಕಷ್ಟಪಟ್ಟು ಅದನ್ನು ಇಲ್ಲಿಗೆ ತೆಗೆದುಕೊಂಡು ಬಂದಿದ್ದೇವೆ. ಅದಕ್ಕೇ ನೀವೇ ಜವಾಬ್ದಾರರಲ್ಲ ಹಣಕಾಸಿನ ಪರಿಸ್ಥಿತಿಯನ್ನು ಸುಸ್ಥಿತಿಗೆ ತರುವುದಕ್ಕೆ ಮಾನ್ಯ ಎಸ್.ಎಂ. ಕೃಷ್ಣರವರು ಮತ್ತು ನಾನು ಸ್ವಲ್ಪ ಮಟ್ಟಿಗೆ ಜವಾಬ್ದಾರರು. ನನಗೆ ಗೊತ್ತಿರುವ ಮಟ್ಟಿಗೆ 948 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ fiscal consultationಗೆ 304 ಕೋಟಿ ರೂಪಾಯಿಗಳು ಕಳೆದ ವರ್ಷ 358 ಕೋಟಿ ರೂಪಾಯಿಗಳು, ಅದರ ಹಿಂದಿನ ವರ್ಷ 262 ಕೋಟಿ ರೂಪಾಯಿಗಳು ಇವತ್ತು 342 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಬಂದಿದೆ not because of your performance, but because of the economic reforms during 2004-05 and 2005-06. 2004-05 and 2005-06 ರಿಂದೀಚೆಗೆ ನೀವು fiscal consolidation ಮತ್ತೆ ಹೋಗಬೇಕು. ಅದನ್ನು ಇನ್ನು ಹೆಚ್ಚು ಮಾಡುತ್ತಾ ಹೋಗಬೇಕು. ಆ ದಿಕ್ಕಿನಲ್ಲಿ ನೀವು ದಾರಿಯನ್ನು ತಪ್ಪಿದ್ದೀರಿ. ಏಕೆಂದರೆ expenditure management ಸರಿಯಿಲ್ಲ. Discipline ತಪ್ಪುತ್ತಿದೆ. ರಾಜ್ಯ ಮತ್ತೆ ಕೆಟ್ಟ ಪರಿಸ್ಥಿತಿಗೆ ಹೋಗುವುದನ್ನು ಕಂಡು ಆ ತರಹ ಹೋಗಬಾರದು ಎಂದು ನಾನು ಹೇಳುತ್ತೇನೆ. ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಛೇರ್ಮನ್‌ರವರೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ನಾನು ಮಾತನಾಡಿದ್ದನ್ನು ಕೇಳಿದವರಿಗೂ ಹಾಗೂ ಮಧ್ಯ ಮಧ್ಯ interfere ಆದವರಿಗೆ ಎಲ್ಲರಿಗೂ ಧನ್ಯವಾದಗಳು.

ಛೇರ್ಮನ್: ಡಿ.ಆರ್. ಪಾಟೀಲ್‌ರವರೆ ತಾವು ಮಾತನಾಡಿ.

ಶ್ರೀ ಡಿ.ಆರ್.ಪಾಟೀಲ್ (ಗದಗ) : ಮಾನ್ಯ ಛೇರ್ಮನ್‌ರವರೆ, ನಾನು ಹಳ್ಳಿಯಿಂದ ಬಂದವ, ಹಳ್ಳಿಯ ಸಮಸ್ಯೆಯ ಬಗ್ಗೆ ಸರ್ಕಾರ ಏನು ಮಾಡಬೇಕು. ಯಾವ ರೀತಿಯಾಗಿ ನಾವು ಕೃಷಿಕರ ಬದುಕನ್ನು ಉತ್ತಮಪಡಿಸಬಹುದು ಎಂಬುದರ ಬಗ್ಗೆ ಕೆಲವು ನನ್ನ ಅನುಭವದ ಮಾತುಗಳನ್ನು ಹೇಳಬಯಸುತ್ತೇನೆ. ಒಂದು ಸುದೈವ, ಮಾನ್ಯ ಯಡಿಯೂರಪ್ಪನವರು ನಮ್ಮ ವಿರೋಧಿ ರಾಜಕೀಯ ಪಕ್ಷದಲ್ಲಿದ್ದಾರೆ. ಆದರೆ ಕೃಷಿ ಸಮಸ್ಯೆಯು ಬಂತೆಂದರೆ, ಕೃಷಿಕರ ಬಗ್ಗೆ ಸಾಕಷ್ಟು ಕಳಕಳಿಯನ್ನು ಹೊಂದಿದ

ನಾಯಕರೆನ್ನುವುದನ್ನು ನಾನು ಒಪ್ಪುತ್ತೇನೆ. ಬಹುತೇಕ ಬಿಜೆಪಿಯವರಿಗೆ ಹಳ್ಳಿಯ ಹಾದಿಯನ್ನು ತೋರಿಸಿದವರು ನೀವೆ ಆಗಿದ್ದೀರಿ ಎಂದು ಕಾಣಿಸುತ್ತದೆ. ಹಾಗಾಗಿ ಒಮ್ಮೊಮ್ಮೆ ಏನು ಆಯಿತು, ನೀವು ಆ ಪಕ್ಷದಲ್ಲಿ ಇರಲಿಲ್ಲವೆಂದರೆ, ನಮ್ಮದು ಇನ್ನು ಭದ್ರವಾದಂತಹ ಒಂದು ವ್ಯವಸ್ಥೆ ಇರುತ್ತಿತ್ತು. ಒಂದು ಸಂತೋಷ, ಮಾನ್ಯ ಸಿದ್ದರಾಮಯ್ಯನವರು ಕೃಷಿಕರಿಗೆ 6% ಬಡ್ಡಿಯನ್ನು ಕೊಡುವಂತಹ· ವ್ಯವಸ್ಥೆಯನ್ನು ಮಾಡಿದರು. ಅದನ್ನು ನೋಡಿ ಕೇಂದ್ರ ಸರ್ಕಾರದವರು 7% ನಲ್ಲಿ Nationalized Bank ನಿಂದ ಹಣ ಸಿಗುವ ಹಾಗೆ ಮಾಡಿದರು. ತಾವು ಅದನ್ನು 4% ಗೆ ತಂದಿರಿ ಬಹಳ ಸಂತೋಷ. ಆದರೆ ಈ 4% ಹಣ ಕೇವಲ 20% ಕೃಷಿಕರಿಗೆ ಮಾತ್ರ ಸಿಗುತ್ತದೆ ಎನ್ನುವುದು ಬಹುತೇಕ ತಮ್ಮ ಗಮನಕ್ಕೆ ಬಂದಿರಬಹುದು. ಇದನ್ನು ನೀವು ಪ್ರತಿಯೊಬ್ಬ ರೈತರಿಗೆ ಮುಟ್ಟುವ ಹಾಗೆ ಏನು ಮಾಡಬೇಕು. ಈಗಿರುವಂತಹ ವ್ಯವಸ್ಥೆ ಇದೆಯಲ್ಲಾ ಕೃಷಿ ಪತ್ತಿನ ಸಹಕಾರ ಸಂಘಗಳ ಮುಖಾಂತರ ಹಣವನ್ನು ಬಟವಾಡೆ ಮಾಡುವಂತಹ ವ್ಯವಸ್ಥೆ ಏನು ಇದೆ, ಈ ವ್ಯವಸ್ಥೆಯ ಬದಲು ತಾವು ಕೃಷಿಕರದೇ Self Help Groups ಮಾಡಿ. ಅದರ ಮುಖಾಂತರ ಹಣಕಾಸು ಬಟವಾಡೆಯಾಗುವಂತಹ ವ್ಯವಸ್ಥೆಯನ್ನು ತರುತ್ತೀರಾ ಎಂಬ ಬಗ್ಗೆ ತಾವು ವಿಚಾರವನ್ನು ಮಾಡಬೇಕು. ನಾನು Self Help Groups ಏಕೆ Suggest ಮಾಡುತ್ತಿದ್ದೇನೆಂದರೆ, ಈಗ ನಾವು ನೋಡುತ್ತಿದ್ದೇವೆ. ನಾವು ಸಾಕಷ್ಟು ಸ್ತ್ರೀ ಶಕ್ತಿ ಸಂಘಗಳನ್ನು ಮಾಡಿದೆವು. ಮತ್ತೆ ಬೇರೆ Self Help Groups ಕೂಡ ಮಾಡಿದ್ದೇವೆ. ಅಲ್ಲಿ ಹಣ ಮರುಪಾವತಿ 100% ಕೆಲವು ಕಡೆಗಳಲ್ಲಿ 99%, 98% ಇದೆ. ಮರುಪಾವತಿ ಪರಂಪರೆಯಾಗಿ ಬೆಳೆದುಬಿಟ್ಟಿದೆ. ಮತ್ತೇ ಹಣಕಾಸು ಏನಿದ್ದರೂ ಆ 10–5 ಕುಟುಂಬಗಳಲ್ಲಿಯೇ ಅದು ವಿತರಣೆಯಾಗುತ್ತಿದೆ. ಅದು ಅಲ್ಲಿಯೇ ಶೇಖರಣೆಯಾಗುತ್ತದೆ. ಡಿ.ಆರ್. ಪಾಟೀಲ್‌ರವರಿಗೆ ದುಡ್ಡು ಯಾವಾಗ ಬೇಕು, ಅವನ ಹತ್ತಿರ ದುಡ್ಡು ಯಾವಾಗ ಇದೆ, ಇದರ ಸಂಪೂರ್ಣ ಚಿತ್ರ ಆ ಕಂಪನಿಯವರಿಗೆ ಗೊತ್ತಿರುತ್ತದೆ. ಮತ್ತೆ ಏತಕ್ಕಾಗಿ ಬೇಕು? ನನಗೆ ಹಣ ಬೇಕೆಂದರೆ ಅವರು ದುಡ್ಡು ಕೊಡುವುದಿಲ್ಲ. ನನಗೆ ಓಸಿ ಆಡುವುದಕ್ಕೆ ಬೇಕಾದರೆ ಅವರು ದುಡ್ಡು ಕೊಡುವುದಿಲ್ಲ. ನನ್ನ ಮಗ ಶಿಕ್ಷಣದ ಬಗ್ಗೆ ಏನಾದರೂ ವ್ಯವಸ್ಥೆ ಮಾಡಬೇಕಾದರೆ ದುಡ್ಡು ಕೊಡುತ್ತಾರೆ. ನನ್ನ ಮಗನ ಮದುವೆಯನ್ನು ಮಾಡಬೇಕಾದರೆ ದುಡ್ಡು ಕೊಡುತ್ತಾರೆ. ನಾನು ಹೊಲಕ್ಕೆ ಬೀಜ ಮತ್ತು ಗೊಬ್ಬರವನ್ನು ಖರೀದಿ ಮಾಡಬೇಕಾದರೆ ಅವರು ದುಡ್ಡು ಕೊಡುತ್ತಾರೆ. ನನಗೆ ಯಾವಾಗ ಉತ್ಪನ್ನ ಬಂದಿರುತ್ತದೆ ಅದನ್ನು ಯಾವಾಗ ರೆಕವರಿ ಮಾಡಬೇಕೆಂಬುದರ ಬಗ್ಗೆ ಇವರಿಗಿಂತ ಅವರಿಗೆ ಆಗಾಗ್ಗೆ ಗೊತ್ತಿರುತ್ತದೆ. Nationalized Bank ನವರಿಗಂತೂ ಗೊತ್ತಾಗುವುದಿಲ್ಲ.

ಸೊಸೈಟಿಯವರಿಗೆ ಗೊತ್ತಾಗುತ್ತದೆ. ಆದರೆ ಸೊಸೈಟಿಯವರ ವ್ಯಾಪ್ತಿ ಇದ್ದು ಅದು ಇನ್ನು ಪೂರ್ತಿಯಾಗಿಲ್ಲ. ಮಾನ್ಯ ಯಡಿಯೂರಪ್ಪನವರೆ, Nationalized Bankನ ಅನುಭವವನ್ನು ನಾನು ಹೇಳುತ್ತೇನೆ. ಗದಗಿನೊಳಗೆ ಲೋನ್ ಮೇಳಾದೊಳಗೆ ಸಾಲ ಕೊಟ್ಟಿರುತ್ತಾರೆ. ಅವರು ಸಾಲವನ್ನು ಕೊಟ್ಟು, ಸಾಲವನ್ನು ಕೊಟ್ಟವನು transfer ಆಗಿ ಹೋದ. ರೆಕವರಿ ಟೈಮ್‌ನಲ್ಲಿ ಬೇರೆ ಮ್ಯಾನೇಜರ್‌ರವರು ಬಂದಿದ್ದರು. ಬೇರೆ ಮ್ಯಾನೇಜರ್ ಬಂದು ಯಾವ ಅಂಗಡಿ ಮಾಲೀಕನಿಗೆ ಸಾಲವನ್ನು ಕೊಟ್ಟಿದ್ದ ಅವನ ಹತ್ತಿರ ಹೋಗಿ ಕೇಳುತ್ತಿದ್ದ. ಇವರೆಲ್ರಿ ಎಂದು ಕೇಳುತ್ತಿದ್ದ. ಅವನು ಇಲ್ರಿ ಎಂದು ಹೇಳುತ್ತಿದ್ದ. ಹೀಗೆ ಆಯಿತು. ಒಮ್ಮೆ ಅವನು ಇಲ್ಲದಾಗ ಆ ಮಗ್ಗಲು ಅಂಗಡಿಯ ಮಾಲೀಕನನ್ನು ಅವರೆಲ್ರಿ ಎಂದು ಕೇಳಿದ ಅವನು ನೀವು ಅವರನ್ನು ಇಲ್ಲದಾಗ ದಿವಸ ಬಂದು ಮಾತನಾಡಿಸುತ್ತಿದ್ರಿ ಎಂದು ಹೇಳಿದನಂತೆ. ಹೀಗೆ ಸಾಲ ತೆಗೆದುಕೊಳ್ಳುವವರು, ಸಾಲ ಕೊಡುವವರ ನಡುವೆ ಸಂಬಂಧ ಸರಿಯಿರಲಿಲ್ಲವೆಂದರೆ ರೆಕವರಿ ಬರೋಬರಿ ಆಗುವುದಿಲ್ಲ. ರೆಕವರಿಯನ್ನು ಯಾವಾಗ ಮಾಡಬೇಕು? ಅವರಿಗೆ ಯಾವಾಗ ಅನುಕೂಲ ಮಾಡಬೇಕು. ಈ ಪರಿಸ್ಥಿತಿ ಸರಿಯಾಗಿ ತಿಳುವಳಿಕೆ ಬರಲಿಲ್ಲವೆಂದರೆ ನಿಮ್ಮ efforts ಒಮ್ಮೊಮ್ಮೆ ಸರಿಯಾಗುವುದಿಲ್ಲ. ಅದಕ್ಕಾಗಿ ದಯವಿಟ್ಟು ತಾವು ರೈತರ ಬಗ್ಗೆ ಕಳಕಳಿಯನ್ನು ಹೊಂದಿರುವುದರಿಂದ ನಾನು ಹೇಳುತ್ತೇನೆ. ರೈತರನ್ನೆ ಸೇರಿಸಿ ಒಂದು ಗ್ರೂಪ್ಸ್ ಮಾಡಿ. ರೈತರನ್ನು ಸೇರಿಸಿ Self Help Groups ಮಾಡಿ ನೀವು ಅವರಿಗೆ ಅವರ ಮುಖಾಂತರ ಅವರಿಗೆ ಬೇಕಾಗುವಂತಹ ಹಣಕಾಸಿನ ವ್ಯವಸ್ಥೆಯನ್ನು ತಾವು ಮಾಡಿದಿರೆಂದರೆ ಬಹಳಷ್ಟು ಈ ಆತ್ಮಹತ್ಯೆಗೆ ಕಾರಣಗಳು ಏನು ಇದೆಯಲ್ಲಾ ಈ ಮೀಟರ್ ಬಡ್ಡಿ, ಮಾನ್ಯ ಸದಸ್ಯರಾದ ಶ್ರೀ ಕೃಷ್ಣಭೈರೇಗೌಡರು ಮಾತನಾಡುವಾಗ ಈ ಬಗ್ಗೆ ಹೇಳಿದರು. ಈ ಮೀಟರ್ ಬಡ್ಡಿಯ ಪರಿಣಾಮದಿಂದಾಗಿಯೇ ಆತ್ಮಹತ್ಯೆಗಳು ಬಹಳಷ್ಟು ಆಗುತ್ತಿದೆ. ಬಹುತೇಕ ಮಾನ್ಯ ಪ್ರಕಾಶ್‌ರವರು ಇದನ್ನು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಕಡೆ ಈ ತರಹ ಇಲ್ಲ. ಉತ್ತರ ಕರ್ನಾಟಕದ ಕಡೆ ಮೊದಲು ಬಡ್ಡಿ ಕೊಡುವ ಲೇವಾದೇವಿಗಾರರು ಹಳ್ಳಿಯಲ್ಲಿ ಬಹಳ ಕಡಿಮೆಯಾಗಿದೆ. ಶ್ರೀಮತಿ ಇಂದಿರಾಗಾಂಧಿಯವರು 1972ನೇ ಇಸವಿಯೊಳಗೆ ಅವರ ಮನೆಯೊಳಗೆ.....

ಶ್ರೀ ಎಂ.ಪಿ.ಪ್ರಕಾಶ್ (ಗೃಹ ಸಚಿವರು): Karnataka Debt Relief Act ಈಗ ಬಹಳ ಕಡಿಮೆಯಾಗಿದೆ. ಈಗ Karnataka Debt Relief Act ಬಂದ ಮೇಲೆ ದೊಡ್ಡ ಪ್ರಮಾಣದಲ್ಲಿ ಆಗಿದೆ.

ಶ್ರೀ ಡಿ.ಆರ್.ಪಾಟೀಲ್: ವಿಪರೀತ ಅಂದರೆ ಅದೇ ಒಳ್ಳೆಯ ಉದ್ಯೋಗವಾಗಿಬಿಟ್ಟಿದೆ. ಅವರು ರೆಕವರಿಯ ಸಲುವಾಗಿ ಗೂಂಡಾಗಳನ್ನು ಇಟ್ಟುಕೊಂಡಿರುತ್ತಾರೆ. ಅವರು ಗೂಂಡಾಗಳನ್ನು ಬಿಟ್ಟು ಹಣವನ್ನು ರೆಕವರಿ ಮಾಡುತ್ತಾರೆ. ಈ ಮಾನಸಿಕ ಹಿಂಸೆಯನ್ನು ತಾಳಲಾರದೇ ಜನರು ಆ ದಾರಿಯನ್ನು ಹಿಡಿದಿದ್ದಾರೆ. ಅದು ಒಂದು ಕಾರಣವಾಗಿದೆ. ಅದೇ ಕಾರಣವೆಂದು ನಾನು ಹೇಳುವುದಿಲ್ಲ. ನಮ್ಮ ಕೃಷಿ ಜಮೀನಿನೊಳಗೆ 2–3 ಅಂಶಗಳು ಇವೆ. ಮಳೆಯಾಶ್ರಿತ ಕೃಷಿಕರು, ಒಂದು ಮೂರು ಅಂಶ ಇರಿಗೇಷನ್‌ಗೆ ಒಳಪಟ್ಟವು ಆಗಿರುತ್ತದೆ. ಈ 1–3 ಅಂಶದ ಕೃಷಿಕರ ಸಲುವಾಗಿ ವರ್ಷದೊಳಗೆ ನಿಮ್ಮ ಆಯವ್ಯಯದಲ್ಲಿ ಹಣವನ್ನು ಏನು ಕೊಡುತ್ತೀರಿ, ಈ 2–3 ಅಂಶದ ಕೃಷಿಕರ ಸಲುವಾಗಿ ಸ್ವಲ್ಪ ಯೋಚನೆಯನ್ನು ನೀವು ಮಾಡಬೇಕು. ಸುಮಾರು 4 ಸಾವಿರ ಕೋಟಿ ರೂಪಾಯಿಗಳು ಇರಿಗೇಷನ್‌ಗೆ ಇಡುತ್ತೀರಿ, ಒಂದು ಹೆಕ್ಟೇರ್ ಜಮೀನಿಗೆ ನೀರನ್ನು ಒದಗಿಸಬೇಕಾದರೆ 1.5 ಲಕ್ಷದಿಂದ 2 ಲಕ್ಷದವರೆಗೆ ಇರಿಗೇಷನ್‌ದೊಳಗೆ ಖರ್ಚು ಬೀಳುತ್ತದೆ. ಅದನ್ನು ನೀವು ಸುಜಲ ಟೈಪ್ Soil water conservation ಸಲುವಾಗಿ ನೀವು matching programme ನ್ನು ತೆಗೆದುಕೊಂಡರೆ ಒಂದು ಹೆಕ್ಟೇರ್‌ಗೆ 11,000–00 ರೂಪಾಯಿಗಳು ಖರ್ಚು ಬರುತ್ತದೆ. 15 times area you can cover. ಇದರಿಂದ ಅವರ productivity improve ಆಗುತ್ತದೆ. ನಿಮ್ಮ Production improve ಆಗುತ್ತದೆ. ಬಹಳಷ್ಟು ಪರಿಸ್ಥಿತಿ ಉಪಯೋಗವಾಗುತ್ತದೆ. ಇದರ ಜೊತೆಗೆ ನಾವು ಮಾಡಬೇಕಾದುದು ನಮ್ಮ package of practices ಏನಿವೆ? ರೈತರು, package of practices, Agriculture University, ನಿಮ್ಮ ಇಲಾಖೆ, ಈ ಕೆಮಿಕಲ್ ಫರ್ಟಿಲೈಸರ್, ಪೆಸ್ಟಿಸೈಡ್ಸ್ ಉಪಯೋಗ ಮಾಡಿಕೊಂಡು ನೀವು package of practices ಅನ್ನು ಅಡ್ವೈಸ್ ಮಾಡುತ್ತಾರಲ್ಲಾ, ಇದು ಬದಲಾಗಬೇಕು, ಕಳೆದ 30 ವರ್ಷಗಳಿಂದ ಬೆಂಗಳೂರು ವಿಶ್ವವಿದ್ಯಾನಿಲಯದೊಳಗೆ ಇದರ ಉಪಯೋಗ ಮಾಡುತ್ತಿದ್ದಾರೆ, ಅದರ ಫಲಿತಾಂಶವೂ ಇದೆ, ಎಲ್ಲಿ ಕೆಮಿಕಲ್ ಫರ್ಟಿಲೈಸರ್ಸ್, ಪೆಸ್ಟಿಸೈಡ್ಸ್ ಉಪಯೋಗಿಸಿಕೊಂಡು ಕೃಷಿ ಮಾಡಿದ್ದಾರೆ, ಆ ಜಮೀನಿನಲ್ಲಿ ನಮ್ಮ Productivity is declining, ಎಲ್ಲಿ ಸಾವಯವ ಕೃಷಿಯನ್ನು ಅಳವಡಿಸಿದ್ದಾರೆ, ಅವರ Productivity is increasing. ಅವರು ಇನ್ನೊಂದು ವರದಿ ಕೊಡುತ್ತಾರೆ. ಸಾವಯವ ಕೃಷಿ ಮತ್ತು ಫರ್ಟಿಲೈಸರ್ ಪೆಸ್ಟಿಸೈಡ್ಸ್ ಎರಡನ್ನು ಕಂಬೈನ್ಡ್ ಮಾಡಿದಲ್ಲಿ ಅದು sustainable growth ಆಗುತ್ತದೆಂದು ಹೇಳುತ್ತಾರೆ. ಅದಕ್ಕೆ ನಾವು ಒಪ್ಪುವುದಿಲ್ಲ. ನಮ್ಮ ಕೃಷಿಕ ಯಾತಕ್ಕಿಷ್ಟು ನುಗ್ಗಾಗಿದ್ದಾನೆ ಅಂದರೆ ನಮ್ಮ ಏನು technologies, approches ಇವೆ ಇವೆಲ್ಲಾ ನಮ್ಮ

ಮಣ್ಣಿನ ಫಲವತ್ತತೆಯನ್ನು ಕಡಿಮೆ ಮಾಡುತ್ತಾ ಹೋಗುತ್ತದೆ. ಇದರಿಂದ ಜಮೀನು ಬಹಳ ಜೌಳು ಆಗುತ್ತಿದೆ, ಸವಳಾಗುತ್ತಿದೆ, ಅದರಿಂದ ಈಲ್ಡ್ ಕಡಿಮೆಯಾಗುತ್ತಿದೆ, ನಮ್ಮಲ್ಲಿ ವರಲಕ್ಷ್ಮಿ ಮೊದಲು 2–3 ವರ್ಷ 18–20 ಕ್ವಿಂಟಾಲ್ ಒಂದು ಎಕರೆಗೆ ಬಂತು. ಈಗ 2–3 ಕ್ವಿಂಟಾಲ್ ಬರುತ್ತದೆ, ಹಾಗಾಗಿ ಹತ್ತಿ ಬೆಳೆಗೆ ಎಲ್ಲರೂ ಶಿಫ್ಟ್ ಆದರು. ಹತ್ತಿ ಕೈಬಿಟ್ಟು ಎಲ್ಲರೂ maize ಬಂದರು. ಸುಮಾರು 10.00 ಲಕ್ಷ ಟಂಡಿ ಬೇಲ್ಸ್ ನಮ್ಮಲ್ಲಿ ಹಿಂದೆ ಪ್ರೆಸ್ ಆಗುತ್ತಿತ್ತು. ಈಗ 8.00 ಲಕ್ಷಕ್ಕೆ ಬಂದಿದೆ, ಅದಕ್ಕೆ ನೀರಾವರಿಯಿಂದ ರೈತರ ಪರಿಸ್ಥಿತಿ ಸರಿಯಾಗುತ್ತದೆಂದು ನಾನಂತೂ ಒಪ್ಪುವುದಿಲ್ಲ. ನೀರಾವರಿಯಿಂದ ಮೊದಲ 7–8 ವರ್ಷ ರೈತರಿಗೆ ಬಹಳ ಅನುಕೂಲವಾಗಿ ಅವನ ಕಡೆ ದುಡ್ಡು ಹೆಚ್ಚಾಗಿದ್ದಕ್ಕೆ ಅವನು ಬೇರೆ ಬೇರೆ ಚಟಕ್ಕೂ ದಾಸನಾಗಿಬಿಡುತ್ತಾನೆ, ಮುಂದೆ ಈ ಉತ್ಪಾದನೆ ಕಡಿಮೆಯಾಗುತ್ತಿದ್ದರೂ ಆತನ ಚಟ ಕಡಿಮೆಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ ರೈತ ಮತ್ತೆ ಸಾಲ, ಬೇರೆ ಬೇರೆ ಮೂಲಗಳಿಂದ ಹಣಕಾಸಿನ ವ್ಯವಸ್ಥೆ ಮಾಡಲಿಕ್ಕೆ ಹೋಗುತ್ತಾನೆ, ಅದನ್ನು ಕೊಡಲಾರದಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದರಿಂದ ನಾವು ನಮ್ಮ ರೈತನನ್ನು ಹೊರಗೆ ತರಲಿಕ್ಕೆ ಏನು ಮಾಡಬಹುದು, ರೈತ ಬೆಳೆದ ಮಾಲು ನೀವು terms of trades ನೋಡಿ, ರೈತನಿಗೆ ಅದರಿಂದ ಇಲ್ಲಿಯವರೆಗೆ ಅನುಕೂಲವಿಲ್ಲ. ಅದನ್ನು analysis ಮಾಡಿ ನೀವು ಒಂದು ನ್ಯಾಷನಲ್ ಫೋರಂನೊಳಗೆ N.D.C. ಸಭೆಗೆ ಯಡಿಯೂರಪ್ಪನವರು ಹೋಗಿದ್ದಾರೆಯೇ ಇಲ್ಲವೋ, ಇನ್ನು 2–3 ತಿಂಗಳಾದರೆ National Development Council meetingಗೆ ತಾವು ಹೋಗುತ್ತೀರಿ. ಅಲ್ಲಿ ಈ ಪ್ರಶ್ನೆಯನ್ನು ತಾವು ಪ್ರಸ್ತಾಪ ಮಾಡಲೇಬೇಕು. ನಮಗೆ ಯಾವುದೇ ಪೀಕ್ ಇರಲಿ, ರೈತ ಬೆಳೆದಂಥ ಮಾಲಿಗೆ cost+some profit margin ಇಟ್ಟು ಸಪೋರ್ಟ್ ಪ್ರೈಸ್ ಡಿಕ್ಲೇರ್ ಆಗಬೇಕು. ಆ ಸಪೋರ್ಟ್ ಪ್ರೈಸ್‌ಗಿಂತ ಕಡಿಮೆ ರೇಟ್‌ನೊಳಗೆ biddng below support price must be a crime under the act. why should farmers grow and sell it at a lower rate. ಉಳಿದ್ದದ್ದು ಏನಾದರೂ ಆಗುತ್ತದೆಯೇ? ಬೇರೆ ಯಾವುದೇ ಆಗಲಿ. ಅವರು ತಮ್ಮ cost of production ಗಿಂತ ಕಡಿಮೆ ರೇಟ್‌ಗೆ ಏನಾದರೂ ಉಳಿದವರು ಮಾರಾಟ ಮಾಡುತ್ತಾರೆಯೇ? ನಾವು ಮಾಡಬೇಕಾಗುತ್ತದೆ? ಏಕೆಂದರೆ ನಾವು ಜನರ ಜೀವನದಲ್ಲಿ ನಿತ್ಯ ಉಪಯೋಗಿಸುವಂತಹ ಪದಾರ್ಥಗಳನ್ನು ಬೆಳೆಯುತ್ತೇವೆ. ಹಾಗಾಗಿ ನೀವು ಅಧಿಕಾರಕ್ಕೆ ಬರುವಂಥ ಎಲ್ಲಾ ಪಕ್ಷದವರು ಅದು ಕಾಂಗ್ರೆಸ್, ಬಿಜೆಪಿ, ಕಮ್ಯೂನಿಸ್ಟ್ ಇರಲಿ. ಯಾರೇ ಇರಲಿ, ನೀವು ಒಟ್ಟು ಸಮುದಾಯದ ಹಿತವನ್ನು ನೋಡುವಾಗ ರೈತನಿಗೆ ಬಹಳ

ಅನ್ಯಾಯ ಮಾಡುತ್ತಿದ್ದೀರಿ, ದಯವಿಟ್ಟು ಇದನ್ನು ಬದಲಾವಣೆ ಮಾಡಿಸಲು ರಾಷ್ಟ್ರ ಮಟ್ಟದಲ್ಲಿ ಇದರ ಬಗ್ಗೆ ಚಿಂತನೆ ನಡೆಯಬೇಕು. ಈಗ ನಮ್ಮ ರೈತರ ಆತ್ಮಹತ್ಯೆ ವಿಷಯ ಬಹುತೇಕ ಎಲ್ಲಾ ನಾಯಕರ ತಲೆ ತಿನ್ನುತ್ತಿದೆ. ಈಗ ಈ ವಿಚಾರಗಳನ್ನು ಬಿತ್ತಲಿಕ್ಕೆ ಒಳ್ಳೆಯ ಸಮಯ, ತಾವು ತಮಗೆ ಮುಂದೆ ಸಿಗುವ ಅವಕಾಶಗಳನ್ನು ಇದಕ್ಕಾಗಿ ನೀವು ಉಪಯೋಗ ಮಾಡಬೇಕೆಂದು ಹೇಳಿ ನಾನು ಒತ್ತಾಯಿಸುತ್ತೇನೆ. ರೈತರಿಗೆ ಬೇಕಾಗುವುದು ಏನು? ಸಕಾಲಿಕವಾಗಿ ನಮಗೆ ಬೇಕಾಗುವಷ್ಟು ಹಣ, ಒಳ್ಳೆಯ ಬೀಜ, ನಮಗೆ ನಾವು ಬೆಳೆಯುವಂಥ ಮಾಲನ್ನು ನಮ್ಮ ಹೊಲದಿಂದ ನಮ್ಮ ಮನೆಗೆ, ನಮ್ಮ ಮನೆಯಿಂದ ಮಾರ್ಕೆಟ್‌ಗೆ ತೆಗೆದುಕೊಂಡು ಹೋಗಲಿಕ್ಕೆ ರಸ್ತೆ ಬೇಕು. ಮಾರ್ಕೆಟ್‌ನೊಳಗೆ ರೈತರ ಪರವಾದ ಒಂದು ವ್ಯವಸ್ಥೆ. ಹಣಕಾಸನ್ನು ನೀವು ಹೇಗೆ ಮಾಡಬಹುದು ಎನ್ನುವುದರ ಬಗ್ಗೆ ನಾನು ಸಲಹೆಯನ್ನು ತಮಗೆ ಕೊಟ್ಟಿದ್ದೇನೆ. ಹೊಲದಿಂದ ನಮ್ಮ ಮನೆಗೆ ಪದಾರ್ಥಗಳನ್ನು ತರಲಿಕ್ಕೆ ಬೇಕಾಗುವ ರಸ್ತೆಯ ಬಗ್ಗೆ ಯಾರೊಬ್ಬರೂ ವಿಚಾರ ಮಾಡುವುದಿಲ್ಲ. ಪಂಚಾಯತ್‌ನವರಾಗಲಿ ರಾಜ್ಯ ಸರ್ಕಾರವಾಗಲಿ ಕೇಂದ್ರ ಸರ್ಕಾರದವರು ವಿಚಾರ ಮಾಡುವುದಿಲ್ಲ. ಹಾಗಿದ್ದ ಮೇಲೆ ಆ ರಸ್ತೆಯನ್ನು ಯಾರು ಮಾಡಿಸಬೇಕು? ಆ ರಸ್ತೆಯನ್ನು ನಾವೇ ರೈತರೇ ಮಾಡಿಸಬೇಕೆ? ನಮ್ಮ ಹತ್ತಿರ ಆ ಶಕ್ತಿ ಇದೆಯೇ? ನಮಗೆ ಅಷ್ಟು surplus generate ಆಗಲಿಕ್ಕೆ ನೀವು ಅವಕಾಶ ಕಲ್ಪಿಸಿಕೊಡುವಿರಾ? ಹೀಗಿದ್ದಾಗ ಸರ್ಕಾರ ಇದಕ್ಕಾಗಿ ಸ್ವಲ್ಪ ಮುಂದೆ ಬರಬೇಕು. ಹೊಲ ರಸ್ತೆಗಳಿಗೆ ಆದ್ಯತೆ ಮುಂದಿನ ಬಜೆಟ್‌ನೊಳಗೆ ಸಿಗುವ ಹಾಗೆ ದಯವಿಟ್ಟು ತಾವು ವ್ಯವಸ್ಥೆ ಮಾಡಬೇಕು. ಈ ಬಜೆಟ್‌ನೊಳಗೆ ತಾವೇನೂ ಮಾಡಿಲ್ಲ. ಆದರೆ ಮುಂದಿನ ಬಜೆಟ್‌ನೊಳಗಾದರೂ ಹೊಲ ರಸ್ತೆಗಳಿಗೆ ಹಣಕಾಸು ಕೊಡುವ ವ್ಯವಸ್ಥೆ ಆಗಬೇಕು. ನೀರು ಅದು ಹೊಳೆ ನೀರು ಇರಲಿ, ಮಳೆ ನೀರು ಇರಲಿ, ನೀರಂತೂ ರೈತರಿಗೆ ಬಹಳ ಅವಶ್ಯಕ, ಕೆಲವು ಸಂದರ್ಭಗಳಲ್ಲಿ ನಾವು ನೋಡುತ್ತೇವೆ, ಬರಗಾಲ ಇದ್ದಾಗ ಜೂನ್, ಜುಲೈ 15 ರವರೆಗೆ ಮಳೆ ಚೆನ್ನಾಗಿ ಆಗಿರುತ್ತದೆ, ಹೊಲದಲ್ಲಿ ಬೀಜ ಬಿತ್ತನೆ ಮಾಡುತ್ತೇವೆ. ಜುಲೈ, ಆಗಸ್ಟ್, ಸೆಪ್ಟೆಂಬರ್‌ನಲ್ಲಿ ಮಳೆ ಕೈಕೊಡುತ್ತದೆ, ಆಗ ನಮಗೆ ಬರಗಾಲದ ಅನುಭವ ಬರುವುದು. ಈ ಲಾಂಗ್ ಗ್ಯಾಪ್ ಅನ್ನು ನಾವು ಆ moisture stress ಅನ್ನು sustain ಮಾಡುವಂಥ practices ನಮಗೆ agriculture ನಲ್ಲಿ ಬರಬೇಕು. ಇವತ್ತು ಆ ನೀರು ಆ ಹಸಿಯನ್ನು ಹಿಡಿದುಕೊಳ್ಳುವಂಥ ವ್ಯವಸ್ಥೆ ಮಣ್ಣಿನಲ್ಲಿ ಬರಬೇಕಾದರೆ ನಾವು ಸಾವಯವ ಕೃಷಿಗೆ ಅನಿವಾರ್ಯವಾಗಿ ಮೊರೆ ಹೋಗುವಂಥ ಪ್ರಸಂಗ ಇವತ್ತು ಒದಗಿಬಂದಿದೆ. ಕೆಮಿಕಲ್ ಫರ್ಟಿಲೈಸರ್ಸ್, ಪೆಸ್ಟಿಸೈಡ್ ಉಪಯೋಗಿಸುವುದರಿಂದ ಮಣ್ಣಿನಲ್ಲಿ ಆ ನೀರನ್ನು

ಹೀರುವಂಥ ಶಕ್ತಿ ಕಡಿಮೆಯಾಗುತ್ತಿದೆ. ಆ ಮಣ್ಣಿನಲ್ಲಿ ಫಲವತ್ತತೆ ಕಡಿಮೆಯಾಗುತ್ತಿದೆ. These are all proven facts. ಅದಕ್ಕೆ ದಯವಿಟ್ಟು ತಾವು ಸಾವಯವ ಕೃಷಿಗೆ ನಿಮ್ಮ ಕೃಷಿ ಇಲಾಖೆ ಮತ್ತು ಕೃಷಿ ವಿಶ್ವವಿದ್ಯಾನಿಲಯದವರಿಗೆ ನೀವು ಇದನ್ನು ಹೇಳಲೇಬೇಕು, ಅವರ extension activities ನಲ್ಲಿ ಅವರೇನು practices packages suggest ಮಾಡುತ್ತಾರೆ, ನೀವು ಫರ್ಟಿಲೈಸರ್ಸ್, ಪೆಸ್ಟಿಸೈಡ್ ಉಪಯೋಗ ಮಾಡಬಾರದೆಂದು ಹೇಳುವಂಥ ಪ್ರಸಂಗ ಬರಲೇಬೇಕು. ನೀವು ಕೇಂದ್ರ ಸರ್ಕಾರದ ಗಮನಕ್ಕೆ ಈ ವಿಷಯವನ್ನು ತೆಗೆದುಕೊಂಡು ಬನ್ನಿ, ಫರ್ಟಿಲೈಸರರ್ಸ್ ಸಬ್ಸಿಡಿಯನ್ನು ಎಷ್ಟು ಬೇಗ ಕೊಡುತ್ತಾರೆ ಅಷ್ಟು ಬೇಗ ರೈತರಿಗೆ ಅನುಕೂಲವಾಗುವಂಥ ಪರಿಸ್ಥಿತಿ ಇವತ್ತಿದೆ. ಕೆಮಿಕಲ್ ಫರ್ಟಿಲೈಸರ್ ನಮ್ಮ ಕೈಗೆ ಎಟುಕಲಾರದಂತಾದರೂ ನಾವು ಅನಿವಾರ್ಯವಾಗಿ ಸಾವಯವ ಕೃಷಿ ಪದ್ಧತಿಗೆ ಅದನ್ನು ಅಪ್ರೋಚ್ ಮಾಡುವ, ಅದನ್ನು ಅಳವಡಿಸಿಕೊಳ್ಳುವಂಥ ಪರಿಸ್ಥಿತಿ ನಮಗೆ ಅನಿವಾರ್ಯವಾಗಿ ಬರುತ್ತದೆ. ಅದರಿಂದ ಬಹಳ ಅನುಕೂಲವಾಗುತ್ತದೆ. ನಮ್ಮ ಮುಂದಿನ ಪೀಳಿಗೆಗೂ ಕೂಡ ಬಹಳ ಅನುಕೂಲವಾಗುತ್ತದೆ. ಇಂತಹ ಒಂದು ವ್ಯವಸ್ಥೆಯನ್ನು ನಾವು ಬೇಗ ಮಾಡುವಂಥ ವ್ಯವಸ್ಥೆಯಾಗಬೇಕು. ಈಗ ರೈತ ಮಾಲು ಬೆಳೆದು ಮಾರ್ಕೆಟ್‌ಗೆ ತರುತ್ತಾನೆ, ಮಾರ್ಕೆಟ್‌ನಲ್ಲಿ ಏನೇನು ಅನಾನುಕೂಲವಾಗುತ್ತದೆಂಬ ಅರಿವು ತಮಗೂ, ಮಾನ್ಯ ಪ್ರಕಾಶ್ ರವರಿಗೆ, ಉದಾಸಿಯವರಿಗೂ ಸಹ ಇದೆ. ನಮ್ಮ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ರೈತರಿಗೆ ಏನೇನು ಅನ್ಯಾಯವಾಗುತ್ತದೆಂಬ ಅನುಭವ ನಮಗೆಲ್ಲರಿಗೂ ಇದೆ. ಕಾನೂನು ಪ್ರಕಾರ ರೈತರಿಂದ ದಲ್ಲಾಳಿ ತೆಗದುಕೊಳ್ಳಬಾರದೆಂದು ಹೇಳಿ Regulated Market Act ಇದೆ. ಬಹುತೇಕ ಬೆಂಗಳೂರು ಬಿಟ್ಟರೆ ಎಲ್ಲಾ ಕಡೆ ದಲ್ಲಾಳಿಯನ್ನು ತೆಗೆದುಕೊಳ್ಳುತ್ತಾರೆಂಬ ಅನುಭವ ನಿಮಗೂ ಇದೆ, ಅವರಿಗೂ ಇದೆ, ನನಗೂ ಇದೆ, ಉದಾಸಿಯವರಿಗೂ ಇದೆ. ಏಕೆಂದರೆ ನಾವೆಲ್ಲರೂ basically ರೈತರು. ಆನಂತರ ರಾಜಕಾರಣಿಗಳು, ಆನಂತರ ವ್ಯಾಪಾರಸ್ಥರು ಎನ್ನಿಸಿಕೊಳ್ಳುತ್ತೇವೆ. ಮೊದಲು ರೈತರು ಬೆಳೆದ ಮಾಲನ್ನು ಮಾರುತ್ತೇವೆ, ಮಾರಾಟ ಆಗುವ ಮುನ್ನ ನಮಗೆ ಏನೇನು ಅನ್ಯಾಯವಾಗುತ್ತದೆಂಬ ಬಗ್ಗೆ ಸಂಪೂರ್ಣ ಅರಿವು ನಮಗಿದೆ. ಇದನ್ನು ನಿಲ್ಲಿಸಬೇಕೆಂಬ ವಿಚಾರ ನಮಗೆಲ್ಲರಿಗೂ ಏಕೆ ಬರುವುದಿಲ್ಲ? ಇದರ ಸಲುವಾಗಿ ಒಂದು ಕಾನೂನನ್ನು ಮಾಡಿದ್ದೇವೆ ಸಾಹೇಬರೇ, ಮಾನ್ಯ ಉದಾಸಿಯವರು ಇದ್ದರು. ತಾವೂ ಇದ್ದಿರಿ, ತಮ್ಮ ಸರ್ಕಾರ ಇದ್ದಾಗ, ಮಾನ್ಯ ಜೆ.ಹೆಚ್. ಪಟೇಲ್ ಅವರು ಮುಖ್ಯಮಂತ್ರಿಗಳು ಇದ್ದಾಗ ಇದರ ಸಲುವಾಗಿ ಒಂದು ಕಾನೂನು ಮಾಡಿದೆವು. ಇದನ್ನು ತಪ್ಪಿಸಬೇಕು, ಈ ಪದ್ಧತಿಯನ್ನು

ತಪ್ಪಿಸಬೇಕು ಎಂದು ಹೇಳಿ ವ್ಯಾಪಾರಸ್ಥರು ದಲಾಲ್ ಅವರಿಗೆ ಕೊಡುವಂತಹ ಹಣವನ್ನು ದಲಾಲ್ ಅವರು ರೈತರಿಗೆ ಕೊಡುವಂತಹ ಹಣವನ್ನು ಎ.ಪಿ.ಎಂ.ಸಿ. ಮುಖಾಂತರ ಕೊಡುವ ಹಾಗೆ ಆಗಬೇಕು. ಇದನ್ನು ಕಾನೂನು ಮಾಡಿದೆವು. ಕಾನೂನು ಮಾಡಿ 8 ವರ್ಷ ಆಯಿತು. ಅದನ್ನು implement ಮಾಡಲಿಕ್ಕೆ ಇಲ್ಲಿಯವರೆಗೆ Notify ಆಗಲಿಲ್ಲ. ನಿಮ್ಮ ಸರ್ಕಾರ ಇದ್ದಾಗಲೂ ಆಗಲಿಲ್ಲ. ನಮ್ಮ ಸರ್ಕಾರ ಬಂದಾಗಲೂ ನನಗೆ ಮಾಡಲಿಕ್ಕೆ ಆಗಲಿಲ್ಲ. ಅಂದರೆ ವ್ಯವಸ್ಥೆ ಯಾವ ಪರವಾಗಿ ಕೆಲಸ ಮಾಡುತ್ತದೆ? ದುರ್ದೈವ ಅಂದರೆ ನಾವು ನೀವೇ ಬಹಳ ಮತ್ತೆ legislators ನೊಳಗೆ, ರೈತರೇ ಬಹಳ. ಆದರೆ ವ್ಯವಸ್ಥೆ ಹೇಗೆ ಕೆಲಸ ಮಾಡುತ್ತಿದೆ? ಇದನ್ನೆಲ್ಲಾ ನಾವು ಮೂಕ ಪ್ರೇಕ್ಷಕರಾಗಿ ಹೇಗೆ ನೋಡುತ್ತಿದ್ದೇವೆ? ಇದನ್ನು ಏಕೆ ಬದಲು ಮಾಡಬಾರದು? ಮೊನ್ನೆ ತಾವು ಎಪಿಎಂಸಿಗೆ ಸಾಕಷ್ಟು ಬದಲಾವಣೆಗಳನ್ನು ತಂದಿರಿ. ಅದು ಕಾನೂನೊಳಗೂ ಇದೆ. ಅವರು 5 ದಿವಸದೊಳಗೆ ದುಡ್ಡು ಕೊಡಬೇಕು. ಅವರು 5 ದಿವಸದೊಳಗೆ ದುಡ್ಡು ಕೊಡಲಿಲ್ಲ ಎಂದರೆ ಆರನೆಯ ದಿವಸ Automatic ಆಗಿ ಅವರ Licence cancel ಆಗಬೇಕು. ಆಮೇಲೆ ಈ ರೀತಿ Licence cancel ಯಾರದ್ದು cancel ಆಗುತ್ತದೆ? ಅವರು ಇಡೀ ಸ್ಟೇಟ್‌ನೊಳಗೆ ವ್ಯವಹಾರ ಮಾಡುವುದಕ್ಕೆ ಅವಕಾಶ ಇರಬಾರದು. ಇದು ಕಾನೂನು. ಆದರೆ ಕಾನೂನೇ implement ಆಗುವ ಹಾಗೆ ಇಲ್ಲವಲ್ಲ. ಕಾನೂನನ್ನು ಇಂಪ್ಲಿಮೆಂಟ್ ಮಾಡುವವರು ಇಂಪ್ಲಿಮೆಂಟ್ ಮಾಡಲಿಲ್ಲ ಎಂದರೆ ಅವರಿಗೆ ಏನು ಮಾಡುತ್ತೀರಿ? ಏನಾದರೂ ಒಂದು ಅಕೌಂಟಬಿಲಿಟಿ ಬೇಕಲ್ಲ. ಏಕೆ ನಾವು ಇಷ್ಟು ಅಸಹಾಯಕರು ಆಗುತ್ತಿದ್ದೇವೆ? ಈ ವ್ಯವಸ್ಥೆಯನ್ನು ಹೀಗೆಯೇ ನೋಡಿಕೊಂಡು ಹೋಗುವಂತಹ ಪರಿಸ್ಥಿತಿ ಏಕೆ ನಿರ್ಮಾಣ ಆಗುತ್ತಿದೆ? ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ಏಕೆ ಈ ರೀತಿ ನಾವು ನಿರ್ಮಾಣ ಮಾಡುತ್ತಿದ್ದೇವೆ? ಇದನ್ನು ಬದಲಾವಣೆಗೆ ತರಲಿಕ್ಕೆ ಸಾಧ್ಯವಾಗುತ್ತದೋ ಇಲ್ಲವೋ? ಸಮಸ್ಯೆಗಳು ಏನು? ಪರಿಹಾರವೇನು ಎಂದು ನಮಗೆಲ್ಲರಿಗೂ ಗೊತ್ತಿದೆ ಆದರೆ ಆ ಪರಿಹಾರ ಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ನಾವೆಲ್ಲರೂ ಅಸಹಾಯಕರಾಗಿ ಕುಳಿತು ಬಿಟ್ಟಿದ್ದೇವೆ. ಏಕೆ? ಇದು ಬದಲಾಗುವಂತಹ ಕ್ರಮಗಳನ್ನು ನಾವು ತೆಗೆದುಕೊಳ್ಳಲಿಲ್ಲ ಎಂದರೆ ಏನು ದುಡ್ಡು ಖರ್ಚು ಮಾಡಿದರೆ ಏನು? ಏನು ಮಾಡಿದರೆ ಏನು? ಒಂದು ವರ್ಷಕ್ಕೆ 40 ಸಾವಿರ ಕೋಟಿ ರೂಪಾಯಿ ನಮ್ಮ ಬಜೆಟ್‌ನಿಂದ ಬೇರೆ ಬೇರೆ, Salary, pension ಎಲ್ಲಾ ಇರುತ್ತದೆ. Development expenditure ಇರುತ್ತದೆ, Non-Development expenditure ಸಹ ಇರುತ್ತದೆ. ಸುಮಾರು 20 ಸಾವಿರ ಕೋಟಿ ರೂಪಾಯಿ ನಾವು developmental

expenditureಗೆ ಖರ್ಚು ಮಾಡುತ್ತೇವೆ. ನಾವು ಖರ್ಚು ಮಾಡುವ ಹಣ ಸರಿಯಾಗಿ ಸದ್ವಿನಿಯೋಗ ಆಗುತ್ತದೋ, ಹೇಗೋ? ಇದನ್ನು ನೋಡಬೇಕಲ್ಲ. ನೀವು Irrigation Departmentಅನ್ನು ತೆಗೆದುಕೊಳ್ಳಿ. ನಮಗೂ ನಿಮಗೂ ಅನುಭವ ಇದೆ. ಇರಿಗೇಷನ್ ಡಿಪಾರ್ಟ್‌ಮೆಂಟ್‌ನ ಬಗ್ಗೆ ಹೇಳಬೇಕಾದರೆ, ಮಾನ್ಯ ಯಡಿಯೂರಪ್ಪನವರೇ ನಾವು ಒಮ್ಮೆ ಶಿವಮೊಗ್ಗ ಜಿಲ್ಲೆಗೆ ಬಂದಿದ್ದೆವು. ಭದ್ರಾ ಯೋಜನೆಯನ್ನು ನೋಡಲಿಕ್ಕೆ. ಹಿಂದಿನ ಅಸೆಂಬ್ಲಿ ಇದ್ದಾಗ ಎಸ್ಟಿಮೇಟ್ ಕಮಿಟಿ ಸದಸ್ಯರಾಗಿ ಕೆಲಸ ಮಾಡುವಾಗ ನಾವು ಹೋಗಿದ್ದೆವು. ಒಂದು workಗೆ ಎಸ್ಟಿಮೇಟ್ 70 ಕೋಟಿ ರೂಪಾಯಿ. ಅದಕ್ಕೆ ಆಗಲೇ 270 ಕೋಟಿ ರೂಪಾಯಿ ಪೇಮೆಂಟ್ ಆಗಿದೆ. 70 ಕೋಟಿ ಎಸ್ಟಿಮೇಟೆಡ್ ಅಮೌಂಟ್. ಮೊದಲು ಏನೋ ಒಂದು ಟೆಂಡರ್ ಕರೆದು ಬಿಡುತ್ತಾರೆ. ಆ ಟೆಂಡರ್‌ನೊಳಗೆ ರಿಂಗೂ, ಪಂಗೂ ಎಲ್ಲಾ ಆಗುತ್ತವೆ. ಬೇಕಾದವರಿಗೆ ಕಾಂಟ್ರಾಕ್ಟ್ ಕೊಡಿಸುತ್ತಾರೆ. ಆಮೇಲೆ ಅವರಿಗೆ Hard, Soft ಇವೆಲ್ಲಾ ಏನೇನೋ ಹಚ್ಚಿ ಅವರಿಗೆ ಎಸ್ಕಲೇಷನ್ ಮಾಡುವುದಕ್ಕೆ ವ್ಯವಸ್ಥೆಯೊಳಗೆ ಅನುಕೂಲ ಮಾಡುತ್ತಾರೆ. ವ್ಯವಸ್ಥೆ ಮಾಡಿ ಒಂದು ರೂಪಾಯಿ ಖರ್ಚು ಆಗುವಲ್ಲಿ ನಾಲ್ಕು ರೂಪಾಯಿ ಖರ್ಚು ಮಾಡುವ ಹಾಗೆ ಒಂದು ಸಿಸ್ಟಂ ಅನ್ನು ನಾವು ಡೆವಲಪ್ ಮಾಡಿಕೊಂಡು ಬಂದಿದ್ದೇವೆ. ಈ ರಿಂಗ್ ಅಗುವುದನ್ನು ತಪ್ಪಿಸಲಿಕ್ಕೆ e-tendering ಜಾರಿಗೆ ತರಲಿಕ್ಕೆ ನಿಮಗೇನು ತೊಂದರೆ ಇದೆ. ಮಾನ್ಯ ಉದಾಸಿಯವರೇ RDPR ನೊಳಗೋ e-tendering ಬಂತು ಅಂದರೆ...

ಡಾ॥ ಶರಣ್ ಪ್ರಕಾಶ್ ರುದ್ರಪ್ಪ ಪಾಟೀಲ್:– ಸಾರ್, ಒಂದು ನಿಮಿಷ, ಮಾನ್ಯ ಡಿ.ಆರ್. ಪಾಟೀಲ್ ಸಾಹೇಬರು ಹೇಳಿದ ಹಾಗೆ ಮಾನ್ಯ ಯಡಿಯೂರಪ್ಪನವರು ಗಮನಿಸಬೇಕು. ಏಕೆಂದರೆ ತಾವೇ ಒಂದು ಬಿಲ್ ಅನ್ನು ಈ ಸದನದಲ್ಲಿ ತಂದಿದ್ದೀರಿ. e-tendering ಮಾಡಲಿಕ್ಕೆ ಒಂದು ಬಿಲ್ ಇಂಟ್ರಡ್ಯೂಸ್ ಮಾಡಿದ್ದೀರಿ. ಅದನ್ನು ನಾವು ಪಾಸ್ ಸಹ ಮಾಡಿ ಕೊಟ್ಟೆವು. ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್ ತಮ್ಮಲ್ಲಿರತಕ್ಕಂಥ ಇಲಾಖೆ. ನಾನು ಆವಾಗಲೇ ಬಿಲ್ ಪಾಸ್ ಮಾಡುವಾಗಲೇ ಸಲಹೆ ಮಾಡಿದ್ದೆ. ನೀವು e-tendering ಮಾಡುವುದಕ್ಕೆ ರಾಜ್ಯದಲ್ಲಿ Transparency Actಗೆ ತಿದ್ದುಪಡಿ ತರುತ್ತಿದ್ದೀರಿ. ಆದರೆ ನೀವು ಇಲಾಖೆಗಳಲ್ಲಿ ಆ ಒಂದು ಪದ್ಧತಿಯನ್ನು ಜಾರಿಗೊಳಿಸುವುದಕ್ಕೆ ವ್ಯವಸ್ಥೆ ಇದೆಯೇ ಎಂದು ಮೊದಲು ನೋಡಿಕೊಳ್ಳಿ ಎಂದು ಹೇಳಿದ್ದೆ. ತಾವು ಹೇಳಿದ್ದಿರಿ, ಇಲ್ಲ ನಾವು ಎಲ್ಲಾ ವ್ಯವಸ್ಥೆ ಮಾಡುತ್ತಿದ್ದೇವೆ, ನೀವೇನೂ ಚಿಂತೆ ಮಾಡಬೇಕಾಗಿಲ್ಲ ಎಂದು

ಹೇಳಿದ್ದಿರಿ. ಆದರೆ ಇವತ್ತಿಗೂ ಕೂಡ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟಿನಲ್ಲಿ e-tendering ಮಾಡತಕ್ಕಂತದ ಪದ್ಧತಿ ಇಲ್ಲ. ಇದು ಕಾನೂನು ಆಗಿದೆ. ಆದರೆ ಅಲ್ಲಿ Department ನಲ್ಲಿ implementation ಇಲ್ಲ. ಏಕೆ ಇಲ್ಲ ಎಂದರೆ ಈಗ ನಮ್ಮ ಡಿ.ಆರ್. ಪಾಟೀಲ್ ಅವರು ಹೇಳಿದಂತಹದೇ ಕಾರಣ. ಏನೆಂದರೆ ಅದು ರಿಂಗಿಗೇ ಅನುಕೂಲ ಆಗುವುದಿಲ್ಲ. ನೀವು e-tendering ತಂದು ಬಿಟ್ಟರೆ ಈ ರಾಜ್ಯದಲ್ಲಿ ಎಲ್ಲೇ ಇರತಕ್ಕಂಥ ಒಬ್ಬ ಗುತ್ತಿಗೆದಾರ website ನಲ್ಲಿ ಅಪ್ಲೈ ಮಾಡಬಹುದು. ಅವನು ಟೆಂಡರ್‌ನಲ್ಲಿ ಪಾರ್ಟಿಸಿಪೇಟ್ ಮಾಡಬಹುದು. ಇವರಿಗೆ ಪ್ರಿವೆಂಟ್ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಇಚ್ಛಾ ಶಕ್ತಿ ನಿಮ್ಮ ಅಧಿಕಾರಿಗಳ ಹತ್ತಿರ ಇಲ್ಲವೋ ಅಥವಾ ನೀವು ಅವರಿಗೆ ಪ್ರಾಪರ್ ಡೈರೆಕ್ಷನ್ ಕೊಡುತ್ತಿಲ್ಲವೋ ಎಂದು ನಮಗೆ ಗೊತ್ತಾಗುತ್ತಿಲ್ಲ. ಏಕೆಂದರ ಬಿಲ್‌ಪಾಸ್ ಆಗಿ 6 ತಿಂಗಳ ಮೇಲೆ ಆಯಿತು. ಇದು Karnataka Transparency Act ಗೆ ಬಿಲ್ ಪಾಸ್ ಆಗಿಯೇ 6 ತಿಂಗಳಾಯಿತು. ನೀವು ಆಗಲೇ ಇಂಪ್ಲಿಮೇಟ್ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿರಿ, ಬಿಲ್‌ಪಾಸ್ ಮಾಡುವಾಗ, ಆದರೆ ಇನ್ನೂ ಕೂಡ ಇವತ್ತು ಒಂದು ತಿಂಗಳ ಹಿಂದೆ, ಹದಿನೈದು ದಿವಸ ಟೆಂಡರ್ ಆಗಿರತಕ್ಕಂಥದ್ದರಲ್ಲಿ ನೀವು e-tendering ಮಾಡಿಲ್ಲ. ಅಂದರೆ ಇದರಲ್ಲಿ ನೀವು ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಯಾವ ರೀತಿಯಾಗಿ ಆದರೂ ಇದನ್ನು ಸರಿಪಡಿಸಬೇಕು. ಇಲ್ಲವೆಂದರೆ ಮಾನ್ಯ ಡಿ.ಆರ್. ಪಾಟೀಲ್ ಸಾಹೇಬರು ಹೇಳಿದ ಹಾಗೆ ಇದು ರಿಂಗಿಗೆ ನಾವೇ ಅನುಕೂಲ ಮಾಡಿಕೊಡುತ್ತಿದ್ದೇವಾ ಎನ್ನತಕ್ಕ ಸಂಶಯಕ್ಕೆ ಆಸ್ಪದ ಮಾಡಿಕೊಡುತ್ತದೆ.

ಶ್ರೀ ಡಿ.ಆರ್.ಪಾಟೀಲ್:- ಸಾರ್ ಈಗ ಪೊಲೀಸ್ ವೇರ್‌ಹೌಸಿಂಗ್ ಕಾರ್ಪೊರೇಷನ್‌ದೊಳಗೆ e-tendering, reverse auction system introduce ಮಾಡಿದ್ದಾರೆ ಮತ್ತು ಆರ್ ಡಿ ಪಿ ಆರ್ ನಲ್ಲಿ ಸಹಿತ ಪಿಎಂಜಿಎಸ್ ವೈನೊಳಗೆ ಅದು ಇಂಟ್ರಡ್ಯೂಸ್ ಆಗಿದೆ ಎಂದು ಏನೋ ಮಾಹಿತಿ ಇದೆ. ಇಂಟ್ರಡ್ಯೂಸ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದು ಆಯಿತೋ ಇಲ್ಲವೋ ತಾವು ನೋಡಬೇಕು. ಈ e-tendering, with reverse auction system ಬಂತು ಎಂದರೆ ರಿಂಗ್ ಮಾಡಲಿಕ್ಕೆ ಆಗುವುದಿಲ್ಲ. ಬಹಳ ಕಾಂಪಿಟಿಷನ್ ಆಗುತ್ತದೆ. ಆಮೇಲೆ ಈಗೇನು ಆರ್ ಡಿ ಪಿ ಆರ್ ನೊಳಗೆ ಇಷ್ಟಿಷ್ಟು ತುಂಡು ಗುತ್ತಿಗೆ ಇದೆಯಲ್ಲಾ ತೆಗೆದುಬಿಡಿ ಮಾನ್ಯ ಉದಾಸಿಯವರೇ, ಒಮ್ಮೆ ನಾವು ಜನರಿಗೆ ಅನುಕೂಲ ಆಗುವಂತಹ ವ್ಯವಸ್ಥೆಯನ್ನು ರೂಪಿಸುವಲ್ಲಿ ನಾವು

ಪಕ್ಷ, ಪಂಗಡ, ನಮ್ಮ ಜನಕ್ಕೆ ಅನುಕೂಲ ಆಗುತ್ತ? ನಮ್ಮ ಎಂಎಲ್‌ಎ ಅವರು ಹೇಳುತ್ತಾರೆ, ಒತ್ತಾಯ ಮಾಡುತ್ತಾರೆ. ಇವನ್ನೆಲ್ಲಾ ನೋಡಿಕೊಳ್ಳುತ್ತಾ ನಿಂತೆವು ಅಂದರೆ ಈ ವ್ಯವಸ್ಥೆ ಸುಧಾರಣೆ ಆಗುವುದೇ ಇಲ್ಲ. ಇದನ್ನು ಸುಧಾರಣೆ ಮಾಡಬೇಕು ಎಂದರೆ ನಾನು ಬಹಳ ನೋವಿನಿಂದ ಹೇಳುತ್ತೇನೆ. ಮಾನ್ಯ ಯಡಿಯೂರಪ್ಪನವರೇ, ಶಾಸಕರು, ಅಧಿಕಾರಿಗಳು, ಕಾಂಟ್ರಾಕ್ಟರ್ಸ್ ಈ ನೆಕ್ಸಸ್ ಅನ್ನು ನೀವು ಬ್ರೇಕ್ ಮಾಡಲೇಬೇಕು. ನೆಕ್ಸಸ್ ಅನ್ನು ನೀವು ಬ್ರೇಕ್ ಮಾಡಲಿಲ್ಲ. ಅಂದರೆ ನೀವು ಎಷ್ಟೇ ರೊಕ್ಕ ತಂದು ಸುರಿಯಿರಿ, ಹಣೇ ಬರಹ ಅದೇ, ನಾವು ಮಾಡಿದ್ದನ್ನು ನಮ್ಮ ಜಿಲ್ಲಾ ಪಂಚಾಯತ್ ಮೆಂಬರ್ಸ್ ಮಾಡುತ್ತಾರೆ, ನಮ್ಮ ತಾಲ್ಲೂಕ್ ಮೆಂಬರ್ಸ್ ಮಾಡುತ್ತಾರೆ ನಮ್ಮ ಗ್ರಾಮ ಪಂಚಾಯತ್ ಮೆಂಬರ್ಸ್ ಮಾಡುತ್ತಾರೆ, ನಮ್ಮ ಕಣ್ಣೆದುರಿಗೆ ಅವರೇನು ಮಾಡುತ್ತಾರೆ ಎಂದು ನೋಡಿಯೂ ಸಹಿತ ಅವರಿಗೆ ಬುದ್ಧಿ ಹೇಳಲಾರದಂತಹ ವಾತಾವರಣದಲ್ಲಿ ನಾವಿದ್ದೇವೆ. ಏಕೆ? ನೀವೇನು ಮಾಡುತ್ತೀರಾ ಎಂದು ಅವರು ನಮ್ಮನ್ನು ಕೇಳುತ್ತಾರೆ. ನೀವೇನು ಮಾಡುತ್ತೀರಿ? ಅದಕ್ಕೆ ದಯವಿಟ್ಟು ನಾವಿಲ್ಲಿ ಬೆಂಗಳೂರಿನಲ್ಲಿ ನೀವು ನಿಮ್ಮ ಅಧಿಕಾರ ಸ್ಥಾನದೊಳಗೆ ಕುಳಿತಾಗ ಇವೆಲ್ಲಾ ವಿಚಾರಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ಏನು ಮಾಡಿದರೆ ನಾವು ಕೊಡುವ ಹಣ ಸದ್ವಿನಿಯೋಗ ಮಾಡಲಿಕ್ಕೆ ಸಾಧ್ಯವಾಗುತ್ತದೆ? ನಮ್ಮ ಸಿದ್ದರಾಮಯ್ಯ ಸಾಹೇಬರು ಹೇಳುವ ಮುಂದೆ 70% ಆದ ರೂ ಖರ್ಚಾಗಲಿ ಎಂದರು. ಏಕೆ 70% ಖರ್ಚಾಗಲಿ ಎಂದು ಹೇಳುತ್ತೀರಿ? 100% ಖರ್ಚಾಗಬೇಕು ಎಂಬ ಒಂದು ವ್ಯವಸ್ಥೆಯನ್ನು ರೂಪಿಸಲಿಕ್ಕೆ ಏನು ಮಾಡಬೇಕು ಎಂದು ಬೇಕಾದರೆ ನೀವು ಒಂದು ಸದನ ಸಮಿತಿಯನ್ನು ಮಾಡಿರಿ. ಅದರೊಳಗೆ ನಮ್ಮಂತಹ ಇಂಟರೆಸ್ಟಡ್ ಇದ್ದವರನ್ನು ಸದಸ್ಯರನ್ನಾಗಿ ಹಾಕಿರಿ. ಏನು ಮಾಡಬೇಕು ಎನ್ನುವ ದಾರಿಯನ್ನು ನಿಮಗೆ ಹೇಳುತ್ತೇನೆ. ಆ ದಾರಿಯ ಪ್ರಕಾರವಾಗಿ ಕೆಲಸ ನಡೆಯುವ ಹಾಗೆ ತಾವು ವ್ಯವಸ್ಥೆಯನ್ನು ಮಾಡಿದರೆ, ನಾವು 20 ಸಾವಿರ ಕೋಟಿ ಏನು development expenditureಗೆ ಖರ್ಚು ಮಾಡುತ್ತೀರಿ? ಇದು ಜನಗಳಿಗೆ ಹೋಗಿ ಮುಟ್ಟುತ್ತದೆ. ಸದ್ವಿನಿಯೊಗ ಆಗುತ್ತದೆ. ಮತ್ತೆ ಜನರ ಸಹಭಾಗಿತ್ವವನ್ನು ಇದರಲ್ಲಿ ಮಾಡಿಕೊಂಡು ಬಿಟ್ಟೆವು ಅಂದರೆ ಅಂತೂ 20 ಸಾವಿರ ಕೋಟಿಗೆ 30 ಸಾವಿರ ಕೋಟಿ ಕೆಲಸ ಆಗುವಂತಹ ಒಂದು ಅನುಭವ ನಮಗಂತೂ ಕೆಲವು ಹಳ್ಳಿಗಳಲ್ಲಿ ಬಂದಿವೆ. ಸಮುದಾಯವನ್ನು ಮುಂದಿಟ್ಟುಕೊಂಡು ಕೆಲಸ ಮಾಡುವುದಕ್ಕೆ ಹೊರಟೆವು ಅಂದರೆ ಅವರು ಟ್ರಾಕ್ಟರ್ ಕೊಡುತ್ತಾರೆ. ಅವರು ಶ್ರಮದಾನ ಮಾಡುತ್ತಾರೆ ಮತ್ತು ಇವು ಯಾವುವೂ ಸೋರುವುದಿಲ್ಲ. ಒಂದು ರೂಪಾಯಿ ಕೊಟ್ಟರೆ, ಒಂದೂವರೆ ರೂಪಾಯಿ ಕೆಲಸ ಮಾಡಿ ತೋರಿಸಿದ್ದಾರೆ. ಅವು

ಅನುಭವ ಇದೆ. ದಯವಿಟ್ಟು ನಾವು ಕೊಡುವ ಹಣವನ್ನು ಸದ್ವಿನಿಯೋಗ ಆಗುವಂತಹ ಒಂದು ವ್ಯವಸ್ಥೆಯನ್ನು ರೂಪಿಸುವಲ್ಲಿ ನೀವೆಲ್ಲಾ ಕೆಲಸ ಮಾಡಬೇಕು. ಎಷ್ಟು ಹಣ ಅಲೊಕೇಟ್ ಮಾಡಿದೆವು? ಎಷ್ಟು ಹಣ ನಾವು ಹಾಕಿದೆವು? ಇದು ಇಂಪಾರ್ಟೆಂಟ್ ಅಲ್ಲ. ಎಷ್ಟು ಜನರಿಗೆ ಹೋಗಿ ಮುಟ್ಟಿತು ಅದು. ಜನರಿಗೆ ಬೇಕಾದಂತಹ ಸೌಲಭ್ಯಗಳನ್ನು ಸೃಷ್ಟಿ ಮಾಡಲಿಕ್ಕೆ ಅನುಕೂಲ ಆಯಿತು ಎನ್ನುವುದು ಬಹಳ ಮುಖ್ಯ ಹೊರತಾಗಿ ಎಷ್ಟು ಹಣ ಖರ್ಚು ಮಾಡಿದ್ದೇವೆ ಎನ್ನುವುದಂತೂ ಮುಖ್ಯ ಅಲ್ಲವೇ ಅಲ್ಲ. ಈಗ ನಾವು RDPR ನಲ್ಲಾಗಲಿ, PWD ಯಲ್ಲಾಗಲಿ, NABARD,PMGSY ನಲ್ಲಾಗಲಿ, ರಸ್ತೆ ಮತ್ತು ಸೇತುವೆ ಕೆಲಸಗಳಿಗೆ ಎಷ್ಟು ದುಡ್ಡು ಖರ್ಚು ಮಾಡುತ್ತೇವೆ? ಗುಣಮಟ್ಟದ ರಸ್ತೆಗಳಾಗುತ್ತವೆಯೇ? ಇದರ ಬಗ್ಗೆ ಏನು ಮಾಡಬೇಕೆಂದು ನೀವು ವಿಚಾರ ಮಾಡಿದರೆ, ಈ ವಿಷಯದಲ್ಲಿ ನನಗಿಂತಲೂ ನಿಮಗೇ ಹೆಚ್ಚು ಅನುಭವವಿದೆ. ನೀವು ನೆಲದ ಮೇಲೆ ನಿಂತು ವಿಚಾರ ಮಾಡುವವರು. ನೀವೇನೂ ಹಾರಾಡುವವರಲ್ಲ. ನಿಮಗೆ ಪರಿಹಾರ ಗೊತ್ತಿದೆ. ಆದರೆ, ಸುತ್ತಮುತ್ತಲಿನ ಪರಿಸರದಿಂದಾಗಿ ಅನುಷ್ಠಾನಗೊಳಿಸುವುದಕ್ಕೆ ಅವಕಾಶ ಕೊಡುತ್ತಿಲ್ಲ. ಎಲ್ಲಿಯಾದರೂ ಒಮ್ಮೆ ನಾವು ಕೈ ಬಿಚ್ಚಿ, ಗಟ್ಟಿಯಾಗಿ ನಿಂತು ಈ ಕೆಲಸ ಮಾಡುವುದಕ್ಕೆ ಹತ್ತಬೇಕಲ್ಲ. ಯಾವಾಗಲಾದರೂ ಒಮ್ಮೆ ಹತ್ತಬೇಕಲ್ಲ ಇಲ್ಲವೇ, ಹೀಗೇ ಕೈಬಿಡಬೇಕೆಂದು ಹೇಳುತ್ತೀರಾ? ಒಂದನ್ನು ನೀವು ನೆನಪಿಡಬೇಕು. ನಮ್ಮ ರಾಜಕೀಯ ಇತಿಹಾಸ ನೋಡಿ. ಪ್ರತಿ 5 ವರ್ಷಗಳಲ್ಲಿ ಅಧಿಕಾರ ಬದಲಾಗುತ್ತದೆ. ನೀವು ಮುಂದಿನ ಸಲ ಇಲ್ಲಿ opposition ನಲ್ಲಿರುತ್ತೀರಿ, ನಾವು ಅಧಿಕಾರಕ್ಕೆ ಅಲ್ಲಿಗೆ ಹೋಗುವುದು. ಇದು ವ್ಯವಸ್ಥೆ, ಆದರೆ, ಅಧಿಕಾರ ಸಿಕ್ಕಾಗ ನಾವು ಏನು ಮಾಡುತ್ತೇವೋ, ಅದು ಬಹಳ ಜನರ ಗಮನದಲ್ಲಿ ಉಳಿಯುತ್ತದೆ. ಯಡಿಯೂರಪ್ಪನವರೆ, ಅಕ್ಟೋಬರ್‌ನಿಂದ ನೀವು ಮುಖ್ಯಮಂತ್ರಿಗಳಾಗಿರುತ್ತೀರಿ. ದಯವಿಟ್ಟು ಮೊದಲ ಸಲ ಅಧಿಕಾರ ಸಿಕ್ಕಾಗ ಏನು ಮಾಡಬಹುದೆಂಬುದನ್ನು ನೀವು ಮಾಡಿ ತೋರಿಸಬೇಕು. ವ್ಯವಸ್ಥೆಯಲ್ಲಿ ಪ್ರಾಮಾಣಿಕತೆ, ಪಾರದರ್ಶಕತೆ ಬರುವಂತೆ ಮಾಡಿ ತೋರಿಸಲಿಲ್ಲವೆಂದರೆ, ನಾವು ಈ ಸಮಾಜದ ಶಾಪಕ್ಕೊಳಗಾಗುತ್ತೇವೆ, ಅನಂತರ, ವಿಶ್ವಬ್ಯಾಂಕ್ ನೆರವಿನಿಂದ ಹೊರ ಬರುವುದಕ್ಕೆ ಮುಂದೆ ನಮಗ್ಯಾರಿಗೂ ಸಾಧ್ಯವಾಗುವುದಿಲ್ಲ. ಹಣ ತರುವುದು, ಸುರಿಯುವುದು, ಇದೇ ಆಗಿಬಿಡುತ್ತದೆಯೇ ವಿನಾ ನಾವು ಏನೇನು ಆಗಬೇಕೆಂದು ಕನಸು ಕಾಣುತ್ತಿದ್ದೇವೋ, ಅದು ನನಸಾಗಲಾರಂದಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ದಯವಿಟ್ಟು ಅದನ್ನು ಬದಲಿಸುವಂತಹ ಕೆಲಸವನ್ನು ತಾವು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈಗ ತಮ್ಮ ಕಡೆ ಬಂದಿರಬೇಕು. ಸಾವಯವ ಕೃಷಿಯಲ್ಲಿ

ಸುಭಾಶ್ ಪಾಳೇಕರ್ ಎಂಬುವವರು ಹೊಸ ಪದ್ಧತಿಯನ್ನು ಕಂಡು ಹಿಡಿದಿದ್ದಾರೆ. ಸಾವಯವ ಕೃಷಿ–ಇದೊಂದು ಬಹಳ ಸರಳ ವಿಧಾನವಾಗಿದೆ. ಆಕಳ ಸಗಣಿ, ಗೋಮೂತ್ರ ಮತ್ತು ನಮ್ಮಲ್ಲಿರುವ ದ್ವಿದಳ ಧಾನ್ಯದ ಹಿಟ್ಟು, ಬೆಲ್ಲ, ಅಲ್ಲಿರುವ ಹಿಡಿ ಮಣ್ಣನ್ನು ಉಪಯೋಗಿಸಿಕೊಂಡು ಅವರು....

ಚೇರ್ಮನ್: ಪಾಟೀಲರೆ, ಗೋ ಮೂತ್ರ ಎಂದರೆ, ನಾಟಿ ಹಸುವಿನ ಗೋ ಮೂತ್ರ.

ಶ್ರೀ ಡಿ.ಆರ್. ಪಾಟೀಲ್: ಅವರು ಹಾಗೆ ಹೇಳುತ್ತಾರೆ. ನಾಟಿ ಹಸುವಿನ ಗೋಮೂತ್ರವಾದರೆ ಅಡ್ಡಿಯಿಲ್ಲ. ಅವರು ಸ್ವಲ್ಪ spiritನಲ್ಲಿ ಮಾತನಾಡುತ್ತಾರೆ. ಎಮ್ಮೆ ಮೂತ್ರವಾದರೂ ಸರಿಯೇ, ಎತ್ತಿನ ಮೂತ್ರವಾದರೂ ಸರಿಯೇ, ಜರ್ಸಿ ಆಕಳ ಮೂತ್ರವಾದರೂ ಸರಿಯೇ, ಕಡಿಮೆ ಪ್ರಮಾಣದೊಳಗೆ ನಿಮಗೆ ಅನುಕೂಲವಾಗುತ್ತದೆಂದು ಅವರು ಹೇಳುತ್ತಾರೆ. ಅದು ಅನಿವಾರ್ಯ. ನಾಟಿ ಹಸುವೇ ಬೇಕೆಂದರೆ, ಸಮಸ್ಯೆಯಾಗುತ್ತದೆ. ನಾಟಿ ಹಸು ಸಿಕ್ಕಿದರೆ, ಬಹಳ ಚಲೋ ಇರುತ್ತದೆಂದು ತಮ್ಮ ಪ್ರಯೋಗದಿಂದ ಹೇಳುತ್ತಾರೆ. ನಮ್ಮ university ಗೆ ಅದನ್ನು ಪ್ರಯೋಗ ಮಾಡಬೇಕೆಂದು ನೀವು ಹೇಳಬೇಕು. ಈ ಪದ್ಧತಿಯನ್ನು ನಾವು ಪ್ರತಿ ಗ್ರಾಮದೊಳಗೆ ಅಳವಡಿಸಿಕೊಳ್ಳಲು ಒಬ್ಬಿಬ್ಬರು ರೈತರನ್ನು ಹುಡುಕಿ, ಅವರು demonstration unit ಆಗುವಂತೆ ತಾವು ತಮ್ಮ Agriculture Department ಗೆ ಹೇಳಿ ನೀವು ತಯಾರಿಸಬೇಕು. ಈಗ ಸಾವಯವ ಕೃಷಿಯನ್ನು ಒಂದೇ ಊರಿನೊಳಗೆ 100 hectares ಗೆ ವಿಸ್ತರಿಸಬಹುದು. ತಾಲ್ಲೂಕಿಗೆ ಒಂದರಂತೆ ಎಂದು ಹೇಳಿ ಹಳ್ಳಿಯೊಳಗೆ 100 hectares ಮಾಡುವುದೆಂದು ನಿರ್ಣಯ ಮಾಡಿದಿರಿ. ಅದರ ಬದಲು ಪ್ರತಿ ಹಳ್ಳಿಯೊಳಗೆ ಒಂದಿಬ್ಬರು ರೈತರು ಸೇರಿ ಮಾಡಬಹುದು...... ನಮ್ಮ ಊರಿನೊಳಗೆ ರೈತ ಏನೊಂದು ಬದಲಾವಣೆ ನೋಡುತ್ತಿದ್ದಾನೆಂದರೆ, ಇದರಿಂದ ಹೆಚ್ಚು ರೈತರು ಮುಂದೆ ಕಲಿಯುತ್ತಾರೆ. ನೀವು ಒಂದು ಊರಿನೊಳಗೆ 100 hectares ಮಾಡುವುದರಿಂದ ಏನಾಗುತ್ತದೆ? ಆ ಊರಿನವರು ತಿಳಿದುಕೊಳ್ಳಬಹುದು. ಇಡೀ ತಾಲ್ಲೂಕಿಗೆ ಅದರ ಲಾಭ ತಟ್ಟುವುದಿಲ್ಲ. ದಯವಿಟ್ಟು ಇದನ್ನು ಬದಲಿಸಬೇಕು. ಪ್ರತಿ ಗ್ರಾಮದೊಳಗೆ ಇಬ್ಬರು–ಮೂರು ಮಂದಿ ರೈತರನ್ನು, ಒಬ್ಬ ದೊಡ್ಡ ರೈತ, ಒಬ್ಬ ಮಧ್ಯಮ ರೈತ, ಮತ್ತೊಬ್ಬ ಸಣ್ಣ ರೈತ, ಅವರುಗಳ ಮುಖಾಂತರ ಈ ಪ್ರಯೋಗ ಮಾಡಿದಲ್ಲಿ, ಅವರಿಗೂ ಇದರ ಬಗ್ಗೆ ಇಚ್ಛೆ ಇರಬೇಕು. ಅಂತಹ ರೈತರನ್ನು ಹುಡುಕಿಕೊಂಡು ಈ demonstration ಆಗುವಂತೆ ತಾವು ಮಾಡಿದರೆ ಒಳ್ಳೆಯದು... ಯಡಿಯೂರಪ್ಪನವರೆ, ಕರ್ನಾಟಕದಲ್ಲೂ

ನೋಡಿದ್ದೇನೆ, ಮಾಹಾರಾಷ್ಟ್ರದಲ್ಲೂ ನೋಡಿದ್ದೇನೆ. ಸುಭಾಶ್ ಪಾಳೇಕರ್‌ರವರ ಪದ್ಧತಿ ನೀರಾವರಿಯೊಳಗಂತೂ ಭಾರೀ ಯಶಸ್ವಿಯಾಗುತ್ತದೆ. ನೀರಾವರಿಯೊಳಗೆ ಮಾಡಿದರೆ, immediate results ಸಿಗುತ್ತದೆ. ಮತ್ತೆ ಒಣ ಬೇಸಾಯದೊಳಗೆ ಬೀದರ್ ಜಿಲ್ಲೆಯಲ್ಲಿ ಬಹಳ ಒಳ್ಳೆಯ ಪರಿಣಾಮ ಬಂದಿದೆಯೆಂದು ಅಲ್ಲಿನ ರೈತರು ಹೇಳುತ್ತಾರೆ. ಅಲ್ಲಿಗೆ ಹೋಗಿ ನೋಡುವುದಕ್ಕೆ ನನಗಿನ್ನೂ ಸಾಧ್ಯವಾಗಿಲ್ಲ. ಆದರೆ, ಒಣ ಬೇಸಾಯದೊಳಗೆ ನಮಗೇನಾದರೂ ತೊಂದರೆಯಾದಲ್ಲಿ, bio mass ಏನಿದೆ, ಅದರ ತೊಂದರೆಯಿಂದಾಗಿ ಅದರ ಪ್ರಯೋಗ ಅಷ್ಟು ಯಶಸ್ವಿಯಾಗಲಿಕ್ಕಿಲ್ಲ. ಹಿಂದೆ ನಮ್ಮ ಹಿರಿಯರು ಮಾಡುತ್ತಿದ್ದರಲ್ಲ. ಮೊದಲು ಸೆಣಬಿನ ಮೊಗ್ಗು ಹೊಡೆದು ಬಿಡುತ್ತಿದ್ದರು. ಸೆಣಬು ಬಿತ್ತುತ್ತಿದ್ದರು. ಅದು ಪೂರ್ತಿಯಾಗುವುದಕ್ಕೆ ಬಿಡುತ್ತಿರಲಿಲ್ಲ. ಈಗ ಅವೆಲ್ಲವೂ ಹೊರಟು ಹೋಗಿವೆ. ನಮಲ್ಲಂತೂ ಈಗ ಇಲ್ಲ. ಅದನ್ನು bio mass ಆಗಿ ಉಪಯೋಗಿಸಿಕೊಳ್ಳುತ್ತಿದ್ದರು. ನಾವು ಈ ರೀತಿಯಾಗಿ package of practies ತಂದಲ್ಲಿ, ರೈತನಿಗೆ ತನ್ನ ಮಣ್ಣಿನ ಫಲವತ್ತತೆಯನ್ನು ಉತ್ತಮಗೊಳಿಸುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ರೈತನಿಗೆ ಕಡಿಮೆ ಖರ್ಚಿನೊಳಗೆ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ರೈತನಿಗೆ surplus generate ಆಗುತ್ತದೆ. ಆಗ ವ್ಯವಸಾಯ ಲಾಭದಾಯಕವೆನ್ನುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಸುಮಾರು 70 ಲಕ್ಷಕ್ಕೂ ಹೆಚ್ಚು ಕೃಷಿ ಕುಟುಂಬಗಳು ಈ ರಾಜ್ಯದಲ್ಲಿವೆ. ಅವರೆಲ್ಲರೂ ಶ್ರೀಮಂತರಾಗಬೇಕಲ್ಲ. ಈಗಲ್ಲದಿದ್ದರೂ ಇನ್ನು 10 ವರ್ಷಕ್ಕೆ ಅನುಕೂಲಸ್ಥರು ಆಗಬೇಕಲ್ಲ. ಅವರು ಅನುಕೂಲಸ್ಥರಾಗಲಾರದಂತಹ ಪರಿಸ್ಥಿತಿಯನ್ನು ನಾವು ಈಗ ನಿರ್ಮಾಣ ಮಾಡುತ್ತಿದ್ದೇವೆ. ಈಗ ಏನು ಪರಿಸ್ಥಿತಿ ಇದೆ, ಇದೇ package of practies ಅನ್ನು ನಾವು agriculture Department ಮುಖಾಂತರ ಮಾಡಿಸುತ್ತಾ ಹೋದಲ್ಲಿ, ನಮಗೆ ಏಳಿಗೆ ಇಲ್ಲ. ನಾವು ರೈತರ ಅತ್ಮಹತ್ಯೆ ನಿಲ್ಲಿಸಬೇಕೆಂದರೆ, ಯಡಿಯೂರಪ್ಪನವರೆ, ನಮಗೆ ಸಕಾಲಿಕವಾಗಿ ಬೇಕಾದಷ್ಟು ಹಣ ಸಿಗುವಂತೆ ಮಾಡಬೇಕು. ನಮಗೇನೂ ಸಾಲ ಮನ್ನಾ ಮಾಡುವುದು ಬೇಕಾಗಿಲ್ಲ. ಬಡ್ಡಿ ಮನ್ನಾ ಮಾಡುವುದು ಬೇಕಾಗಿಲ್ಲ. ನೀವು ಕೊಡುವ 4% ಬಡ್ಡಿ ಸಾಕಷ್ಟು ಕಡಿಮೆಯೇ. ಇದೂ ನಮಗೆ ಬೇಕಾಗಿಲ್ಲ. ಆದರೆ, ಬೇಕಾದಷ್ಟು ಹಣ ನಮಗೆ ಸಿಗುವಂತೆ ಮಾಡಿ. ಬರೀ ಕೃಷಿ ಚಟುವಟಿಕೆಗಳಿಗೆ ಮಾತ್ರ ನಮಗೆ ಹಣ ಬೇಕಾಗುವುದಿಲ್ಲ. ಮತ್ತು ಬೇರೆ ಬೇರೆ consumption loan ಬೇಕಾಗುತ್ತದೆ. consumption loan ಅನ್ನು SHG ಮುಖಾಂತರ 15 ಕುಟುಂಬಗಳೂ ಸೇರಿ ಸಾಲ ತೆಗೆದುಕೊಳ್ಳುತ್ತಾರೆ. ಆ 15 ಕುಟುಂಬಗಳು ಕೂಡಿ ಸಾಲ ತೀರಿಸುತ್ತಾರೆ. ಹಾಗಾಗಿ, ಅಲ್ಲಿ ಪರಸ್ಪರ ಒಬ್ಬರಿಗೊಬ್ಬರು collateral

ಜಾಮೀನು ಆಗುವುದರಿಂದ ತೆಗೆದುಕೊಂಡ ಸಾಲವನ್ನು ಮತ್ತೆ ಕೊಡಬೇಕೆಂಬ ಒಂದು ಮನೋಭಾವ ಬೆಳೆಯುವುದರಿಂದ, ಈ ಸಂಸ್ಕೃತಿ, ಪರಂಪರೆ ಈಗ SHG ಯೊಳಗೆ ಬೆಳೆದಿದೆ. ಅದನ್ನು ಕೃಷಿ ಚಟುವಟಿಕೆಯೊಳಗೆ ನಾವು ತಂದರೆ, ಅದರಿಂದ ಬಹಳಷ್ಟು ಅನುಕೂಲವಾಗುತ್ತದೆ. ಇದರ ಜೊತೆಗೆ ನೀವು ಒಂದೆರಡು ವರ್ಷ, ಇನ್ನೂ ಎರಡು ಬಜೆಟ್‌ಗಳನ್ನು ಮಂಡಿಸಲು ನೀವು ಅಧಿಕಾರದಲ್ಲಿ ಇರುತ್ತೀರಿ. ಹಣಕಾಸು ಸಚಿವರಾಗಿರಲಿ ಅಥವಾ ಮುಖ್ಯಮಂತ್ರಿಗಳಾಗಿರಲಿ, ಚುನಾವಣೆಗೆ ಹೋಗುವ ಪೂರ್ವದಲ್ಲಿ ನೀವು ಎರಡು ಬಜೆಟ್‌ಗಳನ್ನು ಮಂಡಿಸುತ್ತೀರಿ. ಆ ಎರಡು ಬಜೆಟ್‌ನಲ್ಲಿ ಸುಮಾರು 72 ಲಕ್ಷ ಹೆಕ್ಟೇರ್ ಜಮೀನಿಗೆ watershed treatment ಆಗಬೇಕಾಗುತ್ತದೆ. ಅದು ಆಗಬೇಕಾದರೆ ನಿಮಗೆ 7,200 ಕೋಟಿ ರೂಪಾಯಿಗಳು ಬೇಕಾಗುತ್ತದೆ. ನೀವು ಎರಡು ವರ್ಷದೊಳಗೆ 7,200 ಕೋಟಿ ರೂಪಾಯಿಗಳನ್ನು ಕೊಟ್ಟರೆ, ಒಂದು massive programme ಈ ರಾಜ್ಯದೊಳಗೆ ಬರುತ್ತದೆ. ಮಳೆಯಾಶ್ರಿತ ಎಲ್ಲ ಕೃಷಿಕರು..... ಯಡಿಯೂರಪ್ಪನವರನ್ನು ನೆನೆಸಿಕೊಳ್ಳುವಂತಾಗುತ್ತದೆ. ಸ್ವಾಮಿ ಅಧಿಕಾರ ಇರಲಿ, ಇಲ್ಲದಿರಲಿ, ಅಧಿಕಾರ ಇದ್ದಾಗ ಅನುಕೂಲ ಮಾಡಿದರು ಎಂದು ಹೇಗೆ ದೇವರಾಜ ಅರಸು ಅವರನ್ನು ಇವತ್ತು ನೆನೆಸಿಕೊಳ್ಳುತ್ತಾರೋ, ಇಂದಿರಾಗಾಂಧಿ ಅವರನ್ನು ಜನರು ಇವತ್ತು ನೆನೆಸಿಕೊಳ್ಳುತ್ತಾರೋ ಆ ರೀತಿ ನೆನೆಸಿಕೊಳ್ಳುವಂತಹ ಕೆಲಸ ತಮ್ಮಿಂದ ಆಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದೇನೂ ಬಹಳ: ಕಷ್ಟವಾಗುವುದಿಲ್ಲ. ನೀವು ಈ ವರ್ಷ Irrigationಗೆ ಏನುಕೊಡುತ್ತೀರಿ, ಪ್ರದೇಶವನ್ನು Irrigate ಮಾಡುವುದಕ್ಕೆ ನೀವೇನು ಹಣಕಾಸನ್ನು ಲಭ್ಯ ಮಾಡಿಕೊಡುತ್ತೀರಿ, 2-3 ಪ್ರದೇಶಗಳಲ್ಲಿ ಮಳೆಯಾಶ್ರಿತ ಕೃಷಿ ಭೂಮಿಯನ್ನು ಉಪಯೋಗಿಸಿಕೊಳ್ಳುವಂತೆ, ಬಿದ್ದ ಮಳೆ ನೀರನ್ನು ತಡೆದು, water and soil conservation ಮಾಡಿಕೊಳ್ಳುವುದಕ್ಕೆ ಬೇಕಾಗುವಂತಹ ಹಣಕಾಸಿನ ವ್ಯವಸ್ಥೆಗೆ ನೀವು equal importance ಕೊಟ್ಟರೆ ಸಾಕು. ಅದಕ್ಕೆ ವರ್ಷಕ್ಕೆ 3-4 ಸಾವಿರ ಕೋಟಿ ರೂಪಾಯಿಗಳನ್ನು ವರ್ಷಕ್ಕೆ ಕೊಡುತ್ತೀರಿ. ಇದನ್ನು ಎರಡು ವರ್ಷಗಳಿಗೆ ಕೊಟ್ಟರೆ, ಇದಕ್ಕೆ ಬೇಕಾದ ಸಂಪನ್ಮೂಲಗಳನ್ನು ನೀವು ಹೇಗಾದರೂ ರೂಢಿಸಿಕೊಳ್ಳತಕ್ಕಂಥ ಅನುಕೂಲ ನಿಮಗೆ ಆಗಬಹುದು. ಈಗ world bank ನವರು ಸಹ ಸುಜಲಧಾರಾ ಯೋಜನೆಯನ್ನು extend ಮಾಡಲು ಹಣಕಾಸು ಕೊಡುವುದಕ್ಕೆ ಮುಂದೆ ಬರುತ್ತಿದ್ದಾರೆ. ಅದನ್ನು ನೀವು ಉಪಯೋಗಿಸಿಕೊಂಡು 2-3 ವರ್ಷದೊಳಗೆ ಈ ಕೆಲಸ ಮಾಡಿದ್ದೇ ಆದಲ್ಲಿ, ಬಹಳಷ್ಟು ರೈತರಿಗೆ ಅನುಕೂಲವಾಗುತ್ತದೆ. ನಮಗೆ ಈ ನಾಲ್ಕು ಕೆಲಸಗಳಾಗಬೇಕು. ಒಂದು ಮಳೆ ನೀರು ಪೂರ್ತಿ

ಸದ್ವಿನಿಯೋಗವಾಗುವಂತೆ water and soil conservation ಕೆಲಸವಾಗಬೇಕು. ನಮಗೆ ಬೇಕಾದಂಥ ಹಣಕಾಸು ಸಕಾಲಿಕವಾಗಿ ಸಾಕಷ್ಟು ಸಿಗುವಂಥ ವ್ಯವಸ್ಥೆಯನ್ನು ನಾವು ಮಾಡಬೇಕು. ಮಾರುಕಟ್ಟೆಯಲ್ಲಿ ರೈತರಿಗೆ ಏನೇನು ಅನಾನುಕೂಲ ಆಗುತ್ತದೆ ಅದನ್ನು ನಿಲ್ಲಿಸಲು ಕಾನೂನನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವಂಥ ವ್ಯವಸ್ಥೆಯನ್ನು ತಾವು ಮಾಡಬೇಕು. Support prie ಏನು ಘೋಷಣೆ ಮಾಡುತ್ತೀರಿ ಅದು ಯಾವಾಗಲು cost plus ಇರತಕ್ಕದ್ದು ಇರಬೇಕು. ಮತ್ತು bidding below the support price must be a crime. ಈ ನಾಲ್ಕನ್ನು ನೀವು ಮಾಡಿದರೆ ಬಹುತೇಕ ರೈತ ಆತ್ಮೀಯತೆಯಿಂದ ದೂರ ಸರಿಯಲು ಸಾಧ್ಯವಾಗುತ್ತದೆ. ಅವನೂ ಒಬ್ಬ ಸ್ವಾವಲಂಬಿ, ಸ್ವಾಭಿಮಾನದಿಂದ ಬದುಕಲು ಸಾಧ್ಯವಾಗುತ್ತದೆ. ಅಂಥ ವ್ಯವಸ್ಥೆಯನ್ನು ರೂಪಿಸುವಲ್ಲಿ ವಿಶೇಷ ಲಕ್ಷ್ಯವನ್ನು ತಾವು ವಹಿಸಬೇಕು. ತಮ್ಮ ಅಧಿಕಾರ ಸ್ಥಾನವನ್ನು ಅದಕ್ಕಾಗಿ ಉಪಯೋಗ ಮಾಡಬೇಕು. ನಾಳೆ ನಿಮಗೇನು National forumನಲ್ಲಿ ಮಾತನಾಡಲು ಅವಕಾಶ ಬರುತ್ತದಲ್ಲಾ ಆಗ ನಿಮ್ಮ ಪ್ರಧಾನ ಮಂತ್ರಿಗಳನ್ನು, Agricultural Ministerನ್ನು, ಉಳಿದೆಲ್ಲ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ತಿಳುವಳಿಕೆ ಕೊಟ್ಟು ರಾಷ್ಟ್ರ ಮಟ್ಟದಲ್ಲಿ ಈ ಒಂದು ವ್ಯವಸ್ಥೆ ಜಾರಿಗೆ ಬರುವಂತೆ ಪ್ರಯತ್ನ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು ಆರ್.ಡಿ.ಪಿ.ಆರ್. ಬಗ್ಗೆ ನಿನ್ನೆ ಸ್ವಲ್ಪ ಅಭಿಪ್ರಾಯವನ್ನು ನಾನು ತಿಳಿಸಿದ್ದೆ. ದಯವಿಟ್ಟು ಉದಾಸಿಯವರು ಮೊದಲಿನ ಉದಾಸಿಯವರಾಗಿಯೇ ಇರಬೇಕು ಎನ್ನುವವನು ನಾನು. 80ರ ದಶಕಗಳಲ್ಲಿ ನಾನೇನು ಉದಾಸಿಯವರನ್ನು ನೋಡಿದ್ದೆ 21ನೇ ಶತಮಾನದಲ್ಲೂ ಅದೇ ಉದಾಸಿಯವರನ್ನು ನೋಡಲು ಅಪೇಕ್ಷೆ ಪಡುತ್ತೇನೆ. ಆಗ ಅಧಿಕಾರ ಇದ್ದರೂ ಅವರು ಹಿಂದೆ ಕುಳಿತು ನಮಗೆ ಮಾರ್ಗದರ್ಶನ ಮಾಡುತ್ತಿದ್ದರು. ನಮ್ಮ ಧಾರವಾಡ ಜಿಲ್ಲಾ ಪಂಚಾಯಿತಿಗೆ ಅವರು ಶಾಸಕರಾಗಿದ್ದರು. ನಾನು ಜಿಲ್ಲಾ ಪಂಚಾಯತಿಯ ಸದಸ್ಯನಾಗಿದ್ದೆ. ಅವರು ಶಾಸಕರಾಗಿ ಸದಸ್ಯರಾಗಿದ್ದರು. ಅವರು ಒಂದು ಸಭೆಗೂ ತಪ್ಪಿಸುತ್ತಿರಲಿಲ್ಲ. ಯಾವಾಗಲೂ decentralization ಬಗ್ಗೆ ಆಸಕ್ತಿ, ಕಳಕಳಿಯನ್ನು ಹೊಂದಿದ್ದರು. ಈಗ ಏಕೆ ಬದಲಾಗುತ್ತಿದ್ದೀರಿ ? ಈಗ ಬದಲಾಗಿದ್ದೀರಿ ಜನರ ಮೇಲೆ ನಿಮಗೆ ಆಗ ಏನು ವಿಶ್ವಾಸ ಇತ್ತು ಅದು ಈಗ ಇಲ್ಲ. ನೀವು ಏಕೋ ಜನಪ್ರತಿನಿಧಿಗಳ ಮಾತಿಗೆ ಹೆಚ್ಚು ಬೆಲೆ ಕೊಡುತ್ತಿದ್ದಿರಿ. ನಾವೆಲ್ಲರೂ ಕೂಡ ಮಾಡಬೇಕಾಗಿರುವ ಕೆಲಸ ಜನರಿಗೆ ಅಧಿಕಾರ ಕೊಡುವುದು. ಪ್ರತಿಯೊಂದು ಕೆಲಸದಲ್ಲಿ ಜನರು ಪಾಲುಗೊಳ್ಳುವಂಥ

ಒಂದು ವ್ಯವಸ್ಥೆಯನ್ನು ನಾವು ನೀವು ಕೂಡಿ ಮಾಡಬೇಕಾಗಿತ್ತೇ ಹೊರತು ನಮ್ಮ ಕೈಯಲ್ಲಿ ಅಧಿಕಾರ, ಇವರ ಕೈಯಲ್ಲಿ ಅಧಿಕಾರ ಎಂದರೆ, ನಾವೇನು ಈ ಸೀಟಿಗೆ permanent ಆಗಿರುತ್ತೇವೆಯೇ? ಐದು ವರ್ಷಕ್ಕೊಮ್ಮೆ ನಾವೆಲ್ಲರೂ ಬದಲಾಗಲೇಬೇಕು. ಬಹಳ ಮಂದಿ ನಾವು ಬದಲಾಗುತ್ತಿರುತ್ತೇವೆ. ಆದ್ದರಿಂದ ಈ ಸ್ಥಾನಮಾನ permanent ಎಂದು ತಿಳಿದುಕೊಳ್ಳತಕ್ಕದ್ದಲ್ಲ. ಇದನ್ನು ಕೈ ಬಿಡಬೇಕು. ಸಮಾಜಕ್ಕೆ, ಜನರಿಗೆ, ನಮ್ಮ ಊರಿಗೆ ಯಾವುದು ಅನುಕೂಲವಾಗುತ್ತದೆ ಇದನ್ನು ಮಾಡಬೇಕಾದರೆ ಯಾವ ರೀತಿಯ ವ್ಯವಸ್ಥೆಯನ್ನು ಮಾಡಬೇಕು ಎಂಬ ಬಗ್ಗೆ ನೀವು ವಿಚಾರ ಮಾಡಿದರೆ ನಾಳೆಯೇ ನಿಮ್ಮ ಮುಂದೆ solution ಇದೆ. ನಿಮ್ಮಷ್ಟು ಅನುಭವ ನನಗಿಲ್ಲ.

ಶ್ರೀ ಸಿ.ಎಂ. ಉದಾಸಿ: ನಮಗಿಂತ ಜಾಸ್ತಿ ಅನುಭವ ಇದೆ.

ಶ್ರೀ ಡಿ.ಆರ್. ಪಾಟೀಲ್: ಇಲ್ಲ ಅದನ್ನು ನಾನು ಒಪ್ಪುವುದಿಲ್ಲ. ನೀವು ಜಾರಿಕೊಳ್ಳುವ ಕೆಲಸವನ್ನು ದಯವಿಟ್ಟು ಮಾಡಬೇಡಿ. ನೀವು ಮನಸ್ಸು ಮಾಡಿದರೆ ಈ ಎಲ್ಲಾ ಬದಲಾವಣೆಗಳನ್ನು ತರಲು ಸಾಧ್ಯವಾಗುತ್ತದೆ. ತಾವು ದಯವಿಟ್ಟು ಈ ಮೊದಲು ಏನು ಸರ್ಕಾರದ ಆದೇಶ ಇತ್ತು, ಅದು ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ವ್ಯವಸ್ಥೆಯಲ್ಲಿ ಇರಲಿ. ಅದು competitive bidding ಆಗಲೇಬೇಕು. ನಮಗೆ ಬೇಕಾದರವರಿಗೆ ತುಂಡುಗುತ್ತಿಗೆ ಕೊಡುವಂಥ ಏನು ವ್ಯವಸ್ಥೆ ಇದೆ ಅದನ್ನು ದಯವಿಟ್ಟು ಕಿತ್ತು ಹಾಕಿ. ಹಿಂದೆ ಇದ್ದದ್ದನ್ನು E-Tenderingನಲ್ಲಿ ತೆಗೆದುಕೊಂಡು ಬನ್ನಿ. ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯತಿ ಸದಸ್ಯರು ಚುನಾಯಿತರಾದ ಮೇಲೆ 5 ವರ್ಷ ಅವರ ಪ್ರದೇಶದಲ್ಲಿ ಏನಾಗಬೇಕು ಎಂಬ ಬಗ್ಗೆ 5 ವರ್ಷದ plan ಮಾಡುವುದಕ್ಕೆ ಹೇಳಿ. ಆಗ ಈ ಸದಸ್ಯರುಗಳಲ್ಲಿ ಹಂಚಿಕೆ ಮಾಡಿಕೊಳ್ಳುವುದು ಕಡಿಮೆಯಾಗುತ್ತದೆ. ನಮ್ಮ ಊರಿನಲ್ಲಿ ಏನು ಕೆಲಸ ಮಾಡಬೇಕು ಅದನ್ನು priortze ಮಾಡಲು ಹೇಳಿ. ಗ್ರಾಮಸಭೆಯಲ್ಲಿ ಜನರ ಜೊತೆ ಸಂವಾದ ಮಾಡಿ ಮಾಡಲು ಹೇಳಿ. ಆ ರೀತಿ ಮಾಡಿ ಎಲ್ಲಾ ಹಣಕಾಸನ್ನು priorize attemptsಗೆ ಸಂಪೂರ್ಣವಾಗಿ ಕೊಡುವಂಥ ವ್ಯವಸ್ಥೆಯನ್ನು ತರಲು ನಿಮಗೆ ಸಾಧ್ಯವಿದೆ. ಸರ್ಕಾರ ಹೀಗೆ ಇದು ಆಗಬೇಕು ಎಂದು ಆದೇಶ ಕೊಡಬಹುದು. ಅವರು ಈಗ ಏನು ಸದಸ್ಯರಲ್ಲಿ ಹಂಚಿಕೊಳ್ಳುತ್ತಾರಲ್ಲ ಅದನ್ನು ನಿಲ್ಲಿಸಲು ಸಾಧ್ಯವಿದೆ. ನೀವು ಈ ಪ್ರಕಾರ ಆದೇಶ ಕೊಡಿಸಿ. ನಿಮಗೆ ನಮಗಿಂತ ಎಲ್ಲಾ ಚೆನ್ನಾಗಿ ಗೊತ್ತಿದೆ. ಈ ಕಡೆ ಲಕ್ಷ್ಯ ಕೊಡಿ ಅಷ್ಟೆ. ಆ ರೀತಿ ಲಕ್ಷ್ಯ ಕೊಟ್ಟರೆ ಈ ಬದಲಾವಣೆಯನ್ನು ತರುತ್ತೀರಿ. ನಿಮ್ಮ ಕೈಯಲ್ಲಿ

ಈ ಆರ್.ಡಿ.ಪಿ.ಆರ್. ಇಲಾಖೆ ಇರುವುದು ಇನ್ನು 3 ತಿಂಗಳು ಮಾತ್ರ. ಅಕ್ಟೋಬರ್ 3ರ ನಂತರ ನಿಮ್ಮ ಕೈಯಲ್ಲಿ ಈ ಇಲಾಖೆ ಇರುವಂತಿಲ್ಲ. ಅಷ್ಟರೊಳಗೆ ನೀವು ಈ ಎಲ್ಲಾ ಬದಲಾವಣೆಗಳನ್ನು ತರುವಂಥ ಮನಸ್ಸನ್ನು ಮಾಡಬೇಕು. ಇವತ್ತಿನ Times of India ಕನ್ನಡ ಆವೃತ್ತಿ ಪತ್ರಿಕೆಯಲ್ಲಿ ಒಂದು ವಿಷಯ ಬಂದಿದೆ. ಅದನ್ನು ತಾವು ನೋಡಿದ್ದೀರ? ಇಲ್ಲ ಅಂದರೆ ಅದನ್ನು ತರಿಸಿ ನೋಡಿ.. ಯಾವುದೋ ತಮ್ಮ ಇಲಾಖೆಯ ಗ್ರಾಂಟ್ಸ್ ಬರತಕ್ಕದ್ದು cut ಆಗುತ್ತದೆ ಎಂದು ಅದರಲ್ಲಿ ಹೇಳಿದ್ದಾರೆ.

ಶ್ರೀ ಸಿ.ಎಂ. ಉದಾಸಿ: ನಾನು ಅದನ್ನು ನೋಡಿದ್ದೇನೆ. ನೀವು ಯಾರಾದರೂ ಅದರ ಬಗ್ಗೆ ಕೇಳಲಿ ಎಂದು ಇದುವರೆಗೆ ಬಿಟ್ಟಿದ್ದೆ.

ಶ್ರೀ ಡಿ.ಆರ್. ಪಾಟೀಲ್: ಅದು Government of Indiaದ್ದು ಅಲ್ಲ. ಯಾವುದೋ overseas fund ಬರುತ್ತಿದೆ, ಪಂಚಾಯಿತಿ ವ್ಯವಸ್ಥೆಯನ್ನು ಸುಧಾರಿಸಲು ಬಂಗಾಳ ಮತ್ತು ಕರ್ನಾಟಕ ಎರಡು ರಾಜ್ಯವನ್ನು ಆಯ್ಕೆಮಾಡಿಕೊಂಡಿದ್ದರೆ. ನೀವು ಈಗ ಪಂಚಾಯಿತಿಗೆ ಇರುವ ಅಧಿಕಾರವನ್ನು ಕಿತ್ತು ಶಾಸಕರಿಗೆ ಕೊಡುತ್ತಿರುವುದರಿಂದ ಕರ್ನಾಟಕವನ್ನು ಕೈಬಿಡಬೇಕು ಎಂದು ಅವರು ವಿಚಾರ ಮಾಡುತ್ತಿದ್ದಾರಂತೆ. ಅದರಿಂದ ನಮಗೆ ಸುಮಾರು 4500 ಕೋಟಿ ತಪ್ಪುತ್ತದೆ ಎಂದು ಪತ್ರಿಕೆಯಲ್ಲಿ ಬರೆದಿರುವುದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ: Times of India ಪತ್ರಿಕೆಯಲ್ಲಿ ಪಂಚಾಯಿತಿಯ ಅಧಿಕಾರ ಮೊಟಕು, ರಾಜ್ಯದ ಕೈ ತಪ್ಪಿದ 4800 ಕೋಟಿ ರೂಪಾಯಿ ಎಂದು ಬರೆದಿದ್ದಾರೆ. ಈ ವರದಿ ಏನಿದೆ ಸಂಪೂರ್ಣ ಸತ್ಯಕ್ಕೆ ದೂರವಾಗಿದೆ ಎಂದು ಹೇಳಬೇಕಾಗುತ್ತದೆ. ಅವರು ಬರೆದಿರುವಂತೆ ವ್ಯವಸ್ಥೆಯೇನು ಇಲ್ಲ. 120 ಮಿಲಿಯನ್ ಡಾಲರ್ ಎಂದರೆ 480 ಕೋಟಿ ಆಗುತ್ತದೆ. ಅದನ್ನು Aid ಎಂದು English ಪತ್ರಿಕೆಯಲ್ಲಿ ಬರೆದಿದ್ದಾರೆ. English ಪತ್ರಿಕೆಗಿಂತ ಕನ್ನಡ ಪತ್ರಿಕೆ ಓದಿದರೆ ಚೆನ್ನಾಗಿ ಅರ್ಥವಾಗುತ್ತದೆ. ಎಂದು ಕನ್ನಡಪತ್ರಿಕೆಯನ್ನು ಬೆಳಿಗ್ಗೆ ಓದಿದ ಕೂಡಲೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಇದು ಸಂಪೂರ್ಣ ಸತ್ಯಕ್ಕೆ ದೂರವಾದ ವಿಚಾರ. 480 ಕೋಟಿ ಸಹ ವಿಶ್ವಬ್ಯಾಂಕ್‌ನ Aid ಅಲ್ಲ. ಅದು ಸಾಲ ಎಂಬುದನ್ನು ತಾವು ಗಮನದಲ್ಲಿ ಇಟ್ಟುಕೊಳ್ಳಬೇಕು. ಅವರು ಅದನ್ನು ಬರೆಯಬೇಕಾದ ಸಂದರ್ಭದಲ್ಲಿ ಊಹೆಯ ಮೇಲೆ ಬರೆದಿದ್ದಾರೆಯೇ ಹೊರತು ಇಂತಹ ಘಟನೆ ನಡೆದಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮುಖ್ಯಮಂತ್ರಿಯವರಿಗೆ ಮಾನ್ಯ ಮಣಿಶಂಕರ್ ಅಯ್ಯರ್‌ರವರು ಬರದಿರುವ ಪತ್ರದಲ್ಲೂ ಕೂಡ ಈ ವಿಷಯ

ಇಲ್ಲ. ಅವರು ತಿದ್ದುಪಡಿಗೆ ಸೀಮಿತವಾಗಿ ಪತ್ರವನ್ನು ಬರೆದಿದ್ದಾರೆ. ಆ ಕಾರಣದಿಂದ ನಾನು times of India paper ಬಗ್ಗೆ ಸ್ಪಷ್ಟೀಕರಣ ಕೊಡುವ ಸಲುವಾಗಿ ಒಂದು ಹೇಳಿಕೆಯನ್ನು ಇಲ್ಲಿ ಕೊಡಲು ಬಯಸುತ್ತೇನೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ವಿಶ್ವಬ್ಯಾಂಕ್‌ನ ಎರಡು ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಕರ್ನಾಟಕದ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯು ಜಲನಿರ್ಮಲ ಎಂಬ ಯೋಜನೆಯನ್ನು 2005ರಿಂದ ಜಾರಿಗೊಳಿಸುತ್ತಿದೆ. ಅದರ ಯೋಜನಾ ವೆಚ್ಚವು 193.44 ದಶಲಕ್ಷ ಅಮೇರಿಕನ್ ಡಾಲರ್, ಅಂದರೆ 929 ಕೋಟಿ ರೂಪಾಯಿ. ಇದರಲ್ಲಿ ವಿಶ್ವಬ್ಯಾಂಕ್‌ನ ಪಾಲು 151.6 ದಶಲಕ್ಷ ಅಮೇರಿಕನ್ ಡಾಲರ್, ಅಂದರೆ 728 ಕೋಟಿ ರೂಪಾಯಿ. ಈ ಯೋಜನೆಯು ಈಗಾಗಲೇ 90% ಕಾರ್ಯಗತವಾಗಿ ಮುಗಿಯುವ ಹಂತದಲ್ಲಿದೆ. ಅಲ್ಲದೇ ಗ್ರಾಮ್ ಸ್ವರಾಜ್ ಯೋಜನೆಯ ಅಡಿಯಲ್ಲಿ ಕರ್ನಾಟಕ ಪಂಚಾಯತ್ ರಾಜ್ ಸಬಲೀಕರಣ ಯೋಜನೆಯಲ್ಲಿ 2006-07ನೇ ಸಾಲಿನಿಂದ ಜಾರಿಗೆ ಬಂದಿದ್ದು ಅದರ ವೆಚ್ಚ 133.3 ದಶಲಕ್ಷ ಡಾಲರ್ ಎಂದರೆ 600 ಕೋಟಿ ರೂಪಾಯಿಗಳು. ಈ ಎರಡೂ ಯೋಜನೆಯಲ್ಲಿ ಯೋಜನಾ ವೆಚ್ಚ 1529 ಕೋಟಿ ರೂಪಾಯಿ ಇದೆ. ಇದು Times of India ಕನ್ನಡ ಆವೃತ್ತಿಯಲ್ಲಿ 4800 ಕೋಟಿ ರೂಪಾಯಿ ಎಂದು ಇದೆ. ಆ ರೀತಿ 4800 ಕೋಟಿ ರೂಪಾಯಿಗಳ ಯಾವುದೇ ಯೋಜನೆ ನಮ್ಮಲ್ಲಿ ಜಾರಿಯಲ್ಲಿ ಇಲ್ಲ. ಈ ಎರಡೂ ಯೋಜನೆಗಳು ಸಹಾಯಧನದ್ದಲ್ಲ. ಸಾಲದ್ದು ಎಂಬುದನ್ನು ತಮ್ಮಗಳ ಗಮನಕ್ಕೆ ತರಬಯಸುತ್ತೇನೆ. ಗ್ರಾಮಸ್ವರಾಜ್ ಯೋಜನೆಯ ಅಡಿಯಲ್ಲಿ ವಿಶ್ವಬ್ಯಾಂಕ್‌ನ 5 ವರ್ಷದ ಯೋಜನಾ ಅವಧಿಗೆ 121 ದಶಲಕ್ಷ ಅಮೇರಿಕನ್ ಡಾಲರ್ ಎಂದರೆ 540 ಕೋಟಿ ರೂಪಾಯಿ ಸಾಲದ ರೂಪದಲ್ಲಿ ಒದಗಿಸಲಿದೆ. ಇದೂ ಕೂಡ ನೆರವಲ್ಲ. ಯೋಜನಾ ಒಪ್ಪಂದದಲ್ಲಿ ಯೋಜನೆ ಕುರಿತಂತೆ ಮಾಡಿಕೊಂಡ ಒಪ್ಪಂದದಂತೆ 39 ಅತ್ಯಂತ ಹಿಂದುಳಿದ ತಾಲ್ಲೂಕುಗಳ 1343 ಗ್ರಾಮ ಪಂಚಾಯತಿಗಳಿಗೆ 2006 ರಿಂದ 2012ರವರೆಗೆ ಯೋಜನೆಗಳನ್ನು ರೂಪಿಸಿದೆ. ಅದರ ಆಧಾರದ ಮೇಲೆ ಮೊದಲಿನ ವರ್ಷದ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಗ್ರಾಮಸೌಧ ನಿರ್ಮಾಣ ತರಬೇತಿ ಇತ್ಯಾದಿ ಕಾರ್ಯಕ್ರಮ ಪ್ರಗತಿಯಲ್ಲಿದೆ. ಗ್ರಾಮ ಪಂಚಾಯತಿಗಳಿಗೆ ತಮ್ಮ ಕಾರ್ಯದಲ್ಲಿ ಹೆಚ್ಚಿನ ಅಧಿಕಾರ ಕೊಟ್ಟು, ಏಕ ದಾಖಲೆ ಪದ್ಧತಿ Single entry system ಬದಲಿಗೆ ಜೋಡಿ ದಾಖಲೆ ಪದ್ಧತಿಯ double entry system ಲೆಕ್ಕಪತ್ರಗಳ ನಿರ್ವಹಣೆಯನ್ನು ಕೈಗೊಳ್ಳುವ ಸಲುವಾಗಿ ಕರ್ನಾಟಕ ಗ್ರಾಮ ಪಂಚಾಯಿತಿಯ ಲೆಕ್ಕಪತ್ರಗಳು ಮತ್ತು ಆಯವ್ಯಯ ನಿಯಮಗಳು 2006ನ್ನು

ದಿನಾಂಕ 1.6.2007ರಿಂದ ಜಾರಿಗೆ ತರಲಾಗಿದೆ. ವಿಶ್ವ ಬ್ಯಾಂಕಿನ ಎರಡನೇ ನಿಯೋಗವು ಮೇ ತಿಂಗಳ 14 ರಿಂದ 23ರವರೆಗೆ ಪ್ರವಾಸ ಕೈಗೊಂಡು, ಇದುವರೆಗೆ ಸಾಧಿಸಿರುವ ಪ್ರಗತಿಯನ್ನು ಪರಿಶೀಲಿಸಿ ತೃಪ್ತಿಯನ್ನು ವ್ಯಕ್ತಪಡಿಸಿದೆ. ಈ ನಿಯೋಗವು ರಾಜ್ಯಕ್ಕೆ ಭೇಟಿ ನೀಡಿದಾಗ, ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 93ರ ಪ್ರಕರಣದ 3 ಮತ್ತು 3(ಎ)ಗಳ ತಿದ್ದುಪಡಿ ಬಿಲ್ ಅನ್ನು ತಂದಿರುವ ಬಗ್ಗೆ ಮತ್ತು ಇದರಿಂದ ಆಗುವ ಪರಿಣಾಮಗಳ ಬಗ್ಗೆ ಚರ್ಚಿಸಿದೆ. ರಾಜ್ಯ ಸರ್ಕಾರವು ತಿದ್ದುಪಡಿಯ ಉದ್ದೇಶವನ್ನು ತಿಳಿಸಿ, ತಿದ್ದುಪಡಿಯಿಂದ ಪಂಚಾಯತ್ ರಾಜ್ ಮೂಲತತ್ವಕ್ಕೆ ಯಾವುದೇ ಪರಿಣಾಮವೂ ಉಂಟಾಗುವುದಿಲ್ಲವೆಂದು ತಿಳಿಸಲಾಗಿದೆ. ನಿಯೋಗವು ಪ್ರವಾಸದ ನಡವಳಿಗಳ ಕರಡು ಪ್ರತಿಯನ್ನು ಕಳುಹಿಸಿದ್ದು, ಅದರಲ್ಲಿ ಈ ವಿಷಯ ಪ್ರಸ್ತಾಪಿಸಿ ತಿದ್ದುಪಡಿ ಬಿಲ್ ರಾಜ್ಯಪಾಲರ ಸಹಿಗಾಗಿ ಕಾಯುತ್ತಿದ್ದು, ಅದು ಜಾರಿಯಾದಾಗ ಅದರ ಪರಿಣಾಮಗಳನ್ನು ಅಂದಾಜಿಸಿ ರಾಜ್ಯ ಸರ್ಕಾರದ ಜೊತೆಗೆ ಈ ಬಗ್ಗೆ ಮುಂದುವರೆದ ಚರ್ಚೆಯನ್ನು ಕೈಗೊಳ್ಳಲಾಗುವುದೆಂದು ತಿಳಿಸಿದೆ. ಪತ್ರಿಕೆಗಳಲ್ಲಿ ಪ್ರಕಟವಾದಂತೆ ಇದುವರೆಗೂ ವಿಶ್ವಬ್ಯಾಂಕ್ ಮೇಲಿನ ಯೋಜನೆಗಳನ್ನು ಹಿಂತೆಗೆದುಕೊಂಡ ಬಗ್ಗೆ ಸರ್ಕಾರಕ್ಕೆ ಯಾವುದೇ ಮಾಹಿತಿ ಇಲ್ಲ ಅಥವಾ ಪತ್ರ ವ್ಯವಹಾರವೂ ನಡೆದಿಲ್ಲ. ಈ ವಿಷಯದಲ್ಲಿ ರಾಜ್ಯದ ಘನತೆವೆತ್ತ ರಾಜ್ಯಪಾಲರು ಅಧಿನಿಯಮಕ್ಕೆ ತರಲು ಉದ್ದೇಶಿಸಿರುವ ತಿದ್ದುಪಡಿಗಳ ಸ್ಪಷ್ಟೀಕರಣ ಕೋರಿ ವಿಧಾನ ಮಂಡಲದ ಉಭಯ ಸದನಗಳ ಸದಸ್ಯರಿಗೆ ಸಂದೇಶವನ್ನು ಕಳುಹಿಸಿ, ಸದನದಲ್ಲಿ ಚರ್ಚೆಯಾಗಬೇಕಾಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

ಶ್ರೀ ಡಿ.ಆರ್. ಪಾಟೀಲ್: ಅದು ಹಣಕಾಸು ಬರಲಿ, ಬರದಿರಲಿ. ಆಗ ಏನೋ ಒಂದು movementನೊಳಗೆ ನೀವು ಆ ಬದಲಾವಣೆ ತರಲಿಕ್ಕೆ ಒಪ್ಪಿ ಬಿಟ್ಟಿದ್ದೀರಿ. ಈಗ governor ಅದನ್ನು ಮರಳಿ ಕಳುಹಿಸಿದ್ದಾರೆ. ದಯವಿಟ್ಟು ಮತ್ತೆ ಅದನ್ನು re-introduce ಮಾಡಲಿಕ್ಕೆ ಹೋಗಬೇಡಿ. ಅದನ್ನು ನೀವು ಕೈ ಬಿಟ್ಟುಬಿಡಿ. ಅದು ಅನಿವಾರ್ಯವಿದ್ದರೆ ಚರ್ಚೆ ಮಾಡಿ. ನೀವು ಇದನ್ನು ಮತ್ತೆ re-introduce ಮಾಡುವುದೇ ಇಲ್ಲವೆಂದರೆ ಮಾನ್ಯ Governor ರವರು ಇನ್ನೂ ಖುಷಿ ಪಡುತ್ತಾರೆ. ಗ್ರಾಮ ಪಂಚಾಯತ್‌ಗಳು ಕೆಲಸ ಮಾಡುವುದಿಲ್ಲ, ಅಲ್ಲಿ ಬರೋಬ್ಬರಿ ಯಾರಿಗೆ ಮುಟ್ಟಿಸಬೇಕೋ ಅವರಿಗೆ ಮುಟ್ಟಿಸುವುದಿಲ್ಲ. ಅದು, ಇದು ಎಂದು ನೀವು ಹೇಳುತ್ತಿದ್ದೀರಿ. ನೀವು ಗ್ರಾಮ ಸಭೆಗಳ ಮೇಲೆ, ಗ್ರಾಮ ಪಂಚಾಯಿತಿಗಳ ಮೇಲೆ ಆರೋಪ ಹೊರೆಸುತ್ತೀರಿ. ಇಲ್ಲವೆಂದು ನಾನೇನೂ ಅವರನ್ನು

defend ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಅವರು ತಪ್ಪು ಮಾಡಿರಬಹುದು. ನಾವು ಅವರು ಹಾಗೆ ಮಾಡಲಿಕ್ಕೂ ಸಹಿತ ಅವಕಾಶ ಇಲ್ಲದಂತಹ system develop ಮಾಡೋಣ. ಹಳ್ಳಿಯಲ್ಲಿ ಎಲ್ಲಾ landless ಮಂದಿಗೆ ಮೊದಲ ಆದ್ಯತೆ ಮೇರೆಗೆ ಮನೆ ಕೊಡಬೇಕು, ಆಮೇಲೆ small farmersಗೆ ಮನೆ ಕೊಡಬೇಕು, ಆಮೇಲೆ marginal farmersಗೆ ಮನೆ ಸಿಗತಕ್ಕದ್ದು, ಹೀಗೆ ನೀವು ಆದೇಶ ಕಳುಹಿಸಿ. ಇದು ಎಷ್ಟು ಸರಳವಾಗಿದೆ! 100 ಮಂದಿ land less ಇದ್ದು, ನೀವು 60 ಮನೆಗಳನ್ನು ಮಾತ್ರ ಕೊಡುತ್ತಿದ್ದೀರಿ ಎನ್ನುವುದಾದರೆ, 60 ಮಂದಿಯನ್ನು ಅವರು ಲಾಟರಿ ಎತ್ತಿ ಆಯ್ಕೆ ಮಾಡಲಿ. ಹೀಗಾದಾಗ ನಮ್ಮಂತಹವರು ಮನೆ ಕೊಡುವುದಕ್ಕೆ ದುಡ್ಡು ವಸೂಲಿ ಮಾಡುವುದು ತಪ್ಪಾಗುತ್ತದೆ. ನಾವು system ಅನ್ನು ಬಹಳ transparent ಮಾಡುವುದರ ಕಡೆ ಹೆಚ್ಚು ಗಮನ ವಹಿಸಬೇಕು. Governance ಎಂದರೆ ಇದೆ? Governance ಎಂದರೆ ದುಡ್ಡು ಕೊಡುವುದಲ್ಲ, ಕೊಟ್ಟ ದುಡ್ಡನ್ನು ಸರಿಯಾಗಿ ಮುಟ್ಟಿಸುವುದೇ Governance.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಪಾಟೀಲ್‌ರವರೆ, ಒಂದು ನಿಮಿಷ. ಈಗ ನಿಮಗೆ ಹೇಳುವುದೇನೆಂದರೆ, ಈಗ ನೀವೇನು nomination ಹಾಕಲಿಕ್ಕೆ ಹೊರಟಿದ್ದೀರಲ್ಲಾ, ಹಿಂದೆ ನಾವು ಇದ್ದಾಗಲೂ nomination ಹಾಕಿದ್ದೆವು. ಈ ಪಂಚಾಯತ್ member ಬೇಕು, ಇವರು ಬೇಡ. ಇನ್ನಷ್ಟು ಹೊಲಸಾಗುತ್ತದೆ. ಮಾನ್ಯ ಕೃಷ್ಣ ಅವರು ಇದ್ದಾಗ, ನಾನು ಮತ್ತು ಮಾನ್ಯ ಚಂದ್ರೇಗೌಡರ ಕಮಿಟಿಯೊಂದನ್ನು ಮಾಡಿದ್ದರು, ಇಬ್ಬರೂ ಕೂಡಿ ನಿರ್ಣಯ ತೆಗೆದುಕೊಳ್ಳಿ ಎಂದು ನಮಗೆ ಹೇಳಿದ್ದರು. ನಾವು ಚೀಟಿ ಎತ್ತುವಂತೆ ಮಾಡಿಬಿಟ್ಟೆವು. ನೀವೂ ಅದೇ ರೀತಿ ಮಾಡಿ. ಬಡವರ ಹೆಸರನ್ನೆಲ್ಲಾ ಹಾಕಬೇಕು, ಚೀಟಿ ಎತ್ತಬೇಕು ಒಂದು ವೇಳೆ ಯಾರಾದರೂ ಅನರ್ಹರು ಆಗಿದ್ದರೆ ಮತ್ತೆ ಚೀಟಿ ಹಾಕಬೇಕು ಮತ್ತು ತೆಗೆಯಬೇಕು. ಯಾವ ಎಂಎಲ್‌ಎ ನೂ ಬೇಡ, ಯಾವ ಕಮಿಟಿಯೂ ಬೇಡ...

(ಗೊಂದಲ)

ಶ್ರೀ ಬಸವರಾಜ್ ರಾಯರೆಡ್ಡಿ:– when I was a Minister, Housing Policyಯೊಂದನ್ನು ಮಾಡಿದ್ದೆವು. ಆಗ ನಾವು Housing Policyಯಲ್ಲಿ ಸ್ಪಷ್ಟವಾಗಿ ಹೇಳಿದ್ದೆವು. ಮನೆಗಳ ವಿತರಣೆಯನ್ನು ಲಾಟರಿ ಮುಖಾಂತರವೇ ಮಾಡಬೇಕೆಂದು ಹೇಳಿದ್ದೆವು. ಅದನ್ನು ನಂತರ ತೆಗೆದರು. ದಯಮಾಡಿ ಲಾಟರಿ ಮುಖಾಂತರ ಮಾಡಿಸಿ. ಇದರಿಂದ ಬಹಳ ಒಳ್ಳೆಯದಾಗುತ್ತದೆ.

ಶ್ರೀ ಸಿ.ಎಂ.ಉದಾಸಿ:– ಮಾನ್ಯ ಅಧ್ಯಕ್ಷರೆ, ಇವರೇನು ಹೇಳುತ್ತಿದ್ದಾರೆ, ಅಪೇಕ್ಷಿತರ ಸಂಖ್ಯೆಗಿಂತ ಅರ್ಹ ಫಲಾನುಭವಿಗಳ ಸಂಖ್ಯೆ ಹೆಚ್ಚು ಇದ್ದದ್ದೇ ಆದರೆ, ಲಾಟರಿ ಮುಖಾಂತರ ಆಯ್ಕೆ ಮಾಡಬೇಕೆಂದು ಹೇಳುತ್ತಿದ್ದಾರೆ. ಅದು ಈಗಿರುವಂತಹ ಸುತ್ತೋಲೆಯಲ್ಲೂ ಸಹ ಇದೆ. ಅದು ಕಾರ್ಯಗತವಾಗದಿರುವುದರಿಂದ ಈ ಸಮಸ್ಯೆಗಳು ಉದ್ಭವವಾಗಿದೆ. ಅದರ ಬಗ್ಗೆ ಚರ್ಚೆ ಮಾಡೋಣ. ಅದು ಈಗಲೂ ಸಹ ಇದೆ.

ಶ್ರೀ ಎಸ್.ಎಸ್. ಪಾಟೀಲ್:– ದಯವಿಟ್ಟು ಯಾರು ಜಾರಿಯಲ್ಲಿ ತರುತ್ತಿಲ್ಲವೋ ಅವರು ಜಾರಿಯಲ್ಲಿ ತರುವಂತೆ ನೋಡಿಕೊಳ್ಳಿ.

ಶ್ರೀ ಸಿ.ಎಂ. ಉದಾಸಿ:– ಅದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಎಸ್.ಎಸ್. ಪಾಟೀಲ್:– ಮೊನ್ನೆ ನಾನು ಎರಡು ಪಂಚಾಯಿತಿಗಳಿಗೆ ಹೋಗಿ review ಮಾಡಿದೆ. ಬಿದರನಹಳ್ಳಿಗೆ ಜನ ನನ್ನನ್ನು ಕರೆಸಿದ್ದರು. ಯಾವ ಬಡವನಿಗೆ ಸಿಗಬೇಕಾಗಿತ್ತೋ, ಆ ಬಡವ ಆ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದ. ಈ ರೀತಿ ಯಾರ್‍ಯಾರಿಗೋ ಮನೆಗಳನ್ನು ಕೊಡಲಾಗಿದೆ. ಆದ್ದರಿಂದ ಚೀಟಿ ಎತ್ತುವುದನ್ನು ಮಾಡಿ. ಆಗ ಎಲ್ಲಾ ಸರಿ ಆಗುತ್ತದೆ.

ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಲೂರು:– ಮಾನ್ಯ ಅಧ್ಯಕ್ಷರೆ, ಯಾವುದೇ ಸರ್ಕಾರವಿರಲಿ, ಆದರೆ ಬಡವರಿಗೆ ಇವತ್ತಿಗೂ ಹುಲ್ಲಿನ ಮನೆಯಲ್ಲಿ ವಾಸ ಮಾಡುವುದನ್ನು ಅಳಿಸಿ ಹಾಕಲಿಕ್ಕೆ ಆಗಲಿಲ್ಲ. ಆದ್ದರಿಂದ ಯಾವುದಾದರೂ ಒಂದು ನಿರ್ಧಾರ ತೆಗೆದುಕೊಂಡು, ಖಂಡಿತಾ ಆ ಬಡವರಿಗೆ ಮನೆ ಸಿಗುವಂತೆ ವ್ಯವಸ್ಥೆ ಆಗಬೇಕು. ಏಕೆಂದರೆ, ಇಲ್ಲಿಯವರೆಗೂ ನೋಡುತ್ತಿದ್ದೇವೆ, ಇನ್ನೂ ಹುಲ್ಲಿನ ಮನೆ ಹಾಗೆಯೇ ಉಳಿದಿದೆ. ಹೋದ ಸಾರಿ 40 ಮನೆಗಳು ಮತ್ತು ಈ ಬಾರಿ 40 ಮನೆಗಳು, ಒಟ್ಟು 80 ಮನೆಗಳು ಕೊಟ್ಟರೂ ಸಹ ಇವತ್ತಿಗೂ ಹುಲ್ಲಿನ ಮನೆ ಹಾಗೆಯೇ ಇದೆ. ಹಾಗಾದರೆ ಸರ್ಕಾರ ಇದರ ಬಗ್ಗೆ ಯಾವ ರೀತಿ ಚಿಂತನೆ ಮಾಡಿದೆ ಎಂದು ತಿಳಿದುಕೊಳ್ಳಬೇಕು? ದಯವಿಟ್ಟು ಯಾವುದೇ ಸರ್ಕಾರ ಇರಲಿ, ಆ ಹುಲ್ಲಿನ ಮನೆಗಳಲ್ಲಿ ಇರುವವರಿಗೆ ಮೊದಲ ಆದ್ಯತೆ ಕೊಡಲಿಕ್ಕೆ ನೀವು ವ್ಯವಸ್ಥೆ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಆ ರೀತಿ ಆಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ತಮಗೂ ಗೊತ್ತಿದೆ. ಹಿಂದೆ 1991 census ಪ್ರಕಾರ houseless, siteless ಎಷ್ಟು ಜನರಿದ್ದರೋ, ಅವರದೊಂದು ಪಟ್ಟಿಯನ್ನು

ಮಾಡಲಾಯಿತು. ನಂತರ 1996ನಲ್ಲಿ ಇನ್ನೊಂದು ಪಟ್ಟಿ ಮಾಡಿದರೋ, ಏನೋ ನನಗೆ ಗೊತ್ತಿಲ್ಲ. But, total ಆಗಿ ಅವತ್ತು identify ಮಾಡಿದಂತಹ beneficiaries ಎಂದರೆ 11 ಲಕ್ಷ ಕುಟುಂಬಗಳು. 11 ಲಕ್ಷ ಕುಟುಂಬಗಳು ಎಂದರೆ ಹೆಚ್ಚು ಕಡಿಮೆ 55 ಲಕ್ಷ population ಆಗುತ್ತದೆ. So, ನಾನು ಹೇಳತಕ್ಕಂಥದ್ದು ಏನೆಂದರೆ, 11 ಲಕ್ಷ ಕುಟುಂಬಗಳಲ್ಲಿ ಕನಿಷ್ಠ ಎಂದರೂ ಕಳೆದ ನಾಲ್ಕೂವರೆ ವರ್ಷಗಳಲ್ಲಿ ಸುಮಾರು 9 ಲಕ್ಷ ಮನೆಗಳನ್ನು ಕಟ್ಟಿ ಮುಗಿಸಲಾಗಿದೆ. ಇನ್ನು 2 ಲಕ್ಷ ಮಾತ್ರ ಆ ಟಾರ್ಗೆಟ್‌ನಲ್ಲಿ ಕೊಡಬೇಕೆಂದಿತ್ತು, ಅದಕ್ಕೆ ಅಲಾಟ್‌ಮೆಂಟ್ ಕೂಡ ಆಗಿತ್ತು.

ಇಲ್ಲಿ ಹೇಳತಕ್ಕಂಥ ತಾತ್ಪರ್ಯ ಏನೆಂದರೆ, ಒಂದೂ ಮನೆ ಇಲ್ಲ ಎನ್ನತಕ್ಕಂಥದ್ದು ಇಲ್ಲ. ಈಗಾಗಲೇ ನಾಲ್ಕೂವರೆ ವರ್ಷಗಳಲ್ಲಿ census ಪ್ರಕಾರ ಅಷ್ಟೊಂದು ಮನೆಗಳನ್ನು ಕೊಡಲಾಗಿದೆ, ಇನ್ನೂ ಕೊಡಬೇಕಾಗಿರುವುದು ಇದೆ. ಆದರೆ ಅದಕ್ಕೆ systematically ಮಾಡಬೇಕಾಗಿದೆ. ಇಲ್ಲವೇ ಇನ್ನೊಂದು ಸರ್ವೆ ಮಾಡಿಸಿ, houseless, siteless ಯಾರಿದ್ದಾರೋ ಅವರ ಸರ್ವೆ ಮಾಡಿ ಮನೆಗಳನ್ನು ಕೊಡಬೇಕು, ಇದೊಂದು. ಇಲ್ಲವೆಂದರೆ, ಕೆಲವು ಸಲ ಏನಾಗುತ್ತದೆ ಎಂದರೆ, ಲಾಟರಿ ಎತ್ತುವುದು ಒಳ್ಳೆಯದೇ. ಯಾರು ಅರ್ಹರು ಇರುತ್ತಾರೋ ಅಂತಹವರದೇ ಇದ್ದರೆ ಪರವಾಗಿಲ್ಲ. ಹಳ್ಳಿಗಳಲ್ಲಿ ಏನಾಗುತ್ತದೆ ಎಂದರೆ, ಒತ್ತಾಯಪೂರ್ವಕವಾಗಿ ಅವನದು, ಇವನದು ಎಲ್ಲರ ಹೆಸರನ್ನೂ ಬರೆದು ಹಾಕುತ್ತಾರೆ. ಅದು ಇದ್ದವರಿಗೇ ಬಂದರೆ ಸರಿಯಾಗುವುದಿಲ್ಲ. ಈಗ ಲಾಟರಿ ಹತ್ತುವುದೇ ಮಾನ್ಯ ಕುಮಾರಸ್ವಾಮಿಯವರಿಗೆ ಮತ್ತು ಮಾನ್ಯ ಯಡಿಯೂರಪ್ಪನವರಿಗೆ. ಅಂತಹವರಿಗೇ ಲಾಟರಿ ಹತ್ತಿದರೆ ಬೇರೆಯವರ ಗತಿಯೇನು? ಅದಕ್ಕಾಗಿ ಅದು ಬೇಡ. ನೀವು ಯಥಾಪ್ರಕಾರ ಅರ್ಹರು ಯಾರಿರುತ್ತಾರೋ ಅವರಿಗೆ ಕೊಡಿ.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಉದಾಸಿಯವರೆ, Primary Education and Secondary Education ನಿಮ್ಮ ಕೈಯಲ್ಲೇ ಅಂದರೆ ಜಿಲ್ಲಾ ಪಂಚಾಯತ್ ವ್ಯಾಪ್ತಿಗೇ ಬರುತ್ತದೆ. ಈಗ ಹೆಣ್ಣುಮಕ್ಕಳ ಮದುವೆ ವಯಸ್ಸನ್ನು 15 ರಿಂದ ನಾವು 18 ಎಂದು ಮಾಡಿದ ಮೇಲೆ, ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣುಮಕ್ಕಳಿಗೆ ಪಿಯುಸಿ ಇನ್ನೂ ಓದಿಸಬೇಕೆಂದು ಬಹಳ ಕುಟುಂಬಗಳು ವಿಚಾರ ಮಾಡುತ್ತಿವೆ. ಆದರೆ ಬಹಳ ಕಡೆಗಳಲ್ಲಿ Junior College ಗಾಗಿ ಪೇಟೆಗೇ ಹೋಗಬೇಕಾಗುತ್ತದೆ. ಬಸ್ಸುಗಳಲ್ಲಿ ಆ

ವಯಸ್ಸಿನ ಹೆಣ್ಣು ಹುಡುಗಿಯರನ್ನು ಕಳುಹಿಸಲಿಕ್ಕೆ ಅನೇಕ ಪಾಲಕರು ವಿಚಾರ ಮಾಡಿ, ಕಾಲೇಜಿಗೆ ಹಾಕುವುದನ್ನು ಕೈ ಬಿಡುತ್ತಿದ್ದಾರೆ. ಅದಕ್ಕಾಗಿ ನೀವು ಒಂದು ಕೆಲಸವನ್ನು ದಯವಿಟ್ಟು ಮಾಡಿಸಿ. Primary School ಗೆ ಎಂಟನೇ ತರಗತಿಗೆ join ಮಾಡಿಸಿ. 8ನೇ ತರಗತಿ Primary School ಗೆ add ಮಾಡಿದ ಮೇಲೆ 9,10,11 ಮತ್ತು 12 ಕೂಡಿಸಿ ಒಂದೇ unit ಅನ್ನು ನೀವು ಮಾಡುತ್ತೀರಿ ಎಂದು ಆಗ ನಾವು ತಿಳಿದುಕೊಂಡಿದ್ದೆವು. ಆ ಪ್ರಯೋಗ ನೀವು ಈಗ ಮುಂದುವರೆಸಲಿಕ್ಕೆ ಅಡ್ಡಿಯಿಲ್ಲ. 1–8th Primary School, that becomes a compulsory education. ನೀವು ಅದಕ್ಕೆ ಎಲ್ಲಾ ರೀತಿಯ ಸಹಾಯ ಮತ್ತು ಸಹಕಾರ ಸರ್ಕಾರ ಕೊಡಬೇಕಾಗುತ್ತದೆ. 8–12th ಏನಿದೆಯಲ್ಲಾ, ಇಲ್ಲಿ ನೀವು ಒಂದ್ಸಲ್ಪ fee ನಿಗದಿಪಡಿಸಿದರೂ ಅಡ್ಡಿಯಿಲ್ಲ. Composite Junior Collegeಗಳನ್ನು ನೀವು ಮಾಡಬಹುದು. ಎಲ್ಲೆಲ್ಲಿ High Schoolಗಳು ಇವೆಯೋ, ಅಲ್ಲಿಗೆಲ್ಲಾ Junior Collegeಗಳನ್ನೂ ಸಹ ನೀವು ಕೊಟ್ಟುಬಿಟ್ಟರೆ ಒಳ್ಳೆಯದಾಗುತ್ತದೆ. ಅಲ್ಲಿ ಬೇಕಾದರೆ ನೀವು Composite Junior College ಆದರೂ ಮಾಡಿ. ಅದಕ್ಕೆ administrative cost ಹೆಚ್ಚೇನೂ ಆಗುವುದಿಲ್ಲ. ನೀವು Junior College compulsory educationನಲ್ಲಿ ಬರುವುದಿಲ್ಲ. ನೀವು ಬೇಕಾದರೆ ಅದಕ್ಕೆ fee charge ಮಾಡಿದರೂ ಪರವಾಗಿಲ್ಲ. ಸ್ವಲ್ಪ ಹೆಚ್ಚು fee charge ಮಾಡಿದರೂ ಪರವಾಗಿಲ್ಲ. ನಮ್ಮ ಜನ ಕೊಡುತ್ತಾರೆ. ನಮ್ಮ ಗ್ರಾಮೀಣ ಭಾಗದ ಹೆಣ್ಣುಮಕ್ಕಳು ಮದುವೆಯಾಗುವವರೆಗೂ ಇದರಿಂದ ಓದಲಿಕ್ಕೆ ಅನುಕೂಲವಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್:– ಹೈಸ್ಕೂಲ್ ಇರುವಲ್ಲೆಲ್ಲಾ ನಾವು ಜೂನಿಯರ್ ಕಾಲೇಜು ಕೊಡುತ್ತೇವೆಂದು ಬೋಲ್ಡ್ ಡಿಸಿಷನ್ ಮಾಡಿದರೆ ಅನುಕೂಲವಾಗುತ್ತದೆ. ಅಂದರೆ, ಲೇಡಿಸ್ 18 ವರ್ಷದವರೆಗೆ, ಅವರು ಮದುವೆಯಾಗುವ ವಯಸ್ಸಿನವರೆಗೆ ವಿದ್ಯಾಭ್ಯಾಸ ಮಾಡಬಹುದು ಎಂಬುದನ್ನು ತಾವು ಅನುಕೂಲ ಮಾಡಿಕೊಟ್ಟರೆ ಗ್ರಾಮೀಣ ಜನರಿಗೆ ಇದರಿಂದ ಬಹಳ ಅನುಕೂಲವಾಗುತ್ತದೆ. ನಾವು ಉರ್ದು ಪ್ರೈಮರಿ, ಹೈಸ್ಕೂಲ್‌ಗಳನ್ನು ಕೊಡುತ್ತೇವೆ, ಮುಂದೆ ಉರ್ದು ಮಿಡಿಯಂನಲ್ಲಿ ಕಾಲೇಜ್ ಮತ್ತು ಜೂನಿಯರ್ ಕಾಲೇಜ್ ಕೊಡಲು ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಸಿ.ಎಂ. ಉದಾಸಿ:– ನಾಳೆ ಉರ್ದು ಅಂಗನವಾಡಿನೂ ಕೊಡಬೇಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್:– ಆಯಿತು, ನೀವು ಹೇಳಿದಂತೆ ಕೊನೆಗೆ ಉರ್ದು

ಅಂಗನವಾಡಿಯಾದರೂ ಮಾಡಿ, ಉಪಯೋಗವಾಗುತ್ತದೆ. ನಿಮ್ಮನ್ನು ಈ ವಿಚಾರದಲ್ಲಿ ಮನವರಿಕೆ ಮಾಡುವುದು ನನಗೆ ಕಷ್ಟವೆಂದು ಕಾಣುತ್ತದೆ, ಈಗ ಆ ತೊಂದರೆ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಒಂದು ಪತ್ರಿಕೆಯಲ್ಲಿ ಮೂರ್ನಾಲ್ಕು ದಿವಸಗಳ ಹಿಂದೆ ಮಾನ್ಯ ಯಡಿಯೂರಪ್ಪನವರ ಭಾಷಣವನ್ನು ಓದಿದ್ದೆ, our next step is prohibition ಎಂದು ಎಲ್ಲೋ ಒಂದು ಕಡೆ ತಾವು ಮಾತನಾಡಿದ್ದಿರಿ, ಬಹಳ ಖುಷಿಯಾಯಿತು. ಈಗ ಪಾನ ನಿಷೇಧವನ್ನು ಎಲ್ಲಾ ಕಡೆ ತರುವುದಕ್ಕೆ ನಿಮಗೆ ಅನುಮಾನವಿದ್ದರೆ ಅಥವಾ ನಿಮಗೆ ಹಣಕಾಸಿನ ತೊಂದರೆಯೇನಾದರು ಬರುತ್ತದೆನ್ನುವ ಹಾಗಿದ್ದರೆ, ಯಾವ್ಯಾವ ಗ್ರಾಮದಲ್ಲಿ ಪಾನ ನಿಷೇಧಬೇಕೆಂದು ಜನರು ಅಪೇಕ್ಷೆಪಡುತ್ತಾರೆ, ಅಲ್ಲಿ ಪಾನ ನಿಷೇಧವನ್ನು ಜಾರಿಗೆ ತನ್ನಿ. ಆದರೆ ಆ ಪಾನ ನಿಷೇಧವನ್ನು ಮಾನಿಟರ್ ಮಾಡುವುದಕ್ಕೆ ನೀವೇನು ಪೋಲಿಸ್, ಅಬಕಾರಿ ಇಲಾಖೆಗಳಿಗೆ ಅಧಿಕಾರವನ್ನು ಕೊಟ್ಟಿದ್ದೀರಿ, ಅದನ್ನು ಅಲ್ಲಿ ಸ್ತ್ರೀಶಕ್ತಿ ಸಂಘಗಳಿಗೆ ಕೊಡಿ. ಈಗ ಅನೇಕ ಗ್ರಾಮದಲ್ಲಿ ಕುಡಿಯುವುದು ಇದ್ದಾಗಲೇ ಹೆಣ್ಣುಮಕ್ಕಳು ಕುಡಿಯುವುದನ್ನು ನಿಲ್ಲಿಸಿದ್ದಾರೆ. ಯಾರು ಕುಡಿಯುತ್ತಿದ್ದರು ಅವರ ಮೇಲೆ ಒಂದು ಸಾಮಾಜಿಕ ಒತ್ತಾಯವನ್ನು ತಂದು ಅವರು ಕುಡಿಯುವುದನ್ನು ಕಡಿಮೆ ಮಾಡುವ ವ್ಯವಸ್ಥೆಯನ್ನು ಮಾಡಿದ್ದಾರೆ. ಅವರಿಗೆ ನೀವು ಕಾನೂನಿನ ರಕ್ಷಣೆಯನ್ನು ಕೊಟ್ಟರೆ ಭಾರಿ ಅನುಕೂಲವಾಗುತ್ತದೆ. ಯಡಿಯೂರಪ್ಪನವರೆ, ಅಕ್ಟೋಬರ್ 2ನೇ ತಾರೀಖಿನವರೆಗೆ ಅಷ್ಟೆ ಅಬಕಾರಿ ಇಲಾಖೆ ನಿಮ್ಮ ಹತ್ತಿರವಿರುತ್ತದೆ, ಅಕ್ಟೋಬರ್ 2ನೇ ತಾರೀಖಾದ ಮೇಲೆ ಆ ಇಲಾಖೆ ನಿಮ್ಮ ಹತ್ತಿರವಿರುವಂತಿಲ್ಲ, ಮುಂದೆ ಬರುವ ಅಬಕಾರಿ ಮಂತ್ರಿಗಳು ನಿಮ್ಮ ತರಹ ಕುಡಿತದಿಂದ ದೂರವಿರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ, ಇದನ್ನು ದಯವಿಟ್ಟು ನೀವು ವಿಚಾರ ಮಾಡಿ, ಅಕ್ಟೋಬರ್ 2ನೇ ತಾರೀಖಿನ ದಿವಸ ನಮಗೆ ಈ ಒಂದು ಉಡುಗೊರೆಯನ್ನು ನಮಗೆ ಕೊಟ್ಟು ಹೋಗಿ. ಎಲ್ಲಿ ಎಲ್ಲಾ ತಾಯಂದಿರು ಅಪೇಕ್ಷೆಪಡುತ್ತಾರೆ ಅಲ್ಲಿ ಪಾನ ನಿಷೇಧವನ್ನು ನೀವು ಪುನರ್ ಜಾರಿಗೆ ತರುವ ಹಾಗೆ ವ್ಯವಸ್ಥೆ ಮಾಡಬೇಕು, ಪಾನ ನಿಷೇಧ ಮಾನಿಟರ್ ಮಾಡುವ ಅಧಿಕಾರವನ್ನು ಅಲ್ಲಿನ ಸ್ತ್ರೀಶಕ್ತಿ ಸಂಘಗಳಿಗೆ ಕೊಡಬೇಕು. ನೀವು ಪೋಲಿಸ್ ಮತ್ತು ಅಬಕಾರಿ ಇಲಾಖೆಯ ಅಧಿಕಾರಿಗಳಿಗೆ ಪಾನ ನಿಷೇಧ ಮಾನಿಟರ್ ಮಾಡುವ ಅಧಿಕಾರ ಕೊಟ್ಟರೆ ಏನು ಕೆಲಸವಾಗುವುದಿಲ್ಲ. ದಯವಿಟ್ಟು ಈ ಕೆಲಸವನ್ನು ನೀವು ಮಾಡಿದರೆ ನಮ್ಮ ಗ್ರಾಮೀಣ ಬದುಕು ಬಹಳಷ್ಟು ಉತ್ತಮಗೊಳ್ಳುತ್ತದೆ, ಉತ್ತಮಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ, ಇದರಿಂದ ನಮಗೆ ಬಹಳಷ್ಟು ಅನುಕೂಲವಾಗುತ್ತದೆ.

ತಾವು ಬಜೆಟ್‌ನಲ್ಲಿ ಸಾಮೂಹಿಕ ವಿವಾಹಗಳಿಗೆ ಸಹಾಯ ಮಾಡಬೇಕು, ಕನಿಷ್ಠ 25 ಮದುವೆಗಳು ಇರಬೇಕೆಂದು ತಾವೊಂದು ನಿರ್ಬಂಧವನ್ನು ಹಾಕಿದ್ದಿರಿ. ನಾವು ನಮ್ಮ ಕ್ಷೇತ್ರದ ಕೆಲವು ಕಡೆ ಪ್ರಯೋಗ ಮಾಡುತ್ತಿದ್ದೇವೆ. ನಾನು ಎಲ್ಲಾ ಗ್ರಾಮಸ್ಥರಿಗೆ ಏನು ಹೇಳುತ್ತಿದ್ದೇನೆಂದರೆ, ಎಲ್ಲಿ ಒಗ್ಗಟ್ಟಿದೆ ಅಲ್ಲಿ ಒಂದು ಮಿತಿಯನ್ನು ನಿಗದಿಮಾಡುವುದು. ನಮ್ಮ 'ವಧುವಾದರು ಇರಬೇಕು, ನಮ್ಮ ವರವಾದರು ಇರಬೇಕು, ಆ ಮಿತಿಯಲ್ಲಿ ನಮ್ಮ ಗ್ರಾಮದಲ್ಲಿ ನಡೆಯುವ ಇಲ್ಲಾ ಲಗ್ನಗಳನ್ನು ಸಾಮೂಹಿಕವಾಗಿ ಒಂದು ಛತ್ರದಡಿ ಮಾಡುವುದನ್ನು ಕಳೆದ 3 ವರ್ಷದಿಂದ ನಮ್ಮ ಗ್ರಾಮದಲ್ಲಿ ಮಾಡುತ್ತಿದ್ದೇವೆ. ಅದರಿಂದ ಗ್ರಾಮಸ್ಥರಲ್ಲಿ ಮದುವೆಯ ಒಂದು ಬಾಂಧವ್ಯ ಬರುತ್ತದೆ. ಹಾಗಾಗಿ ಲಗ್ನಕ್ಕೆ ವಿಶೇಷವಾಗಿ ಖರ್ಚುಮಾಡದ ಪರಿಸ್ಥಿತಿ ನಿರ್ಮಾಣವಾಗಲಿ ಮಾನ್ಯ ಯಡಿಯೂರಪ್ಪನವರೆ, ತಾವೇನು 25 ಲಗ್ನವಿರಲಿ ಎಂದು ನಿರ್ಬಂಧವನ್ನೇನು ಹಾಕಿದ್ದಿರಿ, ಅದು ಎಷ್ಟೇ ಇರಲಿ, ಗ್ರಾಮದಲ್ಲಿ ಈ ರೀತಿಯಾಗುವ ಸಾಮೂಹಿಕ ಲಗ್ನಗಳು ಎಷ್ಟೇ ಇದ್ದರೂ ಸರ್ಕಾರದ ಅನುಕೂಲತೆ ಇರುತ್ತದೆನ್ನುವ ಬದಲಾವಣೆಯನ್ನು ತಾವು ಅದರಲ್ಲಿ ತರಬೇಕು. ನಮಗೆ ಒಟ್ಟಾರೆ ಗ್ರಾಮೀಣ ಬದುಕು ಸುಧಾರಿಸಬೇಕು, ನಾವು ಕೃಷಿಕರು ಆತ್ಮಹತ್ಯೆಯಿಂದ ದೂರ ಸರಿಯಬೇಕೆನ್ನುವ ವಿಚಾರ

(ಅಧ್ಯಕ್ಷರು ಪೀಠದಲ್ಲಿದ್ದರು)

ತಮಗಿತ್ತೆಂದರೆ ಈ ಒಂದು ಬದಲಾವಣೆಯನ್ನು ಅದರಲ್ಲಿ ತನ್ನಿ. ನಾವು ಬಹಳಷ್ಟು ಹಾಳಾಗುವುದು ಏತಕ್ಕೆಂದರೆ, ನಮ್ಮ ಗ್ರಾಮೀಣ ಜನ ಚಟಕ್ಕೆ ಹಾಳಾಗುತ್ತೇವೆ, ನಮ್ಮ ಲಗ್ನಕ್ಕೆ ಹಾಳಾಗುತ್ತೇವೆ, ಸತ್ತಾಗ ಮಣ್ಣು ಮಾಡುವುದರಲ್ಲೂ ಹಾಳಾಗುತ್ತೇವೆ. ಮಣ್ಣುಮಾಡುವುದಕ್ಕೂ ಸುಮಾರು 10–15 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ, ಅದೂ ಕೂಡ ಸರಳವಾಗುವಂತೆ ಮಾಡಬೇಕು. ಅದರ ಜೊತೆಗೆ ಚುನಾವಣೆಯಲ್ಲಿ ಹಾಳಾಗುತ್ತೇವೆ. ಹೀಗೆ 4 ಕಡೆ ನಾವು ಹಾಳಾಗುತ್ತೇವೆ. ಚುನಾವಣೆಯಲ್ಲಿ ಹಾಳಾಗುವುದನ್ನು ನಿಲ್ಲಿಸುವುದಕ್ಕೆ ನಿಮ್ಮ ಕೈನಿಂದಾಗುವುದಿಲ್ಲ, ಈ 3ನ್ನು ಮಾತ್ರ ನಿಲ್ಲಿಸುವುದಕ್ಕೆ ನಿಮಗೆ ಸಾಧ್ಯವಾಗುತ್ತದೆ, ಅದನ್ನು ನಿಲ್ಲಿಸುವಂಥ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಪಟ್ಟಣಶೆಟ್ಟಿಯವರು ಇಲ್ಲಿದ್ದಾರೆ, ನಮ್ಮ ಕ್ಷೇತ್ರದ ಕೆಲವು ಸಮಸ್ಯೆಗಳನ್ನು ಹೇಳಬಯಸುತ್ತೇನೆ. ನಮ್ಮ ಗದಗಿನಲ್ಲಿ Handloom Institute ಇದೆ,

ಅದರಲ್ಲಿ ಬೋಧನೆ ಮಾಡುವವರೆಲ್ಲರು, ಇವತ್ತಿಗೂ temporaryಯಾಗಿದ್ದಾರೆ ಯಾರಿಗೂ permanent ಆಗಿಲ್ಲ. ಯಾರ್‍ಯಾರು eligible ಇದ್ದಾರೆ ಕೂಡಲೇ ಅವರನ್ನೆಲ್ಲಾ permanent ಮಾಡುವ ವ್ಯವಸ್ಥೆಯನ್ನು ತಾವು ಮಾಡಬೇಕು. ಅವರಿಗೂ ಒಂದು age limit ಇರುತ್ತದೆ. ಆ age limit ಅನ್ನು ಅವರ ಅನುಭವದ ಆಧಾರದ ಮೇಲೆ relax ಮಾಡಿ. ಅವರು ಅಲ್ಲೆ 5-6 ವರ್ಷಗಳಿಂದ ಬೋಧನೆಯನ್ನು ಮಾಡುತ್ತಿದ್ದಾರೆ, ಅವರಿಗೆ scale apply ಆಗುವಂತೆ ತಾವು ವಿಶೇಷ ಲಕ್ಷ್ಯವಹಿಸಿ ಮಾಡಬೇಕು, ಅದಕ್ಕೆ ತಾವು ಇನ್ನು ಹಣಕಾಸನ್ನು ಬಿಡುಗಡೆ ಮಾಡಬೇಕಾಗುತ್ತದೆ, ಏಕೋ ಅದು ಬಿಡುಗಡೆಯಾಗಿಲ್ಲ. ನಿಮ್ಮನ್ನು ನಾನು separate ಆಗಿ ಭೇಟಿ ಮಾಡುತ್ತೇನೆ, ಅದಕ್ಕೆ ಬೇಕಾಗಿರುವ ಎಲ್ಲಾ ಹಣಕಾಸಿನ ಸೌಲಭ್ಯವನ್ನು ತಾವು ಒದಗಿಸಿಕೊಡಬೇಕು. ಈ ಬೋಧಕರನ್ನು permanent ಮಾಡುವ ವ್ಯವಸ್ಥೆಯನ್ನು ಕೂಡಲೇ ತಾವು ಮಾಡಬೇಕು. ಹೋದ ಸಾರಿ ಅವರೆಲ್ಲಾ strike ಮಾಡಿದ್ದರು, ಅವಾಗ ನಾವೆಲ್ಲಾ intervene ಆಗಿ ಅದನ್ನು ಬೇಗ ಮಾಡಿಸಿಕೊಡುತ್ತೇವೆನ್ನುವ ಭರವಸೆಯನ್ನು ನಾವು ಕೊಟ್ಟಿದ್ದೆವು, ಆ ಭರವಸೆ ಈಡೇರಿಲ್ಲ, ಅದಕ್ಕೆ ಅದನ್ನು ಮಾಡಿಕೊಡಬೇಕೆನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ.

ಮತ್ತೆ, ADB ಸಹಾಯದಿಂದ ಉತ್ತರ ಕರ್ನಾಟಕದ ಪಟ್ಟಣಗಳ ಅಭಿವೃದ್ಧಿ ಸಲುವಾಗಿ ಹಣಕಾಸಿನ ವ್ಯವಸ್ಥೆ ಎಲ್ಲಾ ಆಗಿದೆ, ಕಡಿಮೆ ಬಿದ್ದಿದ್ದನ್ನು ಬಜೆಟ್‌ನಲ್ಲಿ ಕೊಡುತ್ತೇನೆಂದು ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ, ಆದರೆ, ನಮ್ಮ ಕಡೆಯ ಕೆಲಸ ಅಷ್ಟು ವೇಗವಾಗಿ ನಡೆಯುತ್ತಿಲ್ಲ. ಅವರು select ಮಾಡಿದ 25 ಪಟ್ಟಣಗಳಲ್ಲಿ, 23 ಪಟ್ಟಣಗಳು, ಉತ್ತರ ಕರ್ನಾಟಕ, ಬಾಂಬೆ-ಕರ್ನಾಟಕದ್ದು, ನೀವ್ಯಾರದರೂ ಅದಕ್ಕೆ ಲಕ್ಷ್ಯವಹಿಸಬೇಕಲ್ಲ. ಅದು Urban Development Department ಬರುತ್ತದೆ, ಅದು ಮುಖ್ಯಮಂತ್ರಿಗಳ ವ್ಯಾಪ್ತಿಗೆ ಬರುತ್ತದೆ. ಈ ಕಡೆಯಿರುವ ನಮ್ಮ ಮಂತ್ರಿಗಳ್ಯಾರಾದರೂ ವಿಶೇಷ ಲಕ್ಷ್ಯವಹಿಸಿ ಇದನ್ನು moniter ಮಾಡುವುದಕ್ಕೆ ಹೋಗಲಿಲ್ಲವೆಂದರೆ, ನಮಗೆ ಬೇಗ ಈ ಕೆಲಸವಾಗುವುದಿಲ್ಲ, ಬಹಳ ಆಮೆಗತಿಯಲ್ಲಿ ಕೆಲಸ ನಡೆಯುತ್ತಿದೆ. ದಯವಿಟ್ಟು ವಿಶೇಷ ಲಕ್ಷ್ಯವಹಿಸಿ ಈ ADB ಹಣಕಾಸಿನ ಸಹಾಯದಿಂದ ಉತ್ತರ ಕರ್ನಾಟಕದ ಪಟ್ಟಣಗಳ ಅಭಿವೃದ್ಧಿಗಾಗಿ ಮೂಲಭೂತ ಸೌಕರ್ಯ ಕೊಡುವ ಈ ಕಾರ್ಯಕ್ರಮವೇನಿದೆ ಅದು ತ್ವರಿತವಾಗಿ implement ಆಗುವ ಹಾಗೆ ತಾವು ಮಾನಿಟರ್ ಮಾಡಬೇಕು ಬೇಕಾದರೆ ಅದಕ್ಕೆ ನಮ್ಮ ಕಡೆಯವರೆ ಇದ್ದವರ cabinet sub-committee ಯನ್ನೇ ತಾವು ಮಾಡಿ, ಅದನ್ನು ಮಾನಿಟರ್ ಮಾಡಿ, ಬೇಗ

ಅನುಕೂಲವಾಗುವಂತೆ ಮಾಡಿ. ಅದರ ಜೊತೆಗೆ ಅವರು ಸಾಲ ಎತ್ತುವ ಮುನ್ನ steel, cement rate ಬಹಳ ಕಡಿಮೆ ಇತ್ತು, ಈಗ ಅವುಗಳ rate ಬಹಳ ಹೆಚ್ಚಾಗಿದೆ. ಅದಕ್ಕೆ ಹಣಕಾಸು ಸಾಲ ಬೇಕೆಂದರೆ, ಅವರು ಸಾಲವನ್ನು ಕೊಡುತ್ತಾರೆ, ಇಲ್ಲ, ಅದಕ್ಕೆ ಬಜೆಟ್‌ನಲ್ಲಿ provision ಮಾಡುತ್ತೇವೆಂದರೆ, ಅದರಲ್ಲಾದರೂ provision ಮಾಡಬೇಕು. ಏನು ಕೆಲಸ ಮಾಡಬೇಕೆಂದು ಮನಸ್ಸು ಮಾಡಿದ್ದೇವೆ, ಅದಕ್ಕೆ ಬೇಕಾದ ಎಲ್ಲಾ ಸಂಪನ್ಮೂಲಗಳನ್ನು ರೂಢಿಸುವ ಕೆಲಸ ತಮ್ಮಿಂದ ಆಗಲೇಬೇಕು. ದಯವಿಟ್ಟು, ಹಣಕಾಸಿನ ಕೊರತೆಯಾಯಿತೆಂದು ಅರ್ಧಂಬರ್ಧ ಕೆಲಸವಾಗುವಂತಾಗಬಾರದು. ಕಳೆದ ವರ್ಷ ಮುಖ್ಯಮಂತ್ರಿಗಳ ಗಮನಕ್ಕೂ ತಂದೆವು ಹಾಗೂ ಉಪ ಮುಖ್ಯಮಂತ್ರಿಗಳ ಗಮನಕ್ಕೂ ತಂದೆವು. ನೀವೆಲ್ಲಾ ಶಾಸಕರ ಸಭೆಯನ್ನು ಮಾಡಿದಿರಿ, ದುರ್ದೈವ ಅದರಿಂದೇನು ಆಗಲೇ ಇಲ್ಲ. ನೀವು ಮೀಟಿಂಗ್ ಕರೆದಿರಿ, ಮುಖ್ಯಮಂತ್ರಿಗಳನ್ನು ಕರೆದುಕೊಂಡು ಬಂದೆವು, ಅಲ್ಲೇನೋ ಕಹಿಘಟನೆಯಾಗಿ ಆ ಮುಖ್ಯಮಂತ್ರಿಗಳ ಮೂಡು ಕೆಟ್ಟು, ಆ ಸಮಸ್ಯೆ ಅಲ್ಲಿಗೆ ನಿಂತುಬಿಟ್ಟಿತು, ಇದಾಗಬಾರದು. ಆಗ ನಾವೇನು ಒತ್ತಾಯ ಮಾಡಿದ್ದೆವು, ನೀವು ಕರಾವಳಿ ಪಟ್ಟಣಗಳಿಗೆ ತಲಾನುದಾನ ಎಷ್ಟು ಕೊಟ್ಟಿರಿ, ಅಷ್ಟೇ ತಲಾನುದಾನವನ್ನು ಉತ್ತರ ಕರ್ನಾಟಕದ ಪಟ್ಟಣಗಳ ಅಭಿವೃದ್ಧಿಗೂ ಮೀಸಲಿಡಬೇಕೆಂದು ನಾವು ಒತ್ತಾಯ ಮಾಡಿದ್ದೆವು, ಈಗ ಅನಿವಾರ್ಯವಾಗಿ ಅದನ್ನು ಮೀಸಲಿಡುವ ಪ್ರಸಂಗ ಬಂದಿದೆ. ಏಕೆಂದರೆ, steel, cement rate ಹೆಚ್ಚಾದ್ದರಿಂದ ಅನಿವಾರ್ಯವಾಗಿ ಅಷ್ಟು ಹಣಕಾಸನ್ನು ತಾವು ಲಭ್ಯ ಮಾಡಬೇಕಾಗುತ್ತದೆ, ಆ ಕೆಲಸವನ್ನು ತಾವು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ಯಡಿಯೂರಪ್ಪನವರೆ, ತಾವು ಗದಗಿಗೆ ಬಂದಾಗ, ಒಂದು balancing tank ಮಾಡಲು 3–4 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಒದಗಿಸುತ್ತೇವೆಂದು ಹೇಳಿದ್ದಿರಿ. ತಾವು ಅದನ್ನು ಕೊಡಬೇಕು, ನಿಮ್ಮ ಉಡುಗೊರೆ ನಮಗೆ ಬೇಕು, ಒಂದು ಕೆರೆ ಮಾಡಿಕೊಳ್ಳುವುದಕ್ಕೆ 3–4 ಕೋಟಿ ರೂಪಾಯಿಗಳು ನಮಗೆ ಬೇಕಾಗುತ್ತದೆ. ಫೆಬ್ರವರಿಯಿಂದ ಮೇವರೆಗೆ ಕುಡಿಯುವ ನೀರನ್ನು ಸಂಗ್ರಹ ಮಾಡಿಕೊಳ್ಳಬೇಕಾಗುತ್ತದೆ, ಅಲ್ಲಿಂದ ಪಂಪ್ ಮಾಡಿಕೊಳ್ಳಬೇಕಾಗುತ್ತದೆ, ಸುಮಾರು 5–10 ಕೋಟಿ ರೂಪಾಯಿಗಳು ಬೇಕಾಗಬಹುದು, ಅದಕ್ಕೆ ಎಷ್ಟು ಹಣಕಾಸು ಬೇಕಾಗಬಹುದು ಅದನ್ನು ಅಕ್ಟೋಬರ್ 2ರೊಳಗೆ ನಮಗೆ ಲಭ್ಯಮಾಡಿ ಹೋದರೆ ಗದುಗಿನ ಬೀಗರಾಗಿದ್ದಕ್ಕೆ ಪರವಾಗಿಲ್ಲ, ಕುಡಿಯುವ ನೀರಿನ ವ್ಯವಸ್ಥೆಯನ್ನು ಸುಧಾರಿಸಿದಂತಾಗುತ್ತದೆ.

4–30 pm

ತಾವು ಏನು ಆಶ್ರಯ ಬಡಾವಣೆಗಳನ್ನು ಮಾಡುತ್ತಿದ್ದೀರಿ, ಆಶ್ರಯ ಬಡಾವಣೆಗಳನ್ನು ಮಾಡುವಲ್ಲಿ ನಾವು ಮೂಲಭೂತ ಸೌಕರ್ಯಗಳನ್ನು ಕೊಡುತ್ತಿಲ್ಲ. ನಾವು ಇನ್ನಷ್ಟು ಸ್ಲಂ ಮಾಡುತ್ತೇವೆ. ಇನ್ನಷ್ಟು ಸ್ಲಂ ಮಾಡುವುದರಿಂದ ನಿಮಗೇನು ಸಾಧನೆ ಮಾಡಿದ ಹಾಗಾಗುತ್ತದೆ? ದಯವಿಟ್ಟು ಅಲ್ಲಿ ಬೇಕಾದ ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ ಬೇಕಾಗುವಂತಹ ಹಣಕಾಸನ್ನು ತಾವು ಒದಗಿಸುವ ಹಾಗೆ ಆಗಬೇಕು. ಆಶ್ರಯ ಯೋಜನೆ ಸಲುವಾಗಿ ನಾವು ಸಾಕಷ್ಟು ಜಮೀನನ್ನು ಖರೀದಿ ಮಾಡುತ್ತೇವೆ. ಆದರೆ ಸ್ಮಶಾನದ ಸಲುವಾಗಿ ನಾವು ಏನೂ ವ್ಯವಸ್ಥೆ ಮಾಡುತ್ತಿಲ್ಲ. ಸ್ಮಶಾನಕ್ಕೆ ಬೇಕಾದ ಭೂಮಿ ಖರೀದಿ ಮಾಡುವುದಕ್ಕೆ ಬಹಳ ಕಡಿಮೆ ಅನುದಾನ ಲಭ್ಯ ಇದೆ. ಅದಕ್ಕೆ ಪ್ರತಿ ಗ್ರಾಮಕ್ಕೆ ಸ್ಮಶಾನಕ್ಕೆ ಜಮೀನು ಬೇಕೇಬೇಕು. ಪ್ರತಿಯೊಬ್ಬರಿಗೂ ಅದು ಉಪಯೋಗವಾಗುತ್ತದೆ. ಮಾನ್ಯ ಯಡಿಯೂರಪ್ಪನವರೇ, ಸ್ಮಶಾನಕ್ಕೆ ಬೇಕಾದ ಜಮೀನು ಖರೀದಿ ಮಾಡಲಿಕ್ಕೆ ಅನುದಾನ ಬೇಕಾಗಿದೆ. ನನ್ನ ಒಂದು ಅನುಭವ ಹೇಳುತ್ತೇನೆ. ಗೌಡರ ಕ್ಷೇತ್ರದಲ್ಲಿ ಆಗಿರುವುದು, ಅವರಿಗೂ ಗೊತ್ತಿದೆ. ಊರ ಹೆಸರು ಮತ್ತು ಮನುಷ್ಯನ ಹೆಸರು ಹೇಳುವುದಿಲ್ಲ. ನಮ್ಮಲ್ಲಿ ಒಮ್ಮೆ ಪಂಚಾಯಿತಿ ಚುನಾವಣೆ ಆದ ಮೇಲೆ ಒಬ್ಬ ಯಜಮಾನ ತೀರಿಕೊಂಡ. ಆ ಯಜಮಾನ ತೀರಿಕೊಂಡಾಗ ಪಾರಂಪರಿಕವಾಗಿ ಯಾರ ಹೊಲದಲ್ಲಿ ಹುಗಿಯುತ್ತಿದ್ದರು, ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಅವರ ವಿರುದ್ಧ ಇವನು ಓಟು ಹಾಕಿದ್ದ. Propaganda ನೂ ಮಾಡಿದ್ದ. ಹಾಗಾಗಿ ಐದು ಗಂಟೆಗಳ ಕಾಲ ಅವನ ಹೆಣ ಹುಗಿಯುವುದಕ್ಕೆ ಅವಕಾಶ ಕೊಡಲಿಲ್ಲ. ನಮ್ಮ ಹೊಲ ಬಂದ್ ಇದೆ ಎಂದರು. ರಾಜಕೀಯ ವೈಷಮ್ಯ ಇತ್ತು. ನಾವು ಹೋಗಿ ಕೂತು ಅದನ್ನು ಬಗೆಹರಿಸಿದೆವು. ಬಗೆಹರಿಸಿದ ಮೇಲೆ ಮುಂದೆ ಒಂದು ಚುನಾವಣೆ ಬಂದಾಗ ಅವನನ್ನೇ ಅಭ್ಯರ್ಥಿಯನ್ನಾಗಿ ಮಾಡಿದೆವು ನಾವು. ಅವನನ್ನು ಅಭ್ಯರ್ಥಿ ಮಾಡಿದ ಕೂಡಲೇ ಆ ಊರಿನವರೆಲ್ಲಾ ಸೇರಿ ನಮಗೆ ಆ ಹೊಲ ಕೊಡಿಸಿದರೆ ನಾವು ಓಟು ಹಾಕುತ್ತೇವೆಂದು ಹೇಳಿದರು. ನೀನು ಕೊಡಪ್ಪ ಎಂದು ಹೇಳಿದೆ, ಅವನು ಹೊಲ ಕೊಟ್ಟ, ಅಂದರೆ ಈ ಪರಿಸ್ಥಿತಿ ನಿರ್ಮಾಣವಾಗುತ್ತದೆ. ದಯವಿಟ್ಟು ಯಾರಿಗಾದರೂ ಮೂರು ಹೊತ್ತಿನಲ್ಲಿ ಹೆಣ ಹುಗಿಯುವಂತಹ ಪ್ರಸಂಗ ಬರಬಾರದು. ಪ್ರತಿ ನಗರಕ್ಕೆ ಮತ್ತು ಪ್ರತಿ ಗ್ರಾಮಕ್ಕೆ ಸ್ಮಶಾನ ಅಂತೂ ಅವಶ್ಯ ಇದೆ. ಆಶ್ರಯಕ್ಕಿಂತ ಹೆಚ್ಚು ಇದಕ್ಕೆ ವ್ಯವಸ್ಥೆ ಮಾಡಬೇಕು. ಹೆಚ್ಚಿನ ಹಣಕಾಸನ್ನು ಇದಕ್ಕೆ

ಮೀಸಲಿಟ್ಟು, ತಾವು ಅನುಕೂಲ ಮಾಡಬೇಕೆಂಬ ಕೆಲವು ಸಲಹೆಗಳನ್ನು ತಮಗೆ ನೀಡಿ, ನೀವು ತಂದಂತಹ ಆಯವ್ಯಯವನ್ನು ವಿರೋಧಿಸಿ ಮಾನ್ಯ ಸಭಾಧ್ಯಕ್ಷರಿಗೆ ಕೃತಜ್ಞತೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಯು.ಟಿ. ಖಾದರ್, ನಿಮ್ಮ ಹೆಸರು ಇದೆ ಮಾತನಾಡುತ್ತೀರಾ?

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ):- ಮಾನ್ಯ ಅಧ್ಯಕ್ಷರೆ, ತಾವು ಕೊಟ್ಟಿರತಕ್ಕಂತಹ ಅವಕಾಶಕ್ಕೆ ಧನ್ಯವಾದಗಳನ್ನು ಅರ್ಪಿಸಿ, ಮೊಟ್ಟಮೊದಲಿಗೆ ಸಮ್ಮಿಶ್ರ ಸರ್ಕಾರ ಬಂದು ಸುಮಾರು 18 ತಿಂಗಳುಗಳಾದವು.

ಅಧ್ಯಕ್ಷರು:- ಶರಣಪ್ರಕಾಶ್‌ರವರೇ 15-20 ನಿಮಿಷಗಳಲ್ಲಿ ಮುಗಿಸಬೇಕು.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:- ಮಾನ್ಯ ಅಧ್ಯಕ್ಷರೆ, front bench ನವರಿಗೆ ನೀವು ಹೆಚ್ಚಿನ ಅವಕಾಶ ಕೊಡುತ್ತೀರಿ.

ಅಧ್ಯಕ್ಷರು:- Front bench ನವರು ನಮ್ಮ ಮಾತು ಕೇಳುವುದಿಲ್ಲ. Front bench ನವರಿಗೆ ಯಾವ ರಿಟ್ಟೂ ನಡೆಯುವುದಿಲ್ಲ. ಐದು ನಿಮಿಷ ಹೆಚ್ಚು ಕಡಿಮೆ ಮುಗಿಸಿ ಬಹಳ ಜನ ಇದ್ದಾರೆ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಮಗೆ ಒಂದು 45 ನಿಮಿಷ ಕಾಲಾವಕಾಶ ಕೊಡಿ, ಈ ಸರ್ಕಾರ ಬಂದ ಮೇಲೆ ಈ ಭಾಗದಲ್ಲಿರತಕ್ಕಂತಹ ಶಾಸಕರಿಗೆ ಒಂದು ರೀತಿ ಬೇರೆ ರೀತಿಯಾದ ಮನೋಭಾವದಿಂದ ಸರ್ಕಾರ ನೋಡುತ್ತಿದೆ ಎಂದು ನಮ್ಮೆಲ್ಲರ ಅಭಿಪ್ರಾಯ. ಅದಕ್ಕೆ ತಾವೂ ಹೇಳಿದ್ದೀರಿ, ಆಡಳಿತ ಪಕ್ಷದಲ್ಲಿರತಕ್ಕಂತಹ ಸಚಿವರು ಹೇಳಿದ್ದಾರೆ, ಆ ಕಡೆ ಇರತಕ್ಕಂತಹ ಶಾಸಕರೂ ಕೂಡ ಹೇಳಿದ್ದಾರೆ, ನೀವು ಹಿಂದೆ ಇದ್ದಾಗ ಅದೇ ರೀತಿ ಮಾಡಿದ್ದೀರಿ ಎನ್ನತಕ್ಕಂತಹ ಉತ್ತರವೇ ನಮಗೆ ಬಂದಿದೆ ವಿನಃ ನಾವು ಎತ್ತಿರತಕ್ಕಂತಹ ಯಾವುದೇ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಆಗಿರತಕ್ಕಂತಹ ಅನ್ಯಾಯ ಸರಿಪಡಿಸಿ ಎಂದು ಹೇಳಿದ್ದಕ್ಕೆ ನಮಗೆ ಯಾವುದೇ ರೀತಿಯಾದ ಅನ್ಯಾಯ ಸರಿಪಡಿಸತಕ್ಕಂತಹ ಕೆಲಸವನ್ನೂ ಸರ್ಕಾರ ಮಾಡಿಲ್ಲ. ಇವತ್ತು ಸರ್ಕಾರಗಳು ಯಾರಾದರೂ ಕೂಡ ಈ ರಾಜ್ಯದ ಅಭಿವೃದ್ಧಿಯಲ್ಲಿ ತಾರತಮ್ಯ ಮಾಡಿದರೆ ತಪ್ಪೇ, ಹಿಂದಿನ ಸರ್ಕಾರದಲ್ಲಿದ್ದಾಗ ನೀವು ಮಾಡಿದ್ದೀರಿ, ಈ ನಾವು ಮಾಡುತ್ತಿದ್ದೇವೆಂದು ಹೇಳುವಂತಹ ತರ್ಕಕೆ ಸರ್ಕಾರ ಹೋಗಿದ್ದು ಇದು ಬಹಳ ವಿಷಾದನೀಯ, ಮೊದಲನೇ ಸಾರಿ ನಾವು ಸದನಕ್ಕೆ ಒಂದು ದೊಡ್ಡ ಕನಸನ್ನು

ಇಟ್ಟುಕೊಂಡು ಬಂದಿದ್ದೇವೆ. ಈ ಸದನದಲ್ಲಿ ಸುಮಾರು ನೂರು ಜನ ಯುವ ಶಾಸಕರು ಮೊದಲನೇ ಬಾರಿಗೆ ಆಯ್ಕೆಯಾಗಿರುವಂತಹ ಶಾಸಕರು ಇದ್ದಾರೆ. ನಾವು ಒಂದು ಕನಸನ್ನು ಇಟ್ಟುಕೊಂಡು ಈ ಶಾಸನಸಭೆಗೆ ಬಂದಿದ್ದೇವೆ. ಈ ರಾಜ್ಯದಲ್ಲಿ ನಾವು ಅಭಿವೃದ್ಧಿ ಮಾಡಬೇಕು, ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕತೆಯಿಂದ ಜನಪರವಾದ ಕೆಲಸಗಳನ್ನು ಮಾಡಬೇಕೆಂದು ಕನಸುಗಳನ್ನು ಇಟ್ಟುಕೊಂಡು ಬಂದಿರತಕ್ಕಂತಹ ನಮಗೆ ಈ ಸದನದಲ್ಲಿ ತಾವು ಕಲಿಸಿದ್ದು ಏನೆಂದು ಆತ್ಮಶೋಧನೆ ಮಾಡಿಕೊಳ್ಳಬೇಕು. ನಮ್ಮ ನಮ್ಮ ಮತಕ್ಷೇತ್ರಗಳಲ್ಲಿ ಅನ್ಯಾಯ ಮಾಡಿ, ಇಲ್ಲಿರತಕ್ಕಂತಹ ಶಾಸಕರನ್ನು ಕಡೆಗಣಿಸಲಿಕ್ಕೆ ಯಾರಾದರೂ ಪ್ರಯತ್ನಪಟ್ಟರೆ, ಖಂಡಿತವಾಗಿ ಇದರ ಪರಿಣಾಮ ಮುಂದೆ ಬರುವಂತಹ ದಿನಗಳಲ್ಲಿ ಈ ರಾಜ್ಯದ ಅಭಿವೃದ್ಧಿಯ ಮೇಲೆ ಆಗುತ್ತದೆ. ನಾವು ಇಲ್ಲಿ ಸದನದಲ್ಲಿ In the Interest of public ಕೆಲಸ ಮಾಡಬೇಕು. ಕೇವಲ ನಮ್ಮ ಕ್ಷೇತ್ರಕ್ಕೆ ಸೀಮಿತವಾದ ಕೆಲಸವಲ್ಲ. ಈ ರಾಜ್ಯದಲ್ಲಿರತಕ್ಕಂತಹ ಕಟ್ಟ ಕಡೆಯ ಮನುಷ್ಯನ ಸಮಸ್ಯೆಗಳನ್ನು ಅಧಿಕಾರದಲ್ಲಿರತಕ್ಕಂತಹವರ ಗಮನ ಸೆಳೆದು, ಅದಕ್ಕೆ ಹೋರಾಟ ಮಾಡಿ, ಅವರ ಮನವೊಲಿಸಿ, ಅವರಿಗೆ ಆ ಹಕ್ಕನ್ನು ಕೊಡಿಸಲಿಕ್ಕೆ ನಾವು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ತಿಳಿದುಕೊಂಡು ನಾವು ಈ ಸದನಕ್ಕೆ ಬಂದಿದ್ದೇವೆ ವಿನಃ ಬೇರೆ ಏನೂ ಕಾರಣವಿಲ್ಲ. ಆದರೆ ಆಡಳಿತ ಪಕ್ಷದಲ್ಲಿರತಕ್ಕಂತಹವರು ವಿರೋಧ ಪಕ್ಷದಲ್ಲಿರತಕ್ಕಂತಹ ಶಾಸಕರಿಗೆ ಅವರ ಕ್ಷೇತ್ರಗಳಲ್ಲಿ ಕಡೆಗಣಿಸಿ, ತಮ್ಮ ತಮ್ಮ ಸೋತಿರತಕ್ಕಂತಹ ಅಭ್ಯರ್ಥಿ ಅಥವಾ ಕಾರ್ಯಕರ್ತರಿಗೆ ಕೇಳಿ, ರಾಜಕೀಯವಾಗಿ ಸೈಡ್‌ಲೈನ್ ಮಾಡುವುದಕ್ಕೆ ನೀವು ಪ್ರಯತ್ನ ಪಟ್ಟರೆ, ಮುಂದೆ ನಾವು ಆ ಸ್ಥಾನಕ್ಕೆ ಬಂದ ಮೇಲೆ ಅದನ್ನೇ ಮಾಡುವುದಕ್ಕೆ ಪ್ರಯತ್ನ ಪಡಬಹುದು. ಅದಕ್ಕಾಗಿ ನನ್ನ ಕಳಕಳಿಯ ಮನವಿ ಇಷ್ಟೆ. ಯಾರೇ ತಪ್ಪು ಮಾಡಿರಲಿ ಅದು ತಪ್ಪೇ. ಅದು ಯಾರೂ ಕೂಡ ಮಾಡಬಾರದು. ಈ ಶಾಸನಸಭೆಗೆ ಆರಿಸಿ ಬಂದ ಮೇಲೆ, ನಾವು ಪಕ್ಷ ಭೇದ ಮರೆತು ಈ ಶಾಸನಸಭೆಯಲ್ಲಿರತಕ್ಕಂತಹ ಎಲ್ಲಾ ಸದಸ್ಯರ ಮಾತುಗಳಿಗೆ ಬೆಲೆ ಕೊಡಬೇಕು. ಅವರ ಕ್ಷೇತ್ರಗಳಿಗೆ ನಾವು ಸಮಾನವಾಗಿ ನೋಡಬೇಕು. ಈ ಅಭಿವೃದ್ಧಿ ಸಮಾನವಾಗಿ ಆಗಬೇಕು. ಈ ಸರ್ಕಾರ ಒಳ್ಳೆಯ ಕೆಲಸ ಮಾಡಿದ್ದರೆ, ಒಳ್ಳೆಯ ಕೆಲಸ ಮಾಡಿದೆ ಎಂದು ನಾವು ಹೇಳಬೇಕಾಗುತ್ತದೆ. ಆದರೆ ಎಲ್ಲೆಲ್ಲಿ ಎಡವಿದೆ ಅದನ್ನು ಟೀಕೆ ಮಾಡುವುದು ನಮ್ಮ ಕರ್ತವ್ಯ. ಬೆಳಗಾಂ ಅಧಿವೇಶನದಲ್ಲಿ ಮಾನ್ಯ ಯಡಿಯೂರಪ್ಪನವರು ಒಂದು ಮಾತನ್ನು ಹೇಳಿದರು. ನಾವು ಈ ಸಾರಿ ಮಾನ್ಯ ನಂಜುಂಡಪ್ಪನವರ ವರದಿ ಪ್ರಕಾರ

ಹಣವನ್ನು ಕೊಟ್ಟೇ ಕೊಡುತ್ತೇವೆ ಎನ್ನತಕ್ಕಂತಹ ಮಾತನ್ನು ಹೇಳಿದ್ದರು. ಅವರು ಮಾನ್ಯ ನಂಜುಂಡಪ್ಪನವರ ವರದಿ ಪ್ರಕಾರ 1,571 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ ಎನ್ನತಕ್ಕಂತಹ ಮಾತನ್ನು ಘೋಷಣೆ ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಅದರ ಹಂಚಿಕೆಯಲ್ಲಿ ತಾರತಮ್ಯವಾಗಿದೆ ಎಂದು ನಮ್ಮ ಮಾನ್ಯ ಸದಸ್ಯರಾದ ಡಿ.ಆರ್. ಪಾಟೀಲ್‌ರವರು ಮತು ಅನೇಕ ಶಾಸಕರ ಅಭಿಪ್ರಾಯವಾಗಿದೆ. ಅದನ್ನು ಅವರು ಸರಿಪಡಿಸಬೇಕು. ಮಾನ್ಯ ನಂಜುಂಡಪ್ಪನವರ ವರದಿಯಲ್ಲಿ ಅದರ ಹಂಚಿಕೆ ಯಾವ ಅನುಪಾತದಲ್ಲಿ ಮಾಡಬೇಕೆಂದು ಬೇರೆ ಅನುಪಾತ ಇದ್ದರೂ ಕೂಡ ಯಾವುದೇ ಕಾರಣಕ್ಕೆ ಸಮಯದ ಒತ್ತಡದಿಂದಲೋ ಏನೋ ಅವರು ಬೇರೆ ಅನುಪಾತ ಅನುಸರಿಸಿ ಅದನ್ನು ಮಾಡಿದ್ದಾರೆ. ಅದನ್ನು ಸರಿಪಡಿಸಬೇಕೆಂದು ಮಾನ್ಯ ಯಡಿಯೂರಪ್ಪನವರಿಗೆ ಕೇಳಿಕೊಳ್ಳುತ್ತೇನೆ. ಆದರೆ ನಾವು ಇವತ್ತು ಜುಲೈ ತಿಂಗಳಲ್ಲಿ ಇದ್ದೇವೆ. ನಾಲ್ಕು ತಿಂಗಳಾಯಿತು. ನಾಲ್ಕು ತಿಂಗಳಾದರೂ ಕೂಡ ಕಾಯ್ದಿರಿಸಿರತಕ್ಕಂತಹ ಹಣ ಯಾವ ರೀತಿ ಅದನ್ನು ಖರ್ಚು ಮಾಡುತ್ತೀರಿ, ಯಾವ ಯಾವ ಇಲಾಖೆಗೆ ಎಷ್ಟೆಷ್ಟು ಹಣವನ್ನು ಕೊಡುತ್ತೀರಿ, ಎಂಬ ಬಗ್ಗೆ, ಯಾವುದೇ district ನಲ್ಲಿ ಮತ್ತು ಯಾವುದೇ ತಾಲ್ಲೂಕಿನಲ್ಲಿ ಅದರ ರಿವ್ಯೂ ಆಗಿಲ್ಲ. ಸಂಬಂಧಪಟ್ಟ ಶಾಸಕರಿಗೆ ಅದರ ಬಗ್ಗೆ consultation ಆಗಿಲ್ಲ. ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿಯಲ್ಲಿ ಅದರ ಬಗ್ಗೆ ಚರ್ಚೆಯಾಗಿಲ್ಲ. ಇದರ ಬಗ್ಗೆ ಯಾವುದೇ ಮುಂದಿನ ಹೆಜ್ಜೆ ಇಟ್ಟಿಲ್ಲ. ಮಾನ್ಯ ಯಡಿಯೂರಪ್ಪನವರು ಇದರ ಬಗ್ಗೆ ಒಂದು ರಿವ್ಯೂ ಮೀಟಿಂಗ್ ಮಾಡಿ, ಇಲಾಖಾವಾರು ಮತ್ತು ಕ್ಷೇತ್ರವಾರು ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತಿದ್ದೀರಿ ಎನ್ನತಕ್ಕಂಥಾದ್ದು ಕೂಡ ನೀವು ಅತೀ ಶೀಘ್ರದಲ್ಲಿ ತಿಳಿಸಬೇಕೆಂದು ಮಾನ್ಯ ಯಡಿಯೂರಪ್ಪನವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಕೆಲವೊಂದು ಇಲಾಖಾವಾರು ಸಲಹೆಗಳನ್ನು ನಾನು ಇಲ್ಲಿ ಕೊಡಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಮೊಟ್ಟ ಮೊದಲನೆಯದಾಗಿ ಕೃಷಿ ಇಲಾಖೆ, ಕೃಷಿ ಸಚಿವರು ಇಲ್ಲ. ಇಲ್ಲಿರತಕ್ಕಂತಹ ಬಹಳಷ್ಟು ಶಾಸಕರು ಬಹಳ ಒಳ್ಳೆಯ ರೀತಿಯಿಂದ ಮಾರ್ಗದರ್ಶನ ಮಾಡಿದ್ದಾರೆ. ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಕೇವಲ ಒಂದೆರಡು ಸಲಹೆಗಳನ್ನು ನಾನು ಇಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ. ಕೃಷಿ ಸಚಿವರು ಇಲ್ಲ. ಯಾರು ನೋಟ್ ಮಾಡಿಕೊಳ್ಳುತ್ತಾರೋ ನನಗೆ ಗೊತ್ತಿಲ್ಲ. ನನಗೆ ಉತ್ತರ ಸಿಗುತ್ತದೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. Agriculture Department ನಲ್ಲಿ ಎಷ್ಟು Vacancies ಇವೆ? ರೈತ ಸಂಪರ್ಕ ಕೇಂದ್ರಗಳಲ್ಲಿ 50%

ವೇಕೆನ್ಸಿಗಳಿವೆ. ಇವತ್ತು ರೈತ ಸಂಪರ್ಕ ಕೇಂದ್ರದಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳು ಎಲ್ಲರೂ Watershed Department ಕಡೆ ಹೋಗುತ್ತಿದ್ದಾರೆ. ಅವರು ಏಕೆ ಹೋಗುತ್ತಿದ್ದಾರೆಂದು ಸರ್ಕಾರದವರು ಗಮನ ಹರಿಸಿದ್ದಾರ? ಇವತ್ತು ಯಾರೂ ಕೂಡ ಕೃಷಿ ಸಹಾಯಕರಾಗಿ ರೈತ ಸಂಪರ್ಕ ಕೇಂದ್ರದಲ್ಲಿ ಕೆಲಸ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಅವರ priority ಏನೆಂದರೆ ನಾವು Watershed Department ಗೆ ಹೋಗುತ್ತೇವೆಂದು ಹೇಳುತ್ತಾರೆ. ಏಕೆ ಹೋಗುತ್ತೇವೆಂದು ಹೇಳುತ್ತಾರೆ ? ಏಕೆಂದರೆ ಅಲ್ಲಿ ಬಹಳ ಭ್ರಷ್ಟಾಚಾರ ನಡೆದಿದೆ. ಇವತ್ತು ನಮ್ಮ ರಾಜ್ಯದಲ್ಲಿ 72,000,00 ಹೆಕ್ಟೇರ್ watershed treatment ಆಗಬೇಕೆಂದು ಮಾನ್ಯ ಡಿ.ಆರ್. ಪಾಟೀಲ್ ಸಾಹೇಬರು ಹೇಳಿದರು. ಅದು ಬಹಳ ಅವಶ್ಯಕತೆಯಿದೆ. ಆದರೆ Watershed Department ಯಾವ ರೀತಿ ಕೆಲಸ ನಿರ್ವಹಿಸುತ್ತಿದೆ ಎಂದು ಸರ್ಕಾರ ನಿಗಾ ಇಡಬೇಕು. ಏಕೆ ಎಲ್ಲಾ ಅಧಿಕಾರಿಗಳು ಅಲ್ಲಿಗೆ ಹೋಗುತ್ತಿದ್ದೇವೆಂದು ಹೇಳುತ್ತಿದ್ದಾರೆ ಎಂದು ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಅಲ್ಲಿ ಏನಾಗುತ್ತಿದೆ ಎಂದು ಪಾರದರ್ಶಕತೆ ತರುವುದಕ್ಕೆ ಪ್ರಯತ್ನಪಡಬೇಕು. ಮಾನ್ಯ ಸಚಿವರು ಅದನ್ನು ಮಾಡಿದ್ದಾರ? ಮಾಡಿಲ್ಲ. ಅದಕ್ಕೆ ಅವರು ಅದರ ಬಗ್ಗೆ ಗಮನ ಹರಿಸಬೇಕು. ಎರಡನೆಯದಾಗಿ ರೈತ ಸಂಪರ್ಕ ಕೇಂದ್ರಗಳಿಗೆ ಬಹಳಷ್ಟು ಕಟ್ಟಡಗಳು ಇಲ್ಲ. ಇವತ್ತು ನಬಾರ್ಡ್‌ನಿಂದ ರೈತ ಸಂಪರ್ಕ ಕೇಂದ್ರ ಕಟ್ಟಡಗಳಿಗೆ ಸರ್ಕಾರ ಹಣವನ್ನು ಕೊಡಲಿಲ್ಲ. ರೈತರ ಪರವಾಗಿ ಮಾತನಾಡುವಂತಹ ಮಾನ್ಯ ಯಡಿಯೂರಪ್ಪನವರು ಇದರ ಬಗ್ಗೆ ಕೂಡ ಗಮನಹರಿಸಬೇಕು. ಏಕೆಂದರೆ ರೈತ ಸಂಪರ್ಕ ಕೇಂದ್ರಗಳಿಗೆ ಬಹಳಷ್ಟು ಕಡೆ building ಇಲ್ಲ. ಅದಕ್ಕೆ ಬಹಳ ಏನೂ ಖರ್ಚಾಗುವುದಿಲ್ಲ. ನಮ್ಮ ರಾಜ್ಯದಲ್ಲಿರುವ ಎಲ್ಲಾ ರೈತ ಸಂಪರ್ಕ ಕೇಂದ್ರಗಳಿಗೆ ಒಂದೇ ಬಾರಿ building sanction ಮಾಡಿಕೊಡಬೇಕು. ಇನ್ನೊಂದು ಬಹಳ ಪ್ರಮುಖವಾದುದು ಏನೆಂದರೆ ಇವತು ನಾವು agriculture ಗೆ ಪ್ರಾಮುಖ್ಯತೆ ಕೊಡಬೇಕಾಗಿರುವುದಕ್ಕೆ ಒಂದು ಕಾರಣ ಇದೆ. ನಮ್ಮ ದೇಶ ಕೃಷಿ ಪ್ರಧಾನವಾಗಿರುವುದಕ್ಕೆ ಕಾರಣ ಇದೆ, ಏಕೆಂದರೆ ಎಲ್ಲಿ ಬಹಳಷ್ಟು ಜನ vegetarian ಇದ್ದಾರೆ. ಇಲ್ಲಿ ಸಸ್ಯಹಾರಿ ಜನರು ಇರುವುದರಿಂದ ಅವರಿಗೆ protein supplement ಮತ್ತು fat supplement, pulses ನಿಂದ ಮಾತ್ರ ಬರುವುದಕ್ಕೆ ಸಾಧ್ಯವಿದೆ. ಆದುದರಿಂದ pulses ಅನ್ನು ಯಾವ ರೀತಿ ಅಭಿವೃದ್ಧಿಪಡಿಸಬೇಕು ಎಂದು ಸರ್ಕಾರ ಯೋಚನೆ ಮಾಡಿದೆಯಾ? ಇವತ್ತು ತೊಗರಿ ಬೆಳೆಗಾರ, ಕಡಲೆ ಬೆಳೆಯತಕ್ಕಂಥ ರೈತನ ಕಷ್ಟ ಏನಿದೆ ಎಂದು ಸರ್ಕಾರ ನೋಡುವುದಕ್ಕೆ

ಸರ್ಕಾರ ಸಿದ್ಧವಾಗಿದೆಯಾ? ಮಾನ್ಯ ಯಡಿಯೂರಪ್ಪನವರು ಬಂದ ಮೇಲೆ ಈಗಾಗಲೇ ಸರ್ಕಾರ ಸಬ್ಸಿಡಿ ಕೊಡುತ್ತೇವೆಂದು ಹೇಳಿದಿರಿ. ಇವತ್ತು ಸರ್ಕಾರ ನಡೆಸುವಂತಹ ಜನ ಯಾರೇ ಇರಲಿ, ನಾವು ಯಾವ್ಯಾವ ಇಲಾಖೆಗೆ ಎಷ್ಟೆಷ್ಟು ಹಣ ಕೊಟ್ಟಿದ್ದೇವೆಂದು ಜಂಭ ಕೊಚ್ಚಿಕೊಳ್ಳುವುದೇ ವಿನಃ ಆ ಹಣ ಹೇಗೆ ಖರ್ಚಾಗಿದೆ ಎಂದು ನೋಡುವಂಥಾದ್ದು' ನಮ್ಮ ಕರ್ತವ್ಯ ಎಂದು ನಾವು ಅಂದುಕೊಳ್ಳುತ್ತಿಲ್ಲ.

ಇವತ್ತು ನಾನು ಬಹಳ ವಿಷಾದದಿಂದ ಹೇಳುತ್ತಿದ್ದೇನೆ, ಇವತ್ತು 75% ಸಬ್ಸಿಡಿಯನ್ನು ಕೃಷಿ ಸಚಿವರು ಕೊಟ್ಟಿದ್ದಿರಿ. ಆದರೆ ಆ ಹಣ ರೈತನಿಗೆ ಮುಟ್ಟಲೇ ಇಲ್ಲ. ಇವತ್ತು ಸಬ್ಸಿಡಿ ಮುಖಾಂತರ ಕೊಟ್ಟಿರುವಂತಹ ಬೀಜದ ಹಣ ಎಲ್ಲಾ ಮಧ್ಯವರ್ತಿಗಳ ಪಾಲಾಯಿತು. ಗುಲ್ಬರ್ಗದಲ್ಲಿ ವಿಶೇಷವಾಗಿ ಉದ್ದುಗೆ price 65 ರೂಪಾಯಿ ನಿಗದಿಯಾಯಿತು. Marketನಲ್ಲಿ 25 ರೂಪಾಯಿಯಂತೆ ಸಿಗುತ್ತಿದೆ. ಆದರೆ ನೀವು ಅದಕ್ಕೆ 65 ರೂಪಾಯಿ ಬೆಲೆ ಕಟ್ಟಿ, ನೀವು 75% ಸಬ್ಸಿಡಿಯನ್ನು ಕೇಳಿ 25 ರೂಪಾಯಿ ಕೆಜಿಯಂತೆ ಇವತ್ತು ರೈತನಿಗೆ ಕೊಟ್ಟರು. ಮಾರ್ಕೆಟ್‌ನಲ್ಲಿ ಈಗಾಗಲೇ 25 ರೂಪಾಯಿಯಂತೆ ಸಿಗತ್ತಿದೆ. ನೀವು 75% ಕೊಟ್ಟಂತಹ ಸಬ್ಸಿಡಿ ರೈತನಿಗೆ ಮುಟ್ಟಲಿಲ್ಲ. ಅದು ಮಧ್ಯವರ್ತಿಗಳ ಪಾಲಾಯಿತು. ಆದರೆ ಇನ್ನೂ ವಿಷಾದನೀಯ ಸಂಗತಿ ಏನೆಂದರೆ 65 ರೂಪಾಯಿ ದರವನ್ನು ಯಾರು ನಿಗದಿ ಮಾಡಿದರು ಎಂದರೆ Karnataka Seed Corporation ನವರು. ನನಗೆ ಬಹಳ surprise ಆಯಿತು. ಅದರ ಅಧ್ಯಕ್ಷರು Principal Secretary, ಇವತ್ತು ಅವರು tender ಕರೆದಾಗ 65 ರೂಪಾಯಿ rate quote ಮಾಡಿದ್ದಾರೆ. ಇದರಲ್ಲಿ ಬಹಳ ಭ್ರಷ್ಟಾಚಾರವಾಗಿದೆ. ಆದುದರಿಂದ ಖಂಡಿತವಾಗಿ ಇದನ್ನು ತನಿಖೆ ಮಾಡಿಸಬೇಕು. ಇವತ್ತು ಒಂದು ಸರ್ಕಾರದ ಸಂಸ್ಥೆ ರೈತನಿಗೆ ಸಹಾಯಕ್ಕೆ ಬರುವುದಕ್ಕೆ ಬದಲು ಬೇರೆಯವರ ಜೊತೆ ಸೇರಿ 65 ರೂಪಾಯಿ ಹಾಕುವಂತಹ ಅವಶ್ಯಕತೆ ಇರಲಿಲ್ಲ. ಅವರು ರೈತರಿಂದ 45 ರೂಪಾಯಿಗೆ ಬೀಜವನ್ನು ಕೊಂಡುಕೊಂಡರು. ಅವರು 50 ರೂಪಾಯಿ ಹಾಕಬಹುದಾಗಿತ್ತು. ಆಗ ಆ ಸಬ್ಸಿಡಿ ರೈತನಿಗೆ ಸಿಗುತ್ತಿತ್ತು. ಆದರೆ ಇವರೂ ಕೂಡ ಆ private party ಜೊತೆ collude ಆಗಿ high rate quote ಮಾಡಿದ್ದರಿಂದ ಇವತ್ತು ರೈತನಿಗೆ ನಷ್ಟವಾಯಿತು. ಆ ಸಬ್ಸಿಡಿ ರೈತನಿಗೆ ಸಿಗುವ ಬದಲು ಮಧ್ಯವರ್ತಿಗಳ ಪಾಲಾಯಿತು ಎನ್ನುವುದನ್ನು ಸರ್ಕಾರ ಗಮನ ಹರಿಸಬೇಕು. ಏಕೆಂದರೆ ನಾವು ಆಯವ್ಯಯದಲ್ಲಿ ಎಷ್ಟು ಹಣ ಇಟ್ಟಿದ್ದೇವೆ ಎನ್ನುವುದಕ್ಕಿಂತ, ಆ ಹಣ ರೈತನಿಗೆ ಮುಟ್ಟಿದೆಯಾ ಎನ್ನುವುದು ಮುಖ್ಯ ಎನ್ನುವುದನ್ನು

ನಾನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಸರ್ಕಾರ ನಾವು ಯಾವತ್ತು ರೈತರ ಪರವಾಗಿ ಕೆಲಸ ಮಾಡುತ್ತಿದ್ದೇವೆಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ಇವತ್ತು ನಮ್ಮ draught prone area ಎನ್ನುವಂಥಾದ್ದು ಶೇಕಡ 65 ರಿಂದ 70% un irrigated land ಇದೆ. Dry agriculture ಏನು ಮಾಡುತ್ತಿದ್ದಾರೆ. ಅವರಿಗೆ draught proneಗೆ ಏನಾದರೂ ಒಂದು ಕಾರ್ಯಕ್ರಮವನ್ನು ತಂದಿದ್ದೀರಾ? ಇಲ್ಲ. ಆಂಧ್ರ ಪ್ರದೇಶದಲ್ಲಿ Bio fuel ಮಾಡುವುದಕ್ಕೆ encourage ಮಾಡಿದ್ದಾರೆ, ಆ ರೀತಿ ನೀವು ಮಾಡಿದ್ದೀರಾ? ನೀವು ಮಾಡಲಿಲ್ಲ. ಅದಕ್ಕೆ ನಾನು ಒಂದು ಸಲಹೆಯನ್ನು ಕೂಡ ಕೊಟ್ಟೆ. ನಮ್ಮ ರಾಜ್ಯದಲ್ಲಿ, ಬೀಜದಲ್ಲಿರಬಹುದು, ಪರಿಕರದಲ್ಲಿರಬಹುದು, ಏನು ರೈತನಿಗೆ ನೀವು ಸಬ್ಸಿಡಿಯನ್ನು ಕೊಡುತ್ತಿದ್ದೀರಿ, ಆ ಹಣವನ್ನು ನೀವು ನೇರವಾಗಿ ರೈತರಿಗೆ ಕೊಟ್ಟುಬಿಡಿ ಎಂದು KDP meetingನಲ್ಲಿ ಹೇಳಿಬಿಟ್ಟೆನು. ಅದೇ ಒಂದು news ಆಗಿ ಹೋಯಿತು. ಏಕೆಂದರೆ ರೈತನಿಗೆ ಕೊಡುವಂತಹ ಹಣ ಅವನಿಗೇ ನೇರವಾಗಿ ಕೊಟ್ಟರೆ ಉಪಯೋಗವಾಗುತ್ತದೆ. ಆದರೆ ನೀವು ಅವನಿಗೆ ಸಬ್ಸಿಡಿ ಮುಖಾಂತರ ಕೊಡುತ್ತಿರುವುದು ಅವನಿಗೆ ಮುಟ್ಟುತ್ತಿಲ್ಲ ಎನ್ನುವುದು ನಮ್ಮ ಮನವಿ. ಮಾನ್ಯ ಡಿ.ಆರ್. ಪಾಟೀಲ್‌ರವರು ಕೂಡ minimum support price ಬಗ್ಗೆ ಹೇಳಿದರು. ಇವತ್ತು ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ, ಅದಕ್ಕೆ ಏನು ಕಾರಣ ಎನ್ನುವುದಕ್ಕೆ ಸರ್ಕಾರ ಒಂದು ಸದನ ಸಮಿತಿಯನ್ನು ಮಾಡಬೇಕು. ನಾವು ರೈತನಿಗೆ ಸಾಲ ಮನ್ನಾ ಮಾಡಿಬಿಟ್ಟಿದ್ದೇವೆ, ಬಡ್ಡಿ ಮನ್ನಾ ಮಾಡಿಬಿಟ್ಟಿದ್ದೇವೆಂದರೆ ರೈತನಿಗೆ ಸಾಲ ಸಿಗುತ್ತಿದೆಯಾ? ರೈತ debt trap ನಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಿದ್ದಾನೆ. ಇವತ್ತು ರೈತ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಅದೇ ಮುಖ್ಯ ಕಾರಣವಾಗಿದೆ. ಅದಕ್ಕೆ ನಾವು farm credit ಕೊಡುತ್ತಿದ್ದೇವೆಯೇ? ಮಾನ್ಯ ಯಡಿಯೂರಪ್ಪನವರು ಇವತ್ತು ನಾವು 4%ನಲ್ಲಿ ಸಾಲ ಕೊಡುತ್ತಿದ್ದೇವೆಂದು ಹೇಳಿದರು. ನೀವು ಎಷ್ಟು ಜನರಿಗೆ ಕೊಡುತ್ತಿದ್ದೀರಿ? ಇವತ್ತು ಅದನ್ನು ಸರ್ಕಾರ survey ಮಾಡಿಸಿದೆಯಾ? ಎಲ್ಲಾ Nationalized Bankನಿಂದ ಹಿಡಿದುಕೊಂಡು ಸಾಲ ಕೊಡುತ್ತಿರುವುದರಲ್ಲಿ 35% ರೈತರಿಗೆ ಇವತ್ತು ಸಾಲ ಸಿಗುತ್ತಿಲ್ಲ. ಇನ್ನೂ 60% ರೈತರಿಗೆ ಸಾಲ ಮುಟ್ಟಿಸತಕ್ಕಂಥ ಯೋಜನೆಯನ್ನು ತಾವು ಹಾಕಿಕೊಂಡಿದ್ದೀರಾ? ನಮ್ಮ ಮಾನ್ಯ ಡಿ.ಆರ್. ಪಾಟೀಲ್‌ರವರು ಬಹಳ ಸೂಕ್ತವಾದಂತಹ ಸಲಹೆ ಕೊಟ್ಟರು. ನಮಗೆ farm credit availability ಇರಬೇಕು. ರೈತನನ್ನು ಆತ್ಮಹತ್ಯೆಯಿಂದ ತಪ್ಪಿಸಬೇಕಾದರೆ ಅವನಿಗೆ farm credit accessibility ಇರಬೇಕು. ಅದಕ್ಕಾಗಿ ನೀವು ರೈತರಿಗೆ ಒಂದು self

help group ಮಾಡಿ. ಅದರ ಮುಖಾಂತರ Nationalized Bank ಸಾಲ ಕೊಡುತ್ತದೆ. ಅವಶ್ಯಕತೆ ಬಿದ್ದರೆ ನೀವು ಸರ್ಕಾರದಿಂದ guarantee ಕೊಡಿ. ಆಗ 99% ಸಾಲ ಮರುಪಾವತಿ ಆಗುವಂತಹ chances ಇರುತ್ತದೆ. ಇದು ನೀವು ರೈತರಿಗೆ ಮಾಡಬಹುದಾದಂತಹ ನೇರ ಸಹಾಯ. ಅವನನ್ನು debt trap ನಿಂದ ಹೊರಗಡೆ ತರುವುದಕ್ಕೆ ಇವು ನೇರವಾಗಿ ಇರುವಂತಹ ಸಹಾಯ. ಮೊನ್ನೆ ನಾನು paper ನಲ್ಲಿ ಒಂದು article ನೋಡಿದೆ. ಇವತ್ತು ಕೇಂದ್ರ ಸರ್ಕಾರ RBI ಗೆ ಒಂದು request ಮಾಡಿದೆ, ಏನೆಂದರೆ, money lending ಬಗ್ಗೆ ಒಂದು Bill ತೆಗೆದುಕೊಂಡು ಬರುವುದಕ್ಕೆ Model Act ಅನ್ನು ಅವರು prepare ಮಾಡುತ್ತಿದ್ದಾರೆ. ಸಾಹುಕಾರರ ದವಡೆಯಿಂದ ತಪ್ಪಿಸುವುದಕ್ಕೆ ಮಾನ್ಯ ದೇವರಾಜು ಅರಸುರವರು ಇದ್ದಾಗ ಒಂದು ಬಿಲ್ ತೆಗೆದುಕೊಂಡು ಬಂದು ಬಡ ಜನರಿಗೆ ಸಹಾಯ ಮಾಡಿದರು, Debt Relief Act ಏನಿತ್ತು, ಅದೇ ರೀತಿ ಇವತ್ತು ಕೇಂದ್ರ ಸರ್ಕಾರ RBI ಗೆ ನೀವು ಒಂದು Model Act ಮಾಡಿ, ಅದರಿಂದ private lending ಗೆ regulation ಆಗಬೇಕು ಎಂದು ಹೇಳಿದ್ದಾರೆ. ಇವತ್ತು private lending ಗೆ regulation ಆಗಬೇಕಾಗಿರುವುದು ಬಹಳ ಅವಶ್ಯಕತೆ ಇದೆ. ಏಕೆಂದರೆ ಇವತ್ತು private lending ನಿಂದ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಆ Model Act ಅನ್ನು ತಂದರೆ ತಕ್ಷಣ ನಮ್ಮ ರಾಜ್ಯದಲ್ಲಿ ಅದನ್ನು ಅಳವಡಿಸುವುದಕ್ಕೆ ಮಾನ್ಯ ಯಡಿಯೂರಪ್ಪನವರು ಪ್ರಯತ್ನ ಮಾಡಬೇಕು. ರೈತರನ್ನು ಆತ್ಮಹತ್ಯೆ ದವಡೆಯಿಂದ ಉಳಿಸಬೇಕಾದರೆ ಇದು ಬಹಳ ಸೂಕ್ತವಾಗಿರತಕ್ಕಂಥ ಮಾರ್ಗ ಎಂದು ನೆನಪಿಡಬೇಕು. ಇವತ್ತು ಬೆಂಗಳೂರು ಸುತ್ತಮುತ್ತ ಭೂಮಿಗೆ ಬೆಲೆ ಬಂದಿದೆ. ಇವತ್ತು SEZ ಬಗ್ಗೆ ಎಲ್ಲರೂ ಹೇಳುತ್ತಾ, ಬೆಂಗಳೂರು ಸುತ್ತಮುತ್ತ ಅದನ್ನು avoid ಮಾಡಬೇಕೆಂದು ಹೇಳಿದರು. ಅದನ್ನು ಖಂಡಿತವಾಗಿ avoid ಮಾಡಬೇಕು. ಗ್ರಾಮಾಂತರ ಪ್ರದೇಶದಲ್ಲಿ ಎಲ್ಲಿ ಭೂಮಿ ಫಲವತ್ತಾಗಿ ಇಲ್ಲದಿರುವಂತಹ ಜಾಗದಲ್ಲಿ SEZ ಅನ್ನು ಮಾಡಿ. ಆದರೆ land acquisition ಮಾಡುವಾಗ ರೈತರಿಗೆ ಅನ್ಯಾಯ ಆಗುವುದನ್ನು ಖಂಡಿತವಾಗಿ ತಪ್ಪಿಸಬೇಕು. ಅವರ ಜೊತೆ ನೇರವಾಗಿ ಒಪ್ಪಂದ ಮಾಡಿಕೊಳ್ಳುವಂತಹ ರೀತಿಯಲ್ಲಿ ಆಗಬೇಕು. ಮಾನ್ಯ ಯಡಿಯೂರಪ್ಪನವರು ಈ ಸರ್ಕಾರ ಬಂದ ಮೇಲೆ ಡಾ॥ ನಂಜುಂಡಪ್ಪ ವರದಿಯನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳಿದ್ದಾರೆ. ಆದರೆ ಈ ಸರ್ಕಾರ ಬಂದ ಮೇಲೆ ಇಲ್ಲಿಯವರೆಗೆ ಆಗಿರುವಂಥಾ ತಾರತಮ್ಯಗಳನ್ನು ಯಾರು ಸರಿಪಡಿಸಬೇಕು? ಅದು ಹೈಸ್ಕೂಲ್‌ಗಳಲ್ಲಿ ಆಗಲಿ,

ಜೂನಿಯರ್ ಕಾಲೇಜುಗಳಲ್ಲಿ ಆಗಲಿ, ಹಾಸ್ಟೆಲ್‌ಗಳಲ್ಲಿ ಆಗಲಿ, ರಸ್ತೆಗಳಲ್ಲಿ ಆಗಲಿ, ವಿದ್ಯುತ್ತನ್ನು ಕೊಡುವ ವ್ಯವಸ್ಥೆಯಲ್ಲಿ ಆಗಲಿ, ಇವತ್ತು ಈ ಸಮ್ಮಿಶ್ರ ಸರ್ಕಾರ ಬಂದ ಬೇಲೆ, ಎಷ್ಟು ತಾರತಮ್ಯವಾಗಿದೆಯೆಂದರೆ, ಈ ತಾರತಮ್ಯವನ್ನು ಹೋಗಲಾಡಿಸುವುದಕ್ಕೆ ಇನ್ನೊಂದು ಸಮಿತಿಯನ್ನು ಮಾಡಬೇಕಾಗುತ್ತದೆ. ಇದನ್ನು ಮತ್ತೆ ಸ್ಟಡಿ ಮಾಡಿ, ಸರಿಮಾಡುವಂಥಾ ಕೆಲಸ ಮಾಡಬೇಕಾಗುತ್ತದೆ. ಇವತ್ತು ಮಾನ್ಯ ಮುಖ್ಯಮಂತ್ರಿಯವರು ಸರಿಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟರು. ಆದರೆ ಇವರು ಸರಿಪಡಿಸುತ್ತಾರೆಂಬ ವಿಶ್ವಾಸ ನಮಗೆ ಇಲ್ಲ. ಅದಕ್ಕಾಗಿ ಮಾನ್ಯ ಅಧ್ಯಕ್ಷರೆ, ನೀವು ನಮ್ಮ ರಕ್ಷಣೆಗೆ ಬರಬೇಕು. ನಾವು ನಿಮಗೆ ಹೇಳಬಹುದೇ ವಿನಃ, ಸರ್ಕಾರ ಒಬ್ಬ ಶಾಸಕರ ನ್ಯಾಯಬದ್ಧವಾಗಿರತಕ್ಕಂಥ ಬೇಡಿಕೆಗೆ ಸರ್ಕಾರ ಮನ್ನಣೆ ಕೊಡದಾಗ, ನಾವು ಯಾರ ಹತ್ತಿರ ಹೋಗಬೇಕು? ನಮಗೆ ರಕ್ಷಣೆಯನ್ನು ಯಾರು ಕೊಡಬೇಕು? ನಾವು ಹೇಳುವಂಥಾದ್ದು ತಪ್ಪಾಗಿದ್ದರೆ, ನೀವು ನಮಗೆ ಹೇಳಿ. ಇಲ್ಲ ನಮ್ಮ ಬೇಡಿಕೆ ನ್ಯಾಯಬದ್ಧವಾಗಿ ಇದ್ದಾಗ, ನಮ್ಮ ಕ್ಷೇತ್ರದಲ್ಲಿ ಆ ಕೆಲಸ ಅಗತ್ಯವಾಗಿರುವಾಗ, ಇವತ್ತು ನಮಗೆ ಆ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲವೆಂದರೆ, ನಾವು ನಿಮ್ಮ ಹತ್ತಿರವೇ ಕೇಳಬೇಕಾಗುತ್ತದೆ. ನೀವೇ ನಮ್ಮ ರಕ್ಷಣೆಗೆ ಬರಬೇಕು. ಇನ್ನು ಪಂಚಾಯತ್ ರಾಜ್ ಬಗ್ಗೆ ನಾನು ಈ ಸದನದಲ್ಲಿ ಬಹಳ ಹೋರಾಟ ಮಾಡುವುದಕ್ಕೆ ಪ್ರಯತ್ನವನ್ನು ಮಾಡಿದೆ. ಕೆಲವು ಶಾಸಕರು ನನ್ನ ಪರವಾಗಿ ಇದ್ದಾರೆ. ಸದನದಲ್ಲಿ ನನ್ನ ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ ನಾನು ಇಲ್ಲಿ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅಧಿಕಾರ ವಿಕೇಂದ್ರೀಕರಣ ಬಹಳ ಅವಶ್ಯಕವೆಂದು ನಾವು ಏಕೆ ವಾದ ಮಾಡುತ್ತದ್ದೇವೆಂಬ ತರ್ಕವನ್ನು ಇಲ್ಲಿ ನಾನು ಹೇಳಲಿಚ್ಛಿಸುತ್ತೇನೆ. ನಾವು ಯಾವುದಾದರೂ ಸ್ಟೇಟ್‌ಮೆಂಟ್ ಅನ್ನು ಮಾಡಿದರೆ, ಯಾವುದಾದರೂ ನಿಲುವನ್ನು ತೆಗೆದುಕೊಂಡರೆ, ಅದಕ್ಕೆ ಆಧಾರ ಕೂಡ ಇರಬೇಕು. ಈ ಸಮಾಜದಲ್ಲಿ ಇವತ್ತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಕೈಗೆ ಅಧಿಕಾರ ಸಿಗಬೇಕೆಂಬುದೇ ನಮ್ಮ ಉದ್ದೇಶವಾಗಿದೆ. ಯಾವುದೇ ಆಡಳಿತದಲ್ಲಿ ಪಾರದರ್ಶಕತೆ ಬರಬೇಕು, ಭ್ರಷ್ಟಾಚಾರ ನಿಯಂತ್ರಣ ಆಗಬೇಕು. ಅದು ಅಲ್ಲದೇ ಜನರು ಕೂಡ ನಾವು ಈ ವ್ಯವಸ್ಥೆಯ ಪಾಲಾಗಿದ್ದೇವೆ. ಈ ಸರ್ಕಾರ ನಮ್ಮ ಸರ್ಕಾರ, ಈ ವ್ಯವಸ್ಥೆ ನಮ್ಮ ವ್ಯವಸ್ಥೆ, ಇದರಲ್ಲಿ ನಮಗೆ ಪಾಲು ಇದೆ, ನಮಗೆ ಹಕ್ಕು ಇದೆ, ಎನ್ನುವಂಥಾ ವಿಶ್ವಾಸವನ್ನು ಮೂಡಿಸುವಂಥಾದ್ದು. ಅದು ಕೇವಲ ಅಧಿಕಾರ ವಿಕೇಂದ್ರಿಕರಣದಿಂದ ಮಾತ್ರವೆಂದು ನಾವು ಯಾರು ಮರೆಯಬಾರದು ಇವತ್ತು ಒಂದು

ವೇಳೆ, ನಾವು ಅಧಿಕಾರವನ್ನು ಕೇಂದ್ರಿಕೃತ ಮಾಡಿ, ನಾವು ಕೆಳ ಹಂತದಲ್ಲಿರುವಂಥಾ ಚುನಾಯಿತ ಪ್ರತಿನಿಧಿಗಳಾಗಲಿ, ಅಥವಾ ಜನರ ಮನಸ್ಸಿನಲ್ಲಿ ಆಗಲಿ, ಇವತ್ತು ಕೇಂದ್ರಿಕೃತವಾಗಿರತಕ್ಕಂಥಾ ಆಡಳಿತವನ್ನು ನಡೆಸಿದರೆ, ಈ ವ್ಯವಸ್ಥೆಯ ಮೇಲೆ ಖಂಡಿತವಾಗಿಯೂ ಅವರಿಗೆ ವಿಶ್ವಾಸ ಬರುವುದಿಲ್ಲ. ಇವತ್ತು ನಾವು ನಕ್ಸಲಿಸಂ ಅನ್ನು ನೋಡುತ್ತಿದ್ದೇವೆ. ಇದು ಏಕೆ ಇದೆ? ತಾವು ನೋಡಬೇಕು, ಯಾವುದೇ ಒಂದು ವ್ಯವಸ್ಥೆಯಲ್ಲಿ, ಯಾರಿಗಾದರೂ ಅನ್ಯಾಯವಾದರೆ, ನಾನು ಇಲ್ಲಿ notification ಮಾಡುತ್ತಿಲ್ಲ. ಆದರೆ ಯಾವುದೇ ಒಂದು ವ್ಯವಸ್ಥೆಯಲ್ಲಿ ಯಾವುದೇ ಒಂದು ವರ್ಗಕ್ಕೆ, ಯಾವುದೇ ಜನರಿಗೆ ಅನ್ಯಾಯವಾದಾಗ, ಅವನು ಆ ವ್ಯವಸ್ಥೆಯ ಬಗ್ಗೆ ಸಿಡಿದೇಳುವಂಥಾ ಅನಿವಾರ್ಯ ಪರಿಸ್ಥಿತಿಯನ್ನು ನಾವು ಮಾಡಿಕೊಡಬಾರದು. ಇದರ ಬಗ್ಗೆ ಏನು ಮಾಡಬೇಕೆಂದು ಸರ್ಕಾರದಲ್ಲಿರುವವರು ಚಿಂತನೆ ಮಾಡಬೇಕು. ಇವತ್ತು ನಾವು ನೋಡುತ್ತಿದ್ದೇವೆ. ನಾನು ಇದನ್ನು ಬಹಳ ವಿಷಾದದಿಂದ ಹೇಳುತ್ತಿದ್ದೇನೆ. ಮಾನ್ಯ ಹೆಚ್.ಡಿ. ರೇವಣ್ಣನವರು ಇಲ್ಲಿ ಇಲ್ಲ. ಇವತ್ತು ಒಬ್ಬ ಮಾಮೂಲಿ line man appointment ಆಗುತ್ತಿದೆ. ಅದು ಪಾರದರ್ಶಕತೆಯಿಂದ ಆಗುತ್ತಾ ಇಲ್ಲ. ಇವತ್ತು interview ಆದ ತಕ್ಷಣ notice boardನಲ್ಲಿ list ಅನ್ನು ಹಾಕಬೇಕು. ಇವತ್ತು interview ಆದರೆ ಅಂದೇ ಸಂಜೆ notice boardನಲ್ಲಿ list ಹಾಕಬೇಕು. ನಾನೇ ಸ್ವತಃ concerned Chief Engineer ಅನ್ನು ಏಕೆ notice board ನಲ್ಲಿ list ಅನ್ನು ಹಾಕಿಲ್ಲವೆಂದು ಕೇಳಿದೆ. ಅದಕ್ಕೆ ಏನು ಉತ್ತರವನ್ನು ಕೊಡುತ್ತಾನೆಂದರೆ, ಕಾವೇರಿ ಭವನದಿಂದ direction ಇದೆ, ಲಿಸ್ಟ್ ಅನ್ನು ಹಾಕುವುದಿಲ್ಲವೆಂದು ಹೇಳುತ್ತಾರೆ. ಮಂಗಳೂರಿನಲ್ಲೂ interview ಆಯಿತು, ಅಲ್ಲಿ ಅವತ್ತೆ notice boardನಲ್ಲಿ ಲಿಸ್ಟ್ ಹಾಕಿದರು. ಆದರೆ ಗುಲ್ಬರ್ಗಾದಲ್ಲಿ ಆಗಿರುವಂಥಾ interviewಗೆ list ಅನ್ನು notice boardಗೆ ಹಾಕುವುದಿಲ್ಲ. ಅದು notice boardಗೆ ಬರಬೇಕಾದರೆ ಒಂದು ವಾರವಾಗುತ್ತದೆ. ಅದು interview ತೆಗೆದುಕೊಂಡಿರುವವರಿಗೆ pencil ನಿಂದ marks ಹಾಕುತ್ತಾರೆ, ಏಕೆಂದರೆ ITI interview ನಲ್ಲಿ ಇರುವಂಥವರೆಲ್ಲಾ ಬಡ ಜನರ ಮಕ್ಕಳು. ಅಲ್ಲಿ ಪಾರದರ್ಶಕತೆ ಇರಬೇಕು, ಪ್ರಾಮಾಣಿಕತೆ ಇರಬೇಕು, ನ್ಯಾಯಬದ್ಧವಾಗಿರುವಂತೆ ನ್ಯಾಯ ಸಿಗಬೇಕು. ಅವರಿಗೆ ನೀವು pencil ನಲ್ಲಿ mark ಹಾಕಿ, notice board ನಲ್ಲಿ list ಹಾಕದೇ, ಒಂದು ವಾರದವರೆಗೂ ನೀವು ಬೆಂಗಳೂರಿನಲ್ಲಿ ತಂದು ಇಟ್ಟುಕೊಂಡು, ಯಾರೋ ಮಧ್ಯವರ್ತಿಗಳು ಸಾಕಷ್ಟು ಭ್ರಷ್ಟಚಾರ ಮಾಡಿ ನೀವು ಲಿಸ್ಟ್ ಹಾಕುತ್ತೇವೆಂದರೆ, ಈ

ಸರ್ಕಾರಕ್ಕೆ ಹೇಳುವವರು, ಕೇಳುವವರು ಯಾರು ಇಲ್ಲವೇ?

ಇವತ್ತು Junior Engineer, Assistant Engineer, ಇವರು KPSC ಮುಖಾಂತರ ಸೆಲೆಕ್ಷನ್ ಆಗಬೇಕಾದರೆ, appointment ಆಗಬೇಕಾದರೆ, ಅದೆಲ್ಲವನ್ನು ಬೈಪಾಸ್ ಮಾಡಿ ಇವತ್ತು ಇಲಾಖೆಯವರು ಮಾಡುತ್ತಿದ್ದಾರೆ. ಸರ್ಕಾರ ಮಲಗಿದೆಯಾ? ಇವತ್ತು ಭಾರತೀಯ ಜನತಾ ಪಾರ್ಟಿಯ ಸಚಿವರು ಇಲ್ಲಿ ಇದ್ದಾರೆ. ಇವರು ಇಲ್ಲಿ ಸುಮ್ಮನೆ ಏಕೆ ಇದ್ದಾರೆ? ಇವತ್ತು ರಾಜ್ಯದಲ್ಲಿ ಏನು ಭ್ರಷ್ಟಚಾರ ನಡೆಯುತ್ತಿದೆಯೆಂಬುದನ್ನು ನೀವು ನೋಡುತ್ತಿಲ್ಲವೇ? ನಿಮಗೆ ಅಧಿಕಾರವೇ ಮುಖ್ಯವೇ? ಎಲ್ಲಿ ಅನ್ಯಾಯವಾಗುತ್ತದೆ. ಅದನ್ನು ನೀವು ಎತ್ತಿ ಹೇಳುವಂಥಾ ಕರ್ತವ್ಯ ನಿಮ್ಮದಲ್ಲವೇ? ಇವತ್ತು ನಾವು ವಿರೋಧಪಕ್ಷದವರು ಹೇಳಿದರೆ, ನಾವು ಏನೋ ದ್ವೇಷ ಇಟ್ಟುಕೊಂಡು ಹೇಳುತ್ತಿದ್ದೇವೆಂದು ಅಲ್ಲ. ಈ ರಾಜ್ಯದಲ್ಲಿ ಯಾವುದೇ ಒಂದು ನೇಮಕಾತಿಯಾಗಲಿ, ಅದು ಪಾರದರ್ಶಕವಾಗಿ ಆಗಬೇಕು. ನಮ್ಮ KPSC ಯಲ್ಲೂ ಕೂಡ ಬಹಳಷ್ಟು ಬದಲಾವಣೆಗಳು, ಸುಧಾರಣೆಗಳು ಆಗಬೇಕು. ಇವತ್ತು ತಾವು ಚಿಂತನೆ ಮಾಡಬೇಕು. ನಮ್ಮ ರಾಜಧಾನಿಯಲ್ಲಿ UPSCಯು function ಮಾಡುತ್ತದೆ. ಇದರಲ್ಲಿ ಎಷ್ಟು ಭ್ರಷ್ಟಾಚಾರವಿಲ್ಲ. UPSC ಯಾವ ರೀತಿ function ಮಾಡುತ್ತಧೆ, ಅದೇ ರೀತಿಯ ನಿಯಮಗಳನ್ನು KPSCಯಲ್ಲಿ ತರುವುದಕ್ಕೆ ಏಕೆ ಆಗುವುದಿಲ್ಲ? ಯಾರಾದರೂ ಗ್ರಾಮೀಣ ಪ್ರದೇಶದಲ್ಲಿ ಓದುವಂಥಾ ಒಬ್ಬ ಯುವಕ ಕಷ್ಟಪಟ್ಟು ಓದಿ ಇವತ್ತು ಅವನು ಒಳ್ಳೆಯ ರೀತಿಯಲ್ಲಿ ಅಂಕಗಳನ್ನು ಪಡೆದುಕೊಂಡು ಇಲ್ಲಿ KPSCಯಲ್ಲಿ ಅಥವಾ ದಳ್ಳಾಳಿಗಳಿಗೆ ದುಡ್ಡನ್ನು ಕೊಡದೇ ಇದ್ದರೆ, ಅದರಿಂದ ಅವನಿಗೆ ನೌಕರಿ ಸಿಗದೇ ಹೋದರೆ, ಅವನು ಏನು ಮಾಡಬೇಕು? ಅವನು ನಕ್ಸಲೈಟ್ ಆಗುತ್ತಾನೆ. ಇವತ್ತು ಬಡವರಿಗೆ ರಕ್ಷಣೆ ಎಲ್ಲಿ ಇದೆ? ಬಡವರು ತಾನು ಓದಿ, ನನ್ನ ಸ್ವಂತ ಕಾಲಿನ ಮೇಲೆ ನಿಲ್ಲುವುದಕ್ಕೆ ಕಷ್ಟಪಟ್ಟು ನನಗೆ ಇಲ್ಲಿ ನ್ಯಾಯ ಸಿಗುತ್ತದೆಯೆಂಬ ವಿಶ್ವಾಸವನ್ನು ಯಾವುದೇ ಯುವಕನು ಕಳೆದುಕೊಂಡರೆ, ಅವನು ಪ್ರತಿಕೂಲವಾಗಿ ಪರವರ್ತನೆಯಾಗುತ್ತಾನೆ, ಈ ಸಮಾಜದ ವಿರುದ್ಧ ಅವನು ಸಿಡಿದೇಳಬೇಕಾಗುತ್ತದೆ. ಆದುದರಿಂದ ಇದರಲ್ಲಿ ನಮ್ಮ ಹೊಣೆಗಾರಿಕೆ ಇದೆ. ಇಲ್ಲಿ ಅಧಿಕಾರದಲ್ಲಿರುವವರು ಇದರ ಬಗ್ಗೆ ವಿಚಾರ ಮಾಡಬೇಕು. ನಮ್ಮ ಪ್ರತಿಯೊಂದು ಕೆಲಸದಲ್ಲೂ ಪಾರದರ್ಶಕತೆ ಇರಬೇಕು, ಪ್ರಾಮಾಣಿಕತೆ ಇರಬೇಕು. Administration ಎಂದರೆ ಕೇವಲ ಸಂಗ್ರಹಿಸಿರುವಂಥಾ ಹಣವನ್ನು ನಮ್ಮ ನಮ್ಮ ಕ್ಷೇತ್ರಗಳಿಗೆ ಕೊಟ್ಟು ಕೊಂಡು ರಾಜಕೀಯವಾಗಿ ಕುತಂತ್ರ ಮಾಡಿದರೆ ಅದು

administration ಆಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ಈಗ ನಮ್ಮ ರಾಜ್ಯಕ್ಕೆ ಏನು ಅವಶ್ಯಕತೆ ಇದೆ? ಸದನದಲ್ಲಿ ಮಾನ್ಯ ಹೆಚ್.ಡಿ.ರೇವಣ್ಣನವರು ಇಲ್ಲ. ನಾನು ಅವರಿಗೆ ಒಂದು ಮಾತನ್ನು ಕೇಳಲಿಚ್ಛಿಸಿದ್ದೆ. ಅದು ಏನೆಂದರೆ, MDR, ಮತ್ತೆ State Highway, ಮತ್ತೆ village roads ಬಗ್ಗೆ ನಾನು ಆಮೇಲೆ ಹೇಳುತ್ತೇನೆ. ಈಗ MDR ನಿರ್ವಹಣೆಗೆ ಮತ್ತು State Highwayಗೆ ನೀವು 'ಹಣವಿಲ್ಲವೆಂದು ಹೇಳುವ ಪರಿಸ್ಥಿತಿಯೇ ಬರಬಾರದು. ನೀವು ಪಕ್ಕದ ರಾಜ್ಯ ಮಹಾರಾಷ್ಟ್ರಕ್ಕೆ ಹೋಗಿ, ಮತ್ತೆ ಆಂಧ್ರ ಪ್ರದೇಶಕ್ಕೆ ಹೋಗಿ, ಇವತ್ತು ನಿಮ್ಮ ಹತ್ತಿರ ಹಣವಿಲ್ಲದಿದ್ದರೆ ರಸ್ತೆಗಳನ್ನು BOOT ಮುಖಾಂತರ ಕೊಡಿ, ಆ ರಸ್ತೆಗಳಿಂದ ಹಣ ಬರುತ್ತದೆ. ಆ ರಸ್ತೆಗಳಿಂದ ನೀವು ಹಣವನ್ನು ಗಳಿಸಬಹುದು. ನಿಮ್ಮ ವಿಚಾರಗಳು ನಿಮ್ಮ ಹತ್ತಿರವಿರುವಂಥಾ ಹಣಕ್ಕೆ ಸೀಮಿತವಾಗಿ ಇರಬಾರದು. ಒಂದು ರಾಜ್ಯದ ಅಭಿವೃದ್ಧಿಯಾಗಬೇಕಾದರೆ, ನೀವು ಅದನ್ನು ಮೀರಿ ವಿಚಾರ ಮಾಡಬೇಕು. ನೀವು ರಾಜ್ಯದಲ್ಲಿರುವಂಥಾ State Highway roadಗಳನ್ನು BOOT ಗೆ ಕೊಡಿ. ಜನರು invest ಮಾಡುವುದಕ್ಕೆ ರೆಡಿಯಾಗಿದ್ದಾರೆ. ನೀವು ಅಂಥಾ ವಾತಾವರಣವನ್ನು ಸೃಷ್ಟಿ ಮಾಡಿ, ಇವತ್ತು ನೀವು ಎಲ್ಲಾ National Highwayಯನ್ನು BOOTನಲ್ಲಿ ಕೊಡಿ. ಇವತ್ತು ವಾಹನಗಳಲ್ಲಿ ಓಡಾಡುವ ಜನರು ಹಣವನ್ನು ಕೊಡುವುದಕ್ಕೆ ಸಿದ್ಧರಾಗಿದ್ದಾರೆ. ಇವತ್ತು ಹಣ ಎಲ್ಲಿ ಬೇಕಾಗಿದೆಯೆಂದರೆ State Highwayಗಳು BOOTನಲ್ಲಿ ಹೋಗುತ್ತವೆ. ಆ ರಸ್ತೆಗಳು ನಿಮಗೆ ಹಣವನ್ನು ಗಳಿಸಿಕೊಡುವಂಥಾ ಪರಿಸ್ಥಿತಿಯಲ್ಲಿ ಇದೆ. ಆದರೆ ಗ್ರಾಮೀಣ ಪ್ರದೇಶದಲ್ಲಿರುವಂಥಾ ರಸ್ತೆಗಳಿಗೆ ನೀವು ಹಣವನ್ನು ಕೊಡಬೇಕಾಗುತ್ತದೆ. ಈ ರಸ್ತೆಗಳು BOOTನಲ್ಲಿ viable ಆಗುವುದಿಲ್ಲ. ನಾನು ಮಾನ್ಯ ಸಿ.ಎಂ. ಉದಾಸಿಯವರನ್ನು ನಿಮ್ಮ ಕೊಡುಗೆ ಈ ಬಜೆಟ್‌ನಲ್ಲಿ ಏನು ಇದೆಯೆಂದು ಕೇಳಿದೆ. ತಮ್ಮ ಇಲಾಖೆಯಲ್ಲಿ ತಾವು ಬಹಳ senior ಮಂತ್ರಿಗಳಿದ್ದೀರಿ. ನೀವು ಒತ್ತಾಯ ಪೂರ್ವಕವಾಗಿ ಹಣವನ್ನು ಕೇಳಬೇಕು. ಇವತ್ತು ಗ್ರಾಮೀಣ ಪ್ರದೇಶಗಳಲ್ಲಿ ನಾವು ಮೂಲಭೂತ ಸೌಕರ್ಯವನ್ನು ಕೊಡದೇ ಹೋದರೆ ಏನೆಂಬ ಬಗ್ಗೆ ಮಾನ್ಯ ಕೃಷ್ಣ ಬೈರೇಗೌಡರು ಬಹಳ ಚೆನ್ನಾಗಿ ಹೇಳಿದರು. ಇವತ್ತು ಅರ್ಬನ್ ಇಂಡಿಯಾ ಆಗಿದೆ, ರೂರಲ್ ಇವತ್ತು ಭಾರತವಾಗಿದೆ, ಅಂದರೆ ಎರಡು ಭಾರತವನ್ನು ನಾವೇ ನಿರ್ಮಾಣ ಮಾಡುತ್ತಿದ್ದೇವೆ. Government priority should change. ಇವತ್ತು ಬೆಂಗಳೂರು ನಗರದಲ್ಲಿ ಮೆಟ್ರೊ ಮಾಡಿ, ಅದು ಇಲ್ಲಿ ಅವಶ್ಯಕತೆ ಇದೆ, ಅದನ್ನು ನಾನು ಒಪ್ಪುತ್ತೇನೆ. ಇಲ್ಲಿಯೂ ಕೂಡ ನೀವು ರಸ್ತೆಗಳನ್ನು improve ಮಾಡಿ, ನೀವು ಇದಕ್ಕೆ ಹಣವನ್ನು

ಕೊಡಬೇಕಾಗಿಲ್ಲ. ಇವತ್ತು ಬೆಂಗಳೂರಿನಲ್ಲಿ invest ಮಾಡುವುದಕ್ಕೆ, ಬಹಳಷ್ಟು ಜನರು ಲೈನ್‌ನಲ್ಲಿ ನಿಂತಿದ್ದಾರೆ. ನೀವು ಇದನ್ನು privatize ಮಾಡಿ. ಜನರು ಹಣವನ್ನು ಕೊಡುವುದಕ್ಕೆ ರೆಡಿಯಾಗಿದ್ದಾರೆ. ಆದರೆ ಗ್ರಾಮೀಣ ಪ್ರದೇಶಗಳಿಗೆ ಇದೇ ಹಣವನ್ನು ಕೊಡುವಂಥಾ ಅವಶ್ಯಕತೆ ಇದೆ. ಅದನ್ನು ನೀವು ಮೊದಲು ಮಾಡಿ, ಏಕೆಂದರೆ ಇವತ್ತು ನೀವು ಇಲ್ಲಿ ಅಧಿಕಾರದಲ್ಲಿ ಇದ್ದೀರಿ. ನಿಮಗೆ ಮಾಡುವುದಕ್ಕೆ ಅವಕಾಶವಿದೆ. ನೀವು ಮಾಡಲಿಲ್ಲವೆಂದರೆ, ಜನರು ನಿಮ್ಮನ್ನು ಖಂಡಿತವಾಗಿಯೂ ಕ್ಷಮಿಸುವುದಿಲ್ಲ. ಇವತ್ತು ಬೊಕ್ಕಸ ತುಂಬಿ ತುಳುಕುತ್ತಾ ಇದೆ. ಇದರ ಶ್ರೇಯಸ್ಸು ಮಾನ್ಯ ಎಸ್.ಎಂ. ಕೃಷ್ಣರವರಿಗೆ ಮತ್ತು ಮಾನ್ಯ ಸಿದ್ದರಾಮಯ್ಯನವರಿಗೆ ಹೋಗುತ್ತದೆ. ಅವರು ವ್ಯಾಟ್ ಅನ್ನು ಜಾರಿಗೆ ತಂದರು. ಒಂದು ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಬೇಕಾಗಿರುವಂಥಾದ್ದು ಬಹಳ ಮುಖ್ಯ. ಇವತ್ತು ಮಾಜಿ.ವಿ. ಶ್ರೀ ರಾಮರೆಡ್ಡಿಯವರು ಮತ್ತು ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಹೇಳಿದರು. ಅದು ಏನೆಂದರೆ, ಇವತ್ತು Development and growth are different aspects ಎಂದು ಹೇಳಿದರು. ಇದು ನಿಜ, ನಾನು ಒಪ್ಪುತ್ತೇನೆ. ಯಾವುದೇ ರಾಜ್ಯದ ಆರ್ಥಿಕ ಬೆಳವಣಿಗೆ, ಇವತ್ತು ನಮ್ಮ per capita will not reflect. ಇದು ನಮ್ಮ ಗ್ರಾಮೀಣ ಪ್ರದೇಶದ ಒಬ್ಬ ಬಡ ರೈತನ ಪರಿಸ್ಥಿತಿಗೆ ಅದು, it will not reflect his condition. ಆದರೆ ಅಭಿವೃದ್ಧಿಯು ಕೂಡ ಬಹಳ ಅವಶ್ಯಕತೆ ಇದೆ. ಇದು ಬೆಳವಣಿಗೆ ಆದರೆ ಮಾತ್ರ ನಾವು ಸಾಮಾಜಿಕ ಕಾರ್ಯಕ್ರಮಗಳಿಗೆ ಹಣವನ್ನು ತರುವುದಕ್ಕೆ ಸಾಧ್ಯವಿದೆ. ಅದಕ್ಕಾಗಿ ನಾನು ಇಲ್ಲಿರುವಂಥಾ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಹೇಳುವುದೇನೆಂದರೆ, ತಾವು ಪಂಚಾಯತ್ ರಾಜ್ ಅಮೆಂಡ್‌ಮೆಂಟ್ ಬಿಲ್ ಅನ್ನು ಏನು ತಂದಿದ್ದೀರಿ. ಅದನ್ನು ಖಂಡಿತವಾಗಿ ಕೈ ಬಿಡಬೇಕು. ಆ ಅಮೆಂಡ್‌ಮೆಂಟ್ ಅನ್ನು ತಾವು ತರಬಾರದು. ಇದು ಅಧಿಕಾರ ವಿಕೇಂದ್ರಿಕರಣದ ವಿರುದ್ಧವಾಗಿದೆ. ಇದು ಜನರ ವಿರುದ್ಧವಾಗಿದೆ. ಆದುದರಿಂದ ತಾವು ದಯಮಾಡಿ ಅದನ್ನು ಕೈ ಬಿಡುವಂಥಾ ಕೆಲಸವನ್ನು ಮಾಡಬೇಕೆಂದು ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಇನ್ನು ಇಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾದ ಶ್ರೀ ಹೆಚ್.ಕೆ. ಕುಮಾರಸ್ವಾಮಿಯವರು ಇದ್ದಾರೆ. ತಾವು ಸ್ವಲ್ಪ ಈ ಕಡೆಗೆ ಗಮನ ಕೊಡಬೇಕು. ತಾವು ಕಳೆದ ಬಾರಿ ಅಂಗನವಾಡಿ ಕಾರ್ಯಕರ್ತರ ಸೆಲೆಕ್ಷನ್ ಅನ್ನು ತಾವು ನಮ್ಮ ಕೊರಳಿಗೆ ಹಾಕಿ ಬಿಟ್ಟಿದ್ದಿರಿ.

(ಗೊಂದಲ)

ಶ್ರೀ ಗೋಪಾಲಕೃಷ್ಣ ಬೇಳೂರು:- ಅವರಿಗೆ ಬೇಡ ಎಂದರೆ ಅವರು ಬಿಟ್ಟುಕೊಟ್ಟು ಬಿಡಲಿ.

(ಗೊಂದಲ)

ಅಧ್ಯಕ್ಷರು:- ಅವರು ಮಾತನಾಡಲಿ ಬಿಡಿ.

(ಗೊಂದಲ)

ಶ್ರೀ ಗೋಪಾಲಕೃಷ್ಣ ಬೇಳೂರು:- ಅವರಿಗೆ ಬೇಡವೆಂದರೆ ಅವರ ಪಕ್ಷದ ಮುಖಂಡರಿಗೆ ಕೊಡಬಹುದು, ಬೇರೆಯವರಿಗೆ ಕೊಡಬಹುದು. ಅವರು ಯಾರಿಗೆ ಬೇಕಾದರೂ ಕೊಡಬಹುದು. ಅದು ಅವರ ಇಷ್ಟ.

(ಗೊಂದಲ)

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:- ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದು ನಾವು ಗಮನಿಸಬೇಕು. ಅಂಗನವಾಡಿ ಕಾರ್ಯಕರ್ತರ ನೇಮಕಾತಿಯನ್ನು ನಮ್ಮ ಕೈಯ್ಯಲ್ಲಿ ಕೊಟ್ಟಿರುವುದು ಬಹಳ ತಪ್ಪು. ಅದನ್ನು ನಾವು ಮಾಡಿದ್ದೇವೆ. ಏಕೆಂದರೆ, ಅನಿವಾರ್ಯವಾಗಿ ನಾವು ಅದನ್ನು ಮಾಡಬೇಕಾದಂಥ ಪರಿಸ್ಥಿತಿ ಬಂತು. ಅದನ್ನು ನಾವು ಮಾಡಬಾರದಾಗಿತ್ತು. ಈ ಮಾತನ್ನು ನಾನು ಹೇಳಲು ಒಂದು ಉದ್ದೇಶವಿದೆ. ಉದ್ದೇಶವಿಲ್ಲದೇ ನಾನು ಯಾವ ಮಾತನ್ನೂ ಆಡುವುದಿಲ್ಲ, ವಿನಾಕಾರಣ ಯಾವ ಸಲಹೆಯನ್ನೂ ಕೂಡ ಕೊಡುವುದಿಲ್ಲ. 2006-07 ಮತ್ತು 2007-08ಕ್ಕೆ ಮತ್ತು ಅಂಗನವಾಡಿಗಳು sanction ಆಗುತ್ತಿವೆ. ದಯವಿಟ್ಟು ನಮ್ಮನ್ನು ಈ ಪಾಪದಲ್ಲಿ ಮತ್ತೊಮ್ಮೆ ಹಾಕಲು ಹೋಗಬೇಡಿ. ಏಕೆಂದರೆ, ನಾನು ನೋಡಿದ ಪ್ರಕಾರ, ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಹೆಣ್ಣುಮಕ್ಕಳು ಎಷ್ಟೊಂದು ಆಸೆ ಇಟ್ಟುಕೊಂಡು ನಮ್ಮ ಹತ್ತಿರ interviewಗೆ ಬರುತ್ತಾರೆ. 20 ಜನ interviewಗೆ ಬರುತ್ತಾರೆ. ಎಲ್ಲರೂ ಎಷ್ಟು ಆಸೆಯಿಂದ ಬರುತ್ತಾರೆ ಎಂದರೆ ಯಾರನ್ನು ಆಯ್ಕೆ ಮಾಡಬೇಕು ಎಂದು ನಮಗೆ ದಿಗ್ಭ್ರಮೆಯಾಗುತ್ತದೆ. ಇಂಥ ಕಠಿಣ ಪರಿಸ್ಥಿತಿಯನ್ನು ನಮ್ಮ ಶಾಸಕರಿಗೆ ತರಬೇಡಿ. ಅದನ್ನು ನೀವು ಮೆರಿಟ್ ಆಧಾರದಲ್ಲಿ ಮಾಡಿ. ಹಿಂದೆ ಈ ಬಗ್ಗೆ ನಾನು ಒಂದು ಸಲಹೆ ಕೊಟ್ಟಿದ್ದೆ. ಮಾನ್ಯ ಸಚಿವರು ಒಪ್ಪಿಕೊಂಡಿದ್ದರು, ಏಕೆ ಅದನ್ನು implement ಮಾಡಲಿಲ್ಲವೋ ನನಗೆ ಗೊತ್ತಿಲ್ಲ. ನಾನು ಅವರಿಗೆ ಹೇಳಿದ್ದೆ.

Roster and Merit ಇರುವ simple method ಅನ್ನು follow ಮಾಡಿ C.E.O.ಗಳಿಗೆ ವಹಿಸಿಕೊಡಿ. ಆಗ ಅದು ಪಾರದರ್ಶಕತೆಯಿಂದ ಆಗುತ್ತದೆ, ಭ್ರಷ್ಟಾಚಾರ ಕಡಿಮೆಯಾಗುತ್ತದೆ, ಯಾರು ಅರ್ಹರೋ ಅವರಿಗೆ ಸಿಗುತ್ತದೆ. ಅದನ್ನು ಬಿಟ್ಟು ಏಕೆ ನೀವು ಶಾಸಕರನ್ನು ಇದರಲ್ಲಿ ಸಿಕ್ಕಿಹಾಕಿಸುತ್ತಿದ್ದೀರಿ? ಏಕೆ ನಮ್ಮ ಕೈಯ್ಯಿಂದ ನೀವು ತಪ್ಪು ಮಾಡಿಸುತ್ತಿದ್ದೀರಿ? ಮುಂದೆ ಈ ಎಲ್ಲ ವ್ಯವಸ್ಥೆಯನ್ನು ಸುಧಾರಣೆ ಮಾಡಬೇಕು ಎನ್ನುವ ಕನಸನ್ನು ಇಟ್ಟುಕೊಂಡು ಬಂದಿರತಕ್ಕಂಥವರು ನಾವು. ಈ ವ್ಯವಸ್ಥೆಯಲ್ಲಿ ಪಾರದರ್ಶಕತೆ ಬರಬೇಕು, ಪ್ರಾಮಾಣಿಕತೆ ಬರಬೇಕು, ಈ ವ್ಯವಸ್ಥೆಯಲ್ಲಿ ಜನರಿಗೆ ವಿಶ್ವಾಸ ಬರಬೇಕು. ಏನೆಂದರೆ, ಇಲ್ಲಿ ಎಲ್ಲ ಸರಿಯಾಗಿ ಆಗುತ್ತದೆ, ನಾವು ಕಷ್ಟಪಟ್ಟರೆ ನಮಗೂ ಅವಕಾಶ ಸಿಗುತ್ತದೆ ಎನ್ನತಕ್ಕಂಥ ವಿಶ್ವಾಸವನ್ನು ಮೂಡಿಸಬೇಕೆಂದು ನಾನು ಈ ಶಾಸನಸಭೆಗೆ ಬಂದಿದ್ದೇವೆಯೇ ಹೊರತು ಈ ಶಾಸನಸಭೆಗೆ ಬರತಕ್ಕಂಥ ಯಾವ ಉದ್ದೇಶವೂ ಇರಲಿಲ್ಲ. ಆದರೆ ನೀವು ನಮ್ಮ ಕೈಯ್ಯಿಂದಲೇ ತಪ್ಪು ಮಾಡಿಸಿ, ನಮ್ಮ ಮನೋಸ್ಥೈರ್ಯವನ್ನು ಕುಗ್ಗಿಸುತ್ತಿದ್ದೀರಿ ಎನ್ನುವ ನೇರ ಆರೋಪವನ್ನು ನಾನು ಮಾನ್ಯ ಸಚಿವರ ಮೇಲೆ ಮಾಡುತ್ತೇನೆ. ನಾವು ಪ್ರಾಮಾಣಿಕರಾಗಿದ್ದರೆ ತಾನೇ ಬೇರೆಯವರಿಗೆ ಹೇಳಬಹುದು, ನಾವೂ ಚೆನ್ನಾಗಿ ಕೆಲಸ ಮಾಡಿದರೆ ತಾನೇ ನೀವೂ ಹೀಗೆ ಮಾಡಿ ಎಂದು ಹೇಳಬಹುದು. ನಾವೇ ತಪ್ಪು ಮಾಡಿದರೆ ಬೇರೆಯವರಿಗೆ ಏನು ಹೇಳುವುದಕ್ಕಾಗುತ್ತದೆ. ಅದಕ್ಕಾಗಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ ಅಧ್ಯಕ್ಷರೇ, ತಾವು, ನಮ್ಮ ರಕ್ಷಣೆಗೆ ಬರಬೇಕು, ತಾವು ಸರ್ಕಾರಕ್ಕೆ direction ಕೊಡಬೇಕು. ಏನೆಂದರೆ, ಈ ರೀತಿ ಶಾಸಕರನ್ನು ಕಮಿಟಿಯ ಅಧ್ಯಕ್ಷರನ್ನಾಗಿ ಮಾಡಬೇಡಿ ಎಂದು ಹೇಳಬೇಕು. ಏಕೆಂದರೆ ತಮಗೆ ಗೊತ್ತಿದೆ, ಶಾಸಕರುಗಳಿಗೆ ರಾಜಕೀಯ ಒತ್ತಡಗಳಿರುತ್ತವೆ. ನಾವು ಯಾರೂ ಕೂಡ ಪಾರದರ್ಶಕವಾಗಿ, ಪ್ರಾಮಾಣಿಕವಾಗಿ ಮಾಡಲು ಆಗುವುದಿಲ್ಲ. ನಮ್ಮನಮ್ಮ ರಾಜಕೀಯ ಒತ್ತಡಗಳಿಗೆ ಮಣಿದು ನಾವು ಮಾಡಲೇಬೇಕಾಗುತ್ತದೆ. ಅದಕ್ಕಾಗಿ, ಅಂಥ ಇಕ್ಕಟ್ಟಿನ ಪರಿಸ್ಥಿತಿಗೆ ನಮ್ಮನ್ನು ಸಿಕ್ಕಿಹಾಕಿಸಬೇಡಿ. ಮುಂದಿನ ಸಾರಿ ತಾವು ದಯಮಾಡಿ ಬೇರೆ ಪದ್ಧತಿಯನ್ನು ತನ್ನಿ, ಪಾರದರ್ಶಕತೆಯಿಂದ, ಪ್ರಾಮಾಣಿಕತೆಯಿಂದ ಅರ್ಹರನ್ನು ನೇಮಕಾತಿ ಮಾಡಿಕೊಳ್ಳಲು ಒಂದು ಮಾರ್ಗವನ್ನು ಹುಡುಕಿ ಅದಕ್ಕೆ C.E.O.ರವರನ್ನು Chairman ಮಾಡಿ ಎನ್ನುವುದು ನನ್ನ ಸಲಹೆ. ನಾನು ಕೊಡತಕ್ಕಂಥ ಸಲಹೆಗಳೇನಾದರೂ ತಪ್ಪಾಗಿದ್ದರೆ ಹೇಳಿ, ನಾನು ಕುಳಿತುಕೊಂಡುಬಿಡುತ್ತೇನೆ, ನನಗೆ ಅನ್ನಿಸಿರತಕ್ಕಂಥಾದ್ದನ್ನು ಹೇಳುತ್ತಿದ್ದೇನೆ.

ಜಗದೀಶ್ ಶೆಟ್ಟರ್‌ರವರಿಗೆ ಒಂದು ಸಲಹೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಮಾನ್ಯ ಕಂದಾಯ ಮಂತ್ರಿಗಳು ಈ ಕಡೆ ಸ್ವಲ್ಪ ಗಮನ ಕೊಡಬೇಕು. ಜಗದೀಶ್ ಶೆಟ್ಟರ್‌ರವರಿಗೆ ನಾನು ಮೊದಲೂ ಕೂಡ ಒಂದು ಸಲಹೆಯನ್ನು ಕೊಟ್ಟಿದ್ದೆ. ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ರೈತ ಭೂಮಿಯ ಬೆಲೆ ಏನಿದೆ, what is the land guidance value and who is fixing this land guidance value? ಇವತ್ತು ನಾನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ, ನಾನು ಈ ಬಗ್ಗೆ ಪ್ರಶ್ನೆ ಹಾಕಿದ್ದೇನೆ, ಮಾನ್ಯ ಸಚಿವರ ಗಮನಕ್ಕೂ ತಂದಿದ್ದೇನೆ, ಇವತ್ತು ನಮ್ಮ ತಾಲ್ಲೂಕುಗಳಲ್ಲಿ land guidance value ಒಂದು ಎಕರೆಗೆ 25 ಸಾವಿರ ರೂಪಾಯಿಗಳು ಎಂದು ಇದೆ. land guidance value ಅನ್ನು increase ಮಾಡಿ ಎಂದು ಮಾನ್ಯ ಸಚಿವರಿಗೆ ನಾನು ಮನವಿ ಮಾಡಿಕೊಂಡೆ. ಏಕೆಂದರೆ, ಅಲ್ಲಿ ಒಂದು ಎಕರೆ land ಕನಿಷ್ಠವೆಂದರೆ 2 ಲಕ್ಷ ರೂಪಾಯಿಗಳಿಗೆ ಹೋಗುತ್ತಿದೆ. ನೀವು land guidance value ಅನ್ನು 2 ಲಕ್ಷ ರೂಪಾಯಿಗಳು ಎಂದು ಮಾಡಿ. ಏನೂ ಖರ್ಚಿಲ್ಲದೇ, ಬಡ ರೈತನನ್ನು ಶ್ರೀಮಂತನನ್ನಾಗಿ ಮಾಡತಕ್ಕಂಥ ಕೆಲಸವಿದು. Land guidance valueಅನ್ನು market valueಗೆ ತಂದುಬಿಡಿ. 25 ಸಾವಿರ ಇದ್ದದ್ದು, 2 ಲಕ್ಷವಾದರೆ ಆ ರೈತನಿಗೆ ಬೇರೆ ಕಡೆಗಳಲ್ಲಿ ಸಾಲ ತೆಗೆದುಕೊಳ್ಳಲಿಕ್ಕಾಗಲೀ, ಬ್ಯಾಂಕುಗಳಿಗೆ approach ಮಾಡತಕ್ಕಂಥಾದಕ್ಕಾಗಲೀ ಅನುಕೂಲವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ :- Guidance value ಜಾಸ್ತಿ ಮಾಡಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಮೊನ್ನೆ ಇಲ್ಲಿ ಚರ್ಚೆಯಾದಾಗ ಶ್ರೀರಾಮರೆಡ್ಡಿಯವರು ಮತ್ತು ಜಯಪ್ರಕಾಶ ಹೆಗ್ಡೆಯವರು ಹೇಳಿದರು, ಕೆಲವು ಕಡೆ guidance value, market value ಗಿಂತ ಜಾಸ್ತಿ ಇದೆ ಎಂದು ಹೇಳಿದರು. ನಿಮ್ಮ ಉದ್ದೇಶವೇನಿದೆ ಎಂದರೆ, guidance value ಜಾಸ್ತಿಯಾಗುವುದರಿಂದ, ಭೂ ಸ್ವಾಧೀನ ಆಗುವಂಥ ಸಂದರ್ಭದಲ್ಲಿ ನಮ್ಮ ರೈತರಿಗೆ rate ಜಾಸ್ತಿ ಸಿಗುತ್ತದೆ ಎಂದು ಹೇಳುತ್ತಿದ್ದೀರಿ. ಆದರೆ, guidance value ಜಾಸ್ತಿ ಮಾಡಿದ ಕೂಡಲೇ ಸಾರ್ವಜನಿಕರಿಂದ ವಿರೋಧ ಬರುತ್ತದೆ. ಏಕೆಂದರೆ, guidance value ಪ್ರಕಾರ registration ಮಾಡಬೇಕಾಗುತ್ತದೆ. Market value ಜಾಸ್ತಿಯಾಗಿದೆ, ಅದಕ್ಕಾಗಿ guidance value ಜಾಸ್ತಿ ಮಾಡಿ ಎಂದರೆ ಅದಕ್ಕೆ ನಾವು ತಯಾರಿದ್ದೇವೆ. ಅದಕ್ಕೆ ಕಂದಾಯ ಇಲಾಖೆ ತಯಾರಿದೆ. ನಾವು ಅದನ್ನು examine ಮಾಡುತ್ತೇವೆ. ಅದಕ್ಕಾಗಿ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಒಂದು ಕಮಿಟಿ

ಇರುತ್ತದೆ. ಅವರ ಕಡೆಯಿಂದ proposal ತೆಗೆದುಕೊಳ್ಳುತ್ತೇವೆ. Guidance value ಜಾಸ್ತಿ ಮಾಡಬೇಕೆಂದರೆ ನಾವು ಮಾಡೇ ಮಾಡುತ್ತೇವೆ. ಅದಕ್ಕೆ ನಮ್ಮದೇನೂ ತಕರಾರಿಲ್ಲ.

ಶ್ರೀ ಡಿ.ಆರ್.ಪಾಟೀಲ್:- ಸರ್ಕಾರ ಬೇರೆಬೇರೆ ಯೋಜನೆಗಳಿಗಾಗಿ land acquire ಮಾಡಿದಾಗ, ಆ acquisitionಗೆ rate fix ಮಾಡುವಾಗ guidance value ಅನ್ನು ಆಧಾರವಾಗಿ ತೆಗೆದುಕೊಳ್ಳಬೇಡಿ. Guidance valueನ ಇಷ್ಟ ಪಟ್ಟು ಕೊಡಬೇಕು ಎಂದು ಮಾಡಿ. ಆಗ ಎರಡು ಉದ್ದೇಶಗಳೂ ಈಡೇರುತ್ತವೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಡಿ.ಆರ್. ಪಾಟೀಲರು ಹೇಳಿದ ಸಲಹೆ ಯೋಗ್ಯವಾಗಿದೆ. ಅದು reasonable. ಆ ರೀತಿ ಮಾಡಬಹುದು.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:- ಮಾನ್ಯ ಸಚಿವರು ಗಮನಿಸಬೇಕು, ನಾನು ಒಂದು ಸಲಹೆಯನ್ನು ಕೊಡುತ್ತೇನೆ. Land guidance value ಅನ್ನು increase ಮಾಡಿದರೆ ಅದಕ್ಕೆ ಏಕೆ ರೈತರ ವಿರೋಧವಿದೆಯೆಂದರೆ, Stamp duty 10% ಇದೆ. Stamp duty 10% ಇರುವ ಒಂದೇ ಕಾರಣಕ್ಕಾಗಿ ಇವತ್ತು ರೈತರು land guidance valueವನ್ನು increase ಮಾಡಬೇಡಿ ಎಂದು ಹೇಳುತ್ತಾರೆ. ಬೆಂಗಳೂರು, ಮೈಸೂರನ್ನು ಹೊರತುಪಡಿಸಿ ಬೇರೆ ಕಡೆಗಳಲ್ಲಿ ತಾವು stamp duty ಯನ್ನು reduce ಮಾಡಿ. You bring the stamp duty to 4% and increase the land guidance value. By making this you are making the farmer richer without doing anything. ಆಗ ಇದಕ್ಕೆ ವಿರೋಧ ಮಾಡುವುದಿಲ್ಲ. ನಿಮ್ಮ ಬೊಕ್ಕಸಕ್ಕೆ ಬರಬೇಕಾದಂಥ ಹಣದಲ್ಲಿಯೂ ಕೊರತೆಯಾಗುವುದಿಲ್ಲ. Land guidance value ಅನ್ನು increase ಮಾಡಿ, proportionate ಆಗಿ stamp duty decrease ಮಾಡಿ only in rural areas, only for agricultural land, I am not telling it for any other purpose. ಹೀಗೆ ಮಾಡಿದರೆ, ನೀವು ರೈತನನ್ನು ಮನೆಯಲ್ಲಿಯೇ ಕುಳ್ಳಿರಿಸಿ, ಅವನನ್ನು ಸಾಹುಕಾರನನ್ನಾಗಿ ಮಾಡುತ್ತಿದ್ದೀರಿ. Land acquisition ಸಮಯದಲ್ಲಿ ರೈತರಿಗೆ ಅನುಕೂಲವಾಗುತ್ತದೆ ಎನ್ನುವ ಉದ್ದೇಶದಿಂದ ಹೇಳುತ್ತಿದ್ದೇನೆ ಎಂದು ಹೇಳಿದಿರಿ. Land acquisitionನಲ್ಲಿ ಮಾತ್ರವಲ್ಲ, ರೈತನ ಭೂಮಿಯ value 2 ಲಕ್ಷ ರೂಪಾಯಿಗಳು ಒಂದು ಎಕರೆಗೆ ಇದ್ದರೆ ರೈತರು ಬ್ಯಾಂಕಿಗೆ ಹೋದರೆ ಅನುಕೂಲವಾಗುತ್ತದೆ. ಇವತ್ತು ರೈತರು ಬ್ಯಾಂಕಿಗೆ ಹೋದರೆ ಅವನ landಗೆ ಎಷ್ಟು value ಕಟ್ಟುತ್ತಾರೆ? For investment in agriculture

if you need a loan, he will take the existing and guidance value to give the loan, Land guidance value ಜಾಸ್ತಿ ಇದ್ದರೆ, he will give more loan, It will be easy for the farmer, ರೈತರು ಬೇರೆ ಸಾಹುಕಾರದ ಹತ್ತಿರ ಹೋಗಿ 36%ನಲ್ಲಿ ಸಾಲ ತರುವುದು ತಪ್ಪುತ್ತದೆ. This is the motive. ತಾವು ಒಬ್ಬ ಒಳ್ಳೆಯ ಸಚಿವರಾಗಿದ್ದೀರಿ. ಇದನ್ನು ತಾವು ಕಳಕಳಿಯಿಂದ ಮಾಡಬೇಕು. ಏಕೆಂದರೆ, ತಮ್ಮ ಕೈಯ್ಯಲ್ಲಿ ಅವಕಾಶವಿದೆ. ನೀವು ರೈತನನ್ನು ಮನೆಯಲ್ಲಿಯೇ ಕುಳ್ಳಿರಿಸಿ ಸಾಹುಕಾರನನ್ನಾಗಿ ಮಾಡಬಹುದು. ಇದನ್ನು ನೀವು ಮಾಡಿದರೆ ·ಈ ರಾಜ್ಯದಲ್ಲಿ ಯಾವುದೇ ರೈತರಿಗೆ ಅನ್ಯಾಯವಾಗುವುದಿಲ್ಲ. ಇದರಿಂದ land acquisition ಸಂದರ್ಭದಲ್ಲಿ ಮಾತ್ರವಲ್ಲ. nationalized bank ಗಳಲ್ಲಿ ಸಾಲ ಸಿಗಬೇಕಾದರೆ ಅವನ land guidance value ಜಾಸ್ತಿಯಾಗಬೇಕು. ಇದೊಂದೇ ಅಲ್ಲ. ಹಳ್ಳಿಗಳಲ್ಲಿ ಸ್ಮಶಾನಕ್ಕೆ ಭೂಮಿ ಸಿಗುತ್ತಿಲ್ಲವೆಂದು ಡಿ.ಆರ್.ಪಾಟೀಲ್‌ರವರು ಹೇಳಿದರು. ಏಕೆ ಸಿಗುತ್ತಿಲ್ಲವೆಂದರೆ, ಈಗಿರುವ land guidance valueನಲ್ಲಿ ಕೊಡಲು ಯಾರೂ ಸಿದ್ಧರಿಲ್ಲ. ಶಾಲೆಗಳಿಗೆ ಅಥವಾ ಸರ್ಕಾರದ ಯಾವುದೇ ಒಂದು ಕಾರ್ಯಕ್ರಮಕ್ಕೆ ಒಂದು building ಬರಬೇಕೆಂದರೆ ಅದಕ್ಕೆ ಸ್ಥಳ ಏಕೆ ಸಿಗುತ್ತಿಲ್ಲವೆಂದರೆ land guidance value ಬಹಳ ಕಡಿಮೆ ಇದೆ, ಆದ್ದರಿಂದ ಯಾವ ರೈತರೂ ಕೊಡುವುದಕ್ಕೆ ರೆಡಿ ಇಲ್ಲ. Land guidance valueವನ್ನು ನೀವು market value ಗೆ ತಂದರೆ ಯಾರಾದರೂ ಕೊಡುತ್ತಾರೆ. Acquisition is very easy. You should try to understand this. ನೀವು land acquire ಮಾಡಿ ಎಂದು Deputy Commissionerಗೆ ನಾವು ಹೇಳಿದಾಗ, I cannot give more than 2.5%. That is the thing what the Deputy Commissioner is telling. No, no we cannot give more than 2.5%. Then why don't you increase the land guidance value? This is what is called governance. And this is what you who are in power are supposed to do ಸಾಮಾನ್ಯ ಜನರ ಮೂಲಭೂತವಾಗಿರತಕ್ಕಂಥ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲಿಕ್ಕೆ ನೀವು ರೆಡಿ ಇಲ್ಲ. ನೀವು ಬೆಂಗಳೂರನ್ನು ಕೇಂದ್ರೀಕೃತವಾಗಿ ಮಾಡಿಕೊಂಡು ವಿಚಾರ ಮಾಡುವುದಕ್ಕೆ ದಯವಿಟ್ಟು ಹೋಗಬೇಡಿ. ಬೆಂಗಳೂರಿನಲ್ಲು stamp duty reduce ಮಾಡಿ ಎಂದು ನಾನು ಹೇಳುತ್ತಿಲ್ಲ. For real estate, don't reduce the stamp duty. For agricultural land you please reduce the stamp duty. It is very important.

ಅಧ್ಯಕ್ಷರು:– ಡಾಕ್ಟರೇ, ಸಮಯವಾಗುತ್ತಿದೆ ಸಾಕು ನಿಲ್ಲಿಸಿ,

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ನನಗೆ ಬೇರೆ ಕಾಂಗ್ರೆಸ್ ಸದಸ್ಯರ ಸಮಯ ಕೊಡಿ. ನಮ್ಮ ನಾಯಕರಾದ ಧರಂಸಿಂಗ್ ಸಾಹೇಬರನ್ನು ನಾನು request ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:– ಈ ರೀತಿ ಮಾಡಲು ಆಗುವುದಿಲ್ಲ. ಬಹಳ ಜನ ಮಾತನಾಡುವವರಿದ್ದಾರೆ. ಬೇಗ ಮುಗಿಸಿ. ಅವರಿಗೆ ಕೊಟ್ಟಿದ್ದೀರಿ, ನನಗೆ ಕೊಡಿ ಎಂದು ನೀವು ಹೇಳುವುದಕ್ಕೆ ಬರುವುದಿಲ್ಲ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ನಾವು 10–20 ಜನ ಯಾವಾಗಲೂ ಖಾಯಂ ಆಗಿ ಈ ಸದನಕ್ಕೆ ಬರುತ್ತೇವೆ. ಯಾವಾಗಲೂ ಸದನದಲ್ಲಿ ಕೋರಂ ಮಾಡುವವರು ನಾವೇ. ಬೇರೆ ಯಾರೂ ಜಾಸ್ತಿ ಮಾತನಾಡುವುದಿಲ್ಲ. ಮಾತನಾಡುವವರಿಗೆ ತಾವು ಅವಕಾಶ ಕೊಡಿ.

ಇವತ್ತು ಸದನದಲ್ಲಿ Commerce and Industries Minister ರವರು ಇಲ್ಲ. ಸದನದಲ್ಲಿ Revenue Minister ರವರೇ ಇರುವುದರಿಂದ ಕೆಲವೊಂದು ಸಲಹೆಗಳನ್ನು ಕೊಡಬಯಸುತ್ತೇನೆ. Commerce and Industry Minister ರವರು, ಕೈಗಾರಿಕೆಗಳು ಗ್ರಾಮೀಣ ಪ್ರದೇಶಗಳಿಗೆ ಹೋಗಬೇಕು ಎಂದು ಒಂದು Bill ಅನ್ನು ತಂದರು. ನಮ್ಮ Industrial policy ಯಲ್ಲಿ ವಲಯ–1,2,3 ಎಂದು ಮಾಡಿದರು. ಬೆಂಗಳೂರಿನಲ್ಲಿ ಬೇಡ. ಗುಲ್ಬರ್ಗದಲ್ಲೋ ಬಿಜಾಪುರದಲ್ಲೋ, ಕೊಪ್ಪಳದಲ್ಲೋ ಅಥವಾ ಚಾಮರಾಜನಗರದಲ್ಲೋ, ಬೇರೆ ಕಡೆ ವಿಸ್ತರಣೆ ಮಾಡಬೇಕಾದೆ ನೀವು ಏನು special incentives ಕೊಟ್ಟಿದ್ದೀರಿ ಎನ್ನುವುದನ್ನು ನಾನು Industrial Policy ಯಲ್ಲಿ ನೋಡಿದೆ. I was very disappointed by that. ಆ Industrial Policy ಯಲ್ಲಿ ಏನಿದೆ? ನೀವು ಕೇವಲ ವಲಯ–1,2,3 ಎಂದು ಮಾಡಿ, stamp duty exemption ಕೊಟ್ಟರೆ ಯಾರಾದರೂ Industrialist ಆ area ಕ್ಕೆ ಬರುತ್ತಾರೆಯೇ? What is the incentive you are giving? ನೀವು land conversion ಗೂ ಕೊಟ್ಟಿಲ್ಲ. You have to give sale tax exemption to the industrialist to come to come to that area. ಏಕೆಂದರೆ excise exemption ಕೊಡುವುದಕ್ಕೆ ಇದು ರಾಜ್ಯ ಸರ್ಕಾರದ ಕೈಯಲ್ಲಿಲ್ಲ. ಅದು ಕೇಂದ್ರ ಸರ್ಕಾರದ್ದಾಗಿದೆ. ಕೈಗಾರಿಕೆಗಳು ಆ ಪ್ರದೇಶಕ್ಕೆ ಬರಬೇಕಾದರೆ you have to give

sales tax exemption. Has the Government thought in that direction? No. It is not there in your industrial policy. ಮಾನ್ಯ ಯಡಿಯೂರಪ್ಪನವರು ಗಮನ ಹರಿಸಬೇಕು. ಏಕೆಂದರೆ, sales tax exemption ನಿಮ್ಮ ವ್ಯಾಪ್ತಿಗೇ ಬರುವುದರಿಂದ ಅಲ್ಲಿ sales tax exemption ಕೊಡುತ್ತೇವೆನ್ನುವ ಮಾತನ್ನು ತಾವು ಹೇಳಬೇಕು. ಈ ರೀತಿ ಮಾಡಿದರೆ ಅವರೇಕೆ ಬರುವುದಿಲ್ಲ? ಖಂಡಿತವಾಗಿ ಬರುತ್ತಾರೆ. ಹಾಗೆಯೇ Industry ಯಲ್ಲಿ 30 ಸಾವಿರ ಕೋಟಿ ಬಂಡವಾಳವನ್ನು ನಾವಿಲ್ಲಿ ನಮ್ಮ ರಾಜ್ಯಕ್ಕೆ ತಂದಿದ್ದೇವೆಂದು ಹೇಳಿದರು. ಇದು ಬಹಳ ಹೆಮ್ಮೆಯ ವಿಷಯವಾಗಿದೆ. ಬರಲಿ. We are open. ಇದು ಇನ್ನೂ ಜಾಸ್ತಿ ಬರಲಿ. ಆದರೆ ಈ 30 ಸಾವಿರ ಕೋಟಿ ರೂಪಾಯಿಗಳ ಬಂಡವಾಳ ಎಷ್ಟು employment generate ಮಾಡಿದೆಯೆನ್ನುವುದು ಬಹಳ ಮುಖ್ಯ. It is only in thousands, not even in lakhs. ಈ ರೀತಿಯಾಗಿರುವ ಬಂಡವಾಳ ಬಂದರೆ growth ಆಗುತ್ತದೆ, ಆಗಲಿ. ನಮ್ಮ focus ಯಾವ ಕಡೆ ಇರಬೇಕು? Special Economic Zone ಮಾಡಬೇಕು. But, that should be in the agriculture sector. ಮಾನ್ಯ ಕೃಷ್ಣ ಬೈರೇಗೌಡರು ಬಹಳ ಚೆನ್ನಾಗಿ ಹೇಳಿದರು. ಏಕೆಂದರೆ, agriculture sector ನಲ್ಲಿ ಇವತ್ತು APMC Act ಅನ್ನು pass ಮಾಡಬೇಕಾದರೆ ಎಷ್ಟು ಸಮಯವನ್ನು ನಾವು ತೆಗೆದುಕೊಂಡೆವು? ಇದು ಪ್ರಗತಿಪರವಾಗಿರುವ ಒಂದು ಕಾನೂನು. Capital investment ನದು ಎಲ್ಲಿ ಅವಶ್ಯಕತೆ ಇದೆ, agriculture ಗೆ investment ಅಗತ್ಯತೆ ಇದೆ. ಆದರೆ, ಒಂದು APMC Act pass ಮಾಡಲಿಕ್ಕೆ ನಮ್ಮ ಸರ್ಕಾರ ಇಷ್ಟು ಸಮಯ ತೆಗೆದುಕೊಂಡಿತು. ಅದನ್ನು ನಾವು push ಮಾಡಿ, ನಾವು hurry ಮಾಡಿ ಮಾಡುವಂಥ ಪರಿಸ್ಥಿತಿ ಬಂತು. ನಾವು ಎದ್ದು ನಿಂತು support ಮಾಡಿ, we had to push through this House. ಇದು ಬಹಳ ವಿಷಾದನೀಯ. ಏಕೆಂದರೆ, ನಾವೆಲ್ಲರೂ ಸಮ್ಮತಿಯಿಂದ ಮೊದಲೇ ಹೇಗೆ introduce ಆಗಿತ್ತು ಅವತ್ತೇ pass ಆಗಬೇಕಾಗಿರತಕ್ಕಂಥ Bill ಅದಾಗಿತ್ತು. ಇವತ್ತು ಬಂಡವಾಳ ಬರಬೇಕಾಗಿರುವ agriculture sector ನಲ್ಲಿ 1%, 1.5% growth ಇರತಕ್ಕಂಥ agriculture sector, minimum 4% ಗೆ ಹೋಗಬೇಕಾದರೆ big investors should come to agriculture sector and it should be an opportunity to the farmers. ಅವರಿಗೂ ಕೂಡ ನಾಲ್ಕು ಕಾಸು ಜಾಸ್ತಿ ಆದರೆ ಇವತ್ತು purchasing power ಎಂದು ಏನು ಮಾನ್ಯ ಶ್ರೀರಾಮರೆಡ್ಡಿಯವರು ಹೇಳುತ್ತಿದ್ದರು, actual income of an

individual farmer should increase. Then only we can say there is development. ಒಂದು ಬಡ ಕುಟುಂಬದ ಆದಾಯ ಹೆಚ್ಚಿಗೆ ಆದಾಗ ಮಾತ್ರ 'ಈ ರಾಜ್ಯದಲ್ಲಿ ಅಭಿವೃದ್ಧಿಯಾಗಿದೆ, ಬಡತನ ನಿರ್ಮೂಲನೆಯಾಗಿದೆ' ಎಂದು ನಾವು ಹೇಳಬಹುದು. poverty alleviation ಗೆ ಸರ್ಕಾರ ಇಟ್ಟಿರುವ ಕ್ರಮವೇನು? Giving jobs to the people is not a poverty alleviation programme. ನಾವು cycle ಕೊಟ್ಟೆವು, ನಾವು ಅದು ಕೊಟ್ಟೆವು, ಇದು ಕೊಟ್ಟೆವು, this is not the way. ಬಡತನವನ್ನು ನಿರ್ಮೂಲನೆ ಮಾಡುವ poverty alleviation ಮಾಡತಕ್ಕಂಥ ಏನು ಕಾರ್ಯಕ್ರಮವನ್ನು ನೀವು ಹಾಕಿಕೊಂಡಿದ್ದೀರಿ? ಬಡ ಕೂಲಿ ಕಾರ್ಮಿಕನಿಗೆ at least ನಾವು ಯಾವುದೇ ಕಾರ್ಯಕ್ರಮದಿಂದ ಅವನಿಗೆ ಎರಡು ಕ್ಷೇತ್ರಗಳಿಗೆ ಬಹಳ ಅವಶ್ಯಕತೆಯಿದೆ. ಒಂದನೆಯದು, Education ಎರಡನೆಯದು, Health, ಮೂರನೆಯದು, Employment generation. ಈ ಮೂರು aspect ಗೆ Goverrnment ನ ಆದ್ಯತೆ number one ಇರಬೇಕು. ಆರೋಗ್ಯ ಸಚಿವರಾದ ಮಾನ್ಯ ಅಶೋಕ್‌ರವರು ಇವತ್ತು ಸದನದಲ್ಲಿ ಕಾಣಿಸುತ್ತಿಲ್ಲ. ಅವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅವರು ಯಾವುದೇ ತಾರತಮ್ಯ ಮಾಡಲಿಲ್ಲ. ಈ ಸರ್ಕಾರದ ಎಲ್ಲರೂ ತಾರತಮ್ಯ ಮಾಡುತ್ತಿದ್ದಾರೆಂದು ನಾನು ಹೇಳುವುದಿಲ್ಲ. ಅವರು PHU ಯಿಂದ PHC ಗೆ upgrade ಮಾಡುವಾಗ he did it in entire State. We appreciate it. ಈ ರಾಜ್ಯದಲ್ಲಿರುವ ಎಲ್ಲಾ PHU ಅನ್ನು PHC ಯಾಗಿ ಮಾಡಿದ್ದಾರೆ. I appreciate and welcome it. ಈ ತಾಲ್ಲೂಕಾ hospital ಅನ್ನು upgrade ಮಾಡುವಾಗ ಯಾವುದೊ ತಾರತಮ್ಯ ಮಾಡಿಲ್ಲ. I appreciate and welcome it. ರಾಜ್ಯದಲ್ಲಿ ಕೆಲಸ ಮಾಡುತ್ತಿರುವ contract Doctors ಅನ್ನು regularize ಮಾಡಿದ್ದಾರೆ. I welcome and appreciate it. ನಾವು ವಿಚಾರ ಮಾಡುವಾಗ ಇನ್ನೂ progressive ಆಗಿ ಮಾಡಬೇಕು. ಏಕೆಂದರೆ ಅವರು ತಪ್ಪು ಮಾಡಿದಾಗಲೂ ನಾನು ಟೀಕೆ ಮಾಡಿದ್ದೇನೆ. AIDS Prevention Society is not functioning properly. You have not utilized even 20% of the funds. ನಾನೇ ಈ ಸದನದಲ್ಲಿ ಟೀಕೆ ಮಾಡಿದ್ದೇನೆ. ತಪ್ಪಾಗಿರುವುದನ್ನು ಎತ್ತಿ ತೋರಿಸುವುದು ನಮ್ಮ ಕರ್ತವ್ಯವಾಗಿರಬೇಕು. ಒಂದು ಅಂಶವನ್ನು ಮಾನ್ಯ ಯಡಿಯೂರಪ್ಪನವರ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು Health Insurance programme ನ ಅವಶ್ಯಕತೆ ಬಹಳ ಇದೆ. ಈ ರಾಜ್ಯದಲ್ಲಿರುವ ಕೂಲಿ ಕಾರ್ಮಿಕರಿಗಾಗಿ

ಮತ್ತು ರೈತರಿಗಾಗಿ, ಯಾವ ರೀತಿಯಾಗಿ ರೈತರಿಗಾಗಿ ತಾವು ಯಶಸ್ವಿನಿ Health Insurance ತಂದಿದ್ದೀರಿ, ಅದೇ ತರಹ ಈ ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ಒಂದು Health Insurance Scheme ತರಲೇಬೇಕು. ಏಕೆಂದರೆ, ಈ ರಾಜ್ಯದಲ್ಲಿ ನಾವೇನು health facility ಕೊಡುತ್ತಿದ್ದೇವೆ, It is not adequate and fortunately ಇವತ್ತು Higher Education Minister ರವರು Chair ನಲ್ಲಿದ್ದಾರೆ. ಈ ಮಾತನ್ನು ನಾನು ನಿನ್ನೆ ಸದನದಲ್ಲಿ ಹೇಳಿದ್ದೇನೆ.

ಏನೆಂದರೆ, you have to bring a comprehensive Bill in this Assembly so that, all Doctors ಯಾರು ಇವತ್ತು merit ನಲ್ಲಿ ಓದಿ pass ಆಗಿರುವವರು ಕಡ್ಡಾಯವಾಗಿ rural service ಮಾಡಲೇಬೇಕೆನ್ನುವ ಪಾಲಿಸಿಯನ್ನು ಸರ್ಕಾರದ ಕಡೆಯಿಂದ ತರಬೇಕು. ಯಾರು Post Graduation free ಆಗಿ ಮಾಡುತ್ತಿದ್ದರು, ಅವರು ಕಡ್ಡಾಯವಾಗಿ ಸಮುದಾಯ ಆರೋಗ್ಯ ಕೇಂದ್ರ ಮತ್ತು ತಾಲ್ಲೂಕು Health Hospital ನಲ್ಲಿ ಎರಡು ವರ್ಷ ಕಡ್ಡಾಯವಾಗಿ service ಮಾಡಬೇಕೆನ್ನುವ bill ಅನ್ನು ತಂದರೆ ಮಾತ್ರ ಈ ರಾಜ್ಯದಲ್ಲಿರುವ PHC ಗಳಲ್ಲಿ Community Health Centre ಗಳಲ್ಲಿ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ specialists and Doctors ಸಿಗಲಿಕ್ಕೆ ಸಾಧ್ಯವಿದೆ. ಮಾನ್ಯ ಸಚಿವರು ಇದಕ್ಕೆ ಒಪ್ಪಿಕೊಂಡು bill ಅನ್ನು ತರುತ್ತೇವೆಂದು ಹೇಳಿದ್ದಾರೆ. I welcome him. I appreciate that. I have to say there are few ministers who work honestly and in the interest of public in this Government also. ಸಾರಸಗಟಾಗಿ ಎಲ್ಲರೂ ಹಾಗೇ ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಆದರೆ, ಬಹಳಷ್ಟು ಜನ ತದ್ವಿರುದ್ಧವಾಗಿಯೂ ಮಾತನಾಡುತ್ತಿದ್ದಾರೆ. ಅದಕ್ಕೆ ಮಾನ್ಯ ಅಶೋಕ್‌ರವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಇನ್ನೂ ಕೂಡ ಹೆಚ್ಚಿನ ರೀತಿಯಲ್ಲಿ ಅವರು ಗಮನ ಕೊಡಬೇಕು. He has to bring in more policies like Health Insurance. ನೀವು ತರಲೇಬೇಕು. ಏಕೆಂದರೆ, ಬಡವರಿಗೆ ಅದನ್ನು ಯಾವ ರೀತಿಯಾಗಿಯಾದರೂ ಮುಟ್ಟಿಸತಕ್ಕಂಥ ಕೆಲಸ ಮಾಡಬೇಕು. ಇನ್ನು ಮಾನ್ಯ ರೇವಣ್ಣನವರು ಸದನದಲ್ಲಿ ಕಾಣುತ್ತಿಲ್ಲ. ಏಕೆಂದರೆ, ಯಾವ ರೀತಿಯಾಗಿ road work ನಲ್ಲಿ ತಾರತಮ್ಯವಾಗಿದೆ ಅದನ್ನು ಅವರು ಸರಿಪಡಿಸಬೇಕು. ಇನ್ನು Urban Development ಬಗ್ಗೆ ಕೆಲವು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೆಲವು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು Department, it is with the

Chief Minister. ಈಗ administration ನೋಡುವಾಗ ಮುಖ್ಯಮಂತ್ರಿಯವರಿಗೆ ಸಮಯದ ಕೊರತೆ ಬಹಳ ಇರುತ್ತದೆ. ಅವರು ಇದರ ಬಗ್ಗೆ ಗಮನ ಕೊಡುವುದಕ್ಕಾಗುವುದಿಲ್ಲ. Urban Development ಎನ್ನುವಂಥದ್ದು ಬಹಳ ಪ್ರಮುಖವಾದ ಇಲಾಖೆಯಾಗಿದೆ. ಅದನ್ನು ಬೇರೆ ಯಾರಿಗಾದರೂ ಸಚಿವರಿಗೆ ವಹಿಸಿಕೊಡಬೇಕಾಗಿತ್ತು. ಆದರೆ, ಅವರು ಅದನ್ನು ತಮ್ಮ ಸ್ವಂತದಲ್ಲೇ ಇಟ್ಟುಕೊಂಡಿದ್ದರಿಂದ ಆ Department ನಲ್ಲಿ ಯಾವುದೇ ಪ್ರಗತಿಯಾಗದೇ ತೊಂದರೆಯಾಗುತ್ತಿರುವುದು ಕಂಡುಬರುತ್ತಿದೆ. ಇದನ್ನು ಬೆಂಗಳೂರಿನ ಪರಿಸ್ಥಿತಿ ನೋಡಿ ಹೇಳಬಹುದು. ಬೆಂಗಳೂರಿನ traffic ಏನಾಗಿದೆ? ಬೆಂಗಳೂರಿನ traffic control ಮಾಡುವುದಕ್ಕೆ ಸರ್ಕಾರ ಏನಾದರೂ ವಿಚಾರ ಮಾಡಿದೆಯೇ? ಯಾವ ರೀತಿಯಾಗಿ traffic strengthen ಮಾಡಬೇಕು, ದೇವನಹಳ್ಳಿ Airport ಆಗುತ್ತಿದೆ. ಆದರೆ, north side ಹೋಗಬೇಕಾದರೆ ಇವತ್ತಿಗೂ road infrastructure ಇಲ್ಲ. ಇವತ್ತು ದೇವನಹಳ್ಳಿ airport ಏನಾದರೂ ಇವತ್ತು timely complete ಆದರೆ, ಆ ರಸ್ತೆಯಲ್ಲಿ ಹೋಗಲಿಕ್ಕೆ ಖಂಡಿತವಾಗಿ 3 ಗಂಟೆ road jam ಆಗುತ್ತದೆ. ಈ ಬಗ್ಗೆ ಸರ್ಕಾರ ಏನು ವಿಚಾರ ಮಾಡಿದೆ? ಸರ್ಕಾರದಲ್ಲಿ ತೀವ್ರತೆ ಇಲ್ಲವೇ? ಅಂದರೆ ಈ ಸಮಸ್ಯೆ ಬರುತ್ತಿದೆ, ಈ ಸಮಸ್ಯೆಗೆ ನಾವು ಮುಂಚಿತವಾಗಿಯೇ ಏನೊಂದು ಕಾರ್ಯಕ್ರಮ ಹಾಕುವ, ಸಲಹೆ ಕೊಡುವ ಅಧಿಕಾರಿಗಳು ಈ ಸರ್ಕಾರದಲ್ಲಿ ಇಲ್ಲವೇ? ಇವತ್ತು Urban Development ನಲ್ಲಿ ವಿಶೇಷವಾಗಿ ಬೆಂಗಳೂರು ಡೆವಲಪ್‌ಮೆಂಟ್ ಆ Airport ಗೆ ಹೋಗುವ road ನ ಬಗ್ಗೆ ಕೂಡ ಮುಂಚಿತವಾಗಿಯೇ plan ಮಾಡದಿದ್ದರೆ, ಆ airport open ಆದಮೇಲೆ ಜನರಿಗೆ ಎಷ್ಟು ತೊಂದರೆಯಾಗುತ್ತದೆ ಎನ್ನುವುದನ್ನು ಸರ್ಕಾರ ಮನಗಾಣಬೇಕು. ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಕಡೆ ಓಡಾಡುತ್ತಿದ್ದಾರೆ. ಕೆಲಸ ಮಾಡುತ್ತಿದ್ದಾರೆನ್ನುವುದಾದರೆ, ಅದನ್ನು ಹೇಳುತ್ತಾ ಇದ್ದಾರೆ, ಆದರೆ ಯಾವುದನ್ನೂ ಸಹ ಸರಿಯಾಗಿ review ಮಾಡುವುದಿಲ್ಲ. ತಾವು announce ಮಾಡಿರುವ ಕಾರ್ಯಕ್ರಮ, ತಾವು ಕೊಟ್ಟಿರತಕ್ಕಂಥ ಹಣ, ಇವತ್ತು ಯಾವ್ಯಾವ ಸಚಿವರು ಅವರವರ department ಅನ್ನು ಎಷ್ಟೆಷ್ಟು review ಮಾಡುತ್ತಿದ್ದಾರೆನ್ನುವುದನ್ನು ತಾವು ಒಂದು ಸಲ ಪರಿಶೀಲನೆಗೆ ತೆಗೆದುಕೊಳ್ಳಬೇಕು ಮಾನ್ಯ ಅಧ್ಯಕ್ಷರೆ, ಇವತ್ತು ಕೇವಲ ಗ್ರಾಮ ವಾಸ್ತವ್ಯ ಮಾಡಿ ಆ ಹಳ್ಳಿಯನ್ನು ಉದ್ಧಾರ ಮಾಡಿದ್ದೇವೆಂದು ಹೇಳುವುದಕ್ಕಾಗುವುದಿಲ್ಲ. You have to look everybody uniformly. ನಾನು ಇವತ್ತು ಮುಖ್ಯಮಂತ್ರಿಯಾದರೆ ನನ್ನ ಹತ್ತಿರ ಯಾರೋ ಒಬ್ಬರು ಅರ್ಜಿ ಹಾಕಿಕೊಂಡು

ಬಂದರೆ ಅವನಿಗೊಂದು ಸಹಾಯ ಮಾಡಿದರೆ ಅದು ನಾನು ಮಾಡತಕ್ಕಂಥದ್ದಲ್ಲ. ಅವನ ತರಹ ಇರತಕ್ಕಂಥ ಎಲ್ಲಾ ಜನರಿಗೆ ನಾನು ಒಂದು ಸಮಗ್ರವಾಗಿರತಕ್ಕಂಥ ಒಂದು policy ತೆರಬೇಕಾಗುತ್ತದೆ. We cannot help individuals. We have to bring in a policy. We have to put in a system where it will become inevitable. ಇನ್ನು ಮುಂದೆ ಬರತಕ್ಕಂಥವರಿಗೂ ಕೂಡ ಅದೇ ಒಂದು ನೀತಿಯಾಗಿರಬೇಕು. ನಾವೆಲ್ಲ ಮನುಷ್ಯರು. ಏಕೆಂದರೆ, ನಾವು perfect ಆಗಿ ಇರುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ perfect ಆಗಿರುವಂಥ ವ್ಯವಸ್ಥೆ ತರಲಿಕ್ಕೆ ಸಾಧ್ಯವಿದೆ. Individual ಗೆ ಮಾಡಲಿಕ್ಕೆ ಸಾಧ್ಯವಿಲ್ಲ. ಅದಕ್ಕೆ ವ್ಯವಸ್ಥೆಯನ್ನು ಸರಿಪಡಿಸಬೇಕು. ವ್ಯವಸ್ಥೆಯನ್ನು ಸರಿಪಡಿಸಬೇಕಾದರೆ ಅದರಲ್ಲಿ ಪಾರದರ್ಶಕತೆ ಇರಬೇಕು. ಪಾರದರ್ಶಕತೆ ಇರಬೇಕಾದರೆ decentralization ಆಗಬೇಕು. ಅಧಿಕಾರ ವಿಕೇಂದ್ರೀಕರಣವಾಗಿ ನೇರ ಜನರಲ್ಲಿ ಎಲ್ಲಿಯವರೆಗೆ ಇವತ್ತು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವುದಿಲ್ಲವೋ, ಅಲ್ಲಿಯವರೆಗೆ ರಾಜ್ಯ ಅಭಿವೃದ್ಧಿ ಆಗಲಿಕ್ಕೆ ಸಾಧ್ಯವೇ ಇಲ್ಲ. ಈ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕಾದರೆ ಪಾರದರ್ಶಕತೆ ತರಬೇಕಾದರೆ ಜನರಲ್ಲಿ ಜಾಗೃತಿ ಕೂಡ ಅಷ್ಟೇ ಮುಖ್ಯವಾಗಿರುತ್ತದೆ. Public awareness is most important thing in bringing transparency and honesty in public life. ಜನರಲ್ಲಿ ಜಾಗೃತಿ ತರಬೇಕಾದರೆ ಅವರಿಗೂ ಕೂಡ ಈ system ನಲ್ಲಿ ಪಾಲು ಕೊಡಬೇಕಾಗುತ್ತದೆ. They have to give the message. ಇವತ್ತು ಗ್ರಾಮ ಸಭೆಯನ್ನು ಬಲಪಡಿಸಬೇಕಾಗುತ್ತದೆ. ಎಲ್ಲಿಯವರೆಗೆ ಒಂದು ಗ್ರಾಮದಲ್ಲಿ ಜಾತಿ, ಮತ, ಪಕ್ಷ ಎಲ್ಲ ಮರೆತು ಜನ ಒಗ್ಗಟ್ಟಾಗಿ ಇವತ್ತು ನಿಜ ಯಾವುದಿದೆ, ಸತ್ಯ ಯಾವುದಿದೆ, ಸತ್ಯದ ಪರ ಮಾಡತಕ್ಕಂಥ ಒಂದು ವಾತಾವರಣವನ್ನು ನಾವು create ಮಾಡುವುದಿಲ್ಲವೋ ನಿಜವಾದ ಪ್ರಜಾಪ್ರಭುತ್ವವಾಗಿರಲಿಕ್ಕೆ ಸಾಧ್ಯವೇ ಇಲ್ಲ. ಗಾಂಧೀಜಿಯವರು ಕಂಡಿರತಕ್ಕಂಥ ಪ್ರಜಾಪ್ರಭುತ್ವವನ್ನು ಒದಗಿಸಬೇಕಾದರೆ, ಆ ಗ್ರಾಮ ಸಭೆಯನ್ನು ನಾವು ಬಲಪಡಿಸಬೇಕು. ಅಲ್ಲಿರತಕ್ಕಂಥ ವಾತಾವರಣವನ್ನು , ಸರಿಪಡಿಸಬೇಕು. ನಾನು ಒಪ್ಪುತ್ತೇನೆ. ಇವತ್ತು ಗ್ರಾಮ ಸಭೆಗಳು ಸರಿಯಾಗಿ ನಡೆಯುತ್ತಿಲ್ಲದಿರಬಹುದು. ಆ ನಿಟ್ಟಿನಲ್ಲಿ ಒಂದು ಪ್ರಯತ್ನ ಬಹಳ ಅಗತ್ಯವಿದೆ. ಇವತ್ತು ನಾವು ಶುರು ಮಾಡಿದರೆ, 20 ವರ್ಷಗಳ ಕಾಲ ನಾವು ಅಲ್ಲಿಗೆ ಮುಟ್ಟಬಹುದೆನ್ನುವ ವಿಶ್ವಾಸ ನನ್ನಲ್ಲಿದೆ ಏಕೆಂದರೆ, ಇವತ್ತು ಇನ್ನೂ ಬಹಳಷ್ಟು ಯುವಕರು ಈ ಸದನಕ್ಕೆ ಬಂದಿದ್ದಾರೆ. ಎಲ್ಲರೂ ಕೂಡ

ಪ್ರಾಮಾಣಿಕತೆಯಿಂದ ಜನರ ಪರವಾಗಿ ಕೆಲಸ ಮಾಡಬೇಕೆಂಬ ಧೋರಣೆಯನ್ನಿಟ್ಟುಕೊಂಡು ಬಂದಿದ್ದಾರೆಂದುಕೊಂಡಿದ್ದೇನೆ. ಏಕೆಂದರೆ, ಅವರು ಯಾವುದೇ ಪಕ್ಷದವರಾಗಿರಲಿ, ಒಂದು ಸಾರಿ ಚುನಾವಣೆ ಮುಗಿದು ಈ ಸದನಕ್ಕೆ ಬಂದ ಮೇಲೆ ನಾವೆಲ್ಲರೂ ಸಮಾನರಾಗಿರಬೇಕು. ಒಬ್ಬರಿಗೊಬ್ಬರ ಮೇಲೆ ದ್ವೇಷ, ಅಸೂಯೆಪಡುವ ಪರಿಸ್ಥಿತಿ ಮುಂದೆಯಾದರೂ ಕೂಡ ನಿರ್ಮಾಣವಾಗಬಾರದು. ಹಾಗಾಗಬಾರದೆಂದರೆ, ಯಾವುದೇ ರೀತಿಯಾಗಿರತಕ್ಕಂಥ ತಾರತಮ್ಯ ಆಗಬಾರದು. ಈ ಅಧಿಕಾರ ವಿಕೇಂದ್ರೀಕರಣವಾದರೆ ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯತ್‌ನಲ್ಲಿ ತಲಾವಾರು ಹಂಚಿಕೊಳ್ಳುತ್ತಿದ್ದಾರೆ ಅದರಿಂದ ಅಭಿವೃದ್ಧಿಯಾಗುತ್ತಿಲ್ಲವೆಂದು ಇವತ್ತು ಕೆಲವು ಜನ ಹೇಳುತ್ತಿದ್ದರು. ಹೌದು ಸಾರ್, ನೀವು ತಲಾವಾರು ಹಂಚಿಕೊಳ್ಳಬಾರದು, ಅದನ್ನು ತಪ್ಪಿಸಬೇಕು, ಇಲ್ಲಿ ಸಚಿವರುಗಳೇನು ಮಾಡುತ್ತಿದ್ದಾರೆ? ತಮ್ಮ ತಮ್ಮ ಕ್ಷೇತ್ರಗಳಿಗೆ ಹಣ ಕೊಡುತ್ತಿದ್ದಾರೆ. ಈ ರಾಜ್ಯದಲ್ಲಿ ಎಷ್ಟು MDR ಇದೆ, ನಾವು entire cover ಮಾಡುತ್ತೇವೆ ಎಂದೇನಾದರೂ ವಿಚಾರ ಮಾಡಿದ್ದೀರಾ? ಅಥವಾ ನಾವು ಶಾಸಕರು, ಇವತ್ತು ನಮಗೆ ಒಂದು ಕೋಟಿ ರೂಪಾಯಿ ಬಂದರೆ, ನಾವೆಲ್ಲ ಒಂದೇ ರೋಡ್, ಎರಡೇ ರೋಡ್‌ಗೆ ಎಂದು ನೋಡಿ ಕೊಡಲು ಸಿದ್ಧರಿದ್ದೇವೆಯೇ? ನಾವೂ ಕೂಡ ಇಲ್ಲಪ್ಪ, ಎಲ್ಲ ಕ್ಷೇತ್ರಗಳಿಗೆ, ಎಲ್ಲ ಹಳ್ಳಿಗಳಿಗೆ ಕೊಡಬೇಕೆಂದು ಹೇಳುತ್ತೇವೆ. ಏಕೆಂದರೆ, I have to see my voters. That has become my weakness now. ಏಕೆಂದರೆ, ನಾನೂ ಸಹ ಮುಂದಿನ ಸಾರಿ ಗೆದ್ದು ಬರಬೇಕಲ್ಲವೇ? ಎಲ್ಲರೂ ಮಾಡುವುದು ಅದನ್ನೇ, ಅದಕ್ಕೆ ನಾವು ಅವರಿಗೆ ದೋಷ ಕೊಡುವುದಕ್ಕೆ ಹೋಗಬಾರದು. ಅದಕ್ಕಾಗಿ ಈ ವ್ಯವಸ್ಥೆಯನ್ನೇ ಸುಧಾರಣೆ ಮಾಡಲಿಕ್ಕಾಗಿ ಮಾನ್ಯ ಉದಾಸಿಯವರಿಗೆ ನಾನು ಸಲಹೆಯನ್ನು ಕೊಡುತ್ತೇನೆ. ಆ ಬಿಲ್ ಅನ್ನು ತಾವು ದಯಮಾಡಿ ತರಬೇಡಿ. ಆಮೇಲೆ, ಏನಾದರೂ ಒಂದು ವೇಳೆ ವ್ಯವಸ್ಥೆಯಲ್ಲಿ ತಪ್ಪಾಗಿದ್ದರೆ, ಇವತ್ತು ನೆಗಡಿ ಬಂದರೆ ಮೂಗು ಕುಯ್ಯುವುದಕ್ಕಾಗುತ್ತದೆಯೇ? ಅದಕ್ಕೇನಾದರೂ ಪರಿಹಾರ ಹುಡುಕಿ. You are a senior minister. ಅದಕ್ಕೆ ಸದನ ಸಮಿತಿಯೇ ಮಾಡಿ. ನಾನು ಇನ್ನೊಂದು ಮಾತು ಹೇಳಲಿಕ್ಕೆ ಇಚ್ಛೆಪಡುತ್ತೇನೆ, ಏನೆಂದರೆ, ನಾವು 73rd 74th amendment ಮಾಡಿ ಅಧಿಕಾರ ವಿಕೇಂದ್ರೀಕರಣ ಮಾಡಿದ್ದೇವೆ. ಆದರೆ, ಇನ್ನೂ ಒಂದು ಅಧಿಕಾರ ವಿಕೇಂದ್ರೀಕರಣವಾಗಿಲ್ಲ. Bureaucracy ಲ್ಲಿ ಅಧಿಕಾರ ವಿಕೇಂದ್ರೀಕರಣವಾಗಿಲ್ಲ. Only public representatives bureaucracy ಹಂತದಲ್ಲಿ ಆ ಅಧಿಕಾರ ವಿಕೇಂದ್ರೀಕರಣವಾಗಿರಬಹುದೇ ವಿನಃ

bureaucratically ಅದು ಬಹಳ ಮುಖ್ಯವಾಗಿದೆ, ಇವತ್ತು ಅಧಿಕಾರ ವಿಕೇಂದ್ರೀಕರಣವಾಗಿಲ್ಲ. ಇವತ್ತಿಗೂ ಕೂಡ 5 ಲಕ್ಷ ರೂ.ಗಳ ಕೆಲಸ ಮಾಡಿಸಬೇಕಾದರೆ Executive Engineer, Chief Engineer ಹತ್ತಿರ ಎಷ್ಟು ಸಾರಿ ಹೋಗಬೇಕು. ತಾವು senior most ಸಚಿವರು ಇದ್ದೀರಿ. ಇದರ ಬಗ್ಗೆ ಗಮನಹರಿಸಬೇಕು. ತಾವು ಶಾಸಕರಾಗಿ, ಸಚಿವರಾಗಿ ಇದನ್ನೆಲ್ಲ ಇಷ್ಟು ವರ್ಷ ನೋಡಿದ್ದೀರಿ. ಒಂದು ಸಲ action plan ಗೆ ಇನ್ನೊಂದು ಸಲ DTP approval ಗೆ, tender ಗೆ ಹೋಗಬೇಕು, ಎಲ್ಲಾ ಹಂತದಲ್ಲಿ ಭ್ರಷ್ಟಾಚಾರವಿದೆ. ಭ್ರಷ್ಟಾಚಾರ ಏಕೆ ಆಗುತ್ತಿದೆ ಎಂದರೆ, C.E. approval ಇಲ್ಲದೇ ಕೆಳಗಿನವರು ಕೆಲಸ ಮಾಡುವ ಹಾಗೆಯೇ ಇಲ್ಲ. ನೀವು ಅದನ್ನು de centralize ಮಾಡಿ. 25 ಲಕ್ಷ ರೂ.ಗಳವರೆಗಿನ ಕೆಲಸ AEE level ನಲ್ಲಿಯೇ ಆಗಬೇಕು. ಎಷ್ಟು layers add ಮಾಡುತ್ತಿರೋ ಅಷ್ಟು ಭ್ರಷ್ಟಾಚಾರ ಜಾಸ್ತಿಯಾಗುತ್ತದೆಯೇ ವಿನಃ ಕಡಿಮೆಯಾಗುವುದಿಲ್ಲ. ಎಷ್ಟು layers ಕಡಿಮೆ ಮಾಡುತ್ತೀರೋ ಅಷ್ಟು ಭ್ರಷ್ಟಾಚಾರ ಕಡಿಮೆ ಮಾಡಿಕೊಳ್ಳುತ್ತಾ ಹೋಗಬಹುದು ನೀವು 10 ಲಕ್ಷ ರೂ.ಗಳವರೆಗಿನ ಕೆಲಸವನ್ನು AEE ಗೇ ಕೊಟ್ಟರೆ ಅದು 10 ಜನರ ಹತ್ತಿರ ಹೋಗುವುದಿಲ್ಲ. ನೀವು ಮಾಡುವ action plan implement ಆಗಲಿಕ್ಕೆ action plan approval ಆಗಲಿಕ್ಕೆ 6 months ಹಿಡಿಯುತ್ತದೆ, ಇದು ಮಾನ್ಯ ಸಚಿವರಿಗೆ ಗೊತ್ತಿಲ್ಲವೇ ? ಸಚಿವರು review ಮಾಡುವುದಿಲ್ಲವೇ? ನಾವು ಶಾಸಕರಾಗಿ MLA grant ನಲ್ಲಿ, HKDB ಯಲ್ಲಿ action plan ಬರೆದುಕೊಟ್ಟರೆ ಕೆಲಸ ಯಾವ ತಿಂಗಳಲ್ಲಿ start ಆಗುತ್ತದೆ ಎಂದು ತಾವು ಹೇಳಬೇಕು. ಇವತ್ತೇಕೆ funds utilization ಆಗುತ್ತಿಲ್ಲವೆಂದರೆ, because of that red tapism and this has been brought in by bureaucrats and they are not ready to give up their rights. They want to have share in the system. ಒಬ್ಬ Chief Engineer, ಒಬ್ಬ Executive Engineer ತನ್ನ ಪಾಲನ್ನು ಬಿಟ್ಟುಕೊಡಲಿಕ್ಕೆ ಸಿದ್ಧವಿಲ್ಲ. ಏಕೆಂದರೆ ಅವನಿಗೆ ಅಲ್ಲಿ ಹಣ ಸಿಗುತ್ತಿದೆ. ಆ ಅಧಿಕಾರ ಕಿತ್ತುಕೊಂಡು AEE ಗೆ ಕೊಡಿ. What is an AEE? He is also qualified engineer and he can do that job. Why CE is taking over works of Rs. 10 lakhs and above? ಬ್ಯೂರೋಕ್ರಟಿಕ್ ಲೆವೆಲ್‌ನಲ್ಲಿ administrative de-centralization ಆಗಬೇಕು. ಇದು ತಮಗೆ ಗೊತ್ತಿಲ್ಲವೇ Action plan ಮಾಡಿದರೆ 15 ದಿವಸಗಳಲ್ಲಿ tender ಹಾಕುವ ಪರಿಸ್ಥಿತಿ ಇರಬೇಕು. ಆಗ ಹಣ ಹೇಗೆ approval ಆಗುವುದಿಲ್ಲ ನಾನು ನೋಡುತ್ತೇನೆ.

ಸಚಿವರಾದ ತಾವು ನೋಡಿ. ಆ ರೀತಿ ಮಾಡುವುದಕ್ಕೆ ಸಿದ್ಧವಿಲ್ಲ. ಏಕೆಂದರೆ, ತಮಗೆ ಸಮಯವೇ ಇಲ್ಲ, ನೀವು ಕೇವಲ ಪಂಚಾಯತ್ ರಾಜ್‌ಗಳ ವಿರುದ್ಧ ಯಾರ್ಯಾರ ಮಾತೋ ಕೇಳಿಕೊಂಡು ಅವರ ಅಧಿಕಾರಕ್ಕೆ ಕಡಿವಾಣ ಹಾಕುವ ಪ್ರಯತ್ನ ಮಾಡಬೇಡಿ. ತಾವು ಕೂಲಂಕಷವಾಗಿ ವಿಚಾರ ಮಾಡಿ. ಏನೆಂದರೆ system ನಲ್ಲಿ streamline ಮಾಡುವುದಕ್ಕೆ ಏನು ಸಾಧ್ಯವಿದೆ? ಎಲ್ಲಿ ಲೋಪದೋಷಗಳಿವೆ? Bureaucratic level ನಲ್ಲಿ administrative decentralization ಮಾಡಬೇಕು. ಕೆಳಹಂತದ ಅಧಿಕಾರಿಗಳಿಗೆ ಅಧಿಕಾರವನ್ನು ಕೊಡಿ. ಅವರು ನೇರವಾಗಿ ಕೆಲಸ ಮಾಡುವವರು. They are all qualified people. They will do that at that level. ಇದನ್ನು ತಾವು ಮಾಡಿ utilization of funds ಆಗುತ್ತದೆ. ಇನ್ನು Planning ಯಾವ ರೀತಿಯಾಗಿ ಆಗುತ್ತಿದೆ ಎಂಬುದನ್ನು ನಾನು ನೋಡಿದ್ದೇನೆ. ನಾನು ಜಿಲ್ಲಾ ಪಂಚಾಯತ್ ಉಪಾಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. Planning ಯಾವ ರೀತಿ ಆಗುತ್ತಿದೆ ಎಂದು ನಾನು ನೋಡಿದ್ದೇನೆ. ನಾನು ಮೊದಲನೇ ಸಲ 2000 ನೇ ಇಸವಿಯಲ್ಲಿ ಜಿಲ್ಲಾ ಪಂಚಾಯತ್ ಸದಸ್ಯನಾಗಿ ಜಿಲ್ಲಾ ಪಂಚಾಯತ್‌ಗೆ ಹೋಗಿದ್ದೆ. ನಾನು youth congress ಅಧ್ಯಕ್ಷನಾಗಿ 10 ವರ್ಷ ನನ್ನ ಜಿಲ್ಲೆಯಲ್ಲಿ ಕೆಲಸ ಮಾಡಿ ರಾಜಕೀಯ organization ಹಿನ್ನೆಲೆಯಿಂದ ನಾನು ಮೊದಲನೇ ಸಲ administrative lineಗೆ ಬಂದಾಗ ಇದು ಯಾವ ರೀತಿ ಇದೆ ಎಂದು ವಿಚಾರ ಮಾಡಿ ನೋಡಿದೆ. I was really shocked. ಏನೆಂದರೆ, there is no scientific planning being done. ಮಾನ್ಯ ಸಚಿವರು ಗಮನಹರಿಸಬೇಕು. ನಾನು D.R. Patil ರವರನ್ನು ಅಭಿನಂದಿಸುತ್ತೇನೆ. ಏಕೆಂದರೆ, ಕಳೆದ ಸಲ Assurance committee ಯಲ್ಲಿದ್ದಾಗ ವಿಕೇಂದ್ರೀಕರಣದ ಚರ್ಚೆ ಮಾಡಿದೆವು. ಇವತ್ತು 29 subjects ಅಧಿಕಾರ ವಿಕೇಂದ್ರೀಕರಣವಾಗಿದೆ. ಜಿಲ್ಲಾ ಪಂಚಾಯತ್‌ನಲ್ಲಿ link document ಎಂದು ಇರುತ್ತದೆ. Link document ನಲ್ಲಿ ಇಲಾಖಾವಾರು head of accounts seperate schemes ಇರುತ್ತದೆ. 300 schemes ಇದ್ದು ಒಂದೊಂದು scheme ನಲ್ಲಿ 50 ಸಾವಿರದಿಂದ 2 ಲಕ್ಷ ರೂ. ಇದೆ. ಆ 300 head of accounts ಏತಕ್ಕೋಸ್ಕರ ಇವೆ? ಅವು ಏನೂ ಕೆಲಸಕ್ಕೆ ಬರುವುದಿಲ್ಲ. ಅವುಗಳನ್ನೆಲ್ಲ reduce ಮಾಡಿ. ಜಿಲ್ಲಾ ಪಂಚಾಯತ್‌ಗೆ ಹೋಗಬೇಕಾದ ಹಣವನ್ನು state sector ನಲ್ಲಿಟ್ಟುಕೊಂಡು ಇವತ್ತು ಅಧಿಕಾರಿಗಳದೇ ರಾಜ್ಯಭಾರ ನಡೆದಿದೆ. ಅದನ್ನು Demolish ಮಾಡಿ 3000 ಕೋಟಿ ರೂ. ನೀವು ಮಾಡುವುದರಲ್ಲಿ ಡಿ.ಆರ್ ಪಾಟೀಲ್‌ರವರು, ಧರ್ಮಸಿಂಗ್ ಸಾಹೇಬರು ಬಹಳ cooperate

ಮಾಡಿದರು. ಉಪ ಮುಖ್ಯಮಂತ್ರಿಯಾಗಿದ್ದಾಗ ಸಿದ್ದರಾಮಯ್ಯನವರು decentralization ನಲ್ಲಿ ಸಾವಿರಾರು ಕೋಟಿ ರೂ.ಗಳು ನೇರವಾಗಿ ಹೋಗುವ ಅವಕಾಶ ಮಾಡಿಕೊಟ್ಟರು. Planning ಇವತ್ತು ಕೆಳ ಹಂತದಿಂದ ಮೇಲೆ ಬರಬೇಕೆಂದು ನಾವು ವಿಚಾರ ಮಾಡುತ್ತಿದ್ದೇವೆ. ಜಿಲ್ಲಾ ಪಂಚಾಯತ್‌ನಲ್ಲಿ District Planning Committee ಎಂದು ಇದೆ. ಆ District Planning Committee ಗೆ ನಾವೇನು ಅಧಿಕಾರ ಕೊಟ್ಟಿದ್ದೇವೆ? ಎಷ್ಟು District Planning Committee ಆಗಿವೆ? ಮಾನ್ಯ ಸಚಿವರು ಈ ಕಡೆಗೆ ಗಮನಹರಿಸಿದ್ದಾರೆಯೇ? ಇವತ್ತು ಯಾವ ರೀತಿಯಾಗಿ ಕರಡು ಯೋಜನೆ ಆಗುತ್ತಿದೆ ಎಂದು ನೋಡಿದ್ದಾರೆಯೇ? ಜಿಲ್ಲಾ ಪಂಚಾಯತ್‌ನಲ್ಲಿ ಡಿಸೆಂಬರ್ ತಿಂಗಳಲ್ಲಿ ಒಂದು meeting ಕರೆಯುತ್ತಾರೆ. ಆ ಕರಡು ಯೋಜನೆ ಏನೆಂದರೆ, ನಾವು ಮೊದಲೇ ಬಂದು discussion ಮಾಡುತ್ತೇವೆ. link document ನಲ್ಲಿರುವ ಯೋಜನೆಗಳಿಗೆ ಇದಕ್ಕೆ 10%, ಅದಕ್ಕೆ 5% ಎಂದು increase ಮಾಡಿ ಎಂದು ಭಾಷಣ ಮಾಡಿ ಹೋಗುತ್ತೇವೆ. ಮತ್ತೆ ಅದೇ link document planning Department ಗೆ ಬರುತ್ತದೆ. ಅದೇ head of account ನಲ್ಲಿ ಸರ್ಕಾರದಲ್ಲಿ ಲಭ್ಯ ಪ್ರಕಾರ ಹಣ ಕೊಡುತ್ತಾರೆ. ಮತ್ತೆ ಅದೇ ನಡೆಯುತ್ತಿದೆ. This is going on. ನಾನು ಈಗ ಎಂದು ಹೇಳುತ್ತಿಲ್ಲ. This is going on since long. Nobody has the guts nor the commitment nor the the vision ಮಾನ್ಯ ಉದಾಸಿಯವರು ಇದನ್ನು ಮಾಡಬೇಕು. I am telling this nobody has the guts nor the vision for the commitment to change the sysytem. System ಹೇಗಿದೆಯೋ, ಹಾಗೆಯೇ ನಡೆದುಕೊಂಡು ಹೋಗುತ್ತದೆಂದರೆ, ನೀವು System ಅನ್ನು ಬದಲಾಯಿಸಿ Planning Department ನಲ್ಲಿರುವ linked document ನಲ್ಲಿ ಇದೇ head of account ಗೆ ಹಣ ಕೊಡುವುದಿಲ್ಲವೆಂದು ಹೇಳಿ. ಕೆಳಹಂತದಿಂದ ಬರಲಿ. ಗ್ರಾಮೀಣ ಪ್ರದೇಶಗಳಲ್ಲಿ ಏನು ಬೇಕಾಗಿದೆ ಎಂದು ನಿರ್ಣಯ ಮಾಡುವವರಿಗೆ ಯಾರಿಗಾದರೂ ಬಿಟ್ಟುಕೊಡಿ. ಮೂರನೇ ಮಹಡಿಯಲ್ಲಿ ಕುಳಿತವರು, MS building ನಲ್ಲಿ ಕುಳಿತವರಿಗೆ ನೀವು ಅಧಿಕಾರ ಕೊಡುವುದಕ್ಕೆ ಹೋಗಬೇಡಿ. ಹಳ್ಳಿ ಪ್ರದೇಶದಲ್ಲಿ ಏನು ಕೆಲಸವಾಗಬೇಕೆಂದು these people are deciding. I am so shamed to say this. ಜಿಲ್ಲಾ ಪಂಚಾಯತ್‌ನಲ್ಲಿ ಯಾವುದೇ ಇರಲಿ, these people are deciding what is to be done in the rural areas. They don't have any idea. ಅವರಿಗೆ ಅಲ್ಲಿ ಏನಿದೆ, ಏನು ಅವಶ್ಯಕತೆ ಇದೆ ಎಂಬ ಬಗ್ಗೆ ಅವರಿಗೆ ಗೊತ್ತಿಲ್ಲ. ಆದರೆ, we have to do major change in the planning. ಕೆಳ ಹಂತದಲ್ಲಿ ಒಂದು

ಊರಿನಲ್ಲಿ ಏನು ಅವಶ್ಯಕತೆ ಇದೆ, ಯಾವ್ಯಾವ ಇಲಾಖೆಯಲ್ಲಿ ಏನೇನು ಅವಶ್ಯಕತೆ ಇದೆ ಎಂಬ ಬಗ್ಗೆ ಜನರನ್ನು, ಜನರ ಪ್ರತಿನಿಧಿಗಳನ್ನು ಕರೆಸಿ ಕೇಳಿ. you make a priority and allocate funds accordingly.

ನಾವು ಇದೇ ರೀತಿಯಾಗಿ ಬ್ಯೂರೊಕಾಟ್ರಿಕ್ ಸಿಸ್ಟಮ್‌ನಲ್ಲಿ ಹೋಗತಕ್ಕಂಥ ಅವಶ್ಯಕತೆ ಇಲ್ಲ. We should come out it. ನೀವು ಹೊರಗೆ ಬಂದು ಕೆಲಸ ಮಾಡಿ. ನೀವು ಜೀವನದಲ್ಲಿ ಎಲ್ಲವನ್ನು ಮುಗಿಸಿದ್ದೀರಿ ಮತ್ತೆ ಎಲ್ಲವೂ ಕೂಡ ಮುಗಿದು ಕೊನೆಯ ಹಂತದಲ್ಲಿದ್ದೀರಿ. ತಾವು ಮುಖ್ಯಮಂತ್ರಿಯಾದರೆ ನಮಗೆ ಖುಷಿಯಾಗುತ್ತದೆ. ಆದರೆ, ಮುಖ್ಯಮಂತ್ರಿಯಾಗುವುದಕ್ಕೆ ನಿಮಗೆ ಯಾರು ಬಿಡುವುದಿಲ್ಲ. ಆದರೆ, ಇದನ್ನು ಬದಲಾವಣೆ ಮಾಡುವುದಕ್ಕೆ ನಿಮಗೆ ಸಾಧ್ಯತೆ ಇದೆ. Because you have the experience and you have the commitment you can come out and try some thing new. That is in the interest of public. That is what the public needs. ಅವರಿಗೆ ಏನು ಸಮಸ್ಯೆ ಮತ್ತು ಅವಶ್ಯಕತೆ ಇದೆ ಎಂಬುದರ ಬಗ್ಗೆ ಅವರನ್ನು ಕೇಳಿ ಮಾಡಬೇಕಾಗುತ್ತದೆ. ನಾವು ಶಾಸಕರಾಗಿ ಜನರ ಹತ್ತಿರ ಇರುತ್ತೇವೆ. ಆದರೆ, ಇವತ್ತು ಮೂರನೇ ಮಹಡಿಯಲ್ಲಿ ಮತ್ತು ಎಮ್ ಎಸ್ ಬಿಲ್ಡಿಂಗ್‌ನಲ್ಲಿ ಕುಳಿತುಕೊಂಡಿರತಕ್ಕಂಥ ಜನರಿಗೆ ಅಲ್ಲಿ ಏನು ಪರಿಸ್ಥಿತಿ ಇದೆ ಎಂಬುದು ಗೊತ್ತಿದೆಯೇ? ಇವರಿಗೆ ಏನು ಗೊತ್ತಿಲ್ಲ.

ಶ್ರೀ ಸಿದ್ದು ಕಲ್ಲಪ್ಪ ಸವದಿ:– ಮಾನ್ಯ ಅಧ್ಯಕ್ಷರೆ, ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಡಾ॥ ಶರಣ ಪ್ರಕಾಶ್ ರುದ್ರಪ್ಪನವರು ಮಾತನಾಡುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿರತಕ್ಕಂಥವರ ಬಗ್ಗೆ ಇಲ್ಲಿ ಉದಾಹರಣೆ ಹೇಳುವುದಕ್ಕೆ ಬಯಸುತ್ತೇನೆ. ನಮ್ಮಲ್ಲಿ ಸುಮಾರು 72 ಹಳ್ಳಿಗಳಿವೆ. 72 ಹಳ್ಳಿಗಳಿಗೆ 10 ಲಕ್ಷ ರೂಪಾಯಿ ಕುಡಿಯುವ ನೀರಿನ ಕೆಲಸಕ್ಕೋಸ್ಕರ ಬಿಡುಗಡೆಯಾಗಿ ಅದನ್ನು ಎಲ್ಲಾ ಹಳ್ಳಿಗಳಿಗೆ ಹಂಚಿದರೆ ಒಂದೊಂದು ಹಳ್ಳಿಗೆ 10 ರಿಂದ 15 ಸಾವಿರ ರೂಪಾಯಿ ಮಾತ್ರ ಬರುತ್ತದೆ. ಇದರ ಪರಿಸ್ಥಿತಿ ಏನಾಗುತ್ತದೆಂದರೆ, ನಾಲ್ಕೈದು ಹಳ್ಳಿಗಳಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಅತೀ ಗಂಭೀರವಾಗಿರುತ್ತದೆ. ಆದರೆ, ಅದಕ್ಕಾಗಿ ಕೊಡತಕ್ಕಂಥ 10 ಸಾವಿರ ರೂಪಾಯಿಗಳಲ್ಲಿ ಏನಾಗುವುದಿಲ್ಲ. ಒಂದು ಪಂಪ್‌ಸೆಟ್ ರಿಪೇರಿಗಾಗಿ ಮತ್ತು ಕೂಲಿ ಕೊಡುವುದಕ್ಕೂ ಸಹ ಆಗುವುದಿಲ್ಲ. ಆದರೆ, ಇನ್ನು 60 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ. ಆದರೆ, ಅಧಿಕಾರ ವಿಕೇಂದ್ರೀಕರಣದ ನೆಪದಲ್ಲಿ ಎಲ್ಲಾ ಡಿವೈಡ್ ಮಾಡಿ ಹಂಚುವುದರಿಂದ ಅಲ್ಲಿ ಉಪಯೋಗವಿಲ್ಲದಿದ್ದರೂ ಆ ಹಣ ಖರ್ಚಾಗುತ್ತದೆ. ಇಲ್ಲಿ ಉಪಯೋಗ ಇರುತ್ತದೆ, ಆದರೆ ದುಡ್ಡು ಸಾಲುವುದಿಲ್ಲ. ಈ ಕಡೆಯ ತೊಂದರೆ ಮತ್ತೆ ಅತ್ತಕಡೆ ಕೂಡ ತೊಂದರೆ ಇರುತ್ತದೆ. ಈ ರೀತಿಯಾದ ವ್ಯತ್ಯಾಸಗಳು ಅಗುತ್ತವೆ,

ತಾವು ಇವುಗಳನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಅವರಿಗೆ ಹೇಳುವುದಕ್ಕೆ ಬಯಸುತ್ತೇನೆ. ಮತ್ತೊಂದು ವಿಷಯ ಏನೆಂದರೆ, ರಸ್ತೆಗಾಗಿ ಗ್ರಾಮ ಪಂಚಾಯಿತಿಗೆ ಹಣ ಕೊಡುತ್ತೀರಿ. ಒಂದು ರಸ್ತೆಯಾದರು 1 ಕಿ.ಮೀ. ತೋರಿಸುತ್ತಾರೆಯೇ? ಸದನ ಸಮಿತಿ ರಚನೆ ಮಾಡಿ ಗ್ರಾಮ ಪಂಚಾಯತ್‌ನ ಒಂದು ರಸ್ತೆಯನ್ನಾದರೂ ಬೇಕಾದರೆ ಬನ್ನಿ ನೋಡೋಣ. ನೀವು 15 ವರ್ಷ ಅಧಿಕಾರ ಮಾಡಿದ್ದೀರಿ. ಆಗ ಏಕೆ ಇದನ್ನು ಮಾಡುವುದಕ್ಕೆ ಬರಲಿಲ್ಲ. ಈಗ ಕೆಟ್ಟ ಮೇಲೆ ಬುದ್ಧಿ ಬಂತೆ? ಈಗ ಗ್ರಾಮ ಪಂಚಾಯತ್‌ಗೆ ಅಧಿಕಾರ ಕೊಡಿ ಎಂದು ಮತ್ತೆ ಹೇಳುವುದಕ್ಕೆ ಇವರು ಹೊರಟಿದ್ದಾರೆ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳ ಭಾವನೆಗಳನ್ನು ನಾನು ಗೌರವಿಸುತ್ತೇನೆ. ಏಕೆಂದರೆ ಒಬ್ಬೊಬ್ಬರ ಅಭಿಪ್ರಾಯ ಒಂದೊಂದು ರೀತಿಯಲ್ಲಿರುತ್ತದೆ. ಅಧಿಕಾರ ವಿಕೇಂದ್ರೀಕರಣಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಒಂದು ಸದನ ಸಮಿತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಅಧಿಕಾರ ವಿಕೇಂದ್ರೀಕರಣದಲ್ಲಿರತಕ್ಕಂಥ ಲೋಪದೋಷಗಳನ್ನು ಸರಿಪಡಿಸುವುದಕ್ಕೋಸ್ಕರ ಒಂದು ಸದನ ಸಮಿತಿ ರಚನೆ ಮಾಡಲಿ, ನಾನು ಬೇಡವೆಂದು ಹೇಳುವುದಿಲ್ಲ.

ಅಧ್ಯಕ್ಷರು:- ಡಾ॥ ಶರಣಪ್ರಕಾಶ್‌ರವರೆ, ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಬಿಲ್ ತರುತ್ತಾರೆ. ಈ ಸಂದರ್ಭದಲ್ಲಿ ತಾವು ಇದರ ಬಗ್ಗೆ ಮಾತನಾಡಬಹುದು. ಈಗ ಬೇಗ ತಮ್ಮ ಮಾತನ್ನು ಮುಗಿಸಿ. ಈಗಾಗಲೇ 5.30 ಗಂಟೆಯಾಗಿದೆ ಬೇಗ ಮುಗಿಸಿ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:- ಮಾನ್ಯ ಅಧ್ಯಕ್ಷರೆ, ಪ್ಲಾನಿಂಗ್ ಇಲಾಖೆಯಲ್ಲಿ ಬದಲಾವಣೆ ತರಬೇಕೆಂದು ಹೇಳುತ್ತಿದ್ದೇನೆ. ಏಕೆಂದರೆ, ನಾವು ಒಂದು ಯೋಜನೆ ಹಾಕಿಕೊಂಡಾಗ ಒಂದು ಊರಿಗೆ ಹೋಗಿ ಗ್ರಾಮಸಭೆ ಕರೆದು ಅಲ್ಲಿ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್ ಸದಸ್ಯರುಗಳನ್ನು ಅಲ್ಲಿಗೆ ಕರೆಸಿ ಈ ಊರಿಗೆ ಕುಡಿಯುವ ನೀರಿನ ಯೋಜನೆ ಬೇಕೆಂದು ಒಂದು ಪ್ಲಾನ್ ಮಾಡಿದಾಗ ಅದನ್ನು ಯಾರೂ ಭಾಗ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಸದಸ್ಯರು ಹೇಳತಕ್ಕಂಥದರಲ್ಲಿ ಸತ್ಯ ಇದೆ. ಆದರೆ, ಅದಕ್ಕೆ ಏನಾದರೊಂದು ಪರ್ಯಾಯ ವ್ಯವಸ್ಥೆ ತರಬೇಕಾದರೆ ನೀವು ಪ್ಲಾನಿಂಗ್‌ನ್ನು ಕೆಳ ಹಂತದಿಂದ ಪ್ರಾರಂಭ ಮಾಡಿ. ಈ ರೀತಿಯಾಗಿ ಮಾಡುವುದಕ್ಕಾಗುತ್ತದೆಯೇ ಎಂದು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ನೀವು ಇದನ್ನು ಮಾಡಿದರೆ, you will go down in the history of the State. You will become a very

progressive and different minister. ಯಾರಾದರೂ ಇದನ್ನು ಮಾಡಲೇಬೇಕು. who is to bell the cat? ಇವತ್ತಿನ ದಿವಸ ಇದನ್ನು ಮಾಡುವುದಕ್ಕೆ ಯಾರೂ ತಯಾರಿಲ್ಲ. ಈ ವ್ಯವಸ್ಥೆ ಯಾವ ರೀತಿಯಾಗಿ ನಡೆದುಕೊಂಡು ಬರುತ್ತಿದೆಯೋ ಅದೇ ರೀತಿಯಾಗಿ ಇವತ್ತೂ ಕೂಡ ನಡೆದುಕೊಂಡು ಹೋಗುತ್ತಿದೆ. No body is ready to change. ನಾನು ಆ ಸರ್ಕಾರ ಈ ಸರ್ಕಾರ ಎಂದು ಹೇಳುವುದಕ್ಕೆ ಹೋಗುತ್ತಿಲ್ಲ. ಈ ರೀತಿಯಾಗಿ ಯಾವುದೇ ಸರ್ಕಾರ ಮಾಡಿದರೂ ಕೂಡ ಅದು ತಪ್ಪೇ ಇದನ್ನು ಮಾನ್ಯ ಶಾಸಕರು ದಯವಿಟ್ಟು ಅರ್ಥ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಆದರೆ, ನಾವೂ ಕೂಡ ಜನರ ಹಿತದೃಷ್ಟಿಯಿಂದ ಕೆಲಸ ಮಾಡುವಾಗ ಈ ರೀತಿಯಾದ diferences should be sorted out.ಏಕೆಂದರೆ ನಮ್ಮ ಕಳಕಳಿ ಏನಿದೆ? what is our concern? Our concern is the people. We have to give them a transparent, honest and good System. ಆದ್ದರಿಂದ, ನಾವುಗಳು ಜೊತೆ ಸೇರಿಕೊಂಡು ಇದನ್ನು ಮಾಡೋಣ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಮೇಲೆ ನಾನು ಭರವಸೆ ಇಟ್ಟಿದ್ದೇನೆ. ಆದ್ದರಿಂದ, you have to change the system. ಈ ಸಿಸ್ಟಮ್‌ನ್ನು ಬದಲಾವಣೆ ಮಾಡಲೇಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಇವತ್ತಿನ ದಿವಸ ಎನರ್ಜಿ ಇಲಾಖೆಯ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸಚಿವರಾದಂಥ ಶ್ರೀ ರೇವಣ್ಣನವರು ಇಲ್ಲಿಲ್ಲ. ಎನರ್ಜಿ ಬಹಳಷ್ಟು ಸುಧಾರಣೆಯಾಗುವುದಕ್ಕೆ ಅವರ ಸರ್ಕಾರ ಇದಕ್ಕೆ ಹಣ ಕೊಟ್ಟಿಲ್ಲ. ಕೇಂದ್ರ ಸರ್ಕಾರ ಇವತ್ತಿನ ದಿವಸ ಬಹಳಷ್ಟು ಲಿಬರಲ್ ಆಗಿ ಹಣ ಕೊಡುತ್ತಿರುವುದರಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ, ಸದರಿ ಇಲಾಖೆ ಕಾರ್ಯಚಟುವಟಿಕೆಗಳು ಸರಿಯಾಗಿ ನಡೆಯುತ್ತಿಲ್ಲ. The functioning has to be reviewed. ಮತ್ತೆ ಕೊನೆಯಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸರ್ಕಾರ ಬಂದ ಮೇಲೆ ಬಹಳ ಪ್ರಾಮುಖ್ಯವಿರತಕ್ಕಂಥ ಸ್ಥಾನದಿಂದ honest officerಗಳನ್ನು ತೆಗೆದು ಹಾಕಿದ್ದಾರೆ. That is the reason why the administration is falling. ಸರ್ಕಾರ ಇವತ್ತಿನ ದಿವಸ ಸುಲಲಿತವಾಗಿ ನಡೆಯಬೇಕಾದರೆ, ಪ್ರಾಮುಖ್ಯವಾಗಿರತಕ್ಕಂಥ ಸ್ಥಾನದಲ್ಲಿ there should be officers with good integrity. Un questionable integrity ಇರತಕ್ಕಂಥವರಿಗೆ ಪ್ರಮುಖ ಸ್ಥಾನವನ್ನು ಕೊಡುವುದನ್ನು ಬಿಟ್ಟು ಕರೆಪ್ಟ್ ಆಫೀಸರ್ ಗಳನ್ನು ನೀವು ಪ್ರಮುಖ ಸ್ಥಾನಗಳಿಗೆ ತಂದರೆ ಆಡಳಿತವನ್ನು ಸರಿಯಾಗಿ ನಡೆಸುವುದಕ್ಕೆ ಹೇಗೆ ಸಾಧ್ಯವಿದೆ? How can we expect work from such dishonest officers? ಎಲ್ಲವನ್ನು ಹರಾಜು ಹಾಕುತ್ತಾರೆ. ಆದ್ದರಿಂದ, ಸರ್ಕಾರ ನಡೆಸತಕ್ಕಂಥವರು ಒಂದು ವಿಚಾರದ ಬಗ್ಗೆ ಆಲೋಚನೆ ಮಾಡಬೇಕು. They should bring honest officers in the department.

ಶ್ರೀ ಸಿದ್ದು ಕಲ್ಲಪ್ಪ ಸವದಿ:- ನಿಮ್ಮ ಪಕ್ಷದವರು ಅಧಿಕಾರಿಗಳನ್ನು ಹಾಕಿದರೆ ಅವರು ಪ್ರಾಮಾಣಿಕ ಅಧಿಕಾರಿಗಳಾಗುತ್ತಾರೆ. ಆದರೆ, ಬೇರೆ ಪಕ್ಷದವರು ಅಧಿಕಾರಿಗಳನ್ನು ಹಾಕಿದರೆ ಅವರು ಅಪ್ರಾಮಾಣಿಕ ಅಧಿಕಾರಿಗಳಾಗಿ ಬಿಡುತ್ತಾರಲ್ಲವೇ?

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:- ನಿಮ್ಮ ಇಲಾಖೆ ಮತ್ತು ಸಚಿವಾಲಯಕ್ಕೆ ಒಳ್ಳೆಯ ಹೆಸರು ಬರಬೇಕಾದರೆ, ನಿಮ್ಮ ಇಲಾಖೆಗೆ ಪ್ರಾಮಾಣಿಕ ಅಧಿಕಾರಿಗಳನ್ನು ತೆಗೆದುಕೊಂಡು ಬನ್ನಿ. ನಮ್ಮ ಪಕ್ಷ ಬಂದಾಗ ನಾವು ಅಡ್ವೈಸ್ಟ್ ಮಾಡಿದ್ದೇವೆ and always tried to have honest DC nd CEO in Gulbarga.ನಮ್ಮ ಪಕ್ಷ ಬಂದಾಗ ನಾವು ಮಾಡಿದ್ದೇವೆ. ಏಕೆಂದರೆ, ನಮ್ಮ ಮಾತನ್ನು ಯಾವ ಸಚಿವರು ಕೇಳುತ್ತಾರೆಯೋ ಅಲ್ಲಿ ಪ್ರಾಮಾಣಿಕ ಅಧಿಕಾರಿಗಳನ್ನು ತರುವುದಕ್ಕೆ ನಾವು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇವೆ. ಕೆಲಸ ಮಾಡದೇ ಇದೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ಬೇರೆಯವರ ತರಹ ಹೇಳುವುದೊಂದು ಮಾಡುವುದೊಂದು ಮಾಡುವುದಕ್ಕೆ ನಾವು ಹೋಗುವುದಿಲ್ಲ. ನಾನು ಈಗ ಸಲಹೆ ಮಾಡುತ್ತಿರುವುದನ್ನು ನಾವು ಅಧಿಕಾರಕ್ಕೆ ಬಂದಾಗ ಮಾಡಿ ತೋರಿಸುತ್ತೇವೆ. ಬೇರೆಯವರ ಬಗ್ಗೆ ನಾನು ಹೇಳುವುದಿಲ್ಲ. I am telling of my own. ನಾವು ಏನು ಮಾತನಾಡಿದ್ದೇವೆ ಅದನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕೊನೆಯದಾಗಿ ಸಮಾಜ ಕಲ್ಯಾಣ ಇಲಾಖೆಯ ಸಚಿವರಾಗಿರುವಂಥ ಮಾನ್ಯ ಜಾರಕಿಹೊಳಿಯವರು ಸ್ವಲ್ಪ ಗಮನ ಕೊಡಬೇಕು. ನಮ್ಮ ಸೇಡಂ ಕ್ಷೇತ್ರ ಅತೀ ಹಿಂದುಳಿದ ತಾಲ್ಲೂಕು ಆಗಿದೆ. ಆದರೆ, ಅಲ್ಲಿಗೆ ಒಂದೂ ಹಾಸ್ಟೆಲ್‌ನ್ನು ತಾವು ಕೊಡಲಿಲ್ಲ. ನಾನು ಪದೇ ಪದೇ ನಿಮ್ಮ ಹತ್ತಿರ ಬಂದು ರಿಕ್ವೆಸ್ಟ್ ಮಾಡಿದ್ದೇನೆ. ಆದ್ದರಿಂದ, ಈ ಸಾರಿ ಮಾಡುವಾಗ ಹಾಸ್ಟೆಲ್ ಕೊಡುವುದರ ಬಗ್ಗೆ ಗಮನ ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಹೆಚ್ಚು ಪ್ರಭಾವಿಯಾಗಿದ್ದೀರಿ ಮತ್ತು ಈ ರಾಜ್ಯದಲ್ಲಿ ನಿಮ್ಮದೇ ಆದಂಥ ಒಂದು ವರ್ಚಸ್ಸು ಇದೆ, ಮತ್ತೆ ನೀವು ಯಾರಿಗೂ ಸಹ ಹೆದರಬೇಕಾಗಿಲ್ಲ. ನೀವು ಮಂತ್ರಿಯಾಗಿದ್ದರೇನು, ಬಿಟ್ಟರೇನು ನಿಮಗೆ ಒಳ್ಳೆಯ ಅವಕಾಶ ಸಿಕ್ಕಿದೆ. ಆದ್ದರಿಂದ, ನಮ್ಮ ಕ್ಷೇತ್ರಕ್ಕೆ ತಾವು ಅನುಕೂಲ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ಮಾತಿನಿಂದ ಯಾರಿಗಾದರೂ ನೋವಾಗಿದ್ದರೆ ದಯವಿಟ್ಟು ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ನಾನು ಉದ್ದೇಶಪೂರ್ವಕವಾಗಿ ಯಾರಿಗೂ ಹೇಳಿಲ್ಲ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನನ್ನ ಕರ್ತವ್ಯವನ್ನು ಪ್ರಾಮಾಣಿಕತೆಯಿಂದ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ ಹೊರತು ವೈಯಕ್ತಿಕವಾಗಿ ಯಾರ ಮೇಲೂ ಹೇಳುತ್ತಿಲ್ಲವೆಂದು ಹೇಳುತ್ತಾ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ರಾಜೇಂದ್ರ ವರ್ಮಾ:– ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅನೇಕ ವರ್ಷಗಳಿಂದ ನಮ್ಮ ರಾಜ್ಯದೊಳಗೆ....

ಅಧ್ಯಕ್ಷರು:– ಮಾತನಾಡುವುದರ ಬಗ್ಗೆ ನೀವು ನನಗೆ ಪತ್ರವನ್ನೇ ಕೊಟ್ಟಿಲ್ಲ. ಸುಮ್ಮನೆ ಈ ರೀತಿಯಾಗಿ ಮಾತನಾಡಿದರೆ ಹೇಗೆ? ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಆರೋಗ್ಯ ಮಂತ್ರಿಗಳು ಇದ್ದಾರೆಯೇ? ಅವರು ಇಲ್ಲ. ಮೆಡಿಕಲ್ ಎಜುಕೇಶನ್ ಮಿನಿಸ್ಟರ್‌ರವರು ಇಲ್ಲಿದ್ದಾರೆ. ಡಾ|| ವಿ.ಎಸ್. ಆಚಾರ್ಯರವರೆ, ನಾನು ಈಗ ಹೇಳುವುದೇನೆಂದರೆ, ಇಲ್ಲಿ ಆರೋಗ್ಯ ಶಿಬಿರವನ್ನು ಏರ್ಪಡಿಸಲಾಗಿದೆ. ಇದು ನಾಳೆ ದಿವಸ ಕೊನೆಯಾಗಲಿದೆ. ಆದರೆ, ಬಹಳಷ್ಟು ಜನ ಸದಸ್ಯರು ಇನ್ನೂ ಕೂಡ ತಪಾಸಣೆ ಮಾಡಿಸಿಕೊಂಡಿಲ್ಲವೆಂದು ಕೇಳಿದ್ದೇನೆ. ಆದ್ದರಿಂದ, ನಾಡಿದ್ದೂ ಕೂಡ ಅಸೆಂಬ್ಲಿ ಇರುವುದರಿಂದ ಆರೋಗ್ಯ ಶಿಬಿರವನ್ನು ನಾಡಿದ್ದೂ ಸಹ ಮುಂದುವರಿಸಬೇಕೆಂದು ನಾನು ಸೂಚನೆ ಕೊಡುತ್ತಿದ್ದೇನೆ. ಅವರನ್ನು ಕರೆಸಿ ನಾಡಿದ್ದುವರೆಗೆ ಮುಂದುವರೆಸುವಂತೆ ಹೇಳಿ. ಈಗ ಪ್ರಶ್ನೋತ್ತರ ತೆಗೆದುಕೊಳ್ಳುತ್ತೇನೆ.

6. ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

. ರಸ್ತೆ ಪ್ರದೇಶದಲ್ಲಿ ಭಿಕ್ಷಾಟನೆಯನ್ನು ತಡೆಗಟ್ಟುವುದು

196 (1097) ಶ್ರೀ ಗೋಪಾಲ ಕೃಷ್ಣ ಬೇಳೂರು ಬಿ.ಕೆ. :– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಇತ್ತೀಚೆಗೆ ಬೆಂಗಳೂರು ನಗರದಲ್ಲಿ ರಸ್ತೆಯ ವೃತ್ತಗಳಲ್ಲಿ, ಸಿಗ್ನಲ್‌ಗಳಲ್ಲಿ ಇಜಡಾಗಳು ಹಾಗೂ ಭಿಕ್ಷುಕರು ಎಳೆಯ ಕೂಸುಗಳನ್ನು ಕರೆತಂದು ಸಾರ್ವಜನಿಕರು ಓಡಾಡುವ ಸ್ಥಳಗಳಲ್ಲಿ ವಾಹನ ನಿಲುಗಡೆಯ ಸ್ಥಳಗಳಲ್ಲಿ, ಭಿಕ್ಷಾಟನೆ ಮಾಡುವುದು ಹೆಚ್ಚಾಗಿರುವುದು ಹಾಗೂ ಸಾರ್ವಜನಿಕರೊಂದಿಗೆ ಅಸಭ್ಯವಾಗಿ ವರ್ತಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಭಿಕ್ಷಾಟನೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಬಾಲಚಂದ್ರ ಜಾರಕಿಹೊಳಿ (ಮಾನ್ಯ ಸಮಾಜ ಕಲ್ಯಾಣ ಸಚಿವರು)

(ಅ) ಹೌದು.